ಭಾನುವಾರ, ಜುಲೈ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 192 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮಳೆಗಾಲವೆಂದರೆ ಹಾಗೆಯೇ. ಜಿಟ ಜಿಟ ಎಂದು ಮಳೆಯ ಜೊತೆಗೆ ಜೋಗುಳ ಹಾಡುತ್ತ ಎಷ್ಟೋ ದೂರ ಕರೆದೊಯ್ಯುವ ಹಸಿರು ಮೆಟ್ಟಿಕೊಂಡ ದಾರಿಯ ಪುಳಕವನ್ನು ಅನುಭವಿಸಲು ಹಾತೊರೆಯುವ ಸಮಯವಿದು...

ವಿಂಬಲ್ಡನ್ ಟೆನಿಸ್ ಟೂರ್ನಿ: ಬಾರ್ಟಿಗೆ 'ಮೊದಲ' ಪ್ರಶಸ್ತಿ ಸಂಭ್ರಮ 12
ಮೂರನೇ ಅಲೆ: ಸಲಹಾ ಸಮಿತಿ ಎಚ್ಚರಿಕೆ ಕಡೆಗಣನೆ
ಇಂಧನ ಬೇಡಿಕೆ ಚೇತರಿಕೆ 7
19 ಜಿಲ್ಲೆ: ಸರಾಸರಿಗಿಂತ ಕಡಿಮೆ ಕೋವಿಡ್ ಪರೀಕ್ಷೆ 5

ರಾಜ್ಯ ಕೋವಿಡ್ ಅಂಕಿ–ಅಂಶ

28,69,320 ▲	ಒಟ್ಟು ಸೋಂಕಿತರು (28,67,158 ನಿನ್ನೆಯ ವಿವರ)
37,141 ▼	ಸಕ್ರಿಯ ಪ್ರಕರಣಗಳು
27,96,377 ▲	ಗುಣಮುಖರಾದವರು
35,779 ▼	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,162 ▼
ಗುಣಮುಖ	2,879 ▼
ಸಾವು	48 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ
20 ಬಿಇಒಗಳಿಗೆ ನೋಟಿಸ್ 4

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ
ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಆಡುವ ಮಕ್ಕಳು ದುಡಿಮೆಗೆ

ಒಳನೋಟ
ಬಾಲ್ಯ ಕಸಿದ ಬದುಕು
ಪ್ರತಿಕ್ರಿಯಿಸಿ: 9606038256
feedback@prajavani.co.in

• ಉದಯ ಯು.

ಮಂಗಳೂರು: ಅಂದು ಮಧ್ಯರಾತ್ರಿ ರಸ್ತೆಪಕ್ಕ ಕುಳಿತಿದ್ದ ಬಾಲಕಿ ಕೈಯಲ್ಲಿ ಐಫೋನ್ ಇತ್ತು. ಆಕೆಯ ಹಾವಭಾವ, ಚಹರೆ, ಧರಿಸಿದ್ದ ಬಟ್ಟೆಯನ್ನು ನೋಡಿದವರಿಗೆ ನಂಬಲು ಆಗುತ್ತಿರಲಿಲ್ಲ. ಗಮನಿಸಿದ ಯಾರೋ ಪೊಲೀಸರಿಗೆ ಮಾಹಿತಿ ನೀಡಿದರು. ಪಾಂಡೇಶ್ವರ ಠಾಣೆಯ ಪೊಲೀಸರು ಬಂದು ಆಕೆಯನ್ನು ಠಾಣೆಗೆ ಕರೆದೊಯ್ದು ಸಮಾಧಾನದಿಂದ ವಿಚಾರಿಸಿದಾಗ ಆಕೆಯ ನೋವಿನ ಕತೆ ಅನಾವರಣಗೊಂಡಿತು.

ಹಾಸನ ಜಿಲ್ಲೆಯ ಆ ಬಾಲಕಿಯನ್ನು ಮಧ್ಯವರ್ತಿಯೊಬ್ಬರು ಮನೆ ಕೆಲಸಕ್ಕೆಂದು ಇಲ್ಲಿನ ಒಬ್ಬರ ಮನೆಗೆ ತಂದು ಬಿಟ್ಟಿದ್ದರು. ಅವಳನ್ನು ಇಲ್ಲಿ ಬಿಟ್ಟು ಹೋದಾತ, ತನಗೆ ಬರಬೇಕಾದ ಹಣವನ್ನು ಪಡೆದಾಗಿತ್ತು. ಮನೆಗೆಲಸಕ್ಕೆ ಸೇರಿ ಎರಡು ತಿಂಗಳು ಕಳೆದಿದ್ದರೂ ಒಂದು ರೂಪಾಯಿಯನ್ನೂ ನೀಡಲಿಲ್ಲ. ಅಂದು ಮಧ್ಯರಾತ್ರಿ, ಮನೆಯ ಮಾಲೀಕ ಆಕೆಯ ಮೇಲೆ ದೌರ್ಜನ್ಯಕ್ಕೆ ಮುಂದಾಗಿದ್ದ. ಧೈರ್ಯ ಮಾಡಿದ ಬಾಲಕಿ, ಮಾಲೀಕನ ಐಫೋನನ್ನೂ ಎತ್ತಿಕೊಂಡು ಪರಾರಿಯಾಗಿದ್ದಳು.

ಉತ್ತರ ಕರ್ನಾಟಕದಿಂದ ಬಂದಿದ್ದ ಕೂಲಿ ಕಾರ್ಮಿಕರ ಕುಟುಂಬದ ಬಾಲಕನೊಬ್ಬ ಪೋಷಕರ ಜೊತೆಗೆ ಕೆಲಸದಲ್ಲಿ ನೆರವಾಗಿದ್ದ ದೃಶ್ಯ ಮಂಗಳೂರಿನ ನ್ಯೂ ಬಿಜೈ ರಸ್ತೆಯ ಬಳಿ ಕಂಡು ಬಂತು —ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

> **ಮಗನನ್ನು ಓದಿಸಬೇಕೆಂಬ ಆಸೆ ಇದೆ. ಮನೆಯಲ್ಲಿ ಬಡತನ. ಈಗ ಶಾಲೆಗೆ ರಜೆ ಇರುವುದರಿಂದ, ಅನಿವಾರ್ಯವಾಗಿ ಕೆಲಸಕ್ಕೆ ಕರೆದೊಯ್ಯುತ್ತಿದ್ದೇನೆ**
> **ಕೃಷಿ ಕಾರ್ಮಿಕ ಮಹಿಳೆ,** ಯಾದಗಿರಿ

ಇನ್ನೊಂದು ಪ್ರಕರಣದಲ್ಲಿ, ಮಂಗಳೂರಿನಲ್ಲಿ ಓದುತ್ತಿದ್ದ ವಿಜಯಪುರದ ಬಾಲಕಿಯೊಬ್ಬಳು ಕೊರೊನಾದಿಂದಾಗಿ ಶಾಲೆ ಮುಚ್ಚಿದಾಗ ತನ್ನೂರಿಗೆ ಹೋಗಿದ್ದಳು. ಈ ಸಂದರ್ಭದಲ್ಲಿ, ಪಾಲಕರು ಮಗಳ ಮದುವೆಯ ಮಾತುಕತೆ ಆರಂಭಿಸಿದ್ದರು. ಇಲ್ಲೇ ಇದ್ದರೆ ತನ್ನನ್ನು ಯಾರಿಗಾದರೂ ಕಟ್ಟಿಬಿಡುತ್ತಾರೆ ಎಂದುಕೊಂಡ ಬಾಲಕಿ, ಮಂಗಳೂರಿಗೆ ಮರಳಿದಳು.

ಈಗ ಹಲವು ದಿನಗಳಿಂದ ಆಕೆಗೆ ಒಂದೇ ಸಮನೆ ಮನೆಯವರಿಂದ ಕರೆಗಳು ಬರುತ್ತಿವೆ. 'ಒಳ್ಳೆಯ ಸಂಬಂಧ ಬಂದಿದೆ, ಮದುವೆ ಮಾಡ್ಕೋ, ಭವಿಷ್ಯ ಚೆನ್ನಾಗಿರುತ್ತೆ' ಎಂದು ಒತ್ತಾಯಿಸುತ್ತಿದ್ದಾರೆ. ಬಾಲಕಿ ತನ್ನ ನೋವನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ತೋಡಿಕೊಂಡಿದ್ದಾಳೆ. ಈಗ ಸಮಿತಿಯ ಸದಸ್ಯರು, ಪಾಲಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ರಾಜ್ಯದ ಹಲವೆಡೆಯ ಮಕ್ಕಳು ಇದೇ ತೆರನಾದ ಸಂಕಷ್ಟ ಎದುರಿಸುತ್ತಿದ್ದಾರೆ. ಕೊರೊನಾದಿಂದಾಗಿ ಉದ್ಯೋಗ ನಷ್ಟ, ವ್ಯಾಪಾರ ಕುಸಿತ, ಉದ್ದಿಮೆಗಳು ಸ್ಥಗಿತ... ಮುಂತಾದ ನೂರಾರು ಸಮಸ್ಯೆಗಳು ಮುನ್ನೆಲೆಗೆ ಬಂದಿವೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಬಾಲ ಕಾರ್ಮಿಕರ ಸಮೀಕ್ಷೆ ಈಗ ಶುರು
• ಗುರು ಪಿ. ಎಸ್.

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಂತರ ಬಾಲ್ಯವಿವಾಹ ಪ್ರಕರಣಗಳು ಮತ್ತು ಬಾಲಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿರುವ ದೂರುಗಳಿದ್ದರೂ ಈ ಬಗ್ಗೆ ನಿಖರ ಅಂಕಿ–ಅಂಶಗಳು ಲಭ್ಯವಿಲ್ಲ. ಈ ಕುರಿತು ವಿಚಾರಿಸಿದರೂ ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು 'ಹೊಣೆ ವರ್ಗಾವಣೆ' ಮಾಡುತ್ತಾರೆ.

ಪೌರಾಡಳಿತ ನಿರ್ದೇಶನಾಲಯ ನಡೆಸಿದ ಸಮೀಕ್ಷೆಯ ಪ್ರಕಾರ, 6ರಿಂದ 14 ವರ್ಷ ವಯೋಮಾನದ 56,605 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಆ ಪೈಕಿ, ಗ್ರಾಮೀಣ ಭಾಗದಲ್ಲಿ 33,329 ಹಾಗೂ ನಗರ ಪ್ರದೇಶಗಳಲ್ಲಿ 8,715 ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಟ್ಟಿದ್ದಾರೆ. ಬಿಬಿಎಂಪಿ ಹೊರತುಪಡಿಸಿದ ಅಂಕಿ–ಅಂಶ ಇದು. ಈ ಸಮೀಕ್ಷೆ ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ಶಾಲೆ ಬಿಟ್ಟಿರುವ ಮಕ್ಕಳ ಸಂಖ್ಯೆ ಇನ್ನೂ ಹೆಚ್ಚಾಗಿರುವ ಸಾಧ್ಯತೆ ಇದೆ.

6ನೇ ಪುಟ ನೋಡಿ

'ಕೋವಿಡ್‌ನಿಂದ ಮೃತಪಟ್ಟ ರೈತರ ಸಾಲಮನ್ನಾ'

ಕಲಬುರ್ಗಿ: 'ಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದ ರೈತರು ಕೋವಿಡ್‌ನಿಂದ ಮೃತಪಟ್ಟಿದ್ದರೆ ಅಂಥವರ ಸಾಲ ಮನ್ನಾ ಮಾಡಲು ಚಿಂತನೆ ನಡೆದಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು. 4

ಕಾರಾಗೃಹದಲ್ಲಿ ಗಾಂಜಾ, ಮಾರಕಾಸ್ತ್ರ ಪತ್ತೆ

ಬೆಂಗಳೂರು: ನಗರದ ಪೊಲೀಸರು ರೌಡಿಗಳ ಮನೆಗಳು ಹಾಗೂ ಪರಪ್ಪನ ಅಗ್ರಹಾರ ಕಾರಾಗೃಹದ ಮೇಲೆ ಶನಿವಾರ ದಿಢೀರ್ ದಾಳಿ ನಡೆಸಿದರು. ಗಾಂಜಾ, ಮಾರಕಾಸ್ತ್ರ ಜಪ್ತಿ ಮಾಡಿದ್ದಾರೆ. 5

'ಎರಡು ಮಕ್ಕಳ ನೀತಿ ಉಲ್ಲಂಘಿಸಿದರೆ ಸರ್ಕಾರಿ ನೌಕರಿ ಇಲ್ಲ'

ಲಖನೌ: 'ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿದವರಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ. ಸರ್ಕಾರಿ ನೌಕರಿಗೆ ಅರ್ಜಿ ಸಲ್ಲಿಸುವಂತಿಲ್ಲ' ಎಂದು ಉತ್ತರ ಪ್ರದೇಶದ ಜನಸಂಖ್ಯಾ ನಿಯಂತ್ರಣ ಕರಡು ಮಸೂದೆ-2021ರಲ್ಲಿ ಹೇಳಲಾಗಿದೆ. 5

ಇಂದು ಬಾಹ್ಯಾಕಾಶಕ್ಕೆ ಶಿರೀಷಾ ಬಂಡ್ಲ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಏರೋನಾಟಿಕಲ್ ಎಂಜಿನಿಯರ್ ಶಿರೀಷಾ ಬಂಡ್ಲ (34) ಭಾನುವಾರ ವರ್ಜಿನ್ ಗ್ಯಾಲಕ್ಟಿಕ್ ಗಗನ ನೌಕೆಯಲ್ಲಿ ಬಾಹ್ಯಾಕಾಶಕ್ಕೆ ತೆರಳಲಿದ್ದಾರೆ.







ಜನರ ನೋವಿಗೆ ಮಿಡಿಯುವ ಕೆಬಿಎಲ್ ಕುಟುಂಬ

ಕೋವಿಡ್‌ನಿಂದಾಗಿ ಕೆಲಸ ಕಳೆದುಕೊಂಡ ಬಡವರು ಒಪ್ಪೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಲಾಕ್‌ಡೌನ್ ಘೋಷಿಸಿದ ಬಳಿಕ ಬಡವರ ಬದುಕು ಮತ್ತಷ್ಟು ದುಸ್ತರವಾಗಿತ್ತು. ದುಡಿಮೆಯೇ ನಿಂತು ಹೋಗಿದ್ದರಿಂದ ಅನೇಕರು ದಿಕ್ಕು ತೋಚದಂತಾಗಿದ್ದರು. ಇಂತಹ ಸಮಯದಲ್ಲಿ ಇವರೆಲ್ಲರ ನೆರವಿಗೆ ನಿಂತವರು ಕೆ.ಬಿ.ಲಕ್ಷ್ಮಣ್ ಹಾಗೂ ಅವರ ಕುಟುಂಬ.

ಕೆ.ಬಿ.ಎಲ್.ಸಮೂಹದ ಒಡೆಯರೂ, ಶ್ರೀ ಲಕ್ಷ್ಮಿ ಸಿದ್ದೇಶ್ವರ ಸ್ವಾಮಿ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕರೂ ಆಗಿರುವ ಕೆ.ಬಿ.ಲಕ್ಷ್ಮಣ್ ಹಾಗೂ ಅವರ ಕುಟುಂಬ ಜನಸೇವೆಯನ್ನೇ ಉಸಿರಾಗಿಸಿಕೊಂಡಿದೆ. ಅಂಜನಾಪುರ, ಕೋಣನಕುಂಟೆ ವಾರ್ಡ್ ಹಾಗೂ ಸುತ್ತಲಿನ ಬಡಾವಣೆಯ ಜನರ ಬವಣೆಗಳನ್ನು ನೀಗಿಸುವ ಕಾಯಕದಲ್ಲಿ ತೊಡಗಿಕೊಂಡಿದೆ.

ಕೆ.ಬಿ.ಲಕ್ಷ್ಮಣ್ ಅವರ ಮಕ್ಕಳಾದ ಶ್ರೀಧರ್ ಲಕ್ಷ್ಮಣ್, ರವಿ ಲಕ್ಷ್ಮಣ್ ಹಾಗೂ ಕುಮಾರ್ ಲಕ್ಷ್ಮಣ್ ಅವರು ಅಪ್ಪ, ಅಮ್ಮ ತೋರಿಸಿಕೊಟ್ಟ ಹಾದಿಯಲ್ಲೇ ಹೆಜ್ಜೆ ಇಡುತ್ತಿದ್ದಾರೆ. ಹಸಿದವರಿಗೆ ಅನ್ನ ನೀಡುವ, ದಿನಸಿ ಕಿಟ್‌ಗಳನ್ನು ಉಚಿತವಾಗಿ ವಿತರಿಸುವ ಹಾಗೂ ಬಡ ಕಾರ್ಮಿಕರು ನೆಲೆಸಿರುವ ಸ್ಥಳಗಳಿಗೆ ಟ್ಯಾಂಕರ್‌ಗಳ ಮೂಲಕ ಉಚಿತವಾಗಿ ನೀರು ಪೂರೈಸುವ ಕಾರ್ಯದಲ್ಲಿ 'ತ್ರಿ ಮೂರ್ತಿ'ಗಳು ಮಗ್ನರಾಗಿದ್ದಾರೆ.

ಮಕ್ಕಳಲ್ಲಿ ಶಿಕ್ಷಣದ ಅರಿವು ಮೂಡಿಸಿದ ಸಂದರ್ಭ

ಉಚಿತ ಔಷಧ ವಿತರಣೆ

ಕೊರೊನಾ ಸೋಂಕಿತರು ಹಾಗೂ ಇತರ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಹರಿನಗರ ಕ್ರಾಸ್ ಬಳಿ ಇರುವ ಕೆ.ಬಿ.ಎಲ್.ಮೆಡಿಕಲ್ ಸ್ಟೋರ್‌ನಲ್ಲಿ ಉಚಿತವಾಗಿ ಔಷಧಗಳನ್ನು ಇವರು ಪೂರೈಸಿದ್ದಾರೆ. ಬಡವರು ಆರೋಗ್ಯ ಸೇವೆಯಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಕಳೆದ ಐದು ವರ್ಷಗಳಿಂದಲೂ ಶೇ 40ರಷ್ಟು ರಿಯಾಯಿತಿ ದರದಲ್ಲಿ ಔಷಧಗಳನ್ನು ಒದಗಿಸುತ್ತಿದ್ದಾರೆ.

ಜನ ಸಾಮಾನ್ಯರಿಗೆ ಸ್ಯಾನಿಟೈಸರ್ ಹಾಗೂ ಮುಖಗವಸನ್ನು ಉಚಿತವಾಗಿ ವಿತರಿಸುವ ಜೊತೆಗೆ ಅವುಗಳ ಮಹತ್ವದ ಕುರಿತೂ ಅರಿವು ಮೂಡಿಸುತ್ತಿದ್ದಾರೆ. ಕೋವಿಡ್ ಕಾಲದಲ್ಲಿ 5 ಸಾವಿರಕ್ಕೂ ಅಧಿಕ ಜನರಿಗೆ ಅಕ್ಕಿ, ಬೇಳೆ, ಅಡುಗೆ ಎಣ್ಣೆ, ಗೋಧಿ, ರವೆ, ಸಕ್ಕರೆ, ಮಸಾಲೆ ಪದಾರ್ಥ, ಸೋಪು ಹಾಗೂ ತರಕಾರಿಗಳನ್ನು ಒಳಗೊಂಡ ದಿನಸಿ ಕಿಟ್‌ಗಳನ್ನು ನೀಡಿದ್ದಾರೆ.

ಬಡವರ ಮನೆಯವರು ಅನಾರೋಗ್ಯಕ್ಕೆ ಒಳಗಾದಾಗ ಆಸ್ಪತ್ರೆಗೆ ದಾಖಲಿಸಲು ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಸಿಗದೆ ಪರಿತಪಿಸುತ್ತಿದ್ದರು. ಇದನ್ನು ಮನಗಂಡು ಕೆ.ಬಿ.ಲಕ್ಷ್ಮಣ್ ಹಾಗೂ ಅವರ ಮಕ್ಕಳು 6 ವರ್ಷಗಳ ಹಿಂದೆಯೇ ಆಂಬುಲೆನ್ಸ್ ಸೇವೆಯನ್ನು ಉಚಿತವಾಗಿ ನೀಡುವ ಕಾಯಕ ಆರಂಭಿಸಿದ್ದಾರೆ. ಹೀಗಾಗಿ ವಾರ್ಡ್‌ನ ನಿವಾಸಿಗಳು ಸಕಾಲದಲ್ಲಿ ಚಿಕಿತ್ಸೆಗೆ ದಾಖಲಾಗಲು ಸಾಧ್ಯವಾಗಿದೆ.

ನೆರೆ ಸಂತ್ರಸ್ತರಿಗಾಗಿ ನಿಧಿ ಸಂಗ್ರಹಿದ ಸಂದರ್ಭ

ಶಾಲಾ ಮಕ್ಕಳಿಗೆ ಸಮವಸ್ತ್ರ

ಬಡವರು, ಮಧ್ಯಮ ವರ್ಗದವರು ಹಾಗೂ ಕೂಲಿ ಕಾರ್ಮಿಕರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದು, ಈ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಿಮುಖವಾಗಬಾರದು ಎಂಬ ಉದ್ದೇಶದಿಂದ ಶ್ರೀಧರ್ ಲಕ್ಷ್ಮಣ್ ಹಾಗೂ ರವಿ ಲಕ್ಷ್ಮಣ್ ಅವರು ಕೆಂಬತ್ತಹಳ್ಳಿ, ಗೊಲ್ಲಹಳ್ಳಿ, ಆಲಹಳ್ಳಿ, ಹರಿನಗರದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸಮವಸ್ತ್ರ, ನೋಟ್‌ಬುಕ್, ಲೇಖನಿ ಸಾಮಾಗ್ರಿಗಳನ್ನು ಉಚಿತವಾಗಿ ನೀಡುತ್ತಾ ಬಂದಿದ್ದಾರೆ. ಮಕ್ಕಳು ಆನ್‌ಲೈನ್ ತರಗತಿಗಳಿಂದ ವಂಚಿತರಾಗಬಾರದು ಎಂಬ ಕಾರಣದಿಂದ ಉಚಿತ ವೈ-ಫೈ ವ್ಯವಸ್ಥೆ ಮಾಡಿಸಿದ್ದಾರೆ. ಕ್ರೀಡಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ಎತ್ತರದ ಸಾಧನೆ ಮಾಡುವಂತೆ ಮಕ್ಕಳನ್ನು ಹುರಿದುಂಬಿಸುತ್ತಿದ್ದಾರೆ.

ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಟ್ರಸ್ಟ್ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಮಕ್ಕಳಿಗೂ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಈ ಶಾಲೆಯಲ್ಲಿ ಕಲಿಯುವವರಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದ ಫಿನ್ಲೆಂಡ್‌ನ ಸಿಸಿಇ ಶಿಕ್ಷಣ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ರಾಜ್ಯದ ಮಟ್ಟಿಗೆ ಇದು ವಿಶಿಷ್ಟ ಪ್ರಯೋಗ. ಈ ಶಾಲೆಯ ಮಕ್ಕಳು ಈಜು ಹಾಗೂ ಚೆಸ್‌ನಲ್ಲಿ ಕ್ರಮವಾಗಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ. ಬಡವರು ಹಾಗೂ ಮಧ್ಯಮ ವರ್ಗದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿರುವ ಈ ಕುಟುಂಬ ಇದಕ್ಕಾಗಿ ಉಚಿತ ವಿದ್ಯಾರ್ಥಿನಿ ನಿಲಯವನ್ನೂ ನಿರ್ಮಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬಡವರು ಹಾಗೂ ಸಾಮಾನ್ಯ ಜನರಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ತಮ್ಮದೇ ಒಡೆತನದ ಕನಕಶ್ರೀ ಸಮುದಾಯ ಭವನವನ್ನು ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗಾಗಿ ಅತ್ಯಂತ ಕಡಿಮೆ ದರದಲ್ಲಿ ಬಾಡಿಗೆ ನೀಡುತ್ತಿದೆ. ಕೋಣನಕುಂಟೆಯಲ್ಲಿ ಅನೇಕ ಬಡ ಕುಟುಂಬಗಳಿಗೆ ನಿವೇಶನವನ್ನು ಉಚಿತವಾಗಿ ದೊರಕಿಸಿಕೊಟ್ಟಿದೆ.

ಭವಿಷ್ಯದಲ್ಲಿ ಡಯಾಲಿಸಿಸ್ ಕೇಂದ್ರವೊಂದನ್ನು ಸ್ಥಾಪಿಸಿ ಅಲ್ಲಿ ಎಲ್ಲರಿಗೂ ಚಿಕಿತ್ಸೆಯನ್ನು ಉಚಿತವಾಗಿ ನೀಡಬೇಕೆಂಬುದು ಕೆ.ಬಿ.ಎಲ್. ಕುಟುಂಬದವರ ಕನಸು. ಅದನ್ನು ಸಾಕಾರಗೊಳಿಸುವ ದಿಸೆಯಲ್ಲಿ ಈ ಕುಟುಂಬದವರು ಕಾರ್ಯಪ್ರವೃತ್ತರಾಗಿದ್ದಾರೆ.



ಮಕ್ಕಳೊಂದಿಗೆ ಕೆ.ಬಿ.ಲಕ್ಷ್ಮಣ್ ಹಾಗೂ ರತ್ನಮ್ಮ ದಂಪತಿ

ಕಷ್ಟಕ್ಕೆ ಮಿಡಿಯುವ ಯುವ ನೇತಾರ

ಕೆ.ಬಿ.ಲಕ್ಷ್ಮಣ್ ಹಾಗೂ ಆರ್.ರತ್ನಮ್ಮ ದಂಪತಿ ಪುತ್ರ ಶ್ರೀಧರ್ ಲಕ್ಷ್ಮಣ್ ಹೆಗಲಿಗೆ ಸಮಾಜ ಸೇವೆಯ ಹೊಣೆ ಹೊರಿಸಿದೆ. ಶ್ರೀಧರ್ ಅವರಿಗೆ ಸಹೋದರರಾದ ರವಿ ಲಕ್ಷ್ಮಣ್ ಹಾಗೂ ಕುಮಾರ್ ಲಕ್ಷ್ಮಣ್ ಬೆನ್ನೆಲುಬಾಗಿ ನಿಂತಿದ್ದಾರೆ.

ಹಸನ್ಮುಖಿ, ಮಿತಭಾಷಿ ಹಾಗೂ ಸ್ನೇಹಜೀವಿಯಾಗಿರುವ ಶ್ರೀಧರ್, ನಿಸ್ವಾರ್ಥ ಸೇವೆಯ ಮೂಲಕ ವಾರ್ಡ್ ಜನರ ಮನದಲ್ಲಿ ಶಾಶ್ವತ ನೆಲೆ ಕಂಡುಕೊಂಡಿದ್ದಾರೆ. ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿರುವ ಅವರು ಕೆಪಿಸಿಸಿ ಅಧ್ಯಕ್ಷ, ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್ ಅವರ ಮಾರ್ಗದರ್ಶನದಲ್ಲಿ ತಳಮಟ್ಟದಿಂದಲೇ ಪಕ್ಷ ಸಂಘಟಿಸುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದಾರೆ.

ಉತ್ತರ ಕರ್ನಾಟಕದಲ್ಲಿ ನೆರೆಹಾವಳಿ ಸಂಭವಿಸಿದಾಗ, ಪ್ರಕೃತಿ ವಿಕೋಪ ಎದುರಾದಾಗ ಕ್ಷೇತ್ರದಲ್ಲಿ ಪಾದಯಾತ್ರೆ ಮಾಡಿ ದೇಣಿಗೆ ಸಂಗ್ರಹಿಸಿದ್ದಾರೆ. ಆ ಹಣದಿಂದ ಹೊದಿಕೆಯಿಂದ ಹಿಡಿದು, ಧವಸ ಧಾನ್ಯ, ಹಲ್ಲುಜ್ಜುವ ಪೇಸ್ಟ್‌ವರೆಗೆ ಅಗತ್ಯ ವಸ್ತುಗಳನ್ನು ಖರೀದಿಸಿ ಖುದ್ದಾಗಿ ತಾವೇ ಸಂತ್ರಸ್ತರ ಬಳಿಗೆ ತೆರಳಿ ಅವುಗಳನ್ನು ವಿತರಿಸಿದ್ದಾರೆ.

ಅಂಜನಾಪುರ, ಕೆಂಬತ್ತಹಳ್ಳಿ ಹಾಗೂ ಹರಿನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿದ್ದಲ್ಲದೆ, ಮನೆ ಮನೆಗೂ ಭೇಟಿ ನೀಡಿ ಕುಡಿಯುವ ನೀರಿನ ಕ್ಯಾನ್‌ಗಳನ್ನು ಉಚಿತವಾಗಿ ವಿತರಿಸಿದ್ದಾರೆ. ಹಲವು ಬಡಾವಣೆಗಳಲ್ಲಿ ಗಿಡಗಳನ್ನು ನೆಡುವ ಮೂಲಕ ಪರಿಸರ ಕಾಳಜಿ ಮೆರೆದಿದ್ದಾರೆ. ಜಾತಿ, ಮತವನ್ನು ಬದಿಗೊತ್ತಿ ಸರ್ವರ ಶ್ರೇಯಸ್ಸಿಗೂ ಶ್ರಮಿಸುತ್ತಿದ್ದಾರೆ.

ಪಕ್ಷದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸೈಕಲ್ ಜಾಥಾದಲ್ಲಿ ಶ್ರೀಧರ್ ಲಕ್ಷ್ಮಣ್

₹1ಕ್ಕೆ ರುಚಿಕರ ಉಪಹಾರ; ಮನೆ ಬಾಗಿಲಿಗೇ ಕುಡಿಯುವ ನೀರು

ಬಡವರು ಹಾಗೂ ತಳಸ್ತರದ ಜನ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೆ.ಬಿ.ಎಲ್.ಸಮೂಹ ಹಾಗೂ ಶ್ರೀ ಲಕ್ಷ್ಮಿ ಸಿದ್ದೇಶ್ವರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಹರಿನಗರದಲ್ಲಿ ಕೆ.ಬಿ.ಎಲ್.ಕ್ಯಾಂಟೀನ್ ತೆರೆದು ₹ 1ಕ್ಕೆ ಬೆಳಗಿನ ಉಪಹಾರ ಪೂರೈಸಲಾಗುತ್ತಿದೆ. ನಾಲ್ಕು ವರ್ಷಗಳ ಹಿಂದೆ ಸ್ಥಾಪನೆಯಾದ ಈ ಕ್ಯಾಂಟೀನ್‌ನಲ್ಲಿ ಪ್ರತಿನಿತ್ಯ 500 ಮಂದಿ ಶುಚಿ, ರುಚಿಯಾದ ವೈವಿಧ್ಯಮಯ ಉಪಹಾರ ಸವಿಯುತ್ತಿದ್ದಾರೆ. ವರ್ಷದ ಎಲ್ಲಾ ದಿನಗಳಲ್ಲೂ ಕ್ಯಾಂಟೀನ್ ಬಾಗಿಲು ತೆರೆದಿರುತ್ತದೆ.

ಅಂಜನಾಪುರ ಹಾಗೂ ಕೋಣನಕುಂಟೆ ವಾರ್ಡ್‌ಗಳಲ್ಲಿ ಕೂಲಿ ಕಾರ್ಮಿಕರು ಹಾಗೂ ಬಡವರೇ ಹೆಚ್ಚು ವಾಸಿಸುತ್ತಿದ್ದಾರೆ. ಇವರು ಕುಡಿಯುವ ನೀರಿಗಾಗಿ ರಾತ್ರಿ ಇಡೀ ಕಾದು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಜನರ ಸಂಕಷ್ಟವನ್ನು ಮನಗಂಡ ಇವರು ದಿನದ 24 ಗಂಟೆಯೂ ಟ್ಯಾಂಕರ್‌ಗಳ ಮೂಲಕ ಮನೆ ಬಾಗಿಲಿಗೆ ಉಚಿತವಾಗಿ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಂಡಿದ್ದಾರೆ. ಕಳೆದ 5 ವರ್ಷಗಳಿಂದ ಈ ಕೆಲಸ ನಡೆದುಕೊಂಡು ಬಂದಿದೆ.

ಕ್ಯಾಂಟೀನ್‌ನಲ್ಲಿ ಬಡವರಿಗೆ ಉಪಹಾರ ವಿತರಣೆ

ರಸ್ತೆ ಬದಿ ಗಿಡ ನೆಟ್ಟ ಸಂದರ್ಭ

ದೇವಸ್ಥಾನ ನಿರ್ಮಾಣಕ್ಕೂ ಸೈ..

ಕೆ.ಬಿ.ಲಕ್ಷ್ಮಣ್ ಹಾಗೂ ಕುಟುಂಬದವರ ಆಸಕ್ತಿಯಿಂದಾಗಿ ಹರಿನಗರ ಬಳಿ ಶ್ರೀ ಬೀರೇಶ್ವರ ದೇವಸ್ಥಾನ ತಲೆ ಎತ್ತಿದೆ. ಇದರ ನಿರ್ಮಾಣ ಕಾರ್ಯಕ್ಕೆ ಸಾಕಷ್ಟು ಹಣವನ್ನು ಈ ಕುಟುಂಬ ದೇಣಿಗೆಯಾಗಿ ನೀಡಿದೆ. ಇತರ ದಾನಿಗಳಿಂದಲೂ ನೆರವು ಪಡೆದು ದೇವಸ್ಥಾನ ನಿರ್ಮಿಸಲಾಗಿದೆ. ಇಷ್ಟೇ ಅಲ್ಲದೆ ಚುಂಚಘಟ್ಟದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ, ಬ್ಯಾಂಕ್ ಕಾಲೊನಿಯ ಶ್ರೀ ಅನ್ನಪೂರ್ಣೇಶ್ವರಿ ಹಾಗೂ ಶ್ರೀನಿಧಿ ಬಡಾವಣೆಯ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನಗಳ ನಿರ್ಮಾಣಕ್ಕೂ ಇವರ ಕುಟುಂಬವು ನಿವೇಶನವನ್ನು ಉಚಿತವಾಗಿ ನೀಡಿದೆ. ಇತರ ಭಾಗಗಳಲ್ಲಿ ದೇವಸ್ಥಾನ, ಮಂದಿರ ನಿರ್ಮಾಣಕ್ಕೆ ಈ ಕುಟುಂಬ ಉದಾರವಾಗಿ ದೇಣಿಗೆ ಕೊಡುತ್ತಾ ಬಂದಿದೆ.

ನಾಗರಿಕರಿಗೆ ನೀರಿನ ಕ್ಯಾನ್‌ಗಳನ್ನು ವಿತರಿಸಿದ ಕ್ಷಣ

ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆ ವೇಳೆ

ಫಿನ್ಲೆಂಡ್ ಶಿಕ್ಷಣ ತಜ್ಞರ ಜೊತೆ

ಥಾವರಚಂದ್ ಗೆಹಲೋತ್ ಮತ್ತು ಅವರ ಪತ್ನಿಯನ್ನು ರಾಜ್ಯಪಾಲ ವಜುಭಾಯಿ ವಾಲಾ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು

ರಾಜಭವನಕ್ಕೆ ಬಂದ ನೂತನ ರಾಜ್ಯಪಾಲ

ಬೆಂಗಳೂರು: ರಾಜ್ಯಕ್ಕೆ ನೂತನ ರಾಜ್ಯಪಾಲರಾಗಿ ನೇಮಕಗೊಂಡಿರುವ ಥಾವರಚಂದ್ ಗೆಹಲೋತ್ ಅವರು ನಗರಕ್ಕೆ ಶನಿವಾರ ಬಂದರು.

ರಾಜ್ಯದ 19ನೇ ರಾಜ್ಯಪಾಲರಾಗಿ ಗೆಹಲೋತ್ ಅವರು ಭಾನುವಾರ (ಜುಲೈ11) ಬೆಳಿಗ್ಗೆ 11.30ಕ್ಕೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ದೆಹಲಿಯಿಂದ ಕುಟುಂಬ ಸದಸ್ಯರ ಜೊತೆಗೆ ಶನಿವಾರ ಬೆಳಿಗ್ಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಗೆಹಲೋತ್ ಅವರನ್ನು ಕಂದಾಯ ಸಚಿವ ಆರ್. ಅಶೋಕ, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಸ್ವಾಗತಿಸಿದರು. ರಾಜಭವನದಲ್ಲಿ ಗೆಹಲೋತ್ ಮತ್ತು ಅವರ ಪತ್ನಿಯನ್ನು ರಾಜ್ಯಪಾಲ ವಜುಭಾಯಿ ವಾಲಾ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಮೂರು ತಿಂಗಳಲ್ಲಿ ವರದಿ ಮಂಡನೆಗೆ ನಿರ್ದೇಶನ

ಜಮಾನ್‌ಲಾಲ್ ಟ್ರಸ್ಟ್‌ಗೆ ಆಸ್ತಿ ಮರಳಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಗೆ ಹೊಂದಿಕೊಂಡಂತೆ ಇರುವ 354 ಎಕರೆ 10 ಗುಂಟೆ ಜಾಗವನ್ನು ಜಮಾನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ಮರಳಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

'ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ನಿಬಂಧನೆಗಳನ್ನು ಮೀರಿ ಹೆಚ್ಚುವರಿ ಭೂಮಿಯನ್ನು ಈ ಟ್ರಸ್ಟ್ ಹೊಂದಿದೆ' ಎಂದು ಭೂ ನ್ಯಾಯಮಂಡಳಿ (ಬೆಂಗಳೂರು ಉತ್ತರ) ತೀರ್ಪು ನೀಡಿತ್ತು.

ಇದನ್ನು ಪ್ರಶ್ನಿಸಿ ಟ್ರಸ್ಟ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ, ನ್ಯಾಯಮಂಡಳಿಯ ಈ ನಿಲುವಿಗೆ ಅತೃಪ್ತಿ ವ್ಯಕ್ತಪಡಿಸಿದೆ.

ನ್ಯಾಯ ಮಂಡಳಿಯ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ

ನಿರ್ವಹಿಸಿ ಮೌಲ್ಯಮಾಪನ ಮಾಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪೀಠ ಸೂಚನೆ ನೀಡಿದೆ. ಅಲ್ಲದೆ, ಕೈಗೊಂಡ ಕ್ರಮಗಳ ಬಗ್ಗೆ ಮೂರು ತಿಂಗಳಲ್ಲಿ ವರದಿ ಮಂಡಿಸುವಂತೆ ನಿರ್ದೇಶನ ನೀಡಿದೆ.

ಭೂ ನ್ಯಾಯ ಮಂಡಳಿಯು ಮೂರು ಆದೇಶಗಳನ್ನು ಅಂಗೀಕರಿಸಿದ್ದು, 2017ರ ನವೆಂಬರ್ 28ರಂದು ಮೂರನೇ ಆದೇಶ ಹೊರಡಿಸಿತ್ತು. ಈ ಸಂಬಂಧ 2017ರ ಡಿಸೆಂಬರ್‌ನಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿ ಆದೇ ದಿನ ಕಂದಾಯ ಅಧಿಕಾರಿಗಳು ಮೂರು ಮಹಜರುಗಳನ್ನು ನಡೆಸಿ ಭೂಮಿ ವಶಕ್ಕೆ ಪಡೆದಿದ್ದರು.

'ಟ್ರಸ್ಟ್ ಹೊಂದಿರುವ ಜಮೀನಿಗೆ ಸಂಬಂಧಿಸಿದಂತೆ ಭೂ ಸುಧಾರಣಾ ಕಾಯ್ದೆಯಡಿ ಯಾವುದೇ ಅರ್ಜಿಗಳು ಬಂದಿಲ್ಲ. 400 ಎಕರೆ ಜಮೀನು ಹೊಂದಿರುವ ಬಗ್ಗೆ ಮುನ್ನೆಚ್ಚರಿಕೆ ಕ್ರಮವಾಗಿ ಟ್ರಸ್ಟ್‌ನಿಂದಲೇ ಘೋಷಣೆ ಸಲ್ಲಿಸಲಾಗಿದೆ. ಅಲ್ಲದೇ, ಈ ಭೂಮಿ ಕೃಷಿಗೆ ಯೋಗ್ಯವಾಗಿಲ್ಲ. ಆದರೂ, ಭೂಮಿಯನ್ನು ಸರ್ಕಾರಕ್ಕೆ ಒಪ್ಪಿಸುವಂತೆ ನ್ಯಾಯ ಮಂಡಳಿ ಆದೇಶಿಸಿದೆ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

2010ರಲ್ಲಿ ಇದೇ ರೀತಿಯ ಆದೇಶ ಹೊರಡಿಸಿದ್ದನ್ನು ಪ್ರಶ್ನಿಸಿ ಟ್ರಸ್ಟ್ ಹೈಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣವನ್ನು ಪುನರ್ ಪರಿಶೀಲಿಸುವಂತೆ ಹೈಕೋರ್ಟ್ ಈ ಹಿಂದೆಯೂ ನಿರ್ದೇಶನ ನೀಡಿತ್ತು.

ಗತಕಾಲದ ನೆನಪು ಕಾಡಿತೆ: ಡಿಕೆಶಿಗೆ ಬಿಜೆಪಿ ಪ್ರಶ್ನೆ

ಬೆಂಗಳೂರು: ಹೆಗಲ ಮೇಲೆ ಕೈ ಇರಿಸಲು ಬಂದ ಪಕ್ಷದ ಕಾರ್ಯಕರ್ತರೊಬ್ಬರ ತಲೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಏಟು ನೀಡಿರುವ ವಿಡಿಯೊ ತುಣುಕನ್ನು ಟ್ವಿಟರ್‌ನಲ್ಲಿ ಹಂಚಿಕೊಂಡು ತೀವ್ರ ಟೀಕಾಪ್ರಹಾರ ನಡೆಸಿರುವ ಬಿಜೆಪಿ ರಾಜ್ಯ ಘಟಕ, 'ರೌಡಿ ಕೊತ್ವಾಲನೊಂದಿಗೆ ಇದ್ದ ಗತಕಾಲದ ನೆನಪು ಕಾಡಿತೆ' ಎಂದು ಪ್ರಶ್ನಿಸಿದೆ.

'ನೀವು ಕೊತ್ವಾಲನ ಶಿಷ್ಯ ಆಗಿರಬಹುದು. ಜೈಲಿಗೂ ಹೋಗಿ ಬಂದಿರಬಹುದು. ಆದರೆ, ಆ ರಾಕ್ಷಸಿ ಗುಣಗಳನ್ನು ಅಮಾಯಕರ ಮೇಲೆ ತೋರಿಸಬೇಡಿ. ಇದು ಬಸವಣ್ಣನ ನಾಡು ಎಂಬುದು ನೆನಪಿರಲಿ. ಕೆಪಿಸಿಸಿ ಅಧ್ಯಕ್ಷರ ನಡೆ ಇತರರಿಗೆ ಮಾದರಿಯಾಗಿರಲಿ' ಎಂದು ಬಿಜೆಪಿ ಹೇಳಿದೆ.

ಶಿವಕುಮಾರ್ ಅವರ ದರ್ಪದ ವರ್ತನೆ ಹಲವಾರು ಬಾರಿ ಬಹಿರಂಗವಾಗಿದೆ. ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆ ಹೇಳಿಕೊಂಡ ವ್ಯಕ್ತಿಯ ಬಂಧನಕ್ಕೆ ಪೊಲೀಸರನ್ನು ಕಳಿಸಿದ್ದರು. ಜತೆಗೆ ಸೆಲ್ಫಿ ತೆಗೆದುಕೊಳ್ಳಲು ಮುಂದಾದ ವಿದ್ಯಾರ್ಥಿ ಮೇಲೂ ಹಲ್ಲೆ ನಡೆಸಿದ್ದರು. ತಾವು ಮಾತನಾಡುವಾಗ ಮಾತನಾಡಿದರೆ ಒದ್ದು ಹೊರ ಹಾಕುವುದಾಗಿ ಕಾಂಗ್ರೆಸ್ ಕಾರ್ಯಕರ್ತರಿಗೆ ಬೆದರಿಕೆ ಹಾಕಿದ್ದರು ಎಂದು ಟ್ವೀಟ್‌ನಲ್ಲಿ ದೂರಲಾಗಿದೆ.

'ಸಾರ್ವಜನಿಕವಾಗಿ ಹೊಡೆಯುವುದು, ಒದೆಯುವುದು, ಮೊಬೈಲ್ ಕಿತ್ತೆಸೆಯುವುದು ರೌಡಿ ಲಕ್ಷಣ ಅಲ್ಲವೆ? ನೀವು ಹೊಡಿ, ಬಡಿ ರಾಜಕಾರಣದ ರಾಯಭಾರಿ ಆಗಲು ಹೊರಟಿದ್ದೀರಾ? ಭೂಗತ ಜಗತ್ತಿನ ರೀತಿಯ ವರ್ತನೆಗಳೇ ನಿಮಗೆ ಅನಿವಾರ್ಯ ಎಂದಾದರೆ ಸಾರ್ವಜನಿಕ ಜೀವನ ಬಿಟ್ಟುಬಿಡಿ' ಎಂದು ಶಿವಕುಮಾರ್ ಅವರನ್ನು ಬಿಜೆಪಿ ಒತ್ತಾಯಿಸಿದೆ.

'ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದು ಮಾಡಿ'

ಬೆಂಗಳೂರು: 'ರಾಜ್ಯ ಸರ್ಕಾರ ಹಠಕ್ಕೆ ಬಿದ್ದು ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ನಡೆಸಲು ಮುಂದಾಗಿರುವುದು ಖಂಡನೀಯ. ಸರ್ಕಾರ ಪರೀಕ್ಷೆಗಳನ್ನು ಕೂಡಲೇ ರದ್ದು ಮಾಡಬೇಕು' ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ (ಎಐಎಸ್‌ಇಸಿ) ರಾಜ್ಯ ಘಟಕದ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಆಗ್ರಹಿಸಿದ್ದಾರೆ.

'ಕೋವಿಡ್ ಕರಿನೆರಳಿನ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯವನ್ನು ಗಣನೆಗೆ ತೆಗೆದುಕೊಂಡಿರುವ ಬಹುತೇಕ ರಾಜ್ಯಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಇದರಿಂದ ಪಾಠ ಕಲಿತುಕೊಳ್ಳದ ರಾಜ್ಯ ಸರ್ಕಾರ, ಇದೇ 19 ಹಾಗೂ 22ರಂದು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಮುಂದಾಗಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ನಗರದಲ್ಲಿ ಇಂದು

ನಿರುದ್ಯೋಗದ ವಿರುದ್ಧ ರಾಜ್ಯಮಟ್ಟದ ಆನ್‌ಲೈನ್ ಸಮಾವೇಶ: ಉದ್ಘಾಟನೆ–ಬರಗೂರು ರಾಮಚಂದ್ರಪ್ಪ, ಭಾಷಣಕಾರರು–ರಾಮಾಂಜನಪ್ಪ ಆಲ್ದಳ್ಳಿ, ಜಿ.ಶಶಿಕುಮಾರ್, ಅಧ್ಯಕ್ಷತೆ–ಎಂ.ಉಮಾದೇವಿ, ಆಯೋಜನೆ–ಎಐಡಿವೈಒ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಸಮಿತಿ ಸಭೆ ಹಾಗೂ ಹೊಸ ಮುಖಂಡರ ಸೇರ್ಪಡೆ ಕಾರ್ಯಕ್ರಮ: ಉದ್ಘಾಟನೆ–ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ರಾಮದಾಸ್ ಆಠವಲೆ, ಅಧ್ಯಕ್ಷತೆ–ಎಂ.ವೆಂಕಟಸ್ವಾಮಿ, ಸ್ಥಳ–ನಾಗಸೇನಾ ವಿದ್ಯಾಲಯ ಸಭಾಂಗಣ, ಸದಾಶಿವನಗರ, ಮಧ್ಯಾಹ್ನ 2

ಚಿಂತಕ ಎಂ.ಪಿ.ಪ್ರಕಾಶ್ ಅವರ ಜನ್ಮದಿನ ಹಾಗೂ ದತ್ತಿ ಉಪನ್ಯಾಸ: ಉದ್ಘಾಟನೆ–ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಅಧ್ಯಕ್ಷತೆ–ಗೊ.ರು.ಚನ್ನಬಸಪ್ಪ, ಅತಿಥಿಗಳು–ಎಚ್.ಎಸ್. ಶಿವಪ್ರಕಾಶ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ–ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಎಂ.ಪಿ. ಪ್ರಕಾಶ್ ಪ್ರತಿಷ್ಠಾನ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)



ಬಸವರಾಜ ಹೊರಟ್ಟಿ

ಸಿದ್ದರಾಮಯ್ಯ ನೇತೃತ್ವದಲ್ಲಿ ಅತಿ ಹಿಂದುಳಿದ ವರ್ಗಗಳ ನಾಯಕರ ಸಭೆ

ಜಾತಿ ಗಣತಿ: ಒತ್ತಡ ಹೇರಲು 'ಅಹಿಂದ' ಅಸ್ತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ (ಜಾತಿ ಗಣತಿ) ವರದಿ ಸ್ವೀಕರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು 'ಅಹಿಂದ ಅಸ್ತ್ರ' ಬಳಸಲು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ.

ಸಣ್ಣಪುಟ್ಟ ಸಮುದಾಯಗಳನ್ನು ಒಗ್ಗೂಡಿಸಿ ಬೃಹತ್‌ಮಟ್ಟದ ಸಾಮಾಜಿಕ ಆಂದೋಲನ ರೂಪಿಸುವ ಜೊತೆಗೆ, ಕೋರ್ಟ್ ಮೆಟ್ಟಿಲೇರಲು ಕೂಡಾ ಅವರು ವೇದಿಕೆ ಸಿದ್ಧಪಡಿಸುತ್ತಿದ್ದಾರೆ. ಹಂತ ಹಂತವಾಗಿ ಹೋರಾಟ ಹಮ್ಮಿಕೊಳ್ಳುವ ಬಗ್ಗೆ ಅತಿ ಹಿಂದುಳಿದ ವರ್ಗಗಳ ಜಾಗೃತಿ ಸಮಿತಿಯ ಪ್ರಮುಖರ ಜೊತೆ ಅವರು ಸಮಾಲೋಚನೆ ನಡೆಸಿದ್ದಾರೆ.

'ಜಾತಿ ಗಣತಿ ವರದಿ ಸ್ವೀಕರಿಸಬೇಕಾದ ತುರ್ತಿನ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶೀಘ್ರದಲ್ಲಿ ಸಿದ್ದರಾಮಯ್ಯ ಪತ್ರ ಬರೆಯಲಿದ್ದಾರೆ. ಸುಮಾರು ₹ 159 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಿರುವ ವರದಿಯನ್ನು ಸ್ವೀಕರಿಸುತ್ತೀರಾ, ತಿರಸ್ಕರಿಸುತ್ತೀರಾ? ವೈಜ್ಞಾನಿಕವಾಗಿ ಅಧ್ಯಯನ ಮಾಡಿ ತಯಾರಿಸಿರುವ ಈ ವರದಿಯನ್ನು ಆಧರಿಸಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಬಹುದು. ಯಾವ ಕಾರಣಕ್ಕೆ ವರದಿಯನ್ನು ಸ್ವೀಕರಿಸುತ್ತಿಲ್ಲ ಎಂದು ಪತ್ರದಲ್ಲಿ ಸಿದ್ದರಾಮಯ್ಯ ಪ್ರಶ್ನಿಸಲಿದ್ದಾರೆ. ಮುಖ್ಯಮಂತ್ರಿ ಸ್ಪಂದಿಸದೇ ಇದ್ದರೆ ಹಂತ ಹಂತವಾಗಿ ಹೋರಾಟ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ' ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

'ವರದಿಯನ್ನು ಶೀಘ್ರದಲ್ಲಿ ಸ್ವೀಕರಿಸುವಂತೆ ಒತ್ತಡ ತಂದು ಅಂಗೀಕರಿಸುವಂತೆ ಮಾಡಲು ಹೋರಾಟದ ಹಾದಿ ತುಳಿಯಲೇಬೇಕಾದ ಅನಿವಾರ್ಯತೆಯ ಬಗ್ಗೆ ಹಿಂದುಳಿದ ಸಮುದಾಯಗಳ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅತೀ ಹಿಂದುಳಿದ ಜಾತಿಗಳ ಜೊತೆಗೆ 'ಅಹಿಂದ'ವನ್ನೂ ಒಟ್ಟಿಗೆ ತಂದು ಬೃಹತ್‌ಮಟ್ಟದ ಹೋರಾಟ ಹಮ್ಮಿಕೊಳ್ಳುವ ಬಗ್ಗೆಯೂ ಚರ್ಚೆ ನಡೆದಿದೆ. ಹಿಂದುಳಿದ ವರ್ಗಗಳ ಒಕ್ಕೂಟ ಮತ್ತು ದಲಿತ ಸಂಘಟನೆಗಳನ್ನು ಒಟ್ಟುಗೂಡಿಸಿ ವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜಿಸುವ ಜೊತೆಗೆ ಏನೇನು ಮಾಡಬಹುದು ಎಂಬ ಬಗ್ಗೆ ಸಮಾಲೋಚನೆ ನಡೆಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಜೊತೆಗಿನ ಸಭೆಯ ಬಗ್ಗೆ ಮಾಹಿತಿ ನೀಡಿದ ಅತೀ ಹಿಂದುಳಿದ ವರ್ಗಗಳ ಜಾಗೃತಿ ಸಮಿತಿಯ ಗೌರವಾಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, 'ಸಮೀಕ್ಷಾ ವರದಿ ಸ್ವೀಕರಿಸುವಂತೆ ಒತ್ತಡ ಹೇರಲು ಕಾನೂನು ಮತ್ತು ಸಾಮಾಜಿಕ ಹೋರಾಟ ಅಗತ್ಯದ ಬಗ್ಗೆ ಸಿದ್ದರಾಮಯ್ಯ ಜೊತೆ ಸಮಾಲೋಚನೆ ನಡೆಸಿದ್ದೇವೆ. ಶೀಘ್ರದಲ್ಲಿ ಬೃಹತ್ ಹೋರಾಟ ರೂಪಿಸಲಾಗುವುದು' ಎಂದರು.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್, ವಿಧಾನ ಪರಿಷತ್ ಸದಸ್ಯರಾದ ಪಿ.ಆರ್. ರಮೇಶ್, ಮಾಜಿ ಸದಸ್ಯರಾದ ಎಂ.ಸಿ. ವೇಣುಗೋಪಾಲ್, ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಅವರು ಸಿದ್ದರಾಮಯ್ಯ ಜೊತೆ ಚರ್ಚೆ ನಡೆಸಿದ್ದಾರೆ. ಬಳಿಕ ಸಮಿತಿ ಪ್ರಮುಖರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನೂ ಭೇಟಿ ಮಾಡಿ ಚರ್ಚಿಸಿದ್ದಾರೆ.

ಕೋರ್ಟ್ ಮೆಟ್ಟಿಲೇರಲು ತೀರ್ಮಾನ

ಸಿದ್ದರಾಮಯ್ಯ ಅವರ ಅವಧಿಯಲ್ಲಿ ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ, ಈ ಸಮೀಕ್ಷೆ ನಡೆಸಿದೆ. ಹೀಗಾಗಿ, ಅವರ ಜೊತೆಗೂ ಚರ್ಚೆ ನಡೆಸಲಾಗುವುದು. ವರದಿಯನ್ನು ಸ್ವೀಕರಿಸದ ರಾಜ್ಯ ಸರ್ಕಾರದ ನಡೆಯನ್ನು ಪ್ರಶ್ನಿಸಿ ಕಾನೂನು ಹೋರಾಟದ ಅವಶ್ಯಕತೆ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲು ಕೂಡಾ ತೀರ್ಮಾನಿಸಲಾಗಿದೆ. ಕಾನೂನು ಹೋರಾಟ ರೂಪುರೇಷೆ ಬಗ್ಗೆ ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್, ಹಿರಿಯ ವಕೀಲ ಎ.ಎಸ್. ಪೊನ್ನಣ್ಣ ಮತ್ತು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಜೊತೆ ಸಮಾಲೋಚಿಸುವಂತೆ ಅತಿ ಹಿಂದುಳಿದ ವರ್ಗಗಳ ಜಾಗೃತಿ ಸಮಿತಿಯ ಪ್ರಮುಖರಿಗೆ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಲಸಿಕೆಗೆ ಸಾಲು... ಕರ್ನಾಟಕ ರಾಜೀವ್ ಗಾಂಧಿ ಆಟೊ ಚಾಲಕರ ವೇದಿಕೆಯ ಆಶ್ರಯದಲ್ಲಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಆಟೊ ರಿಕ್ಷಾ ಚಾಲಕರು ಲಸಿಕೆ ಪಡೆಯಲು ಸಾಲಿನಲ್ಲಿ ನಿಂತಿದ್ದರು –ಪ್ರಜಾವಾಣಿ ಚಿತ್ರ

'ಉದ್ದಿಮೆ ಖಾಸಗೀಕರಣ ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಉದ್ದಿಮೆಗಳ ಖಾಸಗೀಕರಣ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಬಂಡವಾಳಶಾಹಿಗಳ ಹಗಲು ದರೋಡೆಗೆ ರಹದಾರಿ ಮಾಡಿಕೊಡುವುದು ಇದರ ಉದ್ದೇಶ. ಇದರಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗುತ್ತದೆ' ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್ ಅಭಿಪ್ರಾಯಪಟ್ಟರು.

ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು ಸಂಸ್ಥೆಯು 'ಸಾರ್ವಜನಿಕ ವಲಯ ಮತ್ತು ಪ್ರಜಾಪ್ರಭುತ್ವ' ವಿಷಯದ ಕುರಿತು ಶನಿವಾರ ಹಮ್ಮಿಕೊಂಡಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂಪನ್ಮೂಲಗಳನ್ನು ವೃದ್ಧಿಸುವ ಸಲುವಾಗಿ ಸರ್ಕಾರಿ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತನ್ನ ನಿಲುವು ಸಮರ್ಥಿಸಿಕೊಳ್ಳುತ್ತಿದೆ. ಇದು ವಿತಂಡವಾದ. ಇದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದರು.

'ಬೃಹತ್ ಪ್ರಮಾಣದ ನಿರುದ್ಯೋಗ ಸಮಸ್ಯೆಯು ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣ. ನಿರುದ್ಯೋಗಕ್ಕೆ ದಾರಿಮಾಡಿಕೊಡುವ ಈ ವ್ಯವಸ್ಥೆಯನ್ನು ಜನಸಾಮಾನ್ಯರು ಯಾವ ಕಾರಣಕ್ಕೂ ಒಪ್ಪುವುದಿಲ್ಲ. ಹೂಡಿಕೆಯು ಸಾಮಾಜೀಕರಣಗೊಂಡಾಗ ಮಾತ್ರ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಾಧ್ಯ ಎಂದು ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಹೇಳಿದ್ದಾರೆ. ಇದನ್ನು ಗಮನಿಸಬೇಕು' ಎಂದರು.

'ಸರ್ಕಾರಿ ಉದ್ದಿಮೆಗಳು ಕಾಲಕಾಲಕ್ಕೆ ರಿಯಾಯಿತಿ ಘೋಷಿಸುತ್ತವೆ. ಈ ಕಾರಣಕ್ಕೆ ಬಂಡವಾಳಶಾಹಿಗಳು ಇವುಗಳನ್ನು ವಿರೋಧಿಸುತ್ತಾರೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುತ್ತದೆ. ಸಬ್ಸಿಡಿ ಸಹ ನೀಡಲಾಗುತ್ತದೆ. ಆದರೆ ಖಾಸಗಿ ಬ್ಯಾಂಕ್‌ಗಳಲ್ಲಿ ದುಪ್ಪಟ್ಟು ಬಡ್ಡಿ ವಿಧಿಸಲಾಗುತ್ತದೆ. ಹೀಗಾಗಿ ಅತ್ತ ಜನ ಸುಳಿಯುವುದಿಲ್ಲ. ಈಗ ಮಾಧ್ಯಮಗಳು ಕಾರ್ಪೊರೇಟ್ ಕಂಪನಿಗಳ ಅಧೀನಕ್ಕೊಳಪಟ್ಟಿವೆ. ಅವು ಸರ್ಕಾರಿ ಉದ್ದಿಮೆಗಳ ಮೇಲೆ ನಿರಂತರ ದಾಳಿ ನಡೆಸುತ್ತವೆ' ಎಂದು ತಿಳಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷೆ ಕೆ.ಎಸ್. ವಿಮಲಾ ಇದ್ದರು.

11 ವರ್ಷಗಳಿಂದ ಹೂಳು ತುಂಬಿದ್ದ ಕೊಳ • ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ

ಕಬ್ಬನ್ ಉದ್ಯಾನ: ಕಮಲದ ಕೊಳಕ್ಕೆ 'ಸ್ಮಾರ್ಟ್' ಸ್ಪರ್ಶ

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿರುವ 'ಕಮಲದ ಕೊಳ'ದ ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಆರಂಭಗೊಂಡಿದ್ದು, ಕೊಳ ಶೀಘ್ರದಲ್ಲೇ ಹೊಸ ರೂಪ ತಾಳಲಿದೆ.

ಬಾಲಭವನದ ಸಮೀಪ ಇರುವ ಕಮಲದ ಕೊಳವು ಉದ್ಯಾನದ ಪ್ರಮುಖ ಆಕರ್ಷಣೆಯಾಗಿತ್ತು. 'ದ್ರೋಣ' ಹೆಸರಿನ ಆಮೆ, ಮೀನುಗಳು ಹಾಗೂ 250ಕ್ಕೂ ಬಗೆಯ ಪಕ್ಷಿಗಳ ಆವಾಸಸ್ಥಾನವೂ ಇದಾಗಿತ್ತು. ಈ ಎಲ್ಲ ವಿಶೇಷಗಳಿಂದ ಕೊಳ ಸಾರ್ವಜನಿಕರನ್ನು ಸೆಳೆಯುತ್ತಿತ್ತು. ಆದರೆ, ಕ್ರಮೇಣ ಹೂಳು ತುಂಬಿಕೊಂಡು 11 ವರ್ಷಗಳಿಂದ ಹದಗೆಟ್ಟ ಸ್ಥಿತಿಯಲ್ಲಿತ್ತು.

ಕಬ್ಬನ್ ಉದ್ಯಾನದಲ್ಲಿ ಎರಡು ಹಂತಗಳಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿಗಳಿಗೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೊದಲ ಹಂತದಲ್ಲೇ ಕಮಲದ ಕೊಳದ ಅಭಿವೃದ್ಧಿಗೆ ಮುಂದಾಗಿತ್ತು. ಕಳೆದ ವರ್ಷವೇ ಆರಂಭವಾಗಬೇಕಿದ್ದ ಕಾಮಗಾರಿಗಳು ಕೋವಿಡ್‌ನಿಂದ ವಿಳಂಬವಾಗಿದ್ದವು. ಸದ್ಯ ಕೊಳದಲ್ಲಿ ಸಂಗ್ರಹವಾಗಿದ್ದ ಹೂಳು ತೆಗೆಯುವ ಕಾರ್ಯ ಪ್ರಗತಿಯಲ್ಲಿದೆ.

'ಕೊಳಕ್ಕೆ ಬಿದಿರು ಸಸಿಗಳ ನಡುವೆ ಮಳೆ ನೀರನ್ನು ನೇರವಾಗಿ ಹರಿಸಲು ಸಿದ್ಧತೆ ನಡೆಸಲಾಗಿದೆ. ಇದಕ್ಕಾಗಿ ಕೊಳಕ್ಕೆ ಸಂಪರ್ಕಿಸುವ ಸಣ್ಣ ಕಾಲುವೆಯೊಂದನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಹಂತ ಹಂತವಾಗಿ ನೀರು ಹರಿಯಲಿದೆ. ಇದನ್ನು ಮತ್ತಷ್ಟು ಅಂದಗೊಳಿಸಲು ಕಾಲುವೆಗೆ ಅಡ್ಡವಾಗಿ ಒಂದು ಕಿರುಸೇತುವೆ ನಿರ್ಮಿಸಲಾಗುವುದು' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಬಾಲಕೃಷ್ಣ ತಿಳಿಸಿದರು.

'ಕೊಳದಲ್ಲಿ ಭಾರಿ ಪ್ರಮಾಣದ ಹೂಳು ಸಂಗ್ರಹವಾಗಿತ್ತು. ಅದನ್ನು ತೆರವು ಮಾಡಲಾಗುತ್ತಿದೆ.ಈಚೆಗೆ ಸುರಿದ ಮಳೆಯಿಂದ ನೀರು ತುಂಬಿದೆ. ಅದನ್ನು ತೆರವು ಮಾಡುವ ಮೂಲಕ ಕೊಳ ನವೀಕರಿಸಲಾಗುವುದು. ಕಮಲದ ಕೊಳ ಹೆಚ್ಚು ಆಕರ್ಷಣೀಯವಾಗಿರಲಿದೆ' ಎಂದರು.

ಕಾಂಕ್ರೀಟುಮುಕ್ತ ಕಾಮಗಾರಿಗೆ ಆದ್ಯತೆ: 'ಅಂದಾಜು ₹1.5 ಕೋಟಿ ವೆಚ್ಚದಲ್ಲಿ ಕಮಲದ ಕೊಳದ ಅಭಿವೃದ್ಧಿಯನ್ನು ಕಾಂಕ್ರೀಟುಮುಕ್ತವಾಗಿ ನಡೆಸಲು ಉದ್ದೇಶಿಸಲಾಗಿದೆ. ಸಾಧ್ಯವಾದಷ್ಟು ನೈಸರ್ಗಿಕ ರೂಪದಲ್ಲೇ ನವೀಕರಣ ಮಾಡಲಾಗುವುದು. ಕಾಲುವೆ ಬದಿಗಳು, ಕೊಳದ ಖಾಲಿ ಜಾಗ ಗಳಲ್ಲಿ ಅಲಂಕಾರಿಕ ಕಲ್ಲುಗಳನ್ನು ಜೋಡಿಸಲಾಗುವುದು' ಎಂದು ಸ್ಮಾರ್ಟ್‌ಸಿಟಿ ಯೋಜನೆಯ ಹಿರಿಯ ಅಧಿಕಾರಿಯೊಬ್ಬರು ವಿವರಿಸಿದರು.

'ಕೊಳದ ಸುತ್ತಲೂ ಜನರ ಓಡಾಟಕ್ಕೆ ಪಾದಚಾರಿ ಮಾರ್ಗ ಹಾಗೂ ರಕ್ಷಣಾ ಬೇಲಿ ಸಿದ್ಧವಾಗಲಿದೆ. ಕೊಳದಲ್ಲಿ ವಿವಿಧ ತಳಿಯ ಕಮಲದ ಸಸಿಗಳನ್ನು ಬೆಳೆಸಲಾಗುವುದು. ಕೊಳದ ಮಧ್ಯಭಾಗದಲ್ಲಿ ಎತ್ತರಕ್ಕೆ ನೀರು ಚಿಮ್ಮುವ ಕಾರಂಜಿ ಅಳವಡಿಸಲಾಗುವುದು. ಆಮ್ಲಜನಕ ಪೂರಣ ಸಾಧನ ಅಳವಡಿಕೆ ಹಾಗೂ ನೀರು ಶುದ್ಧೀಕರಣ ಯಂತ್ರವೂ ಇರಲಿದೆ. ಕಾಲುವೆ ನಿರ್ಮಿಸುವ ಜಾಗದಲ್ಲಿ ಬಿದಿರು ಸಸಿಗಳಿದ್ದು, ಅವುಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗುವುದು' ಎಂದರು.

ಕಬ್ಬನ್ ಉದ್ಯಾನದಲ್ಲಿರುವ ಕಮಲದ ಕೊಳದ ಸದ್ಯದ ಸ್ಥಿತಿ —ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ರಕ್ಷಣೆಗಾಗಿ ಧರಣಿ

'ತನ್ನ ಮೂಲ ಸ್ವರೂಪ ಕಳೆದುಕೊಂಡಿದ್ದ ಈ ಕೊಳದತ್ತ ಸುಳಿಯಲು ಜನರು ಹಿಂದೇಟು ಹಾಕಿದಾಗ, ಕೊಳದ ಬಳಿಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು. ಈ ಸ್ಥಿತಿಗೆ ತೋಟಗಾರಿಕೆ ಇಲಾಖೆಯ ಬೇಜವಾಬ್ದಾರಿಯೇ ಕಾರಣ' ಎಂದು ಆರೋಪಿಸಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮೈಕಲ್ ಎಫ್.ಸಲ್ಡಾನಾ ಅವರು 2010ರಲ್ಲಿ ಧರಣಿ ನಡೆಸಿದ್ದರು.

ಮಾರುಕಟ್ಟೆ ಸ್ಥಳಾಂತರಿಸುವ ಸಂಬಂಧ ಕಲಾಸಿಪಾಳ್ಯ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

'ಕಲಾಸಿಪಾಳ್ಯಕ್ಕೆ ಸಗಟು ಮಾರುಕಟ್ಟೆ ಸ್ಥಳಾಂತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾರಣದಿಂದ ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರಗೊಂಡಿದ್ದ ಸಗಟು ಮಾರುಕಟ್ಟೆಯನ್ನು ಕಲಾಸಿಪಾಳ್ಯಕ್ಕೆ ಮತ್ತೆ ಸ್ಥಳಾಂತರಿಸಬೇಕು' ಎಂದು ಕಲಾಸಿಪಾಳ್ಯ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘ ಮನವಿ ಮಾಡಿದೆ.

ಈ ಸಂಬಂಧ ಸಂಘದ ನಿಯೋಗವು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ.

'ಕಳೆದ ವರ್ಷ ಏಪ್ರಿಲ್‌ನಲ್ಲಿ ಕೋವಿಡ್ ಎರಡನೇ ಅಲೆ ತೀವ್ರಗೊಂಡಿದ್ದರಿಂದ ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಹೆಚ್ಚು ಜನ ಒಂದೆಡೆ ಸೇರದಂತೆ ತಡೆಯುವ ಸಲುವಾಗಿ ಹಾಗೂ ಪರ್ಯಾಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಕಲಾಸಿಪಾಳ್ಯದ ಸಗಟು ಮಾರುಕಟ್ಟೆಯನ್ನು ಸಿಂಗೇನ ಅಗ್ರಹಾರದ ಬಳಿಗೆ ಸ್ಥಳಾಂತರಿಸಲಾಗಿತ್ತು. ಈಗ ಎಲ್ಲ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿರುವುದರಿಂದ ಮಾರುಕಟ್ಟೆಯನ್ನು ಮತ್ತೆ ಕಲಾಸಿಪಾಳ್ಯಕ್ಕೆ ಸ್ಥಳಾಂತರಿಸಬೇಕು' ಎಂದು ಸಂಘದ ಅಧ್ಯಕ್ಷ ಆರ್.ವಿ.ಗೋಪಿ ಒತ್ತಾಯಿಸಿದ್ದಾರೆ.

'ಆಗ ಅನಿವಾರ್ಯ ಕಾರಣದಿಂದ ಮಾರುಕಟ್ಟೆ ಸ್ಥಳಾಂತರಕ್ಕೆ ವರ್ತಕರು ಸಹಮತ ಸೂಚಿಸಿದ್ದರು. ನಗರದಿಂದ ಪ್ರತಿ ದಿನ 30 ಕಿ.ಮೀ ದೂರ ಸಂಚರಿಸಿದರೂ ನಿರೀಕ್ಷಿತ ವ್ಯಾಪಾರ ನಡೆಯುತ್ತಿಲ್ಲ. ಇದರಿಂದ ಕಲಾಸಿಪಾಳ್ಯ ಮಾರುಕಟ್ಟೆಯನ್ನೇ ಅವಲಂಬಿಸಿದ್ದ ಹಮಾಲಿಗಳು ಹಾಗೂ ದೂರದ ರೈತರು ಸಮಸ್ಯೆ ಎದುರಿಸುತ್ತಿದ್ದಾರೆ'.

'ವರ್ತಕರು ಮಾರುಕಟ್ಟೆಯಲ್ಲಿ ಕೋವಿಡ್‌ಗೆ ಸಂಬಂಧಿಸಿದ ಎಲ್ಲ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ವ್ಯಾಪಾರ ಮುಂದುವರಿಸಲಿದ್ದಾರೆ. ಈಗ ಎಲ್ಲವೂ ಸಹಜ ಸ್ಥಿತಿಯತ್ತ ಮರಳಿರುವುದರಿಂದ ಮಾರುಕಟ್ಟೆಯನ್ನು ಕಲಾಸಿಪಾಳ್ಯಕ್ಕೆ ಸ್ಥಳಾಂತರಿಸಲು ಅನುವು ಮಾಡಿಕೊಡಬೇಕು' ಎಂದೂ ಮನವಿ ಮಾಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಬಿಡಿಎ ಪ್ರಕಟಣೆ

ರೆವಿನ್ಯೂ ನಿವೇಶನದಾರರಿಗೆ 30x40 ನಿವೇಶನದ ಹಂಚಿಕೆ

(ಪ್ರಸ್ತಾವಿತ ಡಾ॥ ಶಿವರಾಮ ಕಾರಂತ್ ಬಡಾವಣೆ)

ಅನುಬಂಧ / ತಿದ್ದುಪಡಿ

ದಿನಾಂಕ: 09.07.2021ರಂದು ಇದೇ ದಿನಪತ್ರಿಕೆಯಲ್ಲಿ ಡಾ॥ ಶಿವರಾಮ ಕಾರಂತ್ ಬಡಾವಣೆ ಕುರಿತಾಗಿ ಪ್ರಕಟಗೊಂಡ ಜಾಹೀರಾತಿನಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ 09.08.2021 ಅನ್ನು **ದಿನಾಂಕ 17.09.2021ರವರೆಗೂ** ವಿಸ್ತರಿಸಿ ಮರು ನಿಗದಿಪಡಿಸಲಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು **ದಿನಾಂಕ 17.09.2021ರಂದು ಅಥವಾ ಅದಕ್ಕೂ ಮುಂಚೆ** ಸಲ್ಲಿಸತಕ್ಕದ್ದು.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಪ್ರಾಧಿಕಾರಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಮುನ್ನ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ವಿವಿಧ ನ್ಯಾಯಾಲಯಗಳ ಮುಂದೆ ಹೂಡಲಾಗಿರುವ ದಾವೆಗಳನ್ನು ಅರ್ಜಿದಾರರು ಹಿಂಪಡೆಯತಕ್ಕದ್ದು.

ನೀವು ಸಹಾಯಧನದ ಬೆಲೆಯಲ್ಲಿ ಕರ್ನಾಟಕ ಅಥವಾ ಭಾರತದ ಯಾವುದೇ ಭಾಗದಲ್ಲಿ ಈಗಾಗಲೇ ನಿವೇಶನ / ಮನೆಯನ್ನು ಪಡೆದುಕೊಂಡಿದ್ದಲ್ಲಿ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ ಎಂಬ ಷರತ್ತನ್ನು ಹಿಂಪಡೆಯಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಅಧಿಕೃತ ಜಾಲತಾಣವಾದ **www.bdabangalore.org** ಸಂಪರ್ಕಿಸಿ. ಉಳಿದಂತೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಅಭಿಯೋಜಕ ಹುದ್ದೆಗಳ ಭರ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಇರುವ ಎಲ್ಲ ಅಭಿಯೋಜಕರ ಹುದ್ದೆಗಳನ್ನು ಭರ್ತಿ ಮಾಡಲು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಸಂಬಂಧವೂ ನಿರ್ಧಾರ ತೆಗೆದುಕೊಳ್ಳುವಂತೆ ತಿಳಿಸಿದೆ.

ಈ ಸಂಬಂಧ 2019ರ ಸೆಪ್ಟೆಂಬರ್‌ನಲ್ಲಿ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡು ಆದೇಶ ನೀಡಿದ್ದರೂ ಹುದ್ದೆಗಳು ಖಾಲಿ ಉಳಿದಿವೆ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿತು.

'58 ಹಿರಿಯ ಸಹಾಯಕ ಅಭಿಯೋಜಕರ ಹುದ್ದೆಗಳು ಖಾಲಿ ಇವೆ. ಸಹಾಯಕ ಅಭಿಯೋಜಕರ 254 ಹುದ್ದೆಗಳಲ್ಲಿ 205 ಹುದ್ದೆಗಳ ಭರ್ತಿಗೆ ಮಾತ್ರ ಪ್ರಕ್ರಿಯೆ ಆರಂಭಿಸಲಾಗಿದೆ' ಎಂಬ ವಿವರ ಪರಿಶೀಲಿಸಿದ ಪೀಠ, 'ವಿಚಾರಣೆಗಳು ವಿಳಂಬ ಆಗುವುದನ್ನು ತಪ್ಪಿಸಲು ಈ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ತಿಳಿಸಿತು.

'ವಿಚಾರಣೆ ವಿಳಂಬದ ಜತೆಗೆ ಆರೋಪಿಗಳ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಂತೆ ಆಗಲಿದೆ. ಅದು ಸರಿಯಾದ ಕ್ರಮವಲ್ಲ. ಖಾಲಿ ಹುದ್ದೆ ಭರ್ತಿ ಮಾಡುವ ಜೊತೆಗೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಸಂಬಂಧ ಅನುಸರಣಾ ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದ ಪೀಠ, ಆ.27ಕ್ಕೆ ವಿಚಾರಣೆ ಮುಂದೂಡಿತು.

ಪಶುಸಂಗೋಪನೆ ಇಲಾಖೆಯಿಂದ ಅನ್ಯ ಇಲಾಖೆಗಳಿಗೆ ನಿಯೋಜನೆಗೆ ನಿರ್ಬಂಧ

ಬೆಂಗಳೂರು: ಅನ್ಯ ಇಲಾಖೆಗಳಿಗೆ ನಿಯೋಜನೆಗೊಂಡಿರುವ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳ ಸೇವೆಯನ್ನು ಇದೇ 31 ರೊಳಗೆ ವಾಪಸ್ ಪಡೆಯಲು ನಿರ್ಧರಿಸಲಾಗಿದೆ ಎಂದು ಇಲಾಖಾ ಸಚಿವ ಪ್ರಭು ಚವ್ಹಾಣ ತಿಳಿಸಿದ್ದಾರೆ.

ಇನ್ನು ಮುಂದೆ ಪಶುಸಂಗೋಪನೆ ಇಲಾಖೆಯಿಂದ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಅನ್ಯ ಇಲಾಖೆಗಳಿಗೆ ನಿಯೋಜನೆ ಮಾಡುವುದಿಲ್ಲ ಎಂದು ಅವರು ಹೇಳಿದ್ದಾರೆ.

ಅನ್ಯ ಇಲಾಖೆಗಳಿಗೆ ನಿಯೋಜನೆ ಮೇಲೆ ಹೋಗಿರುವುದರಿಂದ ಸಿಬ್ಬಂದಿ ಕೊರತೆ ಉಂಟಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ಬರುತ್ತಿರುವ ರೈತರ ಕರೆಗಳನ್ನು ನಿರ್ವಹಿಸುವುದು ಸವಾಲಾಗಿದೆ. ಲಸಿಕಾ ಕಾರ್ಯದ ಪ್ರಗತಿಯೂ ಕುಂಠಿತವಾಗಿದೆ ಎಂದು ಹೇಳಿದ್ದಾರೆ.

ಅಧಿಕಾರಿ, ಸಿಬ್ಬಂದಿಯನ್ನು ವಾಪಸ್ ಕರೆಸಿಕೊಳ್ಳುವ ಸಂಬಂಧ ಮುಖ್ಯಮಂತ್ರಿಯವರೂ ಒಪ್ಪಿಗೆ ನೀಡಿದ್ದಾರೆ. ಅರಣ್ಯ ಇಲಾಖೆ, ಪಶುವೈದ್ಯಕೀಯ ಮಹಾವಿದ್ಯಾಲಯ, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬಿಬಿಎಂಪಿ ಮತ್ತು ಪಶುಪಾಲನಾ ಅಧೀನದಲ್ಲಿನ ನಿಗಮ, ಮಂಡಳಿಗಳಲ್ಲಿ ಗುರುತುಪಡಿಸಿದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುಪಾಲನಾ ಇಲಾಖೆಯ ವಿವಿಧ ವೃಂದದ ಪಶುವೈದ್ಯಾಧಿಕಾರಿಗಳನ್ನು ಹಾಗೂ ಸಿಬ್ಬಂದಿ ಹೊರತುಪಡಿಸಿ ಉಳಿದ ಎಲ್ಲರ ಸೇವೆಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಜಯನಗರದಲ್ಲಿ ಆರಂಭವಾಗಿರುವ 'ಕಲಾ ನಿಕೇತನ್' ನೂತನ ಶಾಪಿಂಗ್ ಮಳಿಗೆಯನ್ನು ನಟಿ ಪ್ರಿಯಾಂಕಾ ಉಪೇಂದ್ರ ಶನಿವಾರ ಉದ್ಘಾಟಿಸಿದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED: EXPERIENCED LECTURERS M.Com,M.Sc, (Physics), MCA,M.Sc (Computer Science), MA (History) Attractive salary. Contact Principal with original Certificates between 10.00 am to 1.00 pm SREE-VENKATESHWARA PU COLLEGE, Krishnarajapuram, Bangalore-36. Contact:9036068144, 7411135627

II Jai Sri Gurudev II
SRI ADICHUNCHANAGIRI SHIKSHANA TRUST (R)
S J C INSTITUTE OF TECHNOLOGY
Estd. 1986, VTU Affiliated, AICTE Approved
Accredited by NAAC & NBA (CSE, ECE & MED)
P.B. No.20, B.B. Road, Chickballapur - 562101, Karnataka
Applications are invited for the posts of
Professor/Associate Professor/Assistant Professor
In the Departments of CSE, ECE & MBA
Qualifications, Experience & Salary will be as per AICTE norms
Interested eligible competent candidates may apply online at https://forms.gle.swS1pDSfxPso73jk8 by making online payment of Rs.200/- towards application fee and also send your resume along with necessary Academic Credentials to careers@sjcit.ac.in within 15 days from the date of this notification.
Note: Candidates with Ph.D from reputed Institutions are preferable. The Institution reserves the rights of processing Application (Accept/Reject). Only eligible and short-listed candidates will be intimated for selection process.
Admissions Open for 2021-22
Contact: 9731292555 / 9901653915
www.sjcit.ac.in PRINCIPAL

TEACHERS WANTED 1st To 10th Std Teachers, English Medium in All Subjects SAGAR-CONVENT Kanakapura Main Road Bangalore-82 Near APS Engineer College: 9342552428

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

WANTED_TEACHERS L.K.G_U.K.G Primary_&_High School_English BA/MA/Bed, D.Ed_& Computer_Teacher. New_Cambridge High_School Bommanahalli, Bengaluru-68. Contact: 9448312549, 7899992107

BGS
BLOOMFIELD HIGH
[Recognised by the Govt of Karnataka]
No.38, 6th Cross, 3rd Block Thyagarajanagar, Basavanagudi, B'lore-28
Phone # 080-26763777
INVITES APPLICATIONS FOR THE FOLLOWING POSITIONS
Teaching Experience of at least 3 years in a CBSE/ ICSE school, fluent in English with relevant qualifications.
1. Primary School Teachers: Graduate with B.Ed/TCH to teach Std I-IV
2. High school Teachers: Graduate/ Post Graduate, B.Ed., M.Ed to teach English/Social Sciences.
3. Language Teachers: kannada/Hindi to teach Std I –VIII
4. Support Staff: Minimum qualification SSLC from this locality with at least 2 years' experience in a school.
KINDERGARTEN COORDINATOR: Graduate with B.Ed with at least 5years' experience in a similar position
Mail resume within 5 days with the latest passport photo to : bloomfieldadm@gmail.com

WANTED LECTURERS in Mathematics, Computer science, Kannada. English. History. Economics Hindi and Commerce Lecturers for Vidyavana PU College, Tirumalashettyhalli, Whitfield, Bengaluru Email: vidyavanahr@gmail.com Mob.9663389388.

WANTED QUALIFIED & Experienced Science and Mathematics TEACHERS for Highschool. 'SOWBHAGYA SCHOOL' Kavalbyrasandra, R.T.Nagar, Bangalore-32 Contact: 9886179210 sowbhagyaschool@gmail.com

Accounts & Finance

REQUIRED URGENTLY Accounts Officer for a reputed School in Girinagar. Qualification: M.Com or CA Inter or B.Com with minimum 5 years Experience. Please send your Email it to: vbvidyalaya@yahoo.co.in

CA FIRM at Wilson Garden Needs Audit/Accounts Assistants. Fresher's/ 1 or 2years Experienced. Apply: Nagendran.co@gmail.com

NEED EXPERIENCED Female ACCOUNTANT/ SALES CO-ORDINATOR. Residing around Basavanagudi. Qualification B.Com/ B.Sc. Email: sridhar@vinayaka-Plumbing.com. Contact: 99807-99996

Cook

EMIRATES & Singapore Airlines Reg Ugtly Females: Catering_Cook/ Care_Givers/ Store Assistants AGENTS Contact: 9599174474 Bangalore-39 Reg:0009/Chennai/ PER/1000+/7606/2006

Drivers

WANTED driver husband and wife Cook for a family of 4 at Bangalore Good salary Accommodation and food. Call 9741900909

Engg/ Production Technical

REQUIRED CIVIL ENGINEERS 5 YEARS EXPERIENCE IN PWD/IRRIGATION CIVIL WORKS Contact 9108507574

REQUIRED TECHNICIAN for Diesel Generator maintenance with 3 or 4 years Minimum Experience. Qualification Dip/ BE. Contact:- 8553606634,Mail ID:- drb2302@gmail.com

WANTED EXPERIENCED CNC OPERATORS (VMC). 'VINUMAC' 205A,Peenya 3rd phase,Bangalore-58 Contact: 080-28391959, 28394512 Email: admin@vinumac.com

WE REQUIRES: 1.SR.QUALITY MANAGER (Preferable Retired), 2.SR.MARKETING MANAGER (Preferable Retired), 3.PURCHASE EXECUTIVE, 4.ITI/DIPLOMA MECHANICAL'S, 5.ACCOUNT ASSISTANT, For our special Pumps-Manufacturing-Unit at Devarachikkanahalli, Bannergatta Road, Bangalore. Email:flowoilpumps@hotmail.com

General

REQUIRED MARKETING Executives For Petroleum Products Qualification Any Degree Salary Rs 35,000/- on Target Based & Accountant well Versed with Tally Qualification B.com Salary Rs 20,000/- old Airport Road Call:7338084555 9880727889 Email: glprojects7889@gmail.com

WANTED OFFICE ASSISTANTS (Male) & DRIVER. HSR Layout (Bangalore) Ph: 08025631755/ 25631756 Email: starsilks@gmail.com

TELECALLER GOOD communications skills experience. Proficiency in Kannada, English, Telugu, Tamil, Hindi Off Rajajinagar. RAVINDRA 7021024849

WANTED RECEPTIONIST (Female) and OPERATIONAL/ STORE/ MAINTENANCE INCHARGE (Male/ Female with two wheeler) should be young & dynamic, aged 25-35 years with good English communication, computer & internet skills. Apply: Eduweft Services Pvt Ltd/ Adelie International Pre-School, 4263/4264, Opp. Swami Vivekananda Circle, Aralu Mallige Parthasarathy Road, Girinagar 1st Phase, Bengaluru-85. Phone: 9591622353, 080-26724522, 26420796 E-mail: info@eduweft.com; www.eduweft.com;

WANTED HELPERS- 7th/10th Pass/ITI Holderfor Diesel Generator Services. Also Wanted MarketingExecutive for Kirloskar Generators. Contact: 080-26893606/07 [M]: 7760998655

WANTED LADY COMPUTER OPERATOR Kannada, English Typing, With Experience, at SAPTHAGIRI, Opposite BDA Head Office. Kumarapark West, Bangalore. 9900268073, 9448068073.

Part-Time Jobs

***VACANCY IN** MNC* Company, Age 30-55, PUC+ pay 30-80k P/m.Contact: Srilatha-8431104300/ 7090022176

Hospital & Medical Jobs

MBBS / BAMS Doctors with experience for day duty at Nightingales Center for Ageing & Alzheimer's at Kasturinagar, Bengaluru. Mail resume to hr@nightingaleseldercare.com or contact : 9243100560

Multiple Vacancy

S-VYASA YOGA (Deemed-to-be University) invites following positions & desirability as per updated UGC regulations- 1.DEAN-ACADEMIC AFFAIRS, 2.DEAN- YOGA & LIFE SCIENCES, 3.DEAN-YOGA & HUMANITIES, 4.ADMINISTRATIVE OFFICER- (Male). Desirability: Age: Below 50years and expected to stay in campus preferred. Masters with 55% (Mass Communication preferred) with Ten years of experience in handling the correspondence independently with different Universities/UGC/ NAAC/Staff related matters and allied agencies. More details visit our website: www.svyasa.org /Apply before 16th July: hrdesk@svyasa.org

REQUIRED FOLLOWING staffs 1.Project Engineers Experienced BE Mechanical 25k + 5k incentives. 2.Project Engineers Fresher BE Mechanical 20k + 5k incentives 3. Helper 12th pass 17k +3k incentives. 4. Sr. Accountant with 5 years exp 30k + 5k incentive. apply to the maid id - gtvp.blr@gmail.com

WANTED (1) OFFICE ASSISTANT (Female) with Computer knowledge, (2) MARKETING EXECUTIVE with experience, 2 Wheeler must, (3) TECHNICAL TEAM, Good Salary, Incentives. Contact: ZEENITH ELEVATORS, Bangalore-60, Mobile: 6361367703

Marketing & Sales

WANTED ONLINE Marketing specialist, only experienced candidates contact- 8867255121.

MARKETING PERSONNEL required for HEALTHCARE/ MEDICAL PRODUCTS. Contact in confidence: glider.bangalore@gmail.com, www.gliderindia.in/ 9073671512

Receptionist/ Secretary

WANTED RECEPTIONIST with Computer Knowledge 2 PUC / B.Com, English Knowledge Contact: 9448505610 8884995444

Walk-in

WALK IN Interview Sigma Industries leading chemical manufacturer in Maharashtra wanted Dispatch Executive for Bangalore Office. Fresher also Contact +91-9822747289

Wanted

WANTED Radiologist MD/DMRD. Ophthalmologist MS/DNB with Experience in Phaco Surgery. St. John's Hospital, Kerala 9443855550 9447909929 director@stjohns.co.in hr.stjohns1969@gmail.com

PATHI SILKS Hiring our new retail showroom on Richmond Road Sales Executive (for sarees) age 18 to 40 with minimum 3-4 years in saree retail industry, Benifits Salary, commission. Walk-in Interview between 11am to 3pm. address: 9/1, Classiccourt, Richmond Road, Bangalore- 560025. 9845041591

WANTED EXPERIENCED Graduates from IAS coaching centers, send resume to ceo@vxplore.co.in Mob: 9740191676

WANTED EXPERIENCED VMC Machine Operators with Master Cam 3D Programming for a Private Limited Company In Prakash Nagar. 9448481947/ 9448376584: magraa@magraa.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE | NAME CHANGE | JOB | EDUCATION | HEALTH | MATRI | AUTO | ASTRO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD | ಪ್ರಜಾವಾಣಿ ಕ್ಲಾಸಿಫೈಡ್ಸ್

ಕೋವಿಡ್, ಲಾಕ್‌ಡೌನ್‌ನಿಂದ ಚರ್ಮ ಸಂಗ್ರಹಕ್ಕೆ ಅಡ್ಡಿ

ಚರ್ಮದ ಬ್ಯಾಂಕ್: ದಾಸ್ತಾನು ಖಾಲಿ

• ವರುಣ್ ಹೆಗಡೆ

ಬೆಂಗಳೂರು: ಕೋವಿಡ್ ಕಾಯಿಲೆಯು ಚರ್ಮ ಸಂಗ್ರಹಕ್ಕೆ ಹಿನ್ನಡೆಯನ್ನು ಉಂಟು ಮಾಡಿದೆ. ಒಂದು ವರ್ಷದಿಂದ ಯಾವುದೇ ವ್ಯಕ್ತಿ ಚರ್ಮ ದಾನ ಮಾಡಿಲ್ಲ. ಇದರಿಂದಾಗಿ ನಗರದಲ್ಲಿ ಸರ್ಕಾರ ಸ್ಥಾಪಿಸಿರುವ ಏಕೈಕ ಚರ್ಮದ ಬ್ಯಾಂಕ್‌ನಲ್ಲಿ ದಾಸ್ತಾನು ಸಂಪೂರ್ಣ ಖಾಲಿಯಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಚರ್ಮದ ಬ್ಯಾಂಕ್ ಕೋವಿಡ್ ನಡುವೆಯೂ ಕಾರ್ಯನಿರ್ವಹಿಸಿತ್ತು. ಕೊರೋನಾ ಮೊದಲ ಅಲೆಯಲ್ಲಿ ಒಬ್ಬರಿಂದ ಮಾತ್ರ ಚರ್ಮ ಸಂಗ್ರಹ ಪ್ರಕ್ರಿಯೆ ನಡೆದಿತ್ತು. ಎರಡನೇ ಅಲೆಯ ಅವಧಿಯಲ್ಲಿ, ಚರ್ಮ ದಾನಕ್ಕೆ ನೋಂದಾಯಿಸಿಕೊಂಡಿದ್ದ ವ್ಯಕ್ತಿಗಳು ಮೃತಪಟ್ಟಾಗ ಅವರ ಕುಟುಂಬದ ಸದಸ್ಯರು ಚರ್ಮ ದಾನಕ್ಕೆ ಸಂಬಂಧಿಸಿದಂತೆ ಬ್ಯಾಂಕನ್ನು ಸಂಪರ್ಕಿಸಿಲ್ಲ. ಬ್ಯಾಂಕ್‌ನಲ್ಲಿ 4 ಸಾವಿರ ಚದರ ಸೆಂ.ಮೀ. ಚರ್ಮದ ದಾಸ್ತಾನು ಇತ್ತು. ಅದು ಕೂಡಾ ಕಳೆದ ವರ್ಷಾಂತ್ಯದಲ್ಲಿ ಖಾಲಿಯಾಗಿದೆ. ಹಾಗಾಗಿ ಬೇಡಿಕೆ ಸಲ್ಲಿಸಿದವರಿಗೂ ಚರ್ಮ ದೊರೆಯದಂತಹ ಸ್ಥಿತಿ ನಿರ್ಮಾಣವಾಗಿದೆ.

2016ರಲ್ಲಿ ಆರಂಭವಾದ ಚರ್ಮದ ಬ್ಯಾಂಕ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿದೆ. ಇದುವರೆಗೆ 118 ಮೃತ ದಾನಿಗಳಿಂದ ಚರ್ಮ ಸಂಗ್ರಹಿಸಿರುವ ಬ್ಯಾಂಕ್, ಇತರ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಿಗೆ ಪೂರೈಸಿದೆ. ನೂರಕ್ಕೂ ಅಧಿಕ ಮಂದಿಗೆ ಚರ್ಮ ಕಸಿ ಮಾಡಿಸಿಕೊಳ್ಳಲು ಈ ಬ್ಯಾಂಕ್ ಸಹಕಾರಿಯಾಗಿದೆ.

ಹೆಚ್ಚಿನ ಬೇಡಿಕೆ: 'ಬೆಂಕಿ ಅವಘಡ ಹಾಗೂ ರಸ್ತೆ ಅಪಘಾತ ಪ್ರಕರಣಗಳ ಗಾಯಾಳುಗಳಿಗೆ ಚರ್ಮ ಕಸಿ ಚಿಕಿತ್ಸೆ ಅಗತ್ಯ. ವ್ಯಕ್ತಿ ಮೃತಪಟ್ಟಾಗ ಕುಟುಂಬಸ್ಥರು ಅಂಗಾಂಗದ ಮಾದರಿಯಲ್ಲಿಯೇ ಚರ್ಮವನ್ನೂ ದಾನ ಮಾಡಬಹುದು. ಮಾಹಿತಿ ಕೊರತೆ, ತಪ್ಪು ಕಲ್ಪನೆಯಿಂದ ಜನ ಚರ್ಮ ದಾನಕ್ಕೆ ಆಸಕ್ತಿ ತೋರಿಸುತ್ತಿಲ್ಲ. ಹೆಸರು ನೋಂದಾಯಿಸಿದ ವ್ಯಕ್ತಿ ಮೃತಪಟ್ಟಾಗ ಅವರ ಕುಟುಂಬದ ಸದಸ್ಯರು ಚರ್ಮ ಸಂಗ್ರಹಕ್ಕೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ಬ್ಯಾಂಕ್‌ಗೆ ಮಾಹಿತಿ ಒದಗಿಸದಿರುವುದರಿಂದಲೂ ಸಮಸ್ಯೆಯಾಗುತ್ತಿದೆ. ಸದ್ಯ ಚರ್ಮದ ದಾಸ್ತಾನು ಇಲ್ಲ' ಎಂದು ಪ್ಲಾಸ್ಟಿಕ್ ಸರ್ಜರಿ ಮತ್ತು ಸುಟ್ಟ ಗಾಯಗಳ ವಿಭಾಗ ಹಾಗೂ ಸ್ಕಿನ್ ಬ್ಯಾಂಕ್‌ನ ಮುಖ್ಯಸ್ಥ ಡಾ.ಕೆ.ಟಿ. ರಮೇಶ್ 'ಪ್ರಜಾವಾಣಿ' ತಿಳಿಸಿದರು.

'ಸುಟ್ಟ ಗಾಯ, ರಸ್ತೆ ಅಪಘಾತ ಸೇರಿದಂತೆ ವಿವಿಧ ಸಂದರ್ಭದಲ್ಲಿ ವ್ಯಕ್ತಿಯ ಚರ್ಮವು ಶೇ 50ಕ್ಕೂ ಅಧಿಕ ಹಾನಿಗೊಳಗಾಗಿದ್ದರೆ, ಅವರು ಚೇತರಿಸಿಕೊಳ್ಳಲು ಚರ್ಮದ ಕಸಿ ಅಗತ್ಯ. ವ್ಯಕ್ತಿ ಮೃತಪಟ್ಟ 6ರಿಂದ 8ಗಂಟೆಯೊಳಗೆ ಚರ್ಮ ಪಡೆದುಕೊಳ್ಳಬೇಕು. ಕೊರೊನಾ ಸೋಂಕಿತ ಮೃತ ವ್ಯಕ್ತಿಗಳಿಂದ ಚರ್ಮ ಸಂಗ್ರಹಿಸಲು ಅವಕಾಶವಿಲ್ಲ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ಲಾಕ್‌ಡೌನ್ ಸಡಿಲಿಕೆಯಿಂದಾಗಿ ಇನ್ನುಮುಂದೆ ಚರ್ಮ ದಾನ ಪ್ರಕ್ರಿಯೆ ಈ ಮೊದಲಿನಂತೆ ನಡೆಯಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚರ್ಮದ ಬ್ಯಾಂಕ್ ಉಸ್ತುವಾರಿ ಬಿ.ಎನ್. ನಾಗರಾಜ್ ಅವರು ವೀಕ್ಷಣೆಗೆ ಇರಿಸಲಾದ ಚರ್ಮದ ಮಾದರಿಯನ್ನು ಪರಿಶೀಲಿಸುತ್ತಿರುವುದು– ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಸುಟ್ಟಗಾಯ: ರೋಗಿಗಳ ಸಂಖ್ಯೆ ಹೆಚ್ಚಳ

ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರಕ್ಕೆ ಪ್ರತಿನಿತ್ಯ ಸರಾಸರಿ 50ರಿಂದ 60 ಹೊರರೋಗಿಗಳು ಬರುತ್ತಿದ್ದಾರೆ. ಲಾಕ್‌ಡೌನ್ ಅವಧಿಯಲ್ಲಿ ಕೂಡ ಈ ಕೇಂದ್ರವು ಕಾರ್ಯನಿರ್ವಹಿಸಿದೆ. ಇತರ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಿದ ಪರಿಣಾಮ ಈ ಕೇಂದ್ರಕ್ಕೆ ಬರುವ ಹೊರರೋಗಿಗಳ ಸಂಖ್ಯೆ ಅಧಿಕವಾಗಿತ್ತು.

'ಸುಟ್ಟ ಗಾಯದಿಂದ ನರಳುವವರಿಗೆ ಲಾಕ್‌ಡೌನ್ ಅವಧಿಯಲ್ಲೂ ಚಿಕಿತ್ಸೆ ಒದಗಿಸಲಾಗಿದೆ. ಕೋವಿಡ್ ಪೂರ್ವದ ದಿನಗಳಲ್ಲಿ ಬರುತ್ತಿದ್ದಷ್ಟೇ ರೋಗಿಗಳು ಈ ಅವಧಿಯಲ್ಲೂ ಬರುತ್ತಿದ್ದರು. ಈಗ ಈ ಕೇಂದ್ರದಲ್ಲಿ ಪ್ಲಾಸ್ಟಿಕ್ ಸರ್ಜರಿಯನ್ನೂ ಪ್ರಾರಂಭಿಸಲಾಗಿದೆ. ಪ್ರತಿನಿತ್ಯ ಸರಾಸರಿ 5ರಿಂದ 6 ಮಂದಿಗೆ ಶಸ್ತ್ರಚಿಕಿತ್ಸೆ ನೆರವೇರಿಸಲಾಗುತ್ತದೆ' ಎಂದು ಡಾ.ಕೆ.ಟಿ. ರಮೇಶ್ ತಿಳಿಸಿದರು.

5 ವರ್ಷದವರೆಗೂ ಶೇಖರಣೆ ಸಾಧ್ಯ

18 ವರ್ಷ ದಾಟಿದ ವ್ಯಕ್ತಿ ಮರಣ ಹೊಂದಿದ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಪಡೆದು ಕಾಲು ಹಾಗೂ ತೊಡೆಯ ಭಾಗದ ಚರ್ಮದ ಮೇಲ್ಪದರ ಪಡೆಯಲಾಗುತ್ತದೆ. ದಾನಿಯು ಎಚ್‌ಐವಿ, ಎಚ್‌ಸಿವಿ, ಚರ್ಮದ ಕ್ಯಾನ್ಸರ್ ಪೀಡಿತರಲ್ಲ ಎಂಬುದನ್ನು ಖಚಿತಪಡಿಸಿಕೊಂಡು, ಅಗತ್ಯ ಇರುವವರಿಗೆ ಚರ್ಮ ನೀಡಲಾಗುತ್ತದೆ. ವೈದ್ಯಕೀಯ ಉಪಕರಣದ ಸಹಾಯದಿಂದ ರಕ್ತಸ್ರಾವ ಆಗದ ರೀತಿಯಲ್ಲಿ ಚರ್ಮದ ಮೇಲ್ಪದರವನ್ನು ಮಾತ್ರ ತೆಗೆದು, ಬ್ಯಾಂಡೇಜ್ ಮಾಡಲಾಗುತ್ತದೆ. ಸಂಸ್ಕರಿಸಿದ ಚರ್ಮವನ್ನು 5 ವರ್ಷದವರೆಗೂ ಶೇಖರಣೆ ಮಾಡಬಹುದು ಎನ್ನುತ್ತಾರೆ ಚರ್ಮ ಬ್ಯಾಂಕಿನ ಉಸ್ತುವಾರಿ ಬಿ.ಎನ್. ನಾಗರಾಜ್.

ಸಹಾಯವಾಣಿ: 080 26703633 ಅಥವಾ 82775 76147

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಯೋಗೇಶ್ವರ್ ವಿರುದ್ಧ ಸಂಸದ ಸುರೇಶ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬಿಡದಿ: 'ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರು ಒಬ್ಬ 420 ವ್ಯಕ್ತಿಯಾಗಿದ್ದಾರೆ' ಎಂದು ಸಂಸದ ಡಿ.ಕೆ. ಸುರೇಶ್ ಟೀಕಿಸಿದರು.

ಬಿಡದಿಯಲ್ಲಿ ಶನಿವಾರ ಮೀನು ಕೃಷಿ ದಿನಾಚರಣೆ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಯೋಗೇಶ್ವರ್ ಅವರನ್ನು ಜನರೇ 420 ಅಂತ ಕರೆಯುತ್ತಾರೆ. ಆ 420 ಮಾತಿಗೆ ನಾನೇನು ಹೇಳಲಿ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿಗೆ ಎಲ್ಲಿಂದಲೋ ಬಂದವರು ಹಾಗೂ ಜೈಲಿಗೆ ಹೋಗಿ ಬಂದವರನ್ನು ಸೇರಿಸಿಕೊಳ್ಳುವುದಿಲ್ಲ ಎಂದಿದ್ದ ಯೋಗೇಶ್ವರ್ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, 'ಅಂತಹವರ ಹೇಳಿಕೆಗೆ ಪ್ರತಿಕ್ರಿಯೆ ನೀಡಬೇಕಾಗಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಕಾರ್ಯಕರ್ತರು ಒಬ್ಬರಿಗೆ ಕಪಾಳಮೋಕ್ಷ ಮಾಡಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಜೆಪಿಯವರಿಗೆ ಮಾಡಲು ಬೇರೆ ಏನೂ ಕೆಲಸ ಇಲ್ಲ. ಇದನ್ನೇ ದೊಡ್ಡದಾಗಿ ಬಿಂಬಿಸಲು ಹೊರಟಿದ್ದಾರೆ' ಎಂದು ಕಿಡಿಕಾರಿದರು.

'ಬೇರೆಯವರ ಹೆಗಲ ಮೇಲೆ ಕೈಹಾಕಿದರೆ ಸಂಬಂಧ ಇದೆ ಎನ್ನುತ್ತಾರೆ. ಯಾರೊಬ್ಬರೂ ಬಂದು ಹೆಗಲ ಮೇಲೆ ಕೈ ಹಾಕುವಾಗ ಏನು ಮಾಡಬೇಕೆಂದು ನೀವೇ ಹೇಳಬೇಕು. ಸಾರ್ವಜನಿಕ ಜೀವನದಲ್ಲಿ ಕೆಲವೊಂದು ಘಟನೆಗಳು ಘಟಿಸುತ್ತವೆ. ಅದಕ್ಕೆ ಹೆಚ್ಚಿನ ಮಹತ್ವ ನೀಡುವ ಅವಶ್ಯಕತೆ ಇಲ್ಲ' ಎಂದು ಹೇಳಿದರು.

ಪಿಇಎಸ್ ಹಿರಿಮೆ ಹೆಚ್ಚಿಸಿದ ಸಾರಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿ ಸಾರಂಗ್ ರವೀಂದ್ರ, ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಅಮೆರಿಕದ ಪ್ರತಿಷ್ಠಿತ ಕಾನ್‌ಫ್ಲುಯೆಂಟ್ ಕಂಪನಿಯಲ್ಲಿ ಉದ್ಯೋಗ ಗಿಟ್ಟಿಸಿಕೊಂಡಿರುವ ಅವರಿಗೆ ವಾರ್ಷಿಕ ₹1.5 ಕೋಟಿ ವೇತನ ಸಿಗಲಿದೆ.

22 ವರ್ಷ ವಯಸ್ಸಿನ ಸಾರಂಗ್ ಅವರ ಸಾಧನೆ, ಕೋವಿಡ್ ಕಾಲದಲ್ಲಿ ಕ್ಯಾಂಪಸ್ ಆಯ್ಕೆಯ ಕನವರಿಕೆಯಲ್ಲಿರುವ ನಗರದ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಲ್ಲಿ ಹೊಸ ಹುಮ್ಮಸ್ಸು ಮೂಡುವಂತೆ ಮಾಡಿದೆ.

'ಕಳೆದ ವರ್ಷ ನಮ್ಮ ಕ್ಯಾಂಪಸ್‌ಗೆ ಭೇಟಿ ನೀಡಿದ್ದ ಕಾನ್‌ಫ್ಲುಯೆಂಟ್ ಕಂಪನಿಯ ತಂಡ ಸಾರಂಗ್ ಅವರನ್ನು ಇಂಟರ್ನ್‌ಶಿಪ್‌ಗೆ ಆಯ್ಕೆ ಮಾಡಿತ್ತು. ಈ ಅವಧಿಯಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದ ಸಾರಂಗ್, ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಅವರು ಲಂಡನ್‌ನಲ್ಲಿ ಕೆಲಸಕ್ಕೆ ನಿಯೋಜನೆಗೊಂಡಿದ್ದಾರೆ. ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲೇ ವ್ಯಾಸಂಗ ಮಾಡುತ್ತಿದ್ದ ಜೀವನಾ ಹೆಗಡೆ, ಗೂಗಲ್ ಸಂಸ್ಥೆಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಬ್ಬರು ಪ್ರತಿಷ್ಠಿತ ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವ ಅವಕಾಶ ಪಡೆದಿರುವುದು ಇದೇ ಮೊದಲು. ಇದು ಖುಷಿಯ ವಿಚಾರ' ಎಂದು ಕುಲಪತಿ ಪ್ರೊ. ಎಂ.ಆರ್. ದೊರೆಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

'ಕೋವಿಡ್ ಸಮಯದಲ್ಲಿ ವಿಶ್ವವಿದ್ಯಾಲಯದ ಒಟ್ಟು 1,283 ವಿದ್ಯಾರ್ಥಿಗಳು ವರ್ಚುವಲ್ ಇಂಟರ್ನ್‌ಶಿಪ್‌ಗಳಲ್ಲಿ ಪಾಲ್ಗೊಂಡು ಉದ್ಯೋಗಕ್ಕೆ ಸಜ್ಜಾಗಲು ಅಗತ್ಯವಿರುವ ಅನುಭವ ಗಿಟ್ಟಿಸಿಕೊಂಡಿದ್ದಾರೆ. ಜೊತೆಗೆ ತಿಂಗಳಿಗೆ ₹15 ಸಾವಿರದಿಂದ ಗರಿಷ್ಠ ₹1.25 ಲಕ್ಷದವರೆಗೆ ಗೌರವ ಧನ ಪಡೆದಿದ್ದಾರೆ. ಸುಮಾರು 199 ಮಂದಿ ವಿದ್ಯಾರ್ಥಿಗಳು ವಿಶ್ವದ ಪ್ರತಿಷ್ಠಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಗೆ ದಾಖಲಾತಿ ಪಡೆದಿದ್ದಾರೆ. ನಮ್ಮ ವಿಶ್ವವಿದ್ಯಾಲಯವು ಪ್ರತಿಭಾನ್ವಿತರ ಕಣಜವಾಗಿದ್ದು ಅಂತರರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸುತ್ತಿದೆ. ಪ್ರಸ್ತುತ 1,377 ಮಂದಿ ಎಂಜಿನಿಯರಿಂಗ್, 165 ಮಂದಿ ಮ್ಯಾನೇಜ್‌ಮೆಂಟ್, 102 ಮಂದಿ ವಾಣಿಜ್ಯ, 96 ಮಂದಿ ಫಾರ್ಮಸಿ ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಕೆಲಸ ಪಡೆದುಕೊಂಡಿದ್ದಾರೆ' ಎಂದರು.



ಎಂ.ಆರ್.ದೊರೆಸ್ವಾಮಿ ಅವರೊಂದಿಗೆ ಸಾರಂಗ್ ರವೀಂದ್ರ

> **ಇಷ್ಟು ದೊಡ್ಡ ಮೊತ್ತದ ವೇತನ ಸಿಗುತ್ತದೆ ಎಂದು ಖಂಡಿತಾ ಭಾವಿಸಿರಲಿಲ್ಲ. ಕಂಪನಿಯವರು ಕರೆ ಮಾಡಿ ಹೇಳಿದಾಗ ನಿಜಕ್ಕೂ ಅಚ್ಚರಿಯಾಯಿತು.**
> **ಸಾರಂಗ್ ರವೀಂದ್ರ,**
> ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ

'ನಮ್ಮ ವಿಶ್ವವಿದ್ಯಾಲಯವು ನವೋದ್ಯಮಿಗಳನ್ನು ಸೃಷ್ಟಿಸಲೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿದ್ಯಾರ್ಥಿಗಳಲ್ಲಿರುವ ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ನೆರವಾಗುತ್ತಿದೆ. ಸಂಶೋಧನೆ ಕೈಗೊಳ್ಳಲಿರುವ ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಗೆ ವಾರ್ಷಿಕ ₹1.25 ಕೋಟಿ ಹಣಕಾಸು ನೆರವು ನೀಡಲಾಗುತ್ತಿದೆ. ಈಗಾಗಲೇ ನಮ್ಮ ವಿದ್ಯಾರ್ಥಿಗಳು ಹೊಸ ಹೊಸ ಸಂಶೋಧನೆಗಳನ್ನು ಕೈಗೊಂಡಿದ್ದಾರೆ. ಪೇಟೆಂಟ್‌ಗೆ ಅರ್ಜಿಯನ್ನೂ ಸಲ್ಲಿಸಿದ್ದಾರೆ. ಕ್ರೀಡೆಗೆ ಹೆಚ್ಚಿನ ಮನ್ನಣೆ ನೀಡುವ ಉದ್ದೇಶದಿಂದ ಬಿಬಿಎ ಇನ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮ ಆರಂಭಿಸಿದ್ದೇವೆ. ಇದು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೊಳ್ಳಲಿದೆ' ಎಂದು ಮಾಹಿತಿ ನೀಡಿದರು.

ವಿಶ್ವವಿದ್ಯಾಲಯದ ಉಪ ಕುಲಪತಿ ಜೆ. ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್ ಇದ್ದರು.

ಹಳಿಗೆ ಬಾರದ ಪ್ರವಾಸೋದ್ಯಮ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಲಾಕ್‌ಡೌನ್ ತೆರವಾಗಿದೆ. ಹಂತಹಂತವಾಗಿ ಎಲ್ಲ ಕ್ಷೇತ್ರಗಳು ಚೇತರಿಕೆಯ ಹಾದಿಯಲ್ಲಿ ಸಾಗಿವೆ. ಆದರೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚೇತರಿಕೆಯ ಹಾದಿಯನ್ನು ಕಾಣುತ್ತಿಲ್ಲ. ಇಲಾಖೆಯ ಅಧಿಕಾರಿಗಳ ಪ್ರಕಾರ ಕೋವಿಡ್ ಪೂರ್ವದಲ್ಲಿದ್ದ ಸ್ಥಿತಿಗೆ ಬರಲು ಇನ್ನೂ ಆರು ತಿಂಗಳಾದರೂ ಬೇಕು.

ಪ್ರವಾಸೋದ್ಯಮ ಇಲಾಖೆಯ ಮಾಹಿತಿ ಪ್ರಕಾರ ಬೆಟ್ಟಗಳು, ಕೋಟೆಗಳು, ದೇಗುಲಗಳು ಸೇರಿದಂತೆ ಜಿಲ್ಲೆಯಲ್ಲಿ 70ಕ್ಕೂ ಹೆಚ್ಚು ಪ್ರವಾಸಿ ತಾಣಗಳು ಇವೆ. ಬೆಂಗಳೂರಿಗೆ ಸಮೀಪದಲ್ಲಿರುವ ಜಿಲ್ಲೆಗೆ ಚಾರಣಕ್ಕಾಗಿಯೇ ಹೆಚ್ಚು ಜನರು ಬರುವರು.

ನಂದಿಗೂ ಇಳಿಕೆ: ರಾಜ್ಯದ ಪ್ರವಾಸಿ ತಾಣಗಳಲ್ಲಿ ಒಂದಾದ ನಂದಿ ಗಿರಿಧಾಮವೇ ಜಿಲ್ಲೆಯ ಪ್ರವಾಸೋದ್ಯಮದ ಮುಕುಟ ಮಣಿ. ಬೆಂಗಳೂರಿನ ಐಟಿ, ಬಿಟಿ ಕ್ಷೇತ್ರ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡದಿರುವುದು ಮತ್ತು ಈ ವಲಯದವರು ಇನ್ನೂ ಮನೆಗಳಲ್ಲಿಯೇ ಕೆಲಸ ಮಾಡುತ್ತಿರುವುದು ನಂದಿಗಿರಿಧಾಮ ಸೇರಿದಂತೆ ಜಿಲ್ಲೆಯ ಪ್ರವಾಸೋದ್ಯಮದ ಮೇಲೆ ಪರಿಣಾಮ ಬೀರಿದೆ.

ಶನಿವಾರ ಮತ್ತು ಭಾನುವಾರ ಎರಡೇ ದಿನಗಳಲ್ಲಿ 20ರಿಂದ 25 ಸಾವಿರ ಪ್ರವಾಸಿಗರು ನಂದಿ ಬೆಟ್ಟಕ್ಕೆ ಭೇಟಿ ನೀಡುತ್ತಿದ್ದರು. ಆದರೆ ಈಗ ಈ ಎರಡೂ ದಿನಗಳು ಸೇರಿ 4 ಸಾವಿರ ಪ್ರವಾಸಿಗರು ದಾಟುತ್ತಿಲ್ಲ.

ಮನೆಗಳಲ್ಲಿ ಕೆಲಸ ಮಾಡುತ್ತಿದ್ದವರು ಕಚೇರಿಗಳತ್ತ ಮುಖ ಮಾಡಿದರೆ ನಂದಿಗೂ ಹೆಚ್ಚು ಪ್ರವಾಸಿಗರು ಬರುವರು ಎನ್ನುತ್ತಾರೆ ಇಲಾಖೆಯ ಅಧಿಕಾರಿಗಳು.

ಕೋಟೆಗಳನ್ನು ಏರುವವರಿಲ್ಲ: ಚಿಕ್ಕಬಳ್ಳಾಪುರ ಜಿಲ್ಲೆ ಬೆಟ್ಟಗಳು ನಾಡು ಎಂದೇ ಪ್ರಸಿದ್ಧಿ. ಸ್ಕಂದಗಿರಿ, ಗೋವರ್ಧನಗಿರಿ ಬೆಟ್ಟ, ಆವುಲಬೆಟ್ಟ, ಗುಡಿಬಂಡೆಯ ಸುರಸ್ಮಗಿರಿ ಕೋಟೆ, ಕೈವಾರದ ದುರ್ಗಿಬೆಟ್ಟ, ದೇವಿಕುಂಟೆ ಬೆಟ್ಟ ಹೀಗೆ ಜಿಲ್ಲೆಯಲ್ಲಿ 25ಕ್ಕೂ ಹೆಚ್ಚು ಬೆಟ್ಟಗಳು, ಆ ಬೆಟ್ಟಗಳಲ್ಲಿ ಕೋಟೆಗಳು ಇವೆ. ಬೆಟ್ಟ-ಗುಡ್ಡಗಳ ಜಿಲ್ಲೆಗೆ ಚಾರಣಪ್ರಿಯರು ಹೇರಳವಾಗಿಯೇ ಬರುತ್ತಿದ್ದರು. ಆದರೆ ಈಗ ಈ ಕೋಟೆಗಳು, ಬೆಟ್ಟಗುಡ್ಡಗಳಲ್ಲಿ ಜನರ ಸುಳಿದಾಟ ತೀರಾ ಕಡಿಮೆ ಇದೆ.

ಸಣ್ಣ ವ್ಯಾಪಾರಿಗಳಿಗೆ ಪೆಟ್ಟು: ನಂದಿ ಸೇರಿದಂತೆ ಜಿಲ್ಲೆಯ ತಾಣಗಳಿಗೆ ಪ್ರವಾಸಿಗರ ಸಂಖ್ಯೆ ಕಡಿಮೆ ಆಗಿರುವುದು ಸ್ಥಳೀಯ ವ್ಯಾಪಾರಿಗಳಿಗೂ ಪೆಟ್ಟು ನೀಡಿದೆ. ವಾಹನಗಳು, ಹೋಟೆಲ್, ಕರಕುಶಲ ಉದ್ದಿಮೆ ಹೀಗೆ ವಿವಿಧ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿದೆ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಅಭಿಮಾನಿಗಳತ್ತ ಕೈ ಬೀಸಿದ ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ

ಅಧಿಕಾರ ಇಲ್ಲದಾಗಲೂ ಜನರು ನನ್ನೊಂದಿಗೆ ಇದ್ದಾರೆ: ಡಿವಿಎಸ್

ದೇವನಹಳ್ಳಿ: ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಶನಿವಾರ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿಳಿದ ಡಿ.ವಿ. ಸದಾನಂದ ಗೌಡ ಅವರನ್ನು ಬೆಂಬಲಿಗರು ಸಂಭ್ರಮದಿಂದ ಬರಮಾಡಿಕೊಂಡರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಜಮಾಯಿಸಿದ್ದ ಬೆಂಬಲಿಗರು ಬೃಹತ್ ಹೂಹಾರ ಹಾಕಿ ಸ್ವಾಗತ ಕೋರಿದರು.

'ಅಧಿಕಾರ ಸಿಕ್ಕಾಗ ಮಾತ್ರವಲ್ಲ ಕಳೆದುಕೊಂಡಾಗಲೂ ಜನ ನನ್ನೊಂದಿಗೆ ಇದ್ದಾರೆ. ಜನರ ಪ್ರೀತಿಗೆ ಚಿರಋಣಿಯಾಗಿದ್ದೇನೆ. ರಾಜೀನಾಮೆ ನೀಡಿರುವುದು ನಿಜಕ್ಕೂ ನನಗೆ ಬೇಸರವಾಗಿಲ್ಲ' ಎಂದು ಸದಾನಂದ ಗೌಡ ನಸುನಕ್ಕರು.

'ರಾಜ್ಯ ರಾಜಕಾರಣದ ಬಗ್ಗೆ ಈಗಲೇ ನಾನು ಏನೂ ಹೇಳಲಾಗುವುದಿಲ್ಲ. ಪಕ್ಷ ನೀಡುವ ಜವಾಬ್ದಾರಿ ಮತ್ತು ಸೂಚನೆ ಮೇರೆಗೆ ಕೆಲಸ ಮಾಡುತ್ತೇನೆ' ಎಂದರು.

ಅಂತರ ಮರೆತರು: ಸದಾನಂದಗೌಡ ಅವರನ್ನು ಸ್ವಾಗತಿಸಲು ಬಂದಿದ್ದ ನೂರಾರು ಮಂದಿ ಬೆಂಬಲಿಗರು ಅಂತರ ಮರೆತು ಕೋವಿಡ್ ನಿಯಮ ಗಾಳಿಗೆ ತೂರಿದರು.

ಕಲ್ಲು ಗಣಿಗಾರಿಕೆಯ ಪರಿಣಾಮ ಭಯಾನಕ ● ನಾಶವಾದ ಸಾಲು ಬೆಟ್ಟಗಳು ● ಪಾಳು ಬಿದ್ದ ಶಾಲೆ

'ನಿಶ್ಶಬ್ದ ಸ್ಫೋಟ'ದಿಂದ ಅಂತರ್ಜಲ ಕಲುಷಿತ

• ಎಂ.ಎನ್.ಯೋಗೇಶ್

ಬೇಬಿಬೆಟ್ಟದ ಸಮೀಪದ ರಾಗಿಮುದ್ದೇನಹಳ್ಳಿ ಹೊಸಬಡಾವಣೆ ಮನೆಯ ಕಾಂಪೌಂಡ್ ಬಿರುಕು ಬಿಟ್ಟಿರುವುದು (ಎಡ ಚಿತ್ರ), ಬೇಬಿಬೆಟ್ಟದ ತಪ್ಪಲಲ್ಲಿ ಶ್ರೀರಾಮ ಯೋಗೀಶ್ವರ ಮಠದ ಪ್ರೌಢಶಾಲೆ ಪಾಳು ಬಿದ್ದಿರುವುದು (ಬಲ ಚಿತ್ರ)

ಮಂಡ್ಯ: ಬೇಬಿಬೆಟ್ಟದ ಕಲ್ಲು ಗಣಿಗಳಲ್ಲಿ ನಡೆಯುತ್ತಿದ್ದ ಅಪಾಯಕಾರಿ 'ನಿಶ್ಶಬ್ದ-ಸ್ಫೋಟ'ದಿಂದಾಗಿ (ಸೈಲೆಂಟ್ ಬ್ಲಾಸ್ಟ್) ಅಂತರ್ಜಲ ಕಲುಷಿತಗೊಂಡಿದೆ.

2018ರಲ್ಲಿ 'ಕಲ್ಲುಗಣಿಗಳಿಂದ ಕೆಆರ್‌ಎಸ್ ಜಲಾಶಯಕ್ಕೆ ಧಕ್ಕೆಯುಂಟಾಗುವ ಸಾಧ್ಯತೆ ಇದೆ' ಎಂಬ ವರದಿ ಬಂದ ನಂತರ ಗಣಿಗಾರಿಕೆ ನಿಷೇಧ ಎಂಬುದು ಹಾವು-ಏಣಿ ಆಟದಂತಾಗಿದೆ. ನಿಷೇಧದ ನಡುವೆಯೂ ಗಣಿಗಾರಿಕೆಗೆ ಉಪಾಯ ಹುಡುಕಿಕೊಂಡ ಮಾಲೀಕರು ಶಬ್ದವಿಲ್ಲದ ಸ್ಫೋಟದ ತಂತ್ರವನ್ನು ರೂಪಿಸಿಕೊಂಡಿದ್ದಾರೆ. ಇತ್ತೀಚಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳೇ ಅದನ್ನು ಬಹಿರಂಗಗೊಳಿಸಿದ್ದಾರೆ.

'ಆಳವಾಗಿ ಕುಳಿ ತೋಡಿ, ಅಪಾಯಕಾರಿ ರಾಸಾಯನಿಕ ಬಳಸಿ ಬಂಡೆಯನ್ನು ಸಡಿಲಗೊಳಿಸುವ (ವೈಬ್ರೇಷನ್) ತಂತ್ರವಿದು. ಅದರಿಂದ ಕಲ್ಲು ಬಂಡೆ ಸಿಡಿಯದೆ ಇದ್ದಲ್ಲಿಯೇ ಒಡೆದುಕೊಳ್ಳುತ್ತದೆ. ರಾಸಾಯನಿಕಗಳು ಅಂತರ್ಜಲದೊಂದಿಗೆ ಬೆರೆಯುತ್ತವೆ. ಬೃಹತ್ ಕಾಮಗಾರಿ ಸೇರಿ ತುರ್ತು ಸಂದರ್ಭದಲ್ಲಿ ಮಾತ್ರ ರಾಸಾಯನಿಕಯುಕ್ತ ಸ್ಫೋಟಕ್ಕೆ ಅವಕಾಶವಿದೆ. ಅದಕ್ಕೆ ಸ್ಫೋಟಕ ಕಾಯ್ದೆಯಡಿ ವಿಶೇಷ ಅನುಮತಿ ಪಡೆಯಬೇಕು. ಬೇಬಿಬೆಟ್ಟದಲ್ಲಿ ಈಚೆಗೆ ಅಂಥ ಸ್ಫೋಟ ನಡೆಸಿದ್ದಾರೆ' ಎಂದು ಹಿರಿಯ ಭೂ ವಿಜ್ಞಾನಿಯೊಬ್ಬರು ತಿಳಿಸಿದರು.

ನಿಶ್ಶಬ್ದ ಸ್ಫೋಟದಿಂದ ಬೇಬಿಬೆಟ್ಟದ ಅಕ್ಕಪಕ್ಕದ ಗ್ರಾಮಗಳ ಜನ ರಾತ್ರಿ ದುರ್ವಾಸನೆಯ ನಡುವೆ ನಿದ್ರಿಸಬೇಕಾಗಿದೆ. ಕೊಳವೆಬಾವಿಯಲ್ಲೂ ದುರ್ವಾಸನೆಯುಕ್ತ ನೀರು ಬರುತ್ತಿರುವುದರಿಂದ ಕ್ಯಾನ್ ನೀರು ಬಳಸುತ್ತಿದ್ದಾರೆ.

'ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೀರು ಪರೀಕ್ಷೆ ನಡೆಸುವುದಾಗಿ ಜಿಲ್ಲಾಧಿಕಾರಿ ನೀಡಿದ್ದ ಭರವಸೆ ಇನ್ನೂ ಈಡೇರಿಲ್ಲ' ಎಂದು ಬೇಬಿ ಗ್ರಾಮದ ಲೋಕೇಶ್ ತಿಳಿಸಿದರು.

ಸಾಲುಬೆಟ್ಟ ನಾಶ: 'ಬೇಬಿಬೆಟ್ಟವೆಂದರೆ ಒಂದಲ್ಲ, ಬೆಟ್ಟಗಳ ಸಾಲು. ಏಳೆಂಟು ತಲೆಮಾರುಗಳ ಗಣಿಗಾರಿಕೆಯಿಂದಾಗಿ ಬೆಟ್ಟಗಳು ನಾಶವಾಗಿವೆ. ಈಗ ಉಳಿದಿರುವುದು ಬೇಬಿಬೆಟ್ಟ ಮಾತ್ರ. ಕೆಳಗೆ ಮಹದೇಶ್ವರ, ಮೇಲ್ಭಾಗದಲ್ಲಿ ಸಿದ್ದೇಶ್ವರ ದೇವಾಲಯವಿದ್ದು ಗಣಿ ಮಾಲೀಕರು ಅದನ್ನು ಮುಟ್ಟಲು ಸಾಧ್ಯವಾಗಿಲ್ಲ' ಎನ್ನುತ್ತಾರೆ ಸ್ಥಳೀಯರು.

ಬೆಟ್ಟದ ತಪ್ಪಲಲ್ಲಿ ಶ್ರೀರಾಮ ಯೋಗೀಶ್ವರ ಮಠವಿದ್ದು ದಾಸೋಹ ಭವನದ ಗೋಡೆಗಳು ಬಿರುಕು ಬಿಟ್ಟಿವೆ. ಸ್ಫೋಟದ ಸದ್ದು, ದೂಳಿನಿಂದಾಗಿ ಮಠದ ಪ್ರೌಢಶಾಲೆ ಮುಚ್ಚಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆ ಸ್ಥಳಾಂತರಗೊಂಡಿದ್ದು ಕಟ್ಟಡ ಪಾಳುಬಿದ್ದಿದೆ. 'ಕ್ರಷರ್ ಹಾವಳಿಯಿಂದ ಭಕ್ತರು ಮಠಕ್ಕೆ ಬರಲು ಹೆದರುತ್ತಾರೆ. ನಮಗೂ ಭಯ. ದೇವರ ಮೇಲೆ ಭಾರ ಹಾಕಿದ್ದೇವೆ' ಎಂದು ಶ್ರೀರಾಮ ಯೋಗೀಶ್ವರ ಮಠದ ಗುರು ಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಗಣಿಸ್ಫೋಟದಿಂದ ಹಳ್ಳಿಗಳ ಜನ ನಲುಗಿದ್ದಾರೆ. ಮನೆಗಳು ಬಿರುಕು ಬಿಟ್ಟಿವೆ. ಜಲಾಶಯದಿಂದ ಮಂಡ್ಯ ತಾಲ್ಲೂಕು ದುದ್ದ ಹೋಬಳಿಗೆ ನೀರು ಪೂರೈಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಶುದ್ಧೀಕರಣ ಘಟಕ ಕ್ರಷರ್‌ಗಳ ನಡುವೆಯೇ ಸಿಲುಕಿದೆ. ಪೈಪ್‌ಲೈನ್ ಒಡೆಯುತ್ತಿದ್ದು ನೀರು ಕಲುಷಿತಗೊಳ್ಳುತ್ತಿದೆ.

ಕಲ್ಲುಗಣಿ ಸುತ್ತಮುತ್ತ

ಕೇಂದ್ರ ಜಲ ಆಯೋಗದ ಮಾರ್ಗದರ್ಶಿ ಸೂತ್ರದಂತೆ ಹಲವು ಹಂತಗಳಲ್ಲಿ ಜಲಾಶಯ ನಿರ್ವಹಣೆ ಮಾಡಲಾಗುತ್ತಿದೆ. ಜಲಾಶಯಕ್ಕೆ ತೊಂದರೆ ಇಲ್ಲ – ಶಂಕರೇಗೌಡ, ಅಣೆಕಟ್ಟೆ ಸುರಕ್ಷತಾ ಪರಿಶೀಲನಾ ಸಮಿತಿ ಸದಸ್ಯ

ಪ್ರತಿಧ್ವನಿಸಿದ 'ಪ್ರಜಾವಾಣಿ' ವರದಿ

ಕಲ್ಲುಗಣಿಗಾರಿಕೆಗೆ ಅನುಮತಿ ಕೊಡುವಂತೆ ಜಿಲ್ಲಾಡಳಿತದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಗಣಿ ಮಾಲೀಕರು ನಗರದ ಕಲ್ಯಾಣ ಮಂಟಪವೊಂದರಲ್ಲಿ ಶನಿವಾರ ನಡೆಸಿದ ಸಭೆಯಲ್ಲಿ 'ಪ್ರಜಾವಾಣಿ' ವರದಿ ಪ್ರತಿಧ್ವನಿಸಿತು.

'ಗಣಿ ಸ್ಫೋಟವನ್ನು ಅವೈಜ್ಞಾನಿಕ ಎಂದು ಬಿಂಬಿಸಿ ಬರೆಯುತ್ತಿದ್ದಾರೆ. ನಾವು ಕ್ವಾರೆಗಾಗಿ ಸಣ್ಣ ಪ್ರಮಾಣದ ಸ್ಫೋಟ ನಡೆಸುತ್ತಿದ್ದೇವೆ. ಅದರಿಂದ ಕೆಆರ್‌ಎಸ್ ಜಲಾಶಯಕ್ಕೆ ಯಾವುದೇ ರೀತಿಯಿಂದಲೂ ಧಕ್ಕೆಯಾಗುವುದಿಲ್ಲ' ಎಂದರು.

'ಗಣಿಗಾರಿಕೆ ಸ್ಥಗಿತಗೊಂಡಿರುವ ಕಾರಣ ಸರ್ಕಾರಿ ಕಾಮಗಾರಿಗಳು ನಡೆಯುತ್ತಿಲ್ಲ. ಸದ್ಯ ಹೊರ ಜಿಲ್ಲೆಗಳಿಂದ ಕಾಮಗಾರಿ ಸಾಮಗ್ರಿ ತರಿಸಿಕೊಳ್ಳಲಾಗುತ್ತಿದೆ. ವಾರದೊಳಗೆ ಗಣಿಗಾರಿಕೆಗೆ ಅವಕಾಶ ನೀಡದಿದ್ದರೆ ಹೊರ ಜಿಲ್ಲೆಯಿಂದ ಬರುತ್ತಿರುವ ಲಾರಿಗಳನ್ನು ತಡೆದು ಪ್ರತಿಭಟಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಸುಮಲತಾ, ಎಚ್‌ಡಿಕೆ ವಿರುದ್ಧ ಅಸಮಾಧಾನ

ಮಂಡ್ಯದ ಬೇಬಿಬೆಟ್ಟ, ಕೆಆರ್‌ಎಸ್ ವಿಚಾರ ಇಟ್ಟುಕೊಂಡು ಬೆಂಗಳೂರಿನಲ್ಲಿ ವಾಕ್ಸಮರದಲ್ಲಿ ತೊಡಗಿರುವ ಸಂಸದೆ ಸುಮಲತಾ, ಜೆಡಿಎಸ್ ಶಾಸಕಾಂಗದ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ವಿರುದ್ಧ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕೆಆರ್‌ಎಸ್ ಬಿರುಕು ಬಿಟ್ಟಿದೆ ಎಂದು ಹೇಳಿ ಸುಮಲತಾ ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದ್ದಾರೆ. ಅದನ್ನೇ ಮುಂದಿಟ್ಟುಕೊಂಡು ಎಚ್‌.ಡಿ.ಕುಮಾರಸ್ವಾಮಿ ರಾಜಕಾರಣ ಮಾಡುತ್ತಿದ್ದಾರೆ. ಮೇನಲ್ಲಿ ಕೋವಿಡ್ ಕಾಡುತ್ತಿದ್ದಾಗ ಇವರಿಬ್ಬರೂ ಎಲ್ಲಿದ್ದರು' ಎಂದು ವಕೀಲ ಜೆ.ರಾಮಯ್ಯ ಪ್ರಶ್ನಿಸಿದರು.

ಬಾಯಿ ಬಿಟ್ಟರೆ ಟ್ರಕ್ ಹತ್ತಿಸುತ್ತಾರೆ!

ದಿನ 24 ಗಂಟೆಯೂ ಕಲ್ಲು ತುಂಬಿದ ಟ್ರಕ್‌ಗಳು ಓಡಾಡುವ ಕಾರಣ ಸುತ್ತಮುತ್ತಲಿನ ಹಳ್ಳಿಗಳ ರೈತರ ಜಮೀನು, ನಾಲೆ ಏರಿ ನಾಶವಾಗಿವೆ. ಗ್ರಾಮೀಣ ರಸ್ತೆಗಳು ಕೆರೆಯಂತಾಗಿವೆ. 'ಕಲ್ಲುಗಣಿ ವಿರುದ್ಧ ನಾವು ಯಾವುದೇ ಹೇಳಿಕೆ ನೀಡುವುದಿಲ್ಲ, ಬಾಯಿ ಬಿಟ್ಟರೆ ಟ್ರಕ್ ಹತ್ತಿಸುವುದಾಗಿ ಬೆದರಿಕೆ ಹಾಕಿದ್ದಾರೆ' ಎಂದು ಬೇಬಿಬೆಟ್ಟಕ್ಕೆ ಹೊಂದಿಕೊಂಡಂತಿರುವ ಕಾಲೊನಿಯೊಂದರ ಜನರು ಭಯ ವ್ಯಕ್ತಪಡಿಸಿದರು.

ಹೋರಾಡಬೇಕಾದ ವಿಚಾರಗಳು ಬೇರೆ ಇವೆ: ಕುಮಾರಸ್ವಾಮಿ

ಬೆಂಗಳೂರು: ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಜತೆಗಿನ ವಾಕ್ಸಮರವನ್ನು ಅಂತ್ಯಗೊಳಿಸುವ ಇಂಗಿತವನ್ನು ಟ್ವಿಟರ್‌ನಲ್ಲಿ ಪರೋಕ್ಷವಾಗಿ ವ್ಯಕ್ತಪಡಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, 'ನಾವು ಹೋರಾಟ ಮಾಡಬೇಕಾದ ವಿಚಾರಗಳು ಬೇರೆ ಇವೆ' ಎಂದು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದ್ದಾರೆ.

ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕನ್ನಡ, ಕನ್ನಡಿಗ ಮತ್ತು ಕರ್ನಾಟಕಕ್ಕೆ ಆಗುವ ಅನ್ಯಾಯದ ವಿರುದ್ಧ ನಾವು ಹೋರಾಡಬೇಕಿದೆ. ಈಗಾಗಲೇ ನಾನು ಈ ದಿಕ್ಕಿನಲ್ಲಿ ಹೋರಾಟ ಕೇಂದ್ರೀಕರಿಸಿದ್ದೇನೆ. ಬೇರೆಲ್ಲ ವಿಷಯಗಳನ್ನು ಉಪೇಕ್ಷಿಸೋಣ. ಅನಗತ್ಯ ಮಾತುಗಳು ಅನಗತ್ಯವಷ್ಟೆ' ಎಂದಿದ್ದಾರೆ.

ಜೆಡಿಎಸ್ ಪ್ರಾದೇಶಿಕ ಪಕ್ಷವಾಗಿ ಹೋರಾಟಕ್ಕೆ ಆಯ್ದುಕೊಳ್ಳಬೇಕಾದ ವಿಚಾರಗಳು ಹಲವು ಇವೆ. ಕಾವೇರಿ ನದಿ ನೀರಿನ ಬಳಕೆಯ ಯೋಜನೆಗಳಿಗೆ ಅಡ್ಡಿಪಡಿಸುತ್ತಿರುವುದು, ರಾಜ್ಯವು ಸ್ವಂತ ಧ್ವಜ ಹೊಂದಲು ತಡೆಯೊಡ್ಡಿರುವುದು, ರಾಜ್ಯಕ್ಕೆ ಅನುದಾನ, ಪರಿಹಾರಗಳನ್ನು ನ್ಯಾಯಯುತವಾಗಿ ನೀಡದೆ ಇರುವುದರ ವಿರುದ್ಧ ಹೋರಾಡಬೇಕು. ತಮ್ಮ ವಿರುದ್ಧದ ಆರೋಪಗಳನ್ನು ಜನರ ತೀರ್ಮಾನಕ್ಕೆ ಬಿಡಬೇಕು ಎಂದು ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

'ಸುಮಲತಾ ಮಾಟಗಾತಿಯಾ?': ಶಾಸಕ ರವೀಂದ್ರ ಶ್ರೀಕಂಠಯ್ಯ

ಶ್ರೀರಂಗಪಟ್ಟಣ: 'ಭಸ್ಮ ಆಗಲಿ ಎಂದು ನನಗೆ ಶಾಪ ಹಾಕಿರುವ ಸಂಸದೆ ಸುಮಲತಾ ಕೊಳ್ಳೆಗಾಲಕ್ಕೆ ಹೋಗಿ ನನ್ನ ವಿರುದ್ಧ ಮಾಟ ಮಾಡಿಸುವ ಮಾಟಗಾತಿಯಾ' ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಪ್ರಶ್ನಿಸಿದರು.

ತಾಲ್ಲೂಕಿನ ಅರಕೆರೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳಿಗೆ ಶನಿವಾರ ಟ್ಯಾಬ್‌ಗಳನ್ನು ವಿತರಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಅಂಬರೀಷ್ ಬೆಂಬಲಿಗರು ಗಣಿಗಾರಿಕೆ, ಜಲ್ಲಿ ಕ್ರಷರ್ ನಡೆಸುತ್ತಿದ್ದರು ಎಂಬ ನನ್ನ ಹೇಳಿಕೆಯನ್ನು ಸುಮಲತಾ ತಿರುಚಿದ್ದು, ಅಂಬರೀಷ್ ಬಗ್ಗೆ ಮಾತನಾಡಿದರೆ ನಾಶವಾಗಿ ಹೋಗುತ್ತಾರೆ ಎಂದಿದ್ದಾರೆ. ಕೆಆರ್‌ಎಸ್ ಅಣೆಕಟ್ಟೆ ಬಿರುಕು ಬಿಟ್ಟಿದೆ ಎಂದು ಸುಳ್ಳು ಹೇಳಿ ಪೇಚಿಗೆ ಸಿಲುಕಿ ಈಗ ಅಧಿಕಾರಿಗಳ ವರ್ಗಾವಣೆ, ಅಕ್ರಮ ಗಣಿಗಾರಿಕೆ ಎಂದು ಏನೇನೋ ಮಾತನಾಡುತ್ತಿದ್ದಾರೆ. ಸುಳ್ಳು ಹೇಳಿದ ತಪ್ಪಿಗೆ ಕೆಆರ್‌ಎಸ್ ಬಳಿಯ ಕಾವೇರಿ ಪ್ರತಿಮೆಗೆ ಪೂಜೆ ಸಲ್ಲಿಸಿ ಜನರ ಕ್ಷಮೆ ಕೇಳಲಿ' ಎಂದು ಆಗ್ರಹಿಸಿದರು.

'ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ನನ್ನನ್ನು ವಜ್ರಮುನಿಗೆ ಹೋಲಿಸಿದ್ದಾರೆ. ವಜ್ರಮುನಿ ಒಕ್ಕಲಿಗ ಸಮುದಾಯದ ಅಭಿಜಾತ ಕಲಾವಿದ. ವಿಲನ್ ಪಾತ್ರಗಳಿಗೆ ಹೀರೊ ಇಮೇಜ್ ತಂದು ಕೊಟ್ಟವರು. ಅವರ ಬಗ್ಗೆ ಕೇವಲವಾಗಿ ಮಾತನಾಡುವುದು ಸರಿಯಲ್ಲ' ಎಂದರು.

'ಗಣಿಗಾರಿಕೆ 4 ತಿಂಗಳ ಹಿಂದೆಯೇ ಸ್ಥಗಿತ'

ಕಲಬುರ್ಗಿ: ಕೃಷ್ಣರಾಜ ಸಾಗರ ಜಲಾಶಯದ ಸುತ್ತಲಿನ 10 ಕಿ.ಮೀ. ವ್ಯಾಪ್ತಿಯಲ್ಲಿ ನಾಲ್ಕು ತಿಂಗಳ ಹಿಂದೆಯೇ ಗಣಿಗಾರಿಕೆ ಸ್ಥಗಿತಗೊಳಿಸಲಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

'ಜಲಾಶಯ ಸುತ್ತಲಿನ ಹತ್ತು ಕಿ.ಮೀ. ವ್ಯಾಪ್ತಿಯಲ್ಲಿರುವ ಅಕ್ರಮ ಗಣಿಗಾರಿಕೆಯನ್ನು ಬಂದ್ ಮಾಡಿಸಿದ್ದೇವೆ. ಹತ್ತು ಕಿ.ಮೀ ಆಚೆಗೆ ಗಣಿಗಾರಿಕೆಗೆ ಅನುಮತಿ ನೀಡಿದ್ದೇವೆ' ಎಂದು ಶನಿವಾರ ಇಲ್ಲಿ ಪ್ರತಿಕ್ರಿಯಿಸಿದರು.

'ಪರೋಕ್ಷ ಬೆದರಿಕೆ, ಆಮಿಷ ಒಡ್ಡಿದ್ದ ಬಿಎಸ್‌ವೈ, ಜನಾರ್ದನ ರೆಡ್ಡಿ'

ಜೀವನದ ದಿಕ್ಕು ಬದಲಿಸಿದ ತುರ್ತು ಪರಿಸ್ಥಿತಿ: ಎಸ್‌.ಆರ್‌. ಹಿರೇಮಠ

ಪ್ರಜಾವಾಣಿ ಸೆಲೆಬ್ರಿಟಿ LIVE



ಬೆಂಗಳೂರು: 'ನಾನು ಅಮೆರಿಕದ ಶಿಕಾಗೋದಲ್ಲಿದ್ದ ವೇಳೆಯಲ್ಲೇ ಆಗಿನ ಪ್ರಧಾನಿ ಇಂದಿರಾಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದರು. ಸರ್ವಾಧಿಕಾರದ ವಿರುದ್ಧ ಆಗ ಸಂಘಟಿಸಿದ್ದ ಹೋರಾಟ ನನ್ನ ಜೀವನದ ದಿಕ್ಕನ್ನೇ ಬದಲಿಸಿತು...

ಹೀಗೆ ತಮ್ಮ ಹೋರಾಟದ ಹಾದಿಯನ್ನು ನೆನಪಿಸಿಕೊಂಡರು ರಾಜ್ಯದಲ್ಲಿ ಜನಪರ ಹೋರಾಟಗಳ ಹಿರಿಯಜ್ಜನಂತೆ ಇರುವ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್‌.ಆರ್‌. ಹಿರೇಮಠ.

'ಪ್ರಜಾವಾಣಿ ಸೆಲೆಬ್ರಿಟಿ ಲೈವ್' ಸಂವಾದದಲ್ಲಿ ಶನಿವಾರ ಒಂದು ಗಂಟೆಗೂ ಹೆಚ್ಚು ಕಾಲ ತಮ್ಮ ಬಾಲ್ಯ, ಯೌವನ, ಅಮೆರಿಕದಲ್ಲಿದ್ದ ದಿನಗಳು, ಕುಟುಂಬ, ಹೋರಾಟದ ಕುರಿತು ಅವರು ಮಾತನಾಡಿದರು. ಹೋರಾಟದ ಗಟ್ಟಿ ಧ್ವನಿಯಾಗಿ ರೂಪುಗೊಳ್ಳಲು ಹೇಗೆ ಸಾಧ್ಯವಾಯಿತು ಎಂದು ವಿವರಿಸುತ್ತಲೇ, ಯುವಜನರು ದೇಶದ ಒಳಿತಿಗಾಗಿ ಈ ಹಾದಿಯಲ್ಲಿ ಕ್ರಮಿಸಲು ಹೇಗೆ ಸಿದ್ಧರಾಗಬೇಕು ಎಂಬುದರ ಕುರಿತು ಅನೇಕ ಸಲಹೆಗಳನ್ನು ನೀಡಿದರು.

'ಅವಿಭಜಿತ ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಬೆಳವಣಿಕೆಯಲ್ಲಿ ನಾನು ಹುಟ್ಟಿದ್ದು. ಐದು ವರ್ಷದವನಿರುವಾಗಲೇ ತಂದೆ ತೀರಿಕೊಂಡರು. ನಂತರ ತಾಯಿಯೊಂದಿಗೆ ವಿಜಯಪುರಕ್ಕೆ ವಲಸೆ. ಅಲ್ಲಿ ದುಡಿಯುತ್ತಲೇ ಪಿಯುಸಿ ಪೂರೈಸಿದೆ. ಬಳಿಕ ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸಿದೆ. ನಂತರ ವಿದ್ಯಾರ್ಥಿ ವೇತನ ಪಡೆದು ಅಮೆರಿಕಕ್ಕೆ ತೆರಳಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಎಂ.ಎಸ್. ಪೂರೈಸಿದೆ' ಎಂದು ವಿವರಿಸಿದರು.

ತಂದೆ ಸಹಕಾರ ಚಳವಳಿಯಲ್ಲಿ ಸಕ್ರಿಯರಾಗಿದ್ದವರು. ತಾಯಿ ಬಸವಣ್ಣನ ಅನುಯಾಯಿ. ಇಬ್ಬರ ಮಾರ್ಗದರ್ಶನವೇ ಹೋರಾಟದ ಹಾದಿಯಲ್ಲಿ ಸಾಗಲು ಕಾರಣವಾಯಿತು. ಹೋರಾಟದ ಗುಣ ತಂದೆಯಿಂದ ಬಂದರೆ, 'ಕಣ್ಣಾರೆ ಕಂಡರೂ ಪ್ರಮಾಣಿಸಿ ನೋಡು' ಎಂಬುದು ತಾಯಿಯ ಬಳುವಳಿ. ಅದೇ ತಮಗೆ ಇಂಡಿಯಾದ ತುರ್ತು ಪರಿಸ್ಥಿತಿ ವಿರುದ್ಧ ಅಮೆರಿಕದಲ್ಲಿ ಹೋರಾಟ ಆರಂಭಿಸಲು ಪ್ರೇರಣೆಯಾಯಿತು. ಆ ಹೋರಾಟ ವಿಶ್ವ ಸಂಸ್ಥೆಯ ಗಮನವನ್ನೂ ಸೆಳೆಯಿತು ಎಂದರು.

'ಶಿಕಾಗೊದಲ್ಲಿ ಅತ್ಯುನ್ನತ ಹುದ್ದೆಗಳು ದೊರೆತವು. ಆಗಲೇ ಮೇವಿಸ್ಸಾ ಅವರ ಪರಿಚಯವಾಯಿತು. ನಂತರ ಇಬ್ಬರೂ ಪ್ರೀತಿಸಿದೆವು. ತಾಯಿಯ ಒಪ್ಪಿಗೆ ಪಡೆದು ಮದುವೆ ಆದೆ. ನನ್ನ ತಾಯಿಯ ಆಸೆಯಂತೆ ಮೇವಿಸ್ಸಾ ಅವರು ಶ್ಯಾಮಲಾ ಹಿರೇಮಠ ಆದರು. ಬಸವಣ್ಣನ ಅನುಯಾಯಿ ಆದರು. 1979ರಲ್ಲಿ ಶಿಕಾಗೋದಿಂದ ಮರಳಿ ರಾಣೆಬೆನ್ನೂರಿನ ಮೆಡ್ಲೇರಿಯಲ್ಲಿಯಲ್ಲಿ 13 ವರ್ಷ ಇದ್ದೆವು. ಆಗ ಹಳ್ಳಿಯ ಜನರ ಜತೆಗಿದ್ದು ಕೆಲಸ ಮಾಡುವುದಕ್ಕೆ ಪ್ರೇರಣೆ ಬಂದಿದ್ದೇ ಶ್ಯಾಮಲಾ ಅವರಿಂದ' ಎಂದು ಪತ್ನಿಯ ಜತೆಗಿನ ಒಡನಾಟ ಹಂಚಿಕೊಂಡರು. ಹರಿಹರ ಪಾಲಿಫೈಬರ್ಸ್‌ನಿಂದ ಆಗುತ್ತಿದ್ದ ತುಂಗಭದ್ರಾ ನದಿಯ ಮಾಲಿನ್ಯದ ವಿರುದ್ಧದ ಹೋರಾಟ, ಛತ್ತೀಸಘಡದ ಬಸ್ತರ್ ಜಿಲ್ಲೆಯಲ್ಲಿ ನಡೆಯುತ್ತಿದ್ದ ಆದಿವಾಸಿಗಳ ಮೇಲಿನ ದೌರ್ಜನ್ಯ ಮತ್ತು ಅರಣ್ಯ ನಾಶದ ವಿರುದ್ಧದ ಹೋರಾಟ, ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ವಿರುದ್ಧದ ಹೋರಾಟ, ಸರ್ಕಾರಿ ಜಮೀನು ಕಬಳಿಕೆ ವಿರುದ್ಧದ ಹೋರಾಟದ ಹಾದಿಯಲ್ಲಿ ಎದುರಾದ ಸಂಕಷ್ಟ, ಸವಾಲು, ದೊರೆತ ಯಶಸ್ಸಿನ ಕಥನಗಳನ್ನು ಎಳೆ ಎಳೆಯಾಗಿ ವಿವರಿಸಿದರು.

'ದಶಕದ ಹಿಂದೆ ಹೋರಾಟದ ಹಾದಿಯಲ್ಲಿ ಆಗ ಮುಖ್ಯಮಂತ್ರಿ ಯಡಿಯೂರಪ್ಪ, ಅಂದಿನ ಸಚಿವ ಜಿ. ಜನಾರ್ದನ ರೆಡ್ಡಿ ಸೇರಿದಂತೆ ಹಲವರಿಂದ ಪರೋಕ್ಷವಾಗಿ ಬೆದರಿಕೆ, ಆಮಿಷಗಳು ಬಂದವು. ಆದರೆ, ಯಾವತ್ತೂ ನೇರವಾಗಿ ಬೆದರಿಕೆ ಬಂದಿಲ್ಲ. ಸರಳ ಜೀವನ ಶೈಲಿ ನನ್ನದು. ನಮ್ಮ ಕಾರ್ಯಶೈಲಿಯೂ ಅದೇ. ಹೋರಾಟದ ಆರಂಭದ ದಿನಗಳಲ್ಲಿ ಶಾಲೆ, ದೇವಸ್ಥಾನಗಳಲ್ಲಿ ಮಲಗುತ್ತಿದ್ದೆವು. ದೇಣಿಗೆಗಳನ್ನು ದುರ್ಬಳಕೆ ಮಾಡಿ ಗೊತ್ತಿಲ್ಲ. ಹಲವು ತನಿಖೆ ನಡೆದರೂ ನಮ್ಮ ಗೌರವಕ್ಕೆ ಚ್ಯುತಿ ಬಂದಿಲ್ಲ. ಹೊಗಳಿಕೆ, ತೆಗಳಿಕೆಗಳಿಗೆ ತಲೆ ಕೆಡಿಸಿಕೊಳ್ಳಬಾರದು. ಆದರೆ, ನಾವು ಯಾವತ್ತೂ ಯಾರ ಎದುರೂ ತಲೆ ತಗ್ಗಿಸಿ ನಿಲ್ಲುವಂತೆ ಆಗಬಾರದು. ನಮ್ಮ ಎದುರಿಗೆ ಇರುವವರೂ ತಲೆ ತಗ್ಗಿಸಿಬಿಡಬೇಕು ಎಂದೂ ಬಯಸಬಾರದು ಎಂಬ ನನ್ನ ತಾಯಿಯ ಮಾತು ಸದಾಕಾಲವೂ ನನಗೆ ಆದರ್ಶ' ಎಂದರು.

ಪೂರ್ಣ ಸಂವಾದ ನೋಡಲು– https://www.facebook.com/prajavani.net/videos

ಮತ್ತೆ ಕಾಂಗ್ರೆಸ್ ಕದ ತಟ್ಟಿದ ಎ. ಮಂಜು?

ಬೆಂಗಳೂರು: ಕಳೆದ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ್ದ ಹಾಸನ ಜಿಲ್ಲೆ ಅರಕಲಗೂಡು ಕ್ಷೇತ್ರದ ಮಾಜಿ ಶಾಸಕ ಎ. ಮಂಜು, ತಮ್ಮ ಬೆಂಬಲಿಗರ ಮೂಲಕ ಮತ್ತೆ ಕಾಂಗ್ರೆಸ್ ಕದ ತಟ್ಟಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಕಣಕ್ಕಿಳಿದಿದ್ದ ಅವರು ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ವಿರುದ್ಧ ಸೋಲು ಕಂಡಿದ್ದರು. ಬಳಿಕ, ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುವ ಬಗ್ಗೆ ವದಂತಿಗಳು ಹರಿದಾಡುತ್ತಿದ್ದವು. ಆದರೆ, ಅದನ್ನು ನಿರಾಕರಿಸಿದ್ದ ಅವರು, 'ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ' ಎಂದಿದ್ದರು.

ಆದರೆ, ಶನಿವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ಮಂಜು ಬೆಂಬಲಿಗರು, ಮಂಜು ಮತ್ತೆ ಕಾಂಗ್ರೆಸ್ ಸೇರುವ ಒಲವು ವ್ಯಕ್ತಪಡಿಸಿರುವ ಬಗ್ಗೆ ತಿಳಿಸಿದ್ದಾರೆ. ಅವರನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

1999ರಲ್ಲಿ ಬಿಜೆಪಿಯಿಂದ ಶಾಸಕನಾಗಿ ಆಯ್ಕೆಯಾಗಿದ್ದ ಮಂಜು, ಬಳಿಕ ಕಾಂಗ್ರೆಸ್ ಸೇರಿ 2013ರಲ್ಲಿ ಶಾಸಕರಾಗಿದ್ದರು. ಅಲ್ಲದೆ, ಪಶು ಸಂಗೋಪನೆ ಸಚಿವರಾಗಿದ್ದರು.

ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್ ಪಾಸ್

ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ): 'ರಾಜ್ಯದ 23 ಲಕ್ಷ ಕಟ್ಟಡ ಕಾರ್ಮಿಕರಿಗೆ ಎರಡುಮೂರು ತಿಂಗಳಲ್ಲಿ ಉಚಿತ ಬಸ್ ಪಾಸ್ ವಿತರಿಸಲು ತೀರ್ಮಾನಿಸಲಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು' ಎಂದು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ.ಚಂದ್ರಪ್ಪ ತಿಳಿಸಿದರು.

₹1.87 ಕೋಟಿ ಆರ್‌.ಟಿ.ಇ ಶುಲ್ಕ ಅನುದಾನ ದುರುಪಯೋಗ ಆರೋಪ

20 ಬಿಇಒಗಳಿಗೆ ನೋಟಿಸ್

• ಶಶಿಧರ ರೈ ಕುತ್ಯಾಳ

ಪುತ್ತೂರು: ಆರ್‌.ಟಿ.ಇ ಶುಲ್ಕ ಮರುಪಾವತಿಗೆ ಬಿಡುಗಡೆಯಾದ 2014-15ನೇ ಸಾಲಿನ ಸುಮಾರು ₹ 1.87 ಕೋಟಿ ಅನುದಾನವನ್ನು ದುರುಪಯೋಗ ಮಾಡಿದ ಆರೋಪದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ವರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ರಾಜ್ಯದ 20 ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೋಟಿಸ್ ಜಾರಿಯಾಗಿದೆ.

ಏಳು ದಿನಗಳ ಒಳಗೆ ಇದಕ್ಕೆ ಉತ್ತರಿಸುವಂತೆ ಸೂಚಿಸಲಾಗಿದೆ.

ಅನುದಾನ ದುರುಪಯೋಗ ಆಗಿರುವ ಬಗ್ಗೆ ಬೆಂಗಳೂರಿನ ರಮೇಶ್ ಬೆಟ್ಟಯ್ಯ ದೂರು ಸಲ್ಲಿಸಿದ್ದರು.

ಈ ದೂರಿನ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯ ಪ್ರಾಥಮಿಕ ಶಿಕ್ಷಣ ನಿರ್ದೇಶಕರಿಗೆ ಕಡತ ವರ್ಗಾಯಿಸಲಾಗಿತ್ತು.

ಅದರಂತೆ ಅವರು 2012-13 ನೇ ಸಾಲಿನಿಂದ 2015-16ನೇ ಸಾಲಿನ ತನಕ ಶಿಕ್ಷಣ ಹಕ್ಕು ಕಾಯ್ದೆಯಡಿ ದಾಖಲಾದ ಮಕ್ಕಳ ಹೆಚ್ಚುವರಿ ಶುಲ್ಕ ಪಾವತಿಯ ಬಗ್ಗೆ ವರದಿ ಸಲ್ಲಿಸಿದ್ದರು.

ಈ ವರದಿಯಲ್ಲಿ, 'ಆರ್‌.ಟಿ.ಇ ಶುಲ್ಕ ಮರುಪಾವತಿ ಹೆಚ್ಚುವರಿಯಾಗಿ ಪಾವತಿ ಮಾಡಿರುವ ಕುರಿತು ಅನುಪಾಲನಾ ವರದಿ ಸಲ್ಲಿಸಲಾಗಿಲ್ಲ. ಸರ್ಕಾರದ ಅನುದಾನ ದುರುಪಯೋಗ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಲೋಪಕ್ಕೆ ಕಾರಣವಾದ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದು' ಎಂದು ತಿಳಿಸಲಾಗಿತ್ತು.

ಇದನ್ನು ಆಧರಿಸಿ, 20 ಮಂದಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜುಲೈ 6ರಂದು ನೋಟಿಸ್ ಜಾರಿಗೊಳಿಸಲಾಗಿದೆ. ಇದಕ್ಕೆ ಉತ್ತರ ನೀಡದಿದ್ದಲ್ಲಿ ಏಕಪಕ್ಷೀಯ ನಿರ್ಣಯ ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ನೀಡಿರುವ ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ನೋಟಿಸ್ ಬಂದಿದ್ದು ನಿಜ. ಇದಕ್ಕೆ ದಾಖಲೆ ಸಹಿತ ಉತ್ತರ ನೀಡಲಾಗುವುದು. ಯಾವುದೇ ಹಣ ದುರುಪಯೋಗ ನಡೆದಿಲ್ಲ. ಅದೇ ವರ್ಷ ಎಲ್ಲ ಶಾಲೆಗಳಿಗೆ ಹಣ ಪಾವತಿಯಾಗಿದೆ. ಇವುಗಳ ದಾಖಲೆ ನೀಡಲಾಗುವುದು. ಸಂವಹನ ದೋಷದಿಂದ ಈ ರೀತಿ ತಪ್ಪು ಆಗಿರಬಹುದು' ಎಂದು ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಸಿ. ಪ್ರತಿಕ್ರಿಯಿಸಿದರು.

ಶಿಕ್ಷಣಾಧಿಕಾರಿ ಕಚೇರಿ	ಆಕ್ಷೇಪಣಾ ಮೊತ್ತ (₹ಗಳಲ್ಲಿ)
ಬೆಂಗಳೂರು ದಕ್ಷಿಣ ವಲಯ-1	95,79,838
ಹರಪ್ಪನಹಳ್ಳಿ	14,92,290
ಗದಗ ನಗರ ವಲಯ	3,505
ಮೂಡಿಗೆರೆ	1,17,045
ಹನೂರು	6,628
ಕೊಳ್ಳೇಗಾಲ	10,98,964
ಹರಪ್ಪನಹಳ್ಳಿ	4,64,680
ಮಾಗಡಿ	2,21,688
ಮೈಸೂರು ಉತ್ತರ	2,45,342
ಮೈಸೂರು ದಕ್ಷಿಣ	25,582
ತುಮಕೂರು	8,60,000
ಗೌರಿಬಿದನೂರು	14,80,000
ಗೌರಿಬಿದನೂರು	44,600
ಹಡಗಲಿ	63,911
ಶಹಾಪುರ	11,66,000
ಬಿಜಾಪುರ	44,000
ಮಂಗಳೂರು ದಕ್ಷಿಣ	10,40,551
ಮೂಡುಬಿದಿರೆ	8,000
ಪುತ್ತೂರು	10,06,422
ಸುಳ್ಯ	1,19,886

ಕಲ್ಯಾಣ ಕರ್ನಾಟಕ, ಕರಾವಳಿಯಲ್ಲಿ ಮಳೆ

ಕಲಬುರ್ಗಿ/ಮಂಗಳೂರು: ಕಲ್ಯಾಣ ಕರ್ನಾಟಕ, ಕರಾವಳಿಯ ವಿವಿಧ ಜಿಲ್ಲೆಗಳಲ್ಲಿ ಶನಿವಾರವೂ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದಲ್ಲಿ ತಡೆಗೋಡೆ ಉರುಳಿ ಮಗು ಸೇರಿ ಇಬ್ಬರಿಗೆ ಪೆಟ್ಟಾಗಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಸೇಡಂ, ಚಿಂಚೋಳಿ, ಕಮಲಾಪುರ ಮತ್ತು ಯಡ್ರಾಮಿ ತಾಲ್ಲೂಕು ಹಾಗೂ ಬೀದರ್ ತಾಲ್ಲೂಕು ಸೇರಿ ಜಿಲ್ಲೆಯ ಔರಾದ್, ಭಾಲ್ಕಿ, ಹುಮನಾಬಾದ್ ತಾಲ್ಲೂಕಿನ ಕೆಲ ಕಡೆ ಭಾರಿ ಮಳೆಯಾಯಿತು.

ಬೀದರ್‌ನಲ್ಲಿ ಮಾಂಜ್ರಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಹಳ್ಳಕೊಳ್ಳಗಳು ಭರ್ತಿಯಾಗಿವೆ. ಬೀದರ್ ತಾಲ್ಲೂಕಿನ ಕಮಠಾಣ, ಬಗದಲ್‌ನಲ್ಲಿ ಕಬ್ಬು ಬೆಳೆ ನೆಲಕ್ಕುರುಳಿದೆ. ಸಂತಪುರ-ಠಾಣಾಕುಶನೂರ ನಡುವೆ ರಸ್ತೆಯು ಕೊಚ್ಚಿ ಹೋಗಿದ್ದು, ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ಕೊಡಗು ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿದ್ದು, ಭಾಗಮಂಡಲ, ನಾಪೋಕ್ಲು, ಕರಿಕೆ, ಕುಟ್ಟ, ಮಾಕುಟ್ಟ ಕಡೆ ಮಳೆಯಾಗುತ್ತಿದೆ. ಹಾಸನ ಜಿಲ್ಲೆಯಲ್ಲಿ ಸಾಧಾರಣ, ಮೈಸೂರು ನಗರದಲ್ಲಿ ತುಂತುರು ಮಳೆಯಾಯಿತು.

ದಕ್ಷಿಣ ಕನ್ನಡದಲ್ಲಿ ಮಂಗಳೂರು, ಬಂಟ್ವಾಳ, ಸುಳ್ಯದಲ್ಲಿ ಧಾರಾಕಾರ ಮಳೆಯಾಗಿದ್ದು, ಬೆಳ್ತಂಗಡಿ, ಪುತ್ತೂರು ಹಾಗೂ ಉಡುಪಿ ಜಿಲ್ಲೆಯ ಕಾರ್ಕಳ, ಹೆಬ್ರಿ, ಕಾಪು, ಬೈಂದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರು ನಗರ, ಮೂಡಿಗೆರೆ, ಕೊಟ್ಟಿಗೆಹಾರ, ಕಳಸ, ಶೃಂಗೇರಿ, ಕೊಪ್ಪ, ಎನ್‌.ಆರ್‌.ಪುರ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಾಗರ, ಕೋಣಂದೂರು, ತೀರ್ಥಹಳ್ಳಿ, ಸೊರಬ, ಶಿಕಾರಿಪುರ, ಶಿವಮೊಗ್ಗ ತಾಲ್ಲೂಕಿನಲ್ಲಿ ಸಾಧಾರಣ, ಹೊಸನಗರದಲ್ಲಿ ಜೋರು ಮಳೆಯಾಗಿದೆ.

7 ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್' ಮುಂದುವರಿಕೆ

ಬೆಂಗಳೂರು: ಮುಂಗಾರು ಚುರುಕಾಗಿರುವುದರಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಜು.11 ಮತ್ತು 12ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇದೆ. ಈ ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್' ಮುಂದುವರಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಕರಾವಳಿ ಜಿಲ್ಲೆಗಳಲ್ಲಿ ಇದೇ 15ರವರೆಗೆ ಧಾರಾಕಾರ ಮಳೆಯಾಗಲಿದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 65 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದೆ ಹಾಗೂ 3.3 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುವ ಸಾಧ್ಯತೆ ಇದ್ದು, ಮೀನುಗಾರರು ಕಡಲಿಗೆ ಇಳಿಯಬಾರದು' ಎಂದು ಎಚ್ಚರಿಸಿದೆ. 'ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿ ಜು.13ರವರೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ' ಎಂದು ಇಲಾಖೆ ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಭಾಗದಲ್ಲಿ ಶನಿವಾರ 16 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಭೂಪಾಲ ತೆಗನೂರ (ಕಲಬುರ್ಗಿ) 13.7, ಕೋಣಿ (ಉಡುಪಿ) 12.6, ಕಲಬುರ್ಗಿ 11, ಊರುಬಗೆ (ಚಿಕ್ಕಮಗಳೂರು) 9.6, ಜಾವಳಿ(ಚಿಕ್ಕಮಗಳೂರು) 9.4, ಅತಿಕಾರಬೆಟ್ಟು (ದಕ್ಷಿಣಕನ್ನಡ) 8.7, ಕುಂದಾಪುರ, ಮಂಗಳೂರು 7, ಮೂಡುಬಿದರೆ, ನರಗುಂದ, ವಿರಾಜಪೇಟೆ 6, ಪುತ್ತೂರು, ಸುಳ್ಯ, ಬೆಳ್ತಂಗಡಿ 5, ಆಳಂದ, ಚಿಕ್ಕೋಡಿ, ಬೇಲೂರು 3, ಕಾರ್ಕಳ, ಶ್ರೀನಿವಾಸಪುರ, ಬೀದರ್, ಬಾಗಲಕೋಟೆ, ಮಡಿಕೇರಿ 2 ಸೆ.ಮೀ ಮಳೆಯಾಗಿದೆ. ರಾಯಚೂರು, ಕಲಬುರ್ಗಿ ಹಾಗೂ ಹಾಸನದಲ್ಲಿ ತಲಾ 32 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಮಡಿಕೇರಿಯಲ್ಲಿ 17 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಕ್ಲಬ್‌ಹೌಸ್‌ಗೆ ಬನ್ನಿ

ಪ್ರಜಾವಾಣಿ ಆಲದಮರ

ಮೊದಲ ಮಾತು
ಎಂ.ಪ್ರಭಾಕರ ಜೋಶಿ
ಯಕ್ಷಗಾನ ಮತ್ತು ಆಧುನಿಕತೆ

ಪ್ರತಿಕ್ರಿಯೆ- ಚರ್ಚೆ

ಕಿಶನ್ ಹೆಗ್ಡೆ

ರಾಘವ ನಂಬಿಯಾರ್

ಜಬ್ಬಾರ್ ಸಮೊ

ಪಟ್ಲ ಸತೀಶ್ ಶೆಟ್ಟಿ

ಇಂದು ಬೆಳಿಗ್ಗೆ 10.30ರಿಂದ 12ರವರೆಗೆ

ಕೊಂಡದಕುಳಿ ರಾಮಚಂದ್ರ ಹೆಗಡೆ

ಪ್ರಜಾವಾಣಿ facebook LIVE
FB.com/prajavani.net

ಎಸ್ಸೆಸ್ಸೆಲ್ಸಿ ಪರೀಕ್ಷೆ
ಭಾಷಾ ವಿಷಯಗಳಿಗೆ ಉತ್ತರಿಸುವುದು ಹೇಗೆ?

ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಬದಲಾದ ವಿಧಾನದೊಂದಿಗೆ ಮುಂದಿನ ವಾರ ನಡೆಯಲಿದ್ದು, ಒಎಂಆರ್ ಶೀಟ್‌ಗೆ ಸಂಬಂಧಿಸಿದಂತೆ ಪುನಃ ಸಣ್ಣಪುಟ್ಟ ಬದಲಾವಣೆಯನ್ನು ಮಾಡಲಾಗಿದೆ. ಈ ಕುರಿತು ವಿವರವಾದ ಮಾಹಿತಿ, ಭಾಷಾ ವಿಷಯಗಳಿಗೆ ಉತ್ತರ ಆಯ್ಕೆ ಮಾಡುವ ಸುಲಭ ವಿಧಾನ, ಕಡಿಮೆ ಸಮಯದಲ್ಲಿ ಹೇಗೆ ಸಿದ್ಧತೆ ಮಾಡಿಕೊಳ್ಳುವುದು ಎಂಬುದನ್ನು ಹಂಚಿಕೊಳ್ಳಲಿದ್ದಾರೆ

ಬಸವರಾಜ ಟಿ.ಎಂ., ಕನ್ನಡ ಭಾಷಾ ಶಿಕ್ಷಕರು ಮತ್ತು ರಾಜ್ಯ ಸಂಪನ್ಮೂಲ ವ್ಯಕ್ತಿ, ಸರ್ಕಾರಿ ಪ್ರೌಢಶಾಲೆ, ಬಳ್ಳಾರಿ

ಎಸ್. ಕೊಟ್ರೇಶ್, ಇಂಗ್ಲಿಷ್ ಭಾಷಾ ಶಿಕ್ಷಕರು ಮತ್ತು ಶಿಕ್ಷಕರ ತರಬೇತುದಾರ, ಸರ್ಕಾರಿ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ

ಸಂದರ್ಶಕರು: ಈರಪ್ಪ ಮಹಾಲಿಂಗಪುರ, ಶಿಕ್ಷಕರು ಮತ್ತು ರಾಜ್ಯ ಸಂಪನ್ಮೂಲ ವ್ಯಕ್ತಿ, ಸರ್ಕಾರಿ ಪ್ರೌಢಶಾಲೆ, ರಾಮನಗರ

ನೀವೂ ಪ್ರಶ್ನೆಗಳನ್ನು ಕೇಳಬಹುದು

12ನೇ ಜುಲೈ 2021, ಸಂಜೆ 4ಕ್ಕೆ

ಪ್ರಜಾವಾಣಿ ಕನ್ನಡ ಧ್ವನಿ
ಪ್ರಜಾವಾಣಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ

'ಹರಟೆ ಕಟ್ಟೆ'

ಆನ್ ಲೈನ್- ಆಫ್ ಲೈನ್ ನಡುವೆ ಶಿಕ್ಷಣ
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ

ಡಾ.ಕೆ.ರಾಘವೇಂದ್ರ ಕುಮಾರ್
ಮಕ್ಕಳ ಮನೋವೈದ್ಯರು ನಿಮ್ಹಾನ್ಸ್ ಬೆಂಗಳೂರು

ಹರ್ಷವರ್ಧನ ಶೀಲವಂತ
ಪತ್ರಿಕೋದ್ಯಮ ಪ್ರಾಧ್ಯಾಪಕ, ಧಾರವಾಡ

ಇಂದು ಸಂಜೆ 4 ಗಂಟೆಗೆ
ನೀವೂ ಆಲಿಸಿರಿ, ಸ್ನೇಹಿತರಿಗೂ ಕೇಳಿಸಿರಿ

https://www.prajavani.net/podcast

ಕೋವಿಡ್‌ನಿಂದ ಮೃತಪಟ್ಟ ರೈತರ ಸಾಲಮನ್ನಾ: ಸಚಿವ

ಪ್ರಜಾವಾಣಿ ವಾರ್ತೆ

ಸೋಮಶೇಖರ್

ಕಲಬುರ್ಗಿ: 'ಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದ ರೈತರು ಕೋವಿಡ್‌ನಿಂದ ಮೃತಪಟ್ಟಿದ್ದರೆ ಅಂಥವರ ಸಾಲ ಮನ್ನಾ ಮಾಡಲು ಚಿಂತನೆ ನಡೆದಿದೆ' ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹೇಳಿದರು.

ಕಲಬುರ್ಗಿ–ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಶನಿವಾರ ಇಲ್ಲಿ ಏರ್ಪಡಿಸಿದ್ದ ರೈತರಿಗೆ ಸಾಲ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಡಿಸಿಸಿ ಬ್ಯಾಂಕ್‌ಗಳಿಂದ ಸಾಲ ಪಡೆದಿರುವ 341 ರೈತರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅವರ ₹ 19 ಕೋಟಿ ಸಾಲವನ್ನು ಈ ಬ್ಯಾಂಕುಗಳ ಲಾಭಾಂಶದ ಹಣದಲ್ಲಿ ಮನ್ನಾ ಮಾಡಲಾಗುವುದು. ಈ ಬಗ್ಗೆ ಮುಖ್ಯಮಂತ್ರಿ ಅವರು ಶೀಘ್ರ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದರು.

ಆದಾಯ ದ್ವಿಗುಣ ಸಂಕಲ್ಪ: 'ಪ್ರಧಾನಿ ಮೋದಿ ಅವರು ರೈತರ ಆದಾಯ ದ್ವಿಗುಣಗೊಳಿಸುವ ಸಂಕಲ್ಪ ಮಾಡಿದ್ದಾರೆ. ಪೂರಕವಾಗಿ ದೇಶದಾದ್ಯಂತ ಕಡಿಮೆ ಸಮಯದಲ್ಲಿ ಸಂಚರಿಸುವ ಕಿಸಾನ್ ಎಕ್ಸ್‌ಪ್ರೆಸ್ ರೈಲನ್ನು ಆರಂಭಿಸಿದ್ದಾರೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

'ರಾಜ್ಯ ಸರ್ಕಾರವೂ ಹೂ ಬೆಳೆಗಾರರ ನೆರವಿಗೆ ಬಂದಿದ್ದು, ಹೂ ಬೆಳೆದು ನಷ್ಟ ಮಾಡಿಕೊಂಡಿರುವವರಿಗೆ ತಲಾ ₹ 10 ಸಾವಿರದಂತೆ 69 ಸಾವಿರ ರೈತರಿಗೆ ಪರಿಹಾರ ನೀಡಲಾಗಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	88.56	1,795	4,331
ಹಾರಂಗಿ	2,859	2,843.28	423	80
ಕಬಿನಿ	2,284	2,275.74	970	700
ಹೇಮಾವತಿ	2,922	2,896.27	897	200
ಲಿಂಗನಮಕ್ಕಿ	1,819	1,783.80	5,297	-
ಸೂಪಾ (ಮೀ)	564	537.65	1,519	3,523
ಮಾಣಿ	594.36	573.56	482	-
ತುಂಗಭದ್ರಾ(ಅಡಿ)	1,633	1,610.28	3,233	232
ಮಲಪ್ರಭಾ	2,079.50	2,063.25	1,224	194
ಘಟಪ್ರಭಾ	2,175	2,136.75	1,863	138
ಭದ್ರಾ	186	155.10	1,823	781
ಆಲಮಟ್ಟಿ (ಮೀ)	519.60	517.54	10,108	872
ನಾರಾಯಣಪುರ (ಮೀ)	492.25	490.80	3,500	-

* ನೆಲಮಟ್ಟದಿಂದ

5 ಹಳ್ಳಿಗಳಲ್ಲಿ ಅಂತಿಮ ಹಂತದ ಕಾಮಗಾರಿ: 2 ಹಳ್ಳಿಗಳಲ್ಲಿ ಇನ್ನೂ ಆರಂಭ ಇಲ್ಲ

ಮರು ನಿರ್ಮಾಣಕ್ಕೆ ಕಾದಿವೆ ರಸ್ತೆಗಳು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಹಲವೆಡೆ ಒಳಚರಂಡಿ ಕಾಮಗಾರಿ ಮುಗಿದಿದ್ದರೆ, ಕೆಲವೆಡೆ ಆರಂಭವೇ ಆಗಿಲ್ಲ. ಕಾಮಗಾರಿ ನಿರ್ವಹಿಸಲು ಅಗೆದ ರಸ್ತೆಗಳಲ್ಲಿ ಸಂಚಾರಕ್ಕೆ ವಾಹನ ಸವಾರರ ಹರಸಾಹಸ ಪಡಬೇಕು. ಇದು ಯಲಹಂಕ ವಿಧಾನಸಭಾ ಕ್ಷೇತ್ರದ ಏಳು ಹಳ್ಳಿಗಳ ಸ್ಥಿತಿ ಇದು.

2007ರಲ್ಲಿ ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಈ ಕ್ಷೇತ್ರದ ಏಳು ಗ್ರಾಮಗಳು ಒಳಗೊಂಡಿವೆ. ಈ ಪೈಕಿ ಐದು ಹಳ್ಳಿಗಳಲ್ಲಿ ಒಳಚರಂಡಿ ಮತ್ತು ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ನಡೆಯುತ್ತಿದೆ. ಕೆಲವೆಡೆ ಮುಕ್ತಾಯಗೊಂಡಿದ್ದರೆ, ಇನ್ನೂ ಹಲವೆಡೆ ಅಂತಿಮ ಹಂತದ ಕಾಮಗಾರಿ ನಡೆಯುತ್ತಿದೆ.

ಉಳಿದಂತೆ ನಾಗೇನಹಳ್ಳಿ ಮತ್ತು ಹಾರೋಹಳ್ಳಿಯಲ್ಲಿ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲು ಪೈಪ್‌ಲೈನ್ ಅಳವಡಿಕೆ ಕಾರ್ಯ ಮುಗಿದಿದೆ. ಆದರೆ, ಒಳಚರಂಡಿ ಕಾಮಗಾರಿ ಆರಂಭವೇ ಆಗಿಲ್ಲ. ಈ ಕಾಮಗಾರಿ ನಿರ್ವಹಿಸಲು ನೇಮಿಸಲಾಗಿದ್ದ ಏಜೆನ್ಸಿ ಕಾರ್ಯ ನಿರ್ವಹಿಸದೆ ಬಿಟ್ಟು ಹೋದ ಕಾರಣ ಬೇರೆ ಏಜೆನ್ಸಿ ನಿಗದಿ ಮಾಡಲಾಗಿದೆ. ಕಾಮಗಾರಿ ಇನ್ನಷ್ಟೇ ಆಗಬೇಕಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಅನಂತಪುರ, ಕೆಂಚೇನಹಳ್ಳಿ, ದೊಡ್ಡಬೆಟ್ಟಹಳ್ಳಿ, ಚಿಕ್ಕಬೆಟ್ಟಹಳ್ಳಿಯಲ್ಲಿ ಒಳಚರಂಡಿ ಕಾಮಗಾರಿ ನಿರ್ವಹಿಸಲಾಗಿದೆ. ಇದ್ದ ರಸ್ತೆಗಳನ್ನು ಬಗೆದು ಒಳಚರಂಡಿ ಮತ್ತು ಕಾವೇರಿ ನೀರಿನ ಪೂರೈಕೆ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದೆ. ಎಲ್ಲಾ ರಸ್ತೆಗಳಲ್ಲೂ ಒಳಚರಂಡಿಯ ಹೊಸ ಮ್ಯಾನ್‌ಹೋಲ್‌ಗಳು ತಲೆ ಎತ್ತಿ ನಿಂತಿವೆ.

'ಕೆಮ್ಮಣ್ಣಿನ ಗೂಡಿನಂತಾಗಿರುವ ರಸ್ತೆಗಳು ಮಳೆ ಬಂದರೆ ಕೆಸರು ಗದ್ದೆಗಳಂತೆ ಆಗುತ್ತವೆ. ಇವುಗಳ ನಡುವೆಯೇ ವಾಹನ ಚಾಲನೆ ಮಾಡಬೇಕಾದ ಅನಿವಾರ್ಯ ಇದೆ. ಕೆಲ ವರ್ಷಗಳಿಂದ ಇದೇ ಸಮಸ್ಯೆಯಲ್ಲಿ ಮುಳುಗಿ ರೋಸಿ ಹೋಗಿದ್ದೇವೆ' ಎನ್ನುತ್ತಾರೆ ಸ್ಥಳೀಯರು.

ಯಲಹಂಕ ನ್ಯೂಟೌನ್‌ನಿಂದ ಎಂ.ಎಸ್. ಪಾಳ್ಯ ವೃತ್ತದ ಮೂಲಕ ಗಂಗಮ್ಮ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದೆ. ಒಳಚರಂಡಿ ಕೊಳವೆಮಾರ್ಗ ಹಾದು ಹೋಗಿರುವ ಕಡೆ ಜಲ್ಲಿ ತುಂಬಿ ರಸ್ತೆಯನ್ನು ಗಟ್ಟಿಗೊಳಿಸಲಾಗುತ್ತಿದೆ. ಈ ಭಾಗದ ಪ್ರಮುಖ ರಸ್ತೆ ಇದಾಗಿರುವ ಕಾರಣ ವಾಹನಗಳ ಸಂಚಾರ ಹೆಚ್ಚಾಗಿಯೇ ಇರುತ್ತದೆ. ಕಾಮಗಾರಿ ನಡೆಯುತ್ತಿರುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸಿ ವಾಹನಗಳ ಸಂಚಾರಕ್ಕೆ ಬಿಟ್ಟುಕೊಡಬೇಕು ಎಂಬುದು ಸ್ಥಳೀಯರ ಒತ್ತಾಯ.

ಚಿಕ್ಕಬೆಟ್ಟಹಳ್ಳಿ ಬಳಿಯ ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುವುದು (ಎಡ ಚಿತ್ರ), ಅನಂತಪುರ ಮುಖ್ಯ ರಸ್ತೆಯ ನಿಸರ್ಗ ಬಡಾವಣೆಯಲ್ಲಿ ಕಾಮಗಾರಿ ನಡೆಯುತ್ತಿರುವುದು (ಬಲ ಚಿತ್ರ)

ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಒಳಚರಂಡಿ ಕಾಮಗಾರಿಗೆ ರಸ್ತೆಗಳನ್ನು ಅಗೆದು ಹಾಳು ಮಾಡಲಾಗಿದೆ. ತುಂಬಾ ದಿನಗಳಿಂದ ತೊಂದರೆಯಲ್ಲಿದ್ದೇವೆ. ಆದಷ್ಟು ಬೇಗ ಡಾಂಬರು ಹಾಕಿ ಸಂಚಾರಕ್ಕೆ ಯೋಗ್ಯ ಮಾಡಬೇಕು

ನರಸಿಂಹಮೂರ್ತಿ, ಅನಂತಪುರ ನಿವಾಸಿ

110 ಹಳ್ಳಿ

ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

ಕಾಮಗಾರಿ ನಡೆಯುತ್ತಿರುವ ಹಳ್ಳಿಗಳು

- ಹಾರೋಹಳ್ಳಿ
- ನಾಗೇನಹಳ್ಳಿ
- ಕೆಂಚೇನಹಳ್ಳಿ
- ಅನಂತಪುರ
- ಅಟ್ಟೂರು
- ದೊಡ್ಡಬೆಟ್ಟಹಳ್ಳಿ
- ಚಿಕ್ಕಬೆಟ್ಟಹಳ್ಳಿ

'ರಸ್ತೆ ಮರುನಿರ್ಮಾಣ ಕಾಮಗಾರಿ ಆರಂಭವಾಗಿದೆ'

'ಒಳಚರಂಡಿ ಮತ್ತು ಕುಡಿಯುವ ನೀರಿನ ಕಾಮಗಾರಿ ಮುಗಿಸಿ ಜಲಮಂಡಳಿ ಒಪ್ಪಿಗೆ ನೀಡಿದ ರಸ್ತೆಗಳನ್ನು ಮರು ನಿರ್ಮಾಣ ಮಾಡಿ ಡಾಂಬರ್ ಹಾಕುವ ಕೆಲಸ ಆರಂಭಿಸಲಾಗಿದೆ' ಎಂದು ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದರು.

'ಮನೆ–ಮನೆಗೆ ಒಳಚರಂಡಿ ಮತ್ತು ನೀರಿನ ಸಂಪರ್ಕ ಕಲ್ಪಿಸಿದ ಬಳಿಕ ರಸ್ತೆ ನಿರ್ಮಾಣಕ್ಕೆ ಜಲಮಂಡಳಿ ಅನುಮತಿ ನೀಡುತ್ತಿದೆ. ರಸ್ತೆ ಬದಿಯ ಚರಂಡಿ, ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ' ಎಂದು ಹೇಳಿದರು.

'ನಮ್ಮ ಕ್ಷೇತ್ರದ ಏಳು ಹಳ್ಳಿಗಳಲ್ಲಿ ವ್ಯಾಪ್ತಿಯಲ್ಲಿ ಐದು ಹಳ್ಳಿಗಳಲ್ಲಿ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಎರಡು ಹಳ್ಳಿಗಳಲ್ಲಿ ಒಳಚರಂಡಿ ಕಾಮಗಾರಿ ಆರಂಭವಾಗಬೇಕಿದೆ. ಕಾಮಗಾರಿ ಮುಗಿದಿರುವ ಕಡೆ ರಸ್ತೆ ಮರು ನಿರ್ಮಾಣವನ್ನು ಹಂತ–ಹಂತವಾಗಿ ಆರಂಭಿಸಲಾಗಿದೆ' ಎಂದು ವಿವರಿಸಿದರು.

ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯ ಅನುದಾನದ ಜೊತೆಗೆ ರಸ್ತೆ ಅಭಿವೃದ್ಧಿಗಾಗಿ ಬಿಬಿಎಂಪಿ ಕೋರಿದ್ದ ₹160 ಕೋಟಿ ಅನುದಾನವನ್ನು ಸರ್ಕಾರ ನೀಡಿದೆ. ಎರಡು ಹಳ್ಳಿ ಹೊರತುಪಡಿಸಿ ಉಳಿದ ಕಡೆ ರಸ್ತೆ ಅಭಿವೃದ್ಧಿಗೆ ಈ ಅನುದಾನ ಸಾಕಾಗಲಿದೆ ಎಂದು ಹೇಳಿದರು.

'ಆಡಳಿತ ಪಕ್ಷದ ಶಾಸಕರಿರುವ ಕ್ಷೇತ್ರಗಳಿಗೆ ಸ್ವಲ್ಪ ಹೆಚ್ಚಿನ ಅನುದಾನ ನೀಡುವುದು ಹಿಂದಿನಿಂದ ನಡೆದುಕೊಂಡು ಬಂದಿದೆ. ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಕ್ಕೆ ₹500 ಕೋಟಿ ನೀಡಿ, ನಮ್ಮ ಕ್ಷೇತ್ರಗಳಿಗೆ ₹20 ಕೋಟಿಯನ್ನಷ್ಟೇ ನೀಡಲಾಗಿತ್ತು. ಕೆಲವು ಕ್ಷೇತ್ರಗಳಿಗೆ ಈಗ ಕಡಿಮೆ ಅನುದಾನ ನೀಡಿದ್ದರೂ, ಮುಂದಿನ ದಿನಗಳಲ್ಲಿ ಸರಿಪಡಿಸಬೇಕು ಎಂಬ ಆಲೋಚನೆಯನ್ನು ಮುಖ್ಯಮಂತ್ರಿ ಹೊಂದಿದ್ದಾರೆ' ಎಂದು ಅವರು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಹಣ ದುರುಪಯೋಗ ಪ್ರಕರಣ: ಮೂವರ ಅಮಾನತು

ಮಡಿಕೇರಿ: ಜಿಲ್ಲಾ ಪೊಲೀಸ್ ಕಚೇರಿಯ ಲೆಕ್ಕ ವಿಭಾಗದಲ್ಲಿ ₹ 8.40 ಲಕ್ಷ ದುರುಪಯೋಗ ಪ್ರಕರಣದಲ್ಲಿ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಲೆಕ್ಕ ವಿಭಾಗದ ಶಾಖಾಧೀಕ್ಷಕ, ಶನಿವಾರ ರಾತ್ರಿ ದೂರು ನೀಡಿದ್ದು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದ ತನಿಖೆ ಚುರುಕುಗೊಂಡಿದೆ.

ಪ್ರಾಥಮಿಕ ತನಿಖೆ ನಡೆಸಲಾಗಿದ್ದು, ಅದರಂತೆ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದ ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಹಾಗೂ ಒಬ್ಬ 'ಡಿ' ದರ್ಜೆ ನೌಕರನನ್ನು ಅಮಾನತು ಮಾಡಲಾಗಿದೆ.

ಏನಿದು ಪ್ರಕರಣ?: ಜಿಲ್ಲಾ ಪೊಲೀಸ್ ಖಜಾನೆಯಲ್ಲಿದ್ದ ಹಣವು ದುರುಪಯೋಗವಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಅದಕ್ಕೆ ಸಂಬಂಧಿಸಿದ ಪತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು.

ನಗದು ಶಾಖೆಯಲ್ಲಿ 2020–21ನೇ ಸಾಲಿನ ಧ್ವಜ ಮಾರಾಟಕ್ಕೆ ಸಂಬಂಧಿಸಿದಂತೆ ಮಡಿಕೇರಿ ಉಪ ವಿಭಾಗದ ಅಂದಾಜು ₹3.85 ಲಕ್ಷ, ವಿರಾಜಪೇಟೆ ಉಪ ವಿಭಾಗದ ₹3.82 ಲಕ್ಷ, ಕೋವಿಡ್ ನಿಯಮ ಉಲ್ಲಂಘನೆ ಮಾಡಿದ್ದವರಿಂದ ವಸೂಲಿಯಾಗಿದ್ದ ₹9.28 ಲಕ್ಷ ಸೇರಿ ಒಟ್ಟು ₹16.96 ಲಕ್ಷವನ್ನು ಖಜಾನೆಯಲ್ಲಿ ಇರಿಸಲಾಗಿತ್ತು. ಈ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡಬೇಕು ಎಂಬ ಆದೇಶ ಬಂದ ಮೇಲೆ ಅದನ್ನು ತೆಗೆಯಲು ಹೋದಾಗ, ಪ್ರಕರಣವು ಬೆಳಕಿಗೆ ಬಂದಿತ್ತು.

ಜಿಲ್ಲಾ ಕಚೇರಿಯಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದ್ದ ಇಬ್ಬರು ನೌಕರರ ಮೇಲೆ ವಿಷಯ ನಿರ್ವಾಹಕ ಟಿ.ಎ.ರಂಜಿತ್‌ಕುಮಾರ್ ಅವರು ಅನುಮಾನ ವ್ಯಕ್ತಪಡಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಕೃಷ್ಣಮಠದಲ್ಲಿ ದೇವರ ದರ್ಶನಕ್ಕೆ ಅನುಮತಿ ಇಂದಿನಿಂದ

ಉಡುಪಿ: ಜುಲೈ 11ರಿಂದ ಕೃಷ್ಣಮಠದಲ್ಲಿ ದೇವರ ದರ್ಶನಕ್ಕೆ ಭಕ್ತರಿಗೆ ಅವಕಾಶ ನೀಡಲು ಪರ್ಯಾಯ ಅದಮಾರು ಮಠದ ಈಶಪ್ರಿಯ ತೀರ್ಥ ಸ್ವಾಮೀಜಿ ತೀರ್ಮಾನಿಸಿದ್ದಾರೆ ಎಂದು ಮಠದ ವ್ಯವಸ್ಥಾಪಕ ಗೋವಿಂದರಾಜ್ ತಿಳಿಸಿದ್ದಾರೆ.

ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ರವರೆಗೆ ದೇವರ ದರ್ಶನಕ್ಕೆ ಅನುಮತಿ ನೀಡಲಾಗಿದೆ. ಭಕ್ತರು ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಂಡು ದೇವಸ್ಥಾನ ಪ್ರವೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಈಚೆಗೆ ದೇವಸ್ಥಾನಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿದ್ದರೂ ಕೃಷ್ಣಮಠ ಭಕ್ತರ ಪ್ರವೇಶಕ್ಕೆ ಮುಕ್ತವಾಗಿರಲಿಲ್ಲ. ಪರಿಸ್ಥಿತಿ ನೋಡಿಕೊಂಡು ದೇವಸ್ಥಾನ ತೆರೆಯುವುದಾಗಿ ಅದಮಾರು ಮಠದ ಶ್ರೀಗಳು ತಿಳಿಸಿದ್ದರು.

ದೆಹಲಿ: ಶಬ್ದ ಮಾಲಿನ್ಯ ನಿಯಮ ಉಲ್ಲಂಘನೆಗೆ ಭಾರಿ ದಂಡ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ವಿಧಿಸಲಾಗುವ ದಂಡದ ಮೊತ್ತವನ್ನು ಪರಿಷ್ಕರಿಸಲಾಗಿದ್ದು, ಇನ್ನು ಮುಂದೆ ನಿಯಮಗಳ ಶಬ್ದ ಮಾಲಿನ್ಯ ಉಲ್ಲಂಘನೆ ಸ್ವರೂಪವನ್ನು ಆಧರಿಸಿ ₹ 10,000 ರಿಂದ ₹ 1 ಲಕ್ಷದವರೆಗೂ ದಂಡ ವಿಧಿಸಲು ಅವಕಾಶವಿದೆ.

ಪರಿಷ್ಕೃತ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ದೆಹಲಿ ಪರಿಸರ ಮಾಲಿನ್ಯ ನಿಯಂತ್ರಣ ಸಮಿತಿ (ಡಿಪಿಸಿಸಿ) ಸಂಬಂಧಿತ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದೆ. ಪರಿಷ್ಕೃತ ನಿಯಮಗಳಂತೆ, ಅನುಮತಿ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕ ಬಳಸಿದರೆ ₹ 10,000 ದಂಡ ವಿಧಿಸಬಹುದಾಗಿದೆ.

1,000 ಕೆವಿಎ ಗಿಂತಲೂ ಅಧಿಕ ಸಾಮರ್ಥ್ಯದ ಡೀಸೆಲ್ ಜನರೇಟರ್ (ಡಿ.ಜಿ) ಬಳಸಿದ ಸಂದರ್ಭದಲ್ಲಿ ₹ 1 ಲಕ್ಷ, 62.5 ಕೆವಿಎ ಯಿಂದ 1,000 ಕೆವಿಎ ಸಾಮರ್ಥ್ಯದವರೆಗಿನ ಡಿಜಿ ಬಳಕೆಗೆ ₹ 25,000 ದಂಡ ಹಾಗೂ 62.5 ಕೆವಿಎ ವರೆಗಿನ ಡಿಜಿ ಬಳಕೆಗೆ ₹ 10,000 ದಂಡ ವಿಧಿಸಲು ಅವಕಾಶವಿದೆ.

ಶಬ್ದದ ತೀವ್ರತೆಯು ವಸತಿ ಪ್ರದೇಶಗಳಲ್ಲಿ ಹಗಲಿನ ಹೊತ್ತು 55 ಡೆಸಿಬಲ್‌ವರೆಗೂ ಮತ್ತು ರಾತ್ರಿಯ ಹೊತ್ತಿನಲ್ಲಿ 45 ಡೆಸಿಬಲ್‌ವರೆಗೆ ಇರಬಹುದು. ಅಂತೆಯೇ ವಾಣಿಜ್ಯ ಪ್ರದೇಶಗಳಲ್ಲಿ ಈ ಪ್ರಮಾಣ ಕ್ರಮವಾಗಿ 65 ಮತ್ತು 55 ಡೆಸಿಬಲ್ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಕ್ರಮವಾಗಿ 50 ಮತ್ತು 40 ಡೆಸಿಬಲ್ ಇರಬೇಕು ಎಂದು ತಿಳಿಸಲಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.70 ಕೋಟಿ ▲	3.08 ಕೋಟಿ
ಸಕ್ರಿಯ ಪ್ರಕರಣ	1.19 ಕೋಟಿ ▲	4.48ಲಕ್ಷ ▼
ಗುಣಮುಖ	17.10 ಕೋಟಿ ▲	2.99 ಕೋಟಿ
ಸಾವು	40.38 ಲಕ್ಷ ▲	4.08 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.92 ಲಕ್ಷ ▲	41,407 ▲
ಗುಣಮುಖ	3.63 ಲಕ್ಷ ▼	41,234 ▼
ಸಾವು	8,465 ▼	898 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಬ್ರೆಜಿಲ್	ರಷ್ಯಾ
35,518 ▲	57,713 ▲	25,766 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
48.65 ▲	10.09	5.77 ▲

(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.25 ಲಕ್ಷ
ದೆಹಲಿ	25,012 ▲
ತಮಿಳುನಾಡು	33,371 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	61.49 ▲
ಕೇರಳ	30.53 ▲
ತಮಿಳುನಾಡು	25.16 ▲

ಪ್ರಜಾವಾಣಿ ಗ್ರಾಫಿಕ್ಸ್

50ರ ಗಡಿಯೊಳಗೆ ಮರಣ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ 48 ಮಂದಿ ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ. ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು ಇವಾಗಿವೆ.

ರಾಜ್ಯದಲ್ಲಿ ಏಪ್ರಿಲ್ ಎರಡನೇ ವಾರದ ಬಳಿಕ ಮರಣ ಪ್ರಕರಣಗಳ ಸಂಖ್ಯೆ 50ರ ಗಡಿ ದಾಟಿತ್ತು. ಬಳಿಕ ಏರಿಕೆ ಕಂಡು, 500ರ ಗಡಿ ತಲುಪಿತ್ತು. ಕಳೆದೊಂದು ತಿಂಗಳಿನಿಂದ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಮುಖ ಮಾಡಿದೆ. ರಾಜ್ಯದ 17 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ.

ಮರಣ ಪ್ರಮಾಣ ದರವು ಶೇ 2.22ರಷ್ಟು ವರದಿಯಾಗಿದೆ. ದಕ್ಷಿಣ ಕನ್ನಡದಲ್ಲಿ 9, ಬೆಳಗಾವಿಯಲ್ಲಿ 6 ಹಾಗೂ ಬೆಂಗಳೂರಿನಲ್ಲಿ 5 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5ಕ್ಕಿಂತ ಕಡಿಮೆಯಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,779ಕ್ಕೆ ತಲುಪಿದೆ.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (12,18,493 ನಿನ್ನೆಯ ವಿವರ)	12,18,945 ▲
ಸಕ್ರಿಯ ಪ್ರಕರಣಗಳು	13,237 ▼
ಗುಣಮುಖರಾದವರು	11,89,979 ▲
ಒಟ್ಟು ಸಾವು	15,728 ▲

ಶನಿವಾರದ ಏರಿಕೆ

ಹೊಸ ಪ್ರಕರಣ	452 ▼
ಗುಣಮುಖ	746 ▼
ಸಾವು	05 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯದಲ್ಲಿ ಹೊಸದಾಗಿ 2,162 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.69 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.45 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.48ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ಬೆಂಗಳೂರಿನಲ್ಲಿ 452, ದಕ್ಷಿಣ ಕನ್ನಡದಲ್ಲಿ 218, ಮೈಸೂರಿನಲ್ಲಿ 211, ಹಾಸನದಲ್ಲಿ 178, ಉಡುಪಿಯಲ್ಲಿ 113, ಶಿವಮೊಗ್ಗದಲ್ಲಿ 110, ಚಿಕ್ಕಮಗಳೂರಿನಲ್ಲಿ 109 ಹಾಗೂ ಬೆಳಗಾವಿಯಲ್ಲಿ 106 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಸೋಂಕಿತರಲ್ಲಿ 2,879 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.96 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 37,141 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಝಿಕಾ ವೈರಸ್: ಸೋಂಕಿತರ ಸಂಖ್ಯೆ 40ಕ್ಕೆ ಏರಿಕೆ

ತಿರುವನಂತಪುರ: ಕೇರಳದಲ್ಲಿ ಝಿಕಾ ವೈರಸ್ ಸೋಂಕಿತರ ಸಂಖ್ಯೆ 40ಕ್ಕೆ ಏರಿಕೆಯಾಗಿದೆ.

'ಝಿಕಾ ವೈರಸ್ ಸೋಂಕು ಪರಿಸ್ಥಿತಿ ನಿಭಾಯಿಸಲು ಇಲಾಖೆ ಸನ್ನದ್ಧವಾಗಿದೆ. ಕೋವಿಡ್ ಪರಿಸ್ಥಿತಿಯನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳಲು ಇಲಾಖೆಯು ಸದಾ ಪ್ರಯತ್ನಿಸಿದೆ. ಆಮ್ಲಜನಕ ಪೂರೈಕೆ ಇಲ್ಲದೆ ರಾಜ್ಯದಲ್ಲಿ ಯಾರೊಬ್ಬರೂ ಸಾವಿಗೀಡಾಗಿಲ್ಲ' ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಎರಡು ದಿನಗಳ ಹಿಂದೆ ಕೇರಳದಲ್ಲಿ ಝಿಕಾ ವೈರಸ್‌ನ ಮೊದಲ ಪ್ರಕರಣ ಪತ್ತೆಯಾಗಿತ್ತು. 24 ವರ್ಷದ ಗರ್ಭಿಣಿಗೆ ಸೊಳ್ಳೆಯಿಂದ ಹರಡುವ ಈ ಕಾಯಿಲೆ ಇರುವುದು ದೃಢಪಟ್ಟಿದೆ ಎಂದು ಕೇರಳದ ಆರೋಗ್ಯ ಸಚಿವೆ ತಿಳಿಸಿದ್ದರು.

ಸಹಕಾರ ಕ್ಷೇತ್ರ ಬಲಪಡಿಸಲು ಇನ್ನಷ್ಟು ಆದ್ಯತೆ : ಅಮಿತ್ ಶಾ

ನವದೆಹಲಿ (ಪಿಟಿಐ): 'ಸಹಕಾರ ಕ್ಷೇತ್ರ ಮತ್ತು ಎಲ್ಲ ಸಹಕಾರ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಲು ಸರ್ಕಾರ ಉದ್ದೇಶಿಸಿದೆ. ಈ ಕುರಿತು ಚರ್ಚಿಸಲು ದೇಶದ ಪ್ರಮುಖ ಸಹಕಾರಿಗಳ ಜೊತೆಗೆ ಸಭೆ ನಡೆಸಲಾಗಿದೆ' ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಶನಿವಾರ ಇಲ್ಲಿ ಹೇಳಿದರು.

ಮೂರು ದಿನಗಳ ಹಿಂದೆ ಕೇಂದ್ರ ಸಂಪುಟ ಪುನಾರಚನೆ ಮತ್ತು ಖಾತೆಗಳ ಮರುಹಂಚಿಕೆ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಹಕಾರ ಖಾತೆಯನ್ನು ಹೆಚ್ಚುವರಿಯಾಗಿ ಶಾ ಅವರಿಗೆ ವಹಿಸಿದ್ದರು.

ರಾಷ್ಟ್ರೀಯ ಸಹಕಾರ ಒಕ್ಕೂಟದ ಅಧ್ಯಕ್ಷ ದಿಲೀಪ್ ಸಂಘಾನಿ, ಭಾರತೀಯ ಕೃಷಿಕರ ರಸಗೊಬ್ಬರ ಸಹಕಾರ ಸಂಸ್ಥೆಯ (ಇಫ್ಕೊ) ಅಧ್ಯಕ್ಷ ಬಿ.ಎಸ್. ನಕಾಯ್, ವ್ಯವಸ್ಥಾಪಕ ನಿರ್ದೇಶಕ ಯು.ಎಸ್.ಅವಸ್ತಿ, ನಾಫೆಡ್ ಅಧ್ಯಕ್ಷ ಬಿಜೇಂದರ್ ಸಿಂಗ್ ಅವರು ಸಭೆಯಲ್ಲಿದ್ದರು.

'ಮೋದಿ ಅವರ ನೇತೃತ್ವದಲ್ಲಿ ನಾವು ದೇಶದ ಸಹಕಾರ ವ್ಯವಸ್ಥೆ ಮತ್ತು ಸಹಕಾರ ಸಂಘಗಳನ್ನು ಬಲಪಡಿಸಲು ಒತ್ತು ನೀಡಲಿದ್ದೇವೆ' ಎಂದು ಅಮಿತ್ ಶಾ ಅವರು ಟ್ವೀಟ್ ಮಾಡಿದ್ದಾರೆ.

ದುರ್ಬಲಗೊಂಡ ಪ್ರಜಾಪ್ರಭುತ್ವ: ವಿಷಾದ

ಪ್ರಜಾವಾಣಿ ವಾರ್ತೆ

ಹಂಸಲೇಖ

ಭಾರತೀನಗರ: 'ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆ ದುರ್ಬಲಗೊಂಡು, ಧಾರ್ಮಿಕ ವ್ಯವಸ್ಥೆ ಮರೆಯುತ್ತಿದೆ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಅಭಿಪ್ರಾಯಪಟ್ಟರು.

ಪಟ್ಟಣದ ಭಾರತೀ ಕಾಲೇಜಿನಲ್ಲಿ ಡಾ.ಜಿ.ಮಾದೇಗೌಡ ಪ್ರತಿಷ್ಠಾನ ಶನಿವಾರ ಆಯೋಜಿಸಿದ್ದ ಸಮಾಜ ಸೇವಾ ಹಾಗೂ ಸಾವಯವ ಕೃಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಆಳುವ ನಾಯಕರು ಕಡೆಗಣಿಸಿರುವುದರಿಂದ ಕೃಷಿಕರಿಗೆ ಅನ್ಯಾಯವಾಗುತ್ತಿದೆ. ಕೃಷಿ ಅನುತ್ಪಾದಕ ವಲಯವಾಗಿ ಮಾರ್ಪಟ್ಟಿದೆ. ಭಾರತವೆಂದರೆ ರೈತ. ಆದರೆ ರೈತನ ಬದುಕು ಬೀದಿಗೆ ಬಿದ್ದಿದೆ' ಎಂದರು.

ಸಾವಯವ ಕೃಷಿಕ ಪ್ರಶಸ್ತಿ ಸ್ವೀಕರಿಸಿದ ಶಿವಳ್ಳಿ ಬೋರೇಗೌಡ, 'ಆಹಾರ ಬೆಳೆಗಳಲ್ಲಿ ನಾಟಿ ತಳಿಗಳು ಮಾಯವಾಗಿ, ಹೈಬ್ರಿಡ್ ತಳಿಗಳು ಬಂದಿವೆ. ರಾಸಾಯನಿಕ ಬಳಕೆಯಿಂದ ಭೂಮಿ ವಿಷಮಯವಾಗಿದೆ. ಸತ್ವವಿಲ್ಲದ ಆಹಾರ ಕಾಯಿಲೆಗಳಿಗೆ ದಾರಿ ಮಾಡಿದೆ' ಎಂದರು.

ಕಸ್ತೂರಬಾ ಗಾಂಧಿ ಸ್ಮಾರಕ ಟ್ರಸ್ಟ್‌ನ ಪ್ರೊ.ಜಿ.ಬಿ.ಶಿವರಾಜು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಬಿಇಟಿ ಅಧ್ಯಕ್ಷ ಮಧು ಜಿ.ಮಾದೇಗೌಡ, ಪ್ರತಿಷ್ಠಾನದ ಅಧ್ಯಕ್ಷ ಬಿ.ಬಸವರಾಜು, ಡಾ.ಜಿ. ಎಂ.ಪ್ರಕಾಶ್, ಬಿ.ಎಂ. ನಂಜೇಗೌಡ, ಗುರುದೇವರಹಳ್ಳಿ ಸಿದ್ದೇಗೌಡ, ಚಂದೂಪುರ ಪಾಪಣ್ಣ, ಕಾರ್ಕಹಳ್ಳಿ ಬಸವೇಗೌಡ, ಬಿ.ಎಸ್. ಬೋರೇಗೌಡ, ಮ.ರಾಮಕೃಷ್ಣ, ಪುಟ್ಟಸ್ವಾಮೀಗೌಡ, ಕರಡಕೆರೆ ಶಿವಲಿಂಗೇಗೌಡ ಇದ್ದರು.

ಕೆಂಪೇಗೌಡ ಜಯಂತ್ಯುತ್ಸವ

ಆದಿಚುಂಚನಗಿರಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರತಿಷ್ಠಾನ ಹಾಗೂ ನಮ್ಮವರು ಬಳಗದ ಸಹಯೋಗದಲ್ಲಿ ವಿಜಯನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಅನ್ನದಾನೇಶ್ವರನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಹಾಸ್ಯ ಸಾಹಿತಿ ಪ್ರೊ.ಕೃಷ್ಣೇಗೌಡ ಹಾಗೂ ಇತರರು ಇದ್ದರು.

ತಳಿಯ ಅಭಿವೃದ್ಧಿ ಸೇರಿದಂತೆ ವಿವಿಧ ಹಕ್ಕು ಪಡೆದುಕೊಂಡ ರಮಾಕಾಂತ ಹೆಗಡೆ

ಸಸ್ಯ ವೈವಿಧ್ಯ ಪುಸ್ತಕದಲ್ಲಿ 'ಸಿಗಂದಿನಿ'

• ರವೀಂದ್ರ ಭಟ್ ಬಳಗುಳಿ

ಸಿದ್ದಾಪುರ: ತಾಲ್ಲೂಕಿನ ಹುಣಸೆಕೊಪ್ಪದ ರೈತ ರಮಾಕಾಂತ ಹೆಗಡೆ ಅವರು ಅಭಿವೃದ್ಧಿ ಪಡಿಸಿರುವ ಸ್ಥಳೀಯ ಕಾಳು ಮೆಣಸಿನ ತಳಿಯು ಕೇಂದ್ರ ಸರ್ಕಾರದ ಸಸ್ಯ ವೈವಿಧ್ಯ ಪುಸ್ತಕದಲ್ಲಿ ನೋಂದಣಿಯಾಗಿದೆ.

ಈ ತಳಿಗೆ 'ಸಿಗಂದಿನಿ' ಎಂದು ಹೆಸರಿಡಲಾಗಿದೆ. ಈ ಪ್ರಕ್ರಿಯೆಯಿಂದ ತಳಿಯ ಅಭಿವೃದ್ಧಿ ಮತ್ತಿತರ ಎಲ್ಲ ಹಕ್ಕುಗಳೂ ರಮಾಕಾಂತ ಹೆಗಡೆ ಅವರಿಗೆ ಪ್ರಾಪ್ತವಾಗಿದೆ. ರೈತರೊಬ್ಬರು ಅಭಿವೃದ್ಧಿಪಡಿಸಿದ ಕಾಳುಮೆಣಸು ತಳಿಯೊಂದಕ್ಕೆ ಈ ರೀತಿ ಹಕ್ಕು ಪ್ರಾಪ್ತವಾಗಿರುವುದು ರಾಜ್ಯದಲ್ಲಿಯೇ ಪ್ರಥಮ ಎಂದು ತೋಟಗಾರಿಕಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ತಳಿಯ ಗುಣಮಟ್ಟ ಹಾಗೂ ವೈಶಿಷ್ಟ್ಯವನ್ನು ಪರಿಶೀಲಿಸಿ, ಅದನ್ನು ನೋಂದಣಿ ಮಾಡಿಸುವುದಕ್ಕೆ ಅಪ್ಪಂಗಳದ ಏಲಕ್ಕಿ ಸಂಶೋಧನಾ ಕೇಂದ್ರದ ನಿವೃತ್ತ ವಿಜ್ಞಾನಿ ಡಾ.ವೇಣು ಗೋಪಾಲ, ಕೊಚ್ಚಿಯ ಕೋಕೋ ಹಾಗೂ ಗೇರು ನಿರ್ದೇಶನಾಲಯದ ಕೇಂದ್ರದ ಉಪ ನಿರ್ದೇಶಕ ಬಾಬಾ ಸಾಹೇಬ ದೇಸಾಯಿ ಹೆಚ್ಚಿನ ಸಹಕಾರ ನೀಡಿದ್ದಾರೆ. ಮಹಾಬಲೇಶ್ವರ, ಎಚ್.ಜಿ. ಅರುಣ ಮತ್ತಿತರ ಸ್ಥಳೀಯ ತೋಟಗಾರಿಕಾ ಅಧಿಕಾರಿಗಳು ಮಾರ್ಗದರ್ಶನ ನೀಡಿದ್ದಾರೆ.

'ನಮ್ಮ ತೋಟದಲ್ಲಿ ಹಿರಿಯರ ಕಾಲದಿಂದ ಕಾಳುಮೆಣಸಿನ ತಳಿಯೊಂದು ಇತ್ತು. ಈ ತಳಿ ಈ ಭಾಗದಲ್ಲಿ ಪ್ರಚಲಿತದಲ್ಲಿರುವ ಪಣಿಯೂರು ತಳಿಗಿಂತ ಉತ್ತಮ ಎಂದೆನಿಸಿತ್ತು. ಅದನ್ನು ತೋಟದಲ್ಲಿ ಬೆಳೆಸುತ್ತ ಬಂದೆ' ಎಂದು ರಮಾಕಾಂತ ಹೆಗಡೆ ವಿವರಿಸಿದರು.

'ನನ್ನ ತೋಟದಲ್ಲಿ ಇದೇ ತಳಿಯ 100 ಕಾಳುಮೆಣಸಿನ ಬಳ್ಳಿಗಳಿವೆ. ಒಂದೊಂದು ಬಳ್ಳಿಯಲ್ಲಿಯೂ ತಲಾ ನಾಲ್ಕೂವರೆ ಕೆ.ಜಿ ಕಾಳು ಮೆಣಸು ಸಿಗುತ್ತಿದೆ. ಈ ತಳಿಗೆ ಸೊರಗು ಅಥವಾ ಕೊಳೆ ರೋಗವನ್ನು ತಾಳಿಕೊಳ್ಳುವ ಗುಣ ಜಾಸ್ತಿಯಿದೆ. ಏಳು ವರ್ಷಗಳಿಂದ ನನ್ನದೇ ನರ್ಸರಿಯಲ್ಲಿ ಬೆಳೆದ ಸುಮಾರು 1 ಲಕ್ಷ ಕಾಳುಮೆಣಸಿನ ಸಸಿಗಳನ್ನು ರೈತರಿಗೆ ಮಾರಾಟ ಮಾಡಿದ್ದೇನೆ. ರಾಜ್ಯದ ವಿವಿಧೆಡೆ ಅಲ್ಲದೇ ಕೇರಳಕ್ಕೂ ರೈತರು ಈ ತಳಿಯನ್ನು ಒಯ್ದಿದ್ದಾರೆ' ಎಂದರು.

ಸಿದ್ದಾಪುರ ತಾಲ್ಲೂಕಿನ ಹುಣಸೆಕೊಪ್ಪದ ರಮಾಕಾಂತ ಹೆಗಡೆ (ಕುಳಿತವರು) ಕಾಳುಮೆಣಸಿನ ಬಳ್ಳಿಯ ಆರೈಕೆ ಮಾಡುತ್ತಿರುವುದು

'ನೆರಳಿನಲ್ಲೂ ಉತ್ತಮ'

'ಸಿಗಂದಿನಿ ಕಾಳುಮೆಣಸಿನ ತಳಿಯ ಬಳ್ಳಿಗಳು ನೆರಳು ಇರುವಂತಹ ಅಡಿಕೆ ತೋಟಗಳಲ್ಲಿಯೂ ಉತ್ತಮ ಎಂದು ಕಂಡುಬಂದಿದೆ. ಕಾಳುಗಳ ಗಾತ್ರ ಒಂದೇ ರೀತಿ ಬರುತ್ತದೆ. ಅದರಲ್ಲಿಯೂ ಬಿಳಿ ಕಾಳುಗಳ ಗುಣಮಟ್ಟ ವಿಶಿಷ್ಟವಾಗಿದೆ. ಬಳ್ಳಿಗಳು ಬೇಗನೆ ಬೆಳೆಯುವುದಲ್ಲದೇ ಸೊರಗು ರೋಗದ ಬಾಧೆ ಕಡಿಮೆ' ಎಂಬುದು ತೋಟಗಾರಿಕಾ ಅಧಿಕಾರಿ ಮಹಾಬಲೇಶ್ವರ ಅವರ ಅಭಿಪ್ರಾಯ.

ಸಿಗಂದಿನಿ ಕಾಳುಮೆಣಸು ನಾಟಿ ಮಾಡಿದ ಎರಡು ವರ್ಷಕ್ಕೆ ಫಸಲು ನೀಡುತ್ತದೆ. ಉತ್ತಮವಾಗಿ ನಿರ್ವಹಣೆಯಿದ್ದರೆ ಹೆಚ್ಚಿನ ಫಸಲು ಸಿಗುತ್ತದೆ

ರಮಾಕಾಂತ ಹೆಗಡೆ, ರೈತ

ಸಿಗಂದಿನಿ ತಳಿ ಕಾಳುಮೆಣಸಿನ ಲೀಟರ್ ವೇಯ್ಟ್ ಹೆಚ್ಚು ಇರುವುದರಿಂದ ಇದನ್ನು ವಿದೇಶಕ್ಕೂ ರಫ್ತು ಮಾಡುವ ಅವಕಾಶವಿದೆ

ಮಹಾಬಲೇಶ್ವರ

ತೋಟಗಾರಿಕಾ ಅಧಿಕಾರಿ

ಅದಮ್ಯ ಚೇತನ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್

'ಕೋವಿಡ್ ಹೋರಾಟದಲ್ಲಿ ಔಷಧ ಕ್ಷೇತ್ರದ ಕೊಡುಗೆ ಅಪಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವದ ಲಸಿಕೆ ಉತ್ಪಾದನೆಯ ಶೇ 60ರಷ್ಟು ಕೊಡುಗೆ ನೀಡಿರುವ ದೇಶದ ಔಷಧ ಕ್ಷೇತ್ರ ಕೊರೊನಾ ವಿರುದ್ಧ ವಿಶ್ವದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದೆ' ಎಂದು ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು.

ಅನಂತಕುಮಾರ್ ಪ್ರತಿಷ್ಠಾನದ ವತಿಯಿಂದ ಶನಿವಾರ ಆಯೋಜಿಸಿದ್ದ 'ದೇಶ ಮೊದಲು' ವೆಬಿನಾರ್ ಸರಣಿಯಲ್ಲಿ 'ಭಾರತೀಯ ಔಷದ ವಲಯ ಎದುರಿಸುತ್ತಿರುವ ಸವಾಲುಗಳು ಹಾಗೂ ಅವಕಾಶಗಳು' ಕುರಿತು ಅವರು ಮಾತನಾಡಿದರು.

'ದೇಶದಲ್ಲಿ ಔಷಧ ಉತ್ಪಾದನೆ ಹಾಗೂ ಸಂಶೋಧನೆಯ ಕ್ಷೇತ್ರದಲ್ಲಿ ಬಹಳ ಅವಕಾಶಗಳು ಇವೆ. ಭಾರತ ವಿಶ್ವದ ಔಷಧಾಲಯ ಎಂದೇ ಹೆಸರುವಾಸಿಯಾಗಿದೆ' ಎಂದರು.

ಡಾ.ರೆಡ್ಡೀಸ್ ಲ್ಯಾಬೊರೇಟರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೀಪಕ್ ಸಪ್ರ,'ದೇಶ ಔಷಧ ಹಾಗೂ ಲಸಿಕೆ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ದೇಶದ ಬಹಳಷ್ಟು ಕಂಪನಿಗಳು ಹೊಸ ಔಷಧ ಸಿದ್ಧಪಡಿಸುವ ಆರ್ಥಿಕ ಸಾಮರ್ಥ್ಯ ಹೊಂದಿಲ್ಲ. ಆದರೆ, ಸಂಶೋಧನೆ ಆಗಿರುವ ಔಷಧಗಳ ಉತ್ಪಾದನೆಯಲ್ಲಿ ಮುಂದಿದ್ದೇವೆ' ಎಂದು ಹೇಳಿದರು.

ಐಕ್ಯೂಜಿಇಎನ್-ಎಕ್ಸ್ ಫಾರ್ಮಾ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರ ಮಂದಾರ ಕೊಡಗುಲೆ, 'ಅಮೆರಿಕದಂತಹ ಮುಂದುವರೆದ ರಾಷ್ಟ್ರಗಳಲ್ಲಿ ದೊರೆಯುವ ಔಷಧ ಗುಣಮಟ್ಟ ಹಾಗೂ ಅದಕ್ಕಾಗಿ ಅನುಸರಿಸುವ ಮಾನದಂಡಗಳು ನಮ್ಮಲ್ಲೂ ಅನುಸರಿಸಬೇಕು. ಹೊಸ ಔಷಧ ಸಂಶೋಧನೆಗೆ 10ರಿಂದ 12 ವರ್ಷಗಳು ಬೇಕು. ಇದಕ್ಕಾಗಿ ಸರ್ಕಾರ ಹಾಗೂ ಸಂಸ್ಥೆಗಳು ನೆರವು ನೀಡಬೇಕು' ಎಂದು ಮನವಿ ಮಾಡಿದರು.

ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಪಿ.ವಿ. ಕೃಷ್ಣ ಭಟ್, ಅದಮ್ಯ ಚೇತನ ಸಂಸ್ಥೆಯ ಟ್ರಸ್ಟಿಗಳಾದ ಪ್ರದೀಪ್ ಓಕ್, ಐಶ್ವರ್ಯಾ ಅನಂತಕುಮಾರ್, ಸಮೀರ್ ಹಾಗೂ ಇತರರು ಭಾಗವಹಿಸಿದ್ದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ. ಕುಮಾರಸ್ವಾಮಿ ವಿರುದ್ಧದ ಟೀಕೆಗೆ ಕಾರ್ಯಕರ್ತರ ಆಕ್ರೋಶ

ರಾಕ್‌ಲೈನ್ ವೆಂಕಟೇಶ್ ಮನೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಟೀಕಿಸಿದ್ದ ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ 70 ಜೆಡಿಎಸ್ ಕಾರ್ಯಕರ್ತರನ್ನು ವಶಕ್ಕೆ ಪಡೆದ ಪೊಲೀಸರು, ಬಳಿಕ ಬಿಡುಗಡೆ ಮಾಡಿದ್ದಾರೆ.

ನಗರದ ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ವೆಂಕಟೇಶ್ ಅವರ ಮನೆಗೆ ಜೆಡಿಎಸ್ ಕಾರ್ಯಕರ್ತರು ಮುತ್ತಿಗೆ ಹಾಕಬಹುದು ಎಂಬ ಸುಳಿವು ಪೊಲೀಸರಿಗೆ ಇತ್ತು. ಅದನ್ನು ತಪ್ಪಿಸಲು ಮನೆಯ ಸುತ್ತ ಬ್ಯಾರಿಕೇಡ್‌ಗಳನ್ನು ಹಾಕಿದ್ದರು. ಶನಿವಾರ ಬೆಳಿಗ್ಗೆಯೇ ರಾಕ್‌ಲೈನ್ ಮನೆ ಬಳಿ ಬಂದ ಜೆಡಿಎಸ್ ಕಾರ್ಯಕರ್ತರು, ಘೋಷಣೆ ಕೂಗುತ್ತಾ ಒಳಕ್ಕೆ ನುಗ್ಗಲು ಯತ್ನಿಸಿದರು.

ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಕಾರರನ್ನು ತಡೆದರು. ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಕೆಲಕಾಲ ನೂಕಾಟ, ತಳ್ಳಾಟ ನಡೆಯಿತು. ಬ್ಯಾರಿಕೇಡ್‌ಗಳನ್ನು ತಳ್ಳಿಕೊಂಡು ಮನೆಯ ಒಳಕ್ಕೆ ನುಗ್ಗಲು ಯತ್ನಿಸಿದ ಜೆಡಿಎಸ್ ಕಾರ್ಯಕರ್ತರು, ವೆಂಕಟೇಶ್ ವಿರುದ್ಧ ಘೋಷಣೆ ಕೂಗಿದರು.

ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ನಿವಾಸಕ್ಕೆ ಪೊಲೀಸ್ ಭದ್ರತೆ ಒದಗಿಸಿರುವುದು – ಪ್ರಜಾವಾಣಿ ಚಿತ್ರ

ಪ್ರತಿಭಟನಕಾರರನ್ನು ವಾಪಸು ಕಳಿಸಲು ಪೊಲೀಸರು ಯತ್ನಿಸಿದರು. ಆದರೆ, ಅವರು ಮನವೊಲಿಕೆಗೆ ಮಣಿಯಲಿಲ್ಲ. 70 ಮಂದಿಯನ್ನು ವಶಕ್ಕೆ ಪಡೆದ ಪೊಲೀಸರು, ವಾಹನವೊಂದರಲ್ಲಿ ಬೇರೆಡೆ ಕರೆದೊಯ್ದರು. ಕೆಲಕಾಲ ವಾಹನದಲ್ಲೇ ಇರಿಸಿಕೊಂಡು, ನಂತರ ಎಲ್ಲರನ್ನೂ ಬಿಡುಗಡೆ ಮಾಡಲಾಗಿದೆ.

ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಅಣೆಕಟ್ಟೆಯ ಸಮೀಪದ ಬೇಬಿ ಬೆಟ್ಟದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಸಂಸದೆ ಸುಮಲತಾ ಅಂಬರೀಷ್ ಮತ್ತು ಎಚ್.ಡಿ. ಕುಮಾರಸ್ವಾಮಿ ನಡುವೆ ಕೆಲವು ದಿನಗಳಿಂದ ತೀವ್ರ ವಾಕ್ಸಮರ ನಡೆಯುತ್ತಿದೆ. ಈ ವಿಚಾರದಲ್ಲಿ ಸುಮಲತಾ ಬೆಂಬಲಕ್ಕೆ ನಿಂತಿರುವ ರಾಕ್‌ಲೈನ್ ವೆಂಕಟೇಶ್, ಕುಮಾರಸ್ವಾಮಿ ವಿರುದ್ಧ ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿದ್ದರು.

‘ಸಂಸದೆ ಸುಮಲತಾ ಕ್ಷಮೆ ಯಾಚಿಸಲಿ’

ಕೋಲಾರ: ‘ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ಅವಮಾನಕರ ಪದ ಬಳಸಿರುವ ಸಂಸದೆ ಸುಮಲತಾ ಅವರು ಬಹಿರಂಗ ಕ್ಷಮೆ ಯಾಚಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಒತ್ತಾಯಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಅಂಬರೀಷ್‌ರ ಅಂತ್ಯ ಸಂಸ್ಕಾರವನ್ನು ಗೌರವಯುತವಾಗಿ ನಡೆಸಿಕೊಟ್ಟಿದ್ದಾರೆ. ಆದರೆ, ಸುಮಲತಾ ಅವರಿಗೆ ಕೃತಜ್ಞತೆಯಿಲ್ಲ’ ಎಂದು ಕಿಡಿಕಾರಿದರು.

‘ದೇಶದಲ್ಲಿ ಕಿತ್ತು ತಿನ್ನುವ ಸಮಸ್ಯೆಗಳು ಸಾಕಷ್ಟಿವೆ. ಬಿಜೆಪಿ ಸರ್ಕಾರದಲ್ಲೂ ಸಮಸ್ಯೆಗಳಿವೆ. ಆ ಬಗ್ಗೆ ಯಾರೂ ಚರ್ಚೆ ಮಾಡುತ್ತಿಲ್ಲ. ಅಂಬರೀಷ್ ಅವರ ಹೆಸರಿನಲ್ಲಿ ಈಗ ಚರ್ಚೆ ಅನಗತ್ಯ. ಕೆಆರ್‌ಎಸ್ ಜಲಾಶಯ ಬಿರುಕು ಬಿಟ್ಟಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಬಿರುಕು ಬಿಟ್ಟರೆ ಯಾವುದೇ ಅಣೆಕಟ್ಟು ಉಳಿಯುವುದಿಲ್ಲ. ಹೀಗಾಗಿ ಕೆಆರ್‌ಎಸ್ ಹೆಸರಿನಲ್ಲಿ ರಾಜಕಾರಣ ಬೇಡ’ ಎಂದು ತಿಳಿಸಿದರು.

‘ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಹೇಗೆ ಗೆಲುವು ಸಾಧಿಸಿದರು ಎಂಬುದು ಇಡೀ ರಾಜ್ಯಕ್ಕೆ ಗೊತ್ತು. ಬಿಜೆಪಿ ಮತ್ತು ಕಾಂಗ್ರೆಸ್‌ನ ಅಪವಿತ್ರ ಮೈತ್ರಿಯಿಂದ ಸುಮಲತಾ ಗೆದ್ದರು. ಮಂಡ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರಿದ್ದಾರೆ ಎಂಬ ಕಾರಣಕ್ಕೆ ಸುಮಲತಾ ಅವರು ಕೆಆರ್‌ಎಸ್ ವಿಚಾರದಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದು ದೂರಿದರು.

ಸುಮಲತಾಗೆ ರೈತ ಸಂಘ ಬೆಂಬಲ

ಪಾಂಡವಪುರ (ಮಂಡ್ಯ): ’ಕೆಆರ್‌ಎಸ್ ಉಳಿವಿಗಾಗಿ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸುತ್ತಿರುವ ಸಂಸದೆ ಸುಮಲತಾ ಅವರನ್ನು ಬೆಂಬಲಿಸಿ ಚಳವಳಿಯನ್ನು ತೀವ್ರಗೊಳಿಸಲಾಗುವುದು’ ಎಂದು ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಎಲ್.ಕೆಂಪೂಗೌಡ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸಂಘದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ’ಎರಡು ದಶಕದ ಹಿಂದೆಯೇ ದಿ.ಕೆ. ಎಸ್.ಪುಟ್ಟಣ್ಣಯ್ಯ ಅವರು ಬೇಬಿಬೆಟ್ಟದ ಗಣಿಗಾರಿಕೆಯ ವಿರುದ್ಧ ಹೋರಾಟ ರೂಪಿಸಿದ್ದರು. ಅಣೆಕಟ್ಟೆಗೆ ಅಪಾಯವಿದೆ ಎಂದು ಎಚ್ಚರಿಸಿದ್ದರು. ಆದರೆ ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಸಂಘ ನಿರಂತರವಾಗಿ ಹೋರಾಡುತ್ತಿದೆ ಎಂದರು.

’ಎಚ್.ಡಿ.ಕುಮಾರಸ್ವಾಮಿಯವರ ಮಾತುಗಳಿಂದ ಸುಮಲತಾ ಅವರು ಕುಗ್ಗಬಾರದು. ಸರ್ಕಾರವು ₹ 68ಕೋಟಿ ವೆಚ್ಚದಲ್ಲಿ ಅಣೆಕಟ್ಟೆಯ ಗೇಟ್‌ಗಳನ್ನು ದುರಸ್ತಿ ಮಾಡಿ, ಸಣ್ಣಪುಟ್ಟ ಬಿರುಕುಗಳನ್ನು ಮುಚ್ಚಿರುವುದನ್ನು ಲಘುವಾಗಿ ಪರಿಗಣಿಸಬಾರದು’ ಎಂದರು.

16ರಂದು ಕೆ.ವಿ.ಸುಬ್ಬಣ್ಣ ಸ್ಮರಣೆ

ಸಾಗರ: ಸಮೀಪದ ಹೆಗ್ಗೋಡಿನ ನೀನಾಸಂನಲ್ಲಿ ಜುಲೈ 16ರಂದು ಸಂಜೆ 6.30ಕ್ಕೆ ಕೆ.ವಿ.ಸುಬ್ಬಣ್ಣ ಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಯೂಟ್ಯೂಬ್ ಲೈವ್ ಮೂಲಕ ಕಾರ್ಯಕ್ರಮ ನಡೆಯಲಿದ್ದು, ‘ಮಲೆನಾಡಿನ ಇತಿಹಾಸದ ಚಾಲಕ ಶಕ್ತಿಗಳು’ ಕುರಿತು ಲೇಖಕ ಡಾ.ಮನು ವಿ. ದೇವದೇವನ್ ಅವರು ಉಪನ್ಯಾಸ ನೀಡಲಿದ್ದಾರೆ.

ಕೆ.ವಿ.ಸುಬ್ಬಣ್ಣ

ರಾಜಾರಾಮ ಹೆಗಡೆ, ಶಿವಾನಂದ ಕಳವೆ, ಸುಮಿತ್ರಾ ಎಲ್.ಸಿ. ಪ್ರತಿಸ್ಪಂದಿಸಲಿದ್ದಾರೆ.

ಆಸಕ್ತರು https://bit.ly/36dyxoB ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಬಹುದು ಎಂದು ನೀನಾಸಂ ಪ್ರಕಟಣೆ ತಿಳಿಸಿದೆ.

₹ 7.46 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ವ್ಯವಹಾರ ಹೆಸರಿನಲ್ಲಿ ನಗರದ ನಿವಾಸಿಯೊಬ್ಬರಿಂದ ₹ 7.46 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಂಚನೆಗೆ ಒಳಗಾಗಿರುವ ಜೆ.ಪಿ. ನಗರದ 41 ವರ್ಷದ ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಬಿಟ್ ಕಾಯಿನ್ ಇಂಡಿಯಾ ಸಾಫ್ಟ್‌ವೇರ್ ಸರ್ವೀಸ್ ಕಂಪನಿ ನಿರ್ದೇಶಕ ಸೈಕಮ್ ರಾಮಕೃಷ್ಣ ರೆಡ್ಡಿ ಹಾಗೂ ಇತರರು ವಂಚಿಸಿರುವುದಾಗಿ ದೂರುದಾರ ಆರೋಪಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಟ್ ಕಾಯಿನ್ ವ್ಯವಹಾರ ನಡೆಸಲು ಮುಂದಾಗಿದ್ದ ದೂರುದಾರ, ಬಿಟ್ ಕಾಯಿನ್ ಖರೀದಿಸಿ ಮಾರುಕಟ್ಟೆ ಮೌಲ್ಯಕ್ಕೆ ತಕ್ಕಂತೆ ಮರು ಮಾರಾಟ ಮಾಡಿ ಲಾಭ ಗಳಿಸಲು ಯೋಚಿಸಿದ್ದರು. ಬಿಟ್ ಕಾಯಿನ್ ಇಂಡಿಯಾ ಸಾಫ್ಟ್‌ವೇರ್ ಸರ್ವೀಸ್ ಕಂಪನಿಯಲ್ಲಿ ₹ 7.46 ಲಕ್ಷ ಹೂಡಿಕೆ ಮಾಡಿದ್ದರು. ಕೆಲ ತಿಂಗಳ ನಂತರ ಕಂಪನಿಯವರು ಸೇವಾ ಶುಲ್ಕದ ಹೆಸರಿನಲ್ಲಿ ದೂರುದಾರರ ಖಾತೆಯಿಂದ ಹಂತ ಹಂತವಾಗಿ ಹಣ ಕಡಿತಗೊಳಿಸಲಾರಂಭಿಸಿದ್ದರು. ಈ ಸಂಗತಿ ದೂರಿನಲ್ಲಿದೆ’ ಎಂದೂ ಮೂಲಗಳು ತಿಳಿಸಿವೆ.

‘ಹೂಡಿಕೆ ಹಣ ವಾಪಸು ಪಡೆಯಲು ದೂರುದಾರ ಪ್ರಯತ್ನಿಸಿದ್ದರು. ಅದು ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಕಂಪನಿಯವರು ಮಾಹಿತಿ ನೀಡಿರಲಿಲ್ಲ. ಅದರಿಂದ ನೊಂದ ದೂರುದಾರ, ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕೆಆರ್‌ಎಸ್ ಬಿರುಕು ನೆಪದಲ್ಲಿ ರಾಜಕೀಯ ಬೇಡ: ಅಶೋಕ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ‘ಕೆ.ಆರ್.ಎಸ್ ಅಣೆಕಟ್ಟು ಸುರಕ್ಷಿತವಾಗಿದೆ. ಈ ಬಗ್ಗೆ ಗಣಿ ಇಲಾಖೆ ಸಚಿವರು ಮತ್ತು ಸಂಬಂಧಪಟ್ಟ ಎಂಜಿನಿಯರ್‌ಗಳಿಂದ ಮಾಹಿತಿ ಪಡೆಯಲಾಗಿದೆ. ಯಾವುದೇ ಅನುಮಾನ ಇದ್ದರೆ ಸರ್ಕಾರದೊಂದಿಗೆ ಚರ್ಚೆ ನಡೆಸಬೇಕೆ ಹೊರತು, ಈ ವಿಚಾರವನ್ನು ದೊಡ್ಡವಿವಾದ ಮಾಡುವುದು ಬೇಡ’ ಎಂದು ಕಂದಾಯ ಸಚಿವ ಆರ್. ಅಶೋಕ ಅವರು ಸಂಸದೆ ಸುಮಲತಾ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನೂತನ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಬರಮಾಡಿಕೊಳ್ಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದರು.

ಕೆ.ಆರ್.ಎಸ್ ಅಣೆಕಟ್ಟು ಬಿರುಕು ಬಿಟ್ಟಿದೆ ಎನ್ನುವ ವಿಚಾರ ಕುರಿತು ಸರ್ಕಾರ ಏನನ್ನೂ ಹೇಳುತ್ತಿಲ್ಲ ಎಂದು ಮಾಧ್ಯಮಗಳಲ್ಲಿ ವರದಿ ಆಗುತ್ತಿದೆ. ಅಣೆಕಟ್ಟು ಸುರಕ್ಷಿತವಾಗಿದೆ. ಈ ಹಿಂದೆ ದುರಸ್ತಿ ಮಾಡಲಾಗಿದೆ. ಈ ಬಗ್ಗೆ ನೀರಾವರಿ ಇಲಾಖೆ ಎಂಜಿನಿಯರ್‌ಗಳು ಸ್ಪಷ್ಟಪಡಿಸಿದ್ದಾರೆ ಎಂದರು.

’ಈ ವಿಷಯ ರಾಜಕೀಯ ದಾಳವಾಗಬಾರದು. ಯಾರ ಮನಸ್ಸಿಗೂ ನೋವುಂಟು ಮಾಡುವ ಕೆಲಸವಾಗಬಾರದು. ಮಂಡ್ಯ, ಮೈಸೂರು, ಬೆಂಗಳೂರಿಗೆ ಇದು ಜೀವನದಿ. ತಜ್ಞರು ಮಾತ್ರ ಈ ಬಗ್ಗೆ ಮಾತನಾಡಲು ಅಧಿಕಾರವಿದೆ. ಬೇರೆ ಯಾರೂ ಮಾತನಾಡಬಾರದು. ಅಣೆಕಟ್ಟು ವಿಚಾರ ಮುಂದಿಟ್ಟುಕೊಂಡು ಹಿಂದಿನ ಲೋಕಸಭೆ ಚುನಾವಣೆಯ ಪ್ರತೀಕಾರ ತೆಗೆದುಕೊಳ್ಳುವ ಕೆಲಸ ನಡೆದಿದೆ ಅಷ್ಟೇ‘ ಎಂದರು.

‘ಕೆಆರ್‌ಎಸ್ ರಕ್ಷಣೆ ಹೊಣೆ ಸರ್ಕಾರದ್ದು’

ಉಡುಪಿ: ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದರೆ ಡ್ಯಾಂ ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ್ದಾಗಿದ್ದು, ನೀರಾವರಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಕೆಆರ್‌ಎಸ್ ಅಣೆಕಟ್ಟೆ ಬಿರುಕು ವಿಚಾರವಾಗಿ ಮಂಡ್ಯ ಸಂಸದೆ ಸುಮಲತಾ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪರಸ್ಪರ ಆರೋಪ ಪ್ರತ್ಯಾರೋಪ ಮಾಡಿಕೊಳ್ಳುತ್ತಿದ್ದಾರೆ. ರಾಜಕೀಯ ನಾಯಕರಿಗೆ ಇದು ಶೋಭೆ ತರುವಂಥದಲ್ಲ ಎಂದರು.

ಬಿಬಿಎಂಪಿ: ಇತರ ಮುಖ್ಯ ಎಂಜಿನಿಯರ್ ವೃಂದದ ಹುದ್ದೆಗಳಲ್ಲೂ ಮಾರ್ಪಾಡು

ಕಸ ನಿರ್ವಹಣೆ ಮುಖ್ಯ ಎಂಜಿನಿಯರ್ ಹುದ್ದೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕಸ ನಿರ್ವಹಣೆ ನಿಯಮಿತ ಸಂಸ್ಥೆಯ ಸ್ಥಾಪನೆಯಾಗುತ್ತಿರುವುದರಿಂದ ಬಿಬಿಎಂಪಿಯ ಕಸ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ (ಸಿ.ಇ) ಹುದ್ದೆಯನ್ನು ರದ್ದುಪಡಿಸಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ವೈಟ್‌ಟಾಪಿಂಗ್ ಕಾಮಗಾರಿಗಳನ್ನು ಯೋಜನೆ ಕೇಂದ್ರ ವಿಭಾಗದಿಂದ ಬೇರ್ಪಡಿಸಿ ರಸ್ತೆ ಮೂಲಸೌಕರ್ಯ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ದೈನಂದಿನ ಕೆಲಸ ಕಾರ್ಯಗಳ ಹಿತ ದೃಷ್ಟಿಯಿಂದ ಇಲಾಖೆಯು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಗುಣವಾಗಿ ಬಿಬಿಎಂಪಿಯ ಮುಖ್ಯ ಎಂಜಿನಿಯರ್‌ವೃಂದದಹುದ್ದೆಗಳಲ್ಲಿಕೆಲವೊಂದು ಮಾರ್ಪಾಡುಗಳನ್ನು ಮಾಡಿದೆ.

ಒಎಫ್‌ಸಿ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಸೂಪರಿಂಟೆಂಡಿಂಗ್ ಎಂಜಿನಿಯರ್ (ಒಎಫ್‌ಸಿ) ಸ್ವತಂತ್ರ ಪ್ರಭಾರ ಹುದ್ದೆಯನ್ನಾಗಿ ಬದಲಾಯಿಸಲಾಗಿದೆ. ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಸೂಪರಿಂಟೆಂಡಿಂಗ್ ಎಂಜಿನಿಯರ್ (ಎಸ್.ಇ) ಹುದ್ದೆಯನ್ನಾಗಿ ಮಾರ್ಪಾಡು ಮಾಡಲಾಗಿದೆ. ಈ ವಲಯಕ್ಕೆ ಸಂಬಂಧಿಸಿ ಮುಖ್ಯ ಎಂಜಿನಿಯರ್ ಅವರು ಲೋಕೋಪಯೋಗಿ ಇಲಾಖೆ ಡಿ–ಕೋಡ್‌ನಂತೆ ನೀಡಬೇಕಾದ ತಾಂತ್ರಿಕ ಮಂಜೂರಾತಿಗಳನ್ನು ಇನ್ನು ಯಲಹಂಕ ವಲಯದ ಮುಖ್ಯ ಎಂಜಿನಿಯರ್ ಅವರಿಂದ ಪಡೆದುಕೊಳ್ಳಬೇಕಾಗುತ್ತದೆ. ಉಳಿದಂತೆ ದಾಸರಹಳ್ಳಿ ವಲಯದ ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ಸ್ವತಂತ್ರ ಪ್ರಭಾರವನ್ನು ಹೊಂದಿರಲಿದ್ದಾರೆ. ಬಿಬಿಎಂಪಿಯ ಮುಖ್ಯ ಎಂಜಿನಿಯರ್ ವೃಂದದ ಮತ್ತು ಸ್ವತಂತ್ರ ಪ್ರಭಾರದ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳ ಹುದ್ದೆಗಳಿಗೆ ಗ್ರೂಪ್ ಎ ವೃಂದದ ಎಂಜಿನಿಯರ್‌ಗಳನ್ನು ನಿಯುಕ್ತಿಗೊಳಿಸಲಾಗಿದೆ.

ಬಿಬಿಎಂಪಿ– ಎಂಜಿನಿಯರ್ ಹುದ್ದೆ ಬದಲಾವಣೆಗಳೇನು?

ಕಸ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದ ಪಿ.ವಿಶ್ವನಾಥ್ ಅವರನ್ನು ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಆಗಿ ಹಾಗೂ ಒಎಫ್‌ಸಿ ವಿಭಾಗದ ಮುಖ್ಯ ಎಂಜಿನಿಯರ್ ಎನ್.ರಮೇಶ್ ಅವರನ್ನು ಬೊಮ್ಮನಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಆಗಿ ನಿಯುಕ್ತಿಗೊಳಿಸಲಾಗಿದೆ.

ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರಿಗೆ ಈಗಿರುವ ರಸ್ತೆ ಮೂಲಸೌಕರ್ಯ ಮತ್ತು ರಾಜಕಾಲುವೆ ಹೊಣೆಯ ಜೊತೆ ಮೊದಲ ಹಂತ ವೈಟ್‌ಟಾಪಿಂಗ್ ಕಾಮಗಾರಿಗಳ ಹೊಣೆಯೂ ಹೆಗಲೇರಿದೆ. ಮುಖ್ಯ ಎಂಜಿನಿಯರ್ ಎ.ಬಿ.ದೊಡ್ಡಯ್ಯ ಅವರಿಂದ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಹೊಣೆಯನ್ನು ಹಿಂಪಡೆಯಲಾಗಿದ್ದು, ಅವರು ಜಾಗೃತ ಮತ್ತು ಪಿಪಿಇಡಿ ಮುಖ್ಯ ಎಂಜಿನಿಯರ್ ಆಗಿ ಮುಂದುವರಿಯಲಿದ್ದಾರೆ. ಸೂಪರಿಂಟೆಂಡಿಂಗ್ ಎಂಜಿನಿಯರ್ ಎನ್. ವಿಜಯ ಕುಮಾರ್ ಅವರಿಂದ ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಪ್ರಭಾರ ಹೊಣೆಯನ್ನು ಹಿಂಪಡೆಯಲಾಗಿದೆ.

ಸೂಪರಿಂಟೆಂಡಿಂಗ್ ಎಂಜಿನಿಯರ್ ಬಿ.ಟಿ.ಮೋಹನ್ ಕೃಷ್ಣ ಅವರಿನ್ನು ಕೆರೆ ವಿಭಾಗದ ಪ್ರಭಾರ ಮುಖ್ಯ ಎಂಜಿನಿಯರ್ ಬದಲು ಈ ವಿಭಾಗದ ಸ್ವತಂತ್ರ ಪ್ರಭಾರ ಸೂಪರಿಂಟೆಂಡಿಂಗ್ ಎಂಜಿನಿಯರ್. ಸೂಪರಿಂಟೆಂಡಿಂಗ್ ಎಂಜಿನಿಯರ್ ಆರ್.ಸುಗುಣ ಅವರಿಗೆ ಈಗಿನ ಹೊಣೆಯ ಜೊತೆಗೆ ದಾಸರಹಳ್ಳಿ ವಲಯದ ಸ್ವತಂತ್ರ ಪ್ರಭಾರದ ಸೂಪರಿಂಟೆಂಡಿಂಗ್ ಎಂಜಿನಿಯರ್ ಹೊಣೆ ವಹಿಸಲಾಗಿದೆ. ಸೂಪರಿಂಟೆಂಡಿಂಗ್ ಎಂಜಿನಿಯರ್ ಬಿ.ಎಲ್. ನರಸರಾಮರಾವ್ ಅವರಿಗೆ ಈಗಿನ ಹೊಣೆಯ ಜೊತೆ ಒಎಫ್‌ಸಿ ವಿಭಾಗದ ಸೂಪರಿಂಟೆಂಡಿಂಗ್ ಎಂಜಿನಿಯರ್ ಹೊಣೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ಪ್ರಭಾರ ಪ್ರಧಾನ ಎಂಜಿನಿಯರ್ ಎಸ್. ಪ್ರಭಾಕರ್; ಮುಖ್ಯ ಎಂಜಿನಿಯರ್‌ಗಳಾದ ಎಸ್. ಪಿ.ರಂಗನಾಥ್, ಪಿ.ರಾಜೀವ್, ಪರಮೇಶ್ವರಯ್ಯ ಹಾಗೂ ಸೂಪರಿಂಟೆಂಡಿಂಗ್ ಎಂಜಿನಿಯರ್ ಲೋಕೇಶ್ ಅವರು ಹಿಂದಿನ ಹುದ್ದೆಗಳಲ್ಲೇ ಮುಂದುವರಿದಿದ್ದಾರೆ.

ನಿತ್ಯಾನಂದ ಆಶ್ರಮದಿಂದ ವಿದೇಶಿ ಪ್ರಜೆ ನಾಪತ್ತೆ

ರಾಮನಗರ: ನಿತ್ಯಾನಂದ ಆಶ್ರಮದಿಂದ ವಿದೇಶಿ ಪ್ರಜೆಯೊಬ್ಬ ನಾಪತ್ತೆ ಆಗಿದ್ದು, ಯುವಕನನ್ನು ಹುಡುಕಿಕೊಡುವಂತೆ ಕೋರಿ ಆತನ ತಾಯಿ ಬಿಡದಿ ಪೊಲೀಸರಿಗೆ ದೂರು ನೀಡಿದ್ದಾರೆ.

ಮಲೇಷ್ಯಾ ವಾಸಿ ಕ್ರಿಸಂತ್ ಭಾಸ್ಕರನ್ (23) ಕಾಣೆಯಾದ ಯುವಕ. ಈತ ಮಾನಸಿಕವಾಗಿ ಅಸ್ವಸ್ಥರಾಗಿದ್ದು, ಕಳೆದ 8 ವರ್ಷದ ಹಿಂದೆ ತಮ್ಮ ತಾಯಿ ಪುಷ್ಪರಾಣಿ ರಾಮಲಿಂಗಂ ಅವರೊಂದಿಗೆ ಚಿಕಿತ್ಸೆಗೆಂದು ನಿತ್ಯಾನಂದ ಆಶ್ರಮಕ್ಕೆ ಬಂದು ಇಲ್ಲಿಯೇ ನೆಲೆಸಿದ್ದರು.

‘ಇದೇ 9ರಂದು ಬೆಳಿಗ್ಗೆ 11ರ ಸುಮಾರಿಗೆ ಆಶ್ರಮದಿಂದ ಶೌಚಾಲಯಕ್ಕೆ ಹೋಗಿ ಬರುತ್ತೇನೆ ಎಂದು ಹೋಗಿದ್ದ ಕ್ರಿಸಂತ್ ಅಲ್ಲಿಂದ ನಾಪತ್ತೆಯಾಗಿದ್ದಾನೆ. ಆಶ್ರಮದಲ್ಲಿ ಎಲ್ಲಿ ಹುಡುಕಿದರೂ ಸಿಗಲಿಲ್ಲ. ಆತನ ಲಾಕರ್‌ನಲ್ಲಿದ್ದ ಪಾಸ್‌ಪೋರ್ಟ್ ಸಹ ಕಾಣೆಯಾಗಿದೆ’ ಎಂದು ಪುಷ್ಪರಾಣಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಬಿಡದಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಹುಡುಕಾಟ ನಡೆಸಿದ್ದಾರೆ.

ಮಗನಿಗೆ ಗೇಮ್ ಹುಚ್ಚು: ₹ 1.45 ಲಕ್ಷ ಕಳೆದುಕೊಂಡ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೇಮ್ ಆಡಲೆಂದು ಮಗನಿಗೆ ಮೊಬೈಲ್ ಕೊಡುತ್ತಿದ್ದ ತಾಯಿಯೊಬ್ಬರು ತಮ್ಮ ಬ್ಯಾಂಕ್ ಖಾತೆಯಿಂದ ₹ 1.45 ಲಕ್ಷ ಕಳೆದುಕೊಂಡಿದ್ದಾರೆ. ಈ ಬಗ್ಗೆ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬನಶಂಕರಿ ಎರಡನೇ ಹಂತದ ಕಾವೇರಿನಗರದ ನಿವಾಸಿಯಾಗಿರುವ 38 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆ ಸಿಟಿ ಬ್ಯಾಂಕ್ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಅವರ ಮಗ ನಿತ್ಯವೂ ಗೇಮ್ ಆಡುತ್ತಿದ್ದ. ಅದೇ ಕಾರಣಕ್ಕೆ ಮಹಿಳೆ, ಮಗನಿಗೆ ತಮ್ಮ ಮೊಬೈಲ್ ಕೊಡುತ್ತಿದ್ದರು.’

‘ಗೇಮ್ ಆಡುತ್ತಿದ್ದ ಬಾಲಕನನ್ನು ಗುರಿಯಾಗಿಸಿಕೊಂಡ ಸೈಬರ್ ವಂಚಕರು, ಆತನಿಗೆ ಗೇಮ್‌ನಲ್ಲೇ ಸಂದೇಶ ಕಳುಹಿಸಿ ತಾಯಿಯ ಬ್ಯಾಂಕ್ ಖಾತೆ ಮಾಹಿತಿ ಕದ್ದಿದ್ದಾರೆ. ನಂತರ, ಹಂತ ಹಂತವಾಗಿ ₹ 1.45 ಲಕ್ಷ ಡ್ರಾ ಮಾಡಿಕೊಂಡಿದ್ದಾರೆ. ಇದು ಗೊತ್ತಾಗುತ್ತಿದ್ದಂತೆ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ. ಮೇ 25ರಿಂದ ಜೂನ್ 30ರ ಅವಧಿಯಲ್ಲಿ ವಂಚನೆಯಾಗಿರುವುದಾಗಿ ಮಹಿಳೆ ಆರೋಪಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

₹ 1.35 ಲಕ್ಷ ಕಿತ್ತ ‘ಫೇಸ್‌ಬುಕ್’ ಸ್ನೇಹಿತ

ವೈದ್ಯನೆಂದು ಹೇಳಿಕೊಂಡು ಫೇಸ್‌ಬುಕ್ ಮೂಲಕ ನಗರದ ಮಹಿಳೆಯೊಬ್ಬರನ್ನು ಪರಿಚಯಿಸಿಕೊಂಡಿದ್ದ ವ್ಯಕ್ತಿಯೊಬ್ಬ ಉಡುಗೊರೆ ಆಮಿಷವೊಡ್ಡಿ ₹ 1.35 ಲಕ್ಷ ಪಡೆದು ವಂಚಿಸಿದ್ದಾನೆ.

ವಂಚನೆ ಬಗ್ಗೆ ಉತ್ತರಹಳ್ಳಿ ನಿವಾಸಿಯಾದ 38 ವರ್ಷದ ಮಹಿಳೆ ದೂರು ನೀಡಿದ್ದಾರೆ.

‘ಫೇಸ್‌ಬುಕ್ ಸ್ನೇಹಿತನ ಜೊತೆ ಮಹಿಳೆ ಹೆಚ್ಚು ಮಾತನಾಡುತ್ತಿದ್ದರು. ಮಹಿಳೆಯ ಮಗನ ಹುಟ್ಟುಹಬ್ಬ ಇರುವುದನ್ನು ತಿಳಿದುಕೊಂಡಿದ್ದ ವಂಚಕ, ಉಡುಗೊರೆ ಕಳುಹಿಸುವುದಾಗಿ ಹೇಳಿದ್ದ. ಜೂನ್ 28ರಂದು ಕಸ್ಟಮ್ಸ್ ಅಧಿಕಾರಿ ಸೋಗಿನಲ್ಲಿ ಕರೆ ಮಾಡಿದ್ದ ಆರೋಪಿ, ‘ಬೆಲೆ ಬಾಳುವ ಉಡುಗೊರೆ ಬಂದಿದೆ. ಅದನ್ನು ನಿಮ್ಮ ವಿಳಾಸಕ್ಕೆ ಕಳುಹಿಸಬೇಕಾದರೆ ಶುಲ್ಕ ಪಾವತಿಸಬೇಕು’ ಎಂದಿದ್ದ. ಈ ಸಂಗತಿ ದೂರಿನಲ್ಲಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಮಾತು ನಂಬಿದ್ದ ಮಹಿಳೆ, ಆತ ಹೇಳಿದ್ದ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ ₹ 1.35 ಲಕ್ಷ ಹಾಕಿದ್ದರು. ಇದಾದ ನಂತರ ಯಾವುದೇ ಉಡುಗೊರೆ ಬಂದಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ಕತ್ತು ಕೊಯ್ದು ಗೃಹಿಣಿ ಕೊಲೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಗೃಹಿಣಿಯೊಬ್ಬರ ಕತ್ತು ಕೊಯ್ದು ಕೊಲೆ ಮಾಡಿರುವ ದುಷ್ಕರ್ಮಿಗಳು, ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ಮೃತರ ಬಲ ಅಂಗೈಯಲ್ಲಿಟ್ಟು ಪರಾರಿಯಾಗಿದ್ದಾರೆ.

‘ಜ್ಞಾನಜ್ಯೋತಿ ಲೇಔಟ್ ಮನೆಯೊಂದರಲ್ಲಿ ಶನಿವಾರ ಮಹಿಳೆಯ ಮೃತದೇಹ ಪತ್ತೆಯಾಗಿದೆ. ಸಂಬಂಧಿಯೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬೀದರ್‌ನ 26 ವರ್ಷದ ಗೃಹಿಣಿ, ಪತಿ ಹಾಗೂ ಮೈದುನ ಜೊತೆಯಲ್ಲಿ ವಾಸವಿದ್ದರು. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಪತಿ ಶನಿವಾರ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರು. ಕೆಲಸ ನಿಮಿತ್ತ ಮೈದುನ ಸಹ ಹೊರಗಡೆ ಹೋಗಿದ್ದರು. ಗೃಹಿಣಿ ಮಾತ್ರ ಮನೆಯಲ್ಲಿದ್ದರು. ಕೆಲ ಹೊತ್ತು ಬಿಟ್ಟು ಮೈದುನ ಮನೆಗೆ ವಾಪಸು ಬಂದಾಗ, ಗೃಹಿಣಿ ಮೃತದೇಹ ಕಂಡಿತ್ತು’ ಎಂದೂ ಮೂಲಗಳು ತಿಳಿಸಿವೆ.

‘ಚಾಕುವಿನಿಂದ ಗೃಹಿಣಿಯ ಕತ್ತು ಕೊಯ್ಯಲಾಗಿದೆ. ನಂತರ, ಅದೇ ಚಾಕುವನ್ನು ಮೃತರ ಕೈಯಲ್ಲಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ. ಮನೆಯಲ್ಲಿ ಯಾವುದೇ ವಸ್ತುಗಳು ಕಳುವಾಗಿಲ್ಲ. ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದೆ’ ಎಂದೂ ಮೂಲಗಳು ಹೇಳಿವೆ.

ಬಾಲಕಿಯ ರಕ್ಷಿಸಿದ ರೈಲ್ವೆ ‘ಶಕ್ತಿ’: ತಂದೆಯ ಕಿರುಕುಳ ತಾಳಲಾರದೇ ಮನೆ ಬಿಟ್ಟು ಬಂದಿದ್ದ ಬಾಲಕಿಯನ್ನು ರೈಲ್ವೆ ಇಲಾಖೆಯ ‘ಶಕ್ತಿ’ ರಕ್ಷಣಾ ಪಡೆಯ ಸದಸ್ಯರು ರಕ್ಷಿಸಿದ್ದಾರೆ.

‘ಬಿಹಾರದ ಬಾಲಕಿ, ಯಾರಿಗೂ ಹೇಳದೇ ಮನೆ ಬಿಟ್ಟು ಬಂದಿದ್ದಳು. ಸಂಗಮಿತ್ರ ರೈಲು ಹತ್ತಿದ್ದಳು. ಕೆ.ಆರ್. ಪುರ ಹಾಗೂ ಬಂಗಾರಪೇಟೆ ನಡುವೆ ರೈಲು ಸಾಗುತ್ತಿದ್ದಾಗ ರಕ್ಷಣಾ ಪಡೆಯ ಸದಸ್ಯರ ಕಣ್ಣಿಗೆ ಬಾಲಕಿ ಬಿದ್ದಿದ್ದಳು’ ಎಂದು ಮೂಲಗಳು ಹೇಳಿವೆ.

‘ಬಾಲಕಿಯನ್ನು ಮಾತನಾಡಿಸಿದಾಗ, ತಂದೆ ನೀಡುತ್ತಿದ್ದ ಲೈಂಗಿಕ ಕಿರುಕುಳದ ಬಗ್ಗೆ ವಿವರಿಸಿದ್ದಳು. ಬಾಲಕಿಯನ್ನು ಸದ್ಯ ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

ಚಿತ್ರಾವಳಿ

‘ಬೆಂಗಳೂರು ಹುಡುಗರು’ ತಂಡವು ಬನ್ನಪ್ಪ ಪಾರ್ಕ್‌ನಲ್ಲಿರುವ ಬಿಬಿಎಂಪಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಲಸೂರು ಗೇಟ್ ಪೊಲೀಸ್ ಠಾಣೆಯ ಎಸಿಪಿ ನಜ್ಮಾ ಫಾರೂಕಿ ಅವರು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶನಿವಾರ ರೋಗ ಪ್ರತಿರೋಧಕ ಶಕ್ತಿ ಹೆಚ್ಚಿಸುವ ಕಿಟ್ (ಒಣ ಹಣ್ಣು, ಹಾಲಿನ ಪುಡಿ, ಬಿಸ್ಕತ್, ಎನ್–95 ಮುಖಗವಸು ಹಾಗೂ ಸ್ಯಾನಿಟೈಸರ್) ವಿತರಿಸಿದರು

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಗುರುಸಾರ್ವಭೌಮ ನಗರ ಹಾಗೂ ಸುವರ್ಣ ಬಡಾವಣೆಗಳಲ್ಲಿ ನಿರ್ಮಿಸಿರುವ ಉದ್ಯಾನಗಳನ್ನು ವಸತಿ ಸಚಿವ ವಿ.ಸೋಮಣ್ಣ ಅವರ ನೇತೃತ್ವದಲ್ಲಿ ಸಂಸದ ತೇಜಸ್ವಿ ಸೂರ್ಯ ಹಾಗೂ ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ ಉದ್ಘಾಟಿಸಿದರು. ಮುಖಂಡರಾದ ವಿಶ್ವನಾಥ ಗೌಡ, ಸವಿತಾ ಕೃಷ್ಣ, ದಾಸೇಗೌಡ, ಶಕುಂತಲಾ, ವಾಗೀಶ್ ಹಾಗೂ ಇತರರು ಇದ್ದರು

ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ತಮ್ಮ ನಿವಾಸದಲ್ಲಿ ಸಿನಿಮಾ ರಂಗದ ಕಾರ್ಮಿಕರಿಗೆ ದಿನಸಿ ಕಿಟ್‌ಗಳನ್ನು ಶನಿವಾರ ವಿತರಿಸಿದರು

ನಿಧನ ವಾರ್ತೆ

ಕಲಾವಿದ ಕಬ್ಬಡ್ಡಿ ರಾಮಚಂದ್ರ

ಬೆಂಗಳೂರು: ರಂಗಭೂಮಿ ಕಲಾವಿದ ಹಾಗೂ ಸಂಘಟಕ ಕಬ್ಬಡ್ಡಿ ರಾಮಚಂದ್ರ (64) ಅವರು ಶನಿವಾರ ನಿಧನರಾದರು.

ಕೆಲ ದಿನಗಳ ಹಿಂದಷ್ಟೇ ಅವರಿಗೆ ಮಿದುಳಿನ ಗೆಡ್ಡೆ (ಬ್ರೈನ್ ಟ್ಯೂಮರ್) ತೆರವಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಇಸ್ರೊ ಬಡಾವಣೆಯ ವಸಂತಪುರದ ತಮ್ಮ ನಿವಾಸದಲ್ಲಿ ಬೆಳಿಗ್ಗೆ 10 ಗಂಟೆಗೆ ಅವರು ಮೃತಪಟ್ಟರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅವರ ನಿವಾಸದಲ್ಲಿಯೇ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಚಾಮರಾಜಪೇಟೆಯ ಟಿ.ಆರ್.ಮಿಲ್ ಚಿತಾಗಾರದಲ್ಲಿ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು.

ರಾಮಚಂದ್ರ ಅವರು ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು. ಸಾಮಾಜಿಕ ಸಂದೇಶ ಸಾರುವ ನಾಟಕಗಳಲ್ಲಿ ಅವರು ಹೆಚ್ಚಾಗಿ ಅಭಿನಯಿಸಿದ್ದರು. ಕಲಾವಿದರ ಬಳಗ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಅವರು, ಯುವ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ನಾಟಕ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಸೇರಿದಂತೆ ವಿವಿಧ ಖಾಸಗಿ ಸಂಘ–ಸಂಸ್ಥೆಗಳ ಪ್ರಶಸ್ತಿಗಳು ಅವರಿಗೆ ಸಂದಿವೆ.

ಕುಸ್ತಿಪಟು ಮುನಿ



ಕೋಲಾರ: ರಾಜ್ಯದ ಹೆಸರಾಂತ ಕುಸ್ತಿಪಟು ಮುನಿ (88) ಅವರು ತಾಲ್ಲೂಕಿನ ಹೂಹಳ್ಳಿಯಲ್ಲಿ ಶನಿವಾರ ನಿಧನರಾದರು.

ಮುನಿ ಅವರು ಕರ್ನಾಟಕ ಹಾಗೂ ಹೊರ ರಾಜ್ಯಗಳಲ್ಲಿ ನಡೆದ ಕುಸ್ತಿ ಸ್ಪರ್ಧೆಗಳಲ್ಲಿ ಗೆದ್ದು ಪ್ರಶಸ್ತಿ ಗಳಿಸಿದ್ದರು. ಅಲ್ಲದೇ, ಕಿಲಾರಿಪೇಟೆಯ ಗೋಕುಲ ಗರಡಿ ಮನೆ, ಶಿವಗಿರಿ ಗರಡಿ ಮನೆ ಸೇರಿದಂತೆ ಜಿಲ್ಲೆಯ ನೂರಾರು ಕುಸ್ತಿಪಟುಗಳಿಗೆ ಅಚ್ಚುಮೆಚ್ಚಿನ ಗುರುವಾಗಿದ್ದರು.

ಅವರಿಗೆ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಪಾನಮತ್ತ ಚಾಲನೆ ಕಂಬಕ್ಕೆ ಗುದ್ದಿದ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲ್ಯಾವೆಲ್ಲೆ ರಸ್ತೆಯಲ್ಲಿ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಕಾರು ಜಖಂಗೊಂಡಿದೆ.

‘ಕುಡಿದ ಮತ್ತಿನಲ್ಲಿದ್ದ ಎನ್ನಲಾದ ಚಾಲಕ, ಅತಿ ವೇಗದಿಂದ ಕಾರು ಚಲಾಯಿಸಿದ್ದ. ನಿಯಂತ್ರಣ ಕಳೆದುಕೊಂಡು ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಕಾರು ಗುದ್ದಿಸಿದ್ದ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ಸಂಭವಿಸಿದೆ. ಸದ್ಯಕ್ಕೆ ಯಾವುದೇ ದೂರು ದಾಖಲಾಗಿಲ್ಲ.

ಆನೆ ದಾಳಿ: ವೃದ್ಧೆ ಸಾವು

ಬಂಗಾರಪೇಟೆ: ತಾಲ್ಲೂಕಿನ ಗುಲ್ಲಹಳ್ಳಿ ಗ್ರಾಮದ ವೃದ್ಧೆ ಸಿದ್ದಮ್ಮ (59) ಅವರು ಒಂಟಿ ಸಲಗದ ದಾಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಗೊಡುಗುಮಂದೆ ಗ್ರಾಮದಲ್ಲಿ ಇದ್ದ ತನ್ನ ಮೊಮ್ಮಗನನ್ನು ನೋಡಲು ತೆರಳುತ್ತಿದ್ದ ಸಂದರ್ಭ ಮಾರ್ಗ ಮಧ್ಯದಲ್ಲಿ ಆನೆ ದಾಳಿ ನಡೆಸಿದೆ.

ಮೃತಳ ಕುಟುಂಬಕ್ಕೆ ₹7.5 ಲಕ್ಷ ಪರಿಹಾರ ನೀಡುವುದಾಗಿ ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕಲಬುರ್ಗಿಯಲ್ಲಿ ಸಿ.ಎಂ ಯಡಿಯೂರಪ್ಪ ಹೇಳಿಕೆ

‘ಸಚಿವ ಸಂಪುಟ ಪುನಾರಚನೆ ಇಲ್ಲ’

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆಯ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

‘ಆ ಬಗ್ಗೆ ಯಾವ ಚಿಂತನೆಯೂ ಇಲ್ಲ. ಹಾಗೇನಾದರೂ ಇದ್ದರೆ ಮುಂದೆ ತಿಳಿಸುತ್ತೇನೆ’ ಎಂದು ಶನಿವಾರ ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಕೆಆರ್‌ಎಸ್ ಸುತ್ತಮುತ್ತ ಅಕ್ರಮ ಗಣಿಗಾರಿಕೆ ಆರೋಪಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಶೋಭಾರಿಂದ ಉತ್ತಮ ಕೆಲಸ: ಕಲಬುರ್ಗಿಯಲ್ಲಿ ತರಕಾರಿ ಮಾರುಕಟ್ಟೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಯಡಿಯೂರಪ್ಪ, ‘ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ನೂತನ ಕೃಷಿ ಮತ್ತು ರೈತರ ಕಲ್ಯಾಣ ಸಚಿವೆಯಾಗಿರುವ ಶೋಭಾ ಕರಂದ್ಲಾಜೆ ಅವರು ನಿಸ್ಸಂದೇಹವಾಗಿ ರೈತರ ಸಂಕಟಗಳಿಗೆ ಸ್ಪಂದಿಸಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಶೋಭಾ ಜನನಾಯಕಿಯಾಗಿದ್ದು, ಹೋದಲ್ಲೆಲ್ಲ ಅವರ ಮಾತುಗಳನ್ನು ಕೇಳಲು ಜನರು ಸಾಕಷ್ಟು ಸಂಖ್ಯೆಯಲ್ಲಿ ಸೇರುತ್ತಿದ್ದರು. ಈಗ ಸಚಿವೆಯೂ ಆಗಿರುವುದರಿಂದ ದೇಶದೆಲ್ಲೆಡೆ ಸಂಚರಿಸಿ ರೈತರ ಸಮಸ್ಯೆಗಳನ್ನು ಆಲಿಸಲಿದ್ದಾರೆ’ ಎಂದರು.

‘ನಮ್ಮ ಸರ್ಕಾರ ಹೈದರಾಬಾದ್ ಕರ್ನಾಟಕ ಹೆಸರನ್ನು ಕಲ್ಯಾಣ ಕರ್ನಾಟಕ ಎಂದು ಬದಲಿಸಿ ಸುಮ್ಮನಾಗಲಿಲ್ಲ. ಕಳೆದ ಬಜೆಟ್‌ನಲ್ಲಿ ಈ ಭಾಗದ ಜಿಲ್ಲೆಗಳಿಗೆ ನಂಜುಂಡಪ್ಪ ವರದಿ ಅನುಸಾರ ₹ 3000 ಕೋಟಿ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ₹ 1500 ಕೋಟಿ ಹಂಚಿಕೆ ಮಾಡಿದ್ದೇವೆ’ ಎಂದರು.



ಕಲಬುರ್ಗಿಯಲ್ಲಿ ಶನಿವಾರ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಅವರು ರೈತರೊಬ್ಬರಿಗೆ ಕಲಬುರ್ಗಿ–ಯಾದಗಿರಿ ಡಿಸಿಸಿ ಬ್ಯಾಂಕ್ ವತಿಯಿಂದ ನೀಡಲಾದ ಬಡ್ಡಿ ರಹಿತ ಸಾಲದ ಚೆಕ್ ವಿತರಿಸಿದರು. ಕೆಕೆಆರ್‌ಡಿಬಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ, ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಪಾಟೀಲ ತೆಲ್ಕೂರ, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಇದ್ದರು

‘ಅಭಿವೃದ್ಧಿಗೆ ಗಮನ ಕೊಡಿ’

‘ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಈ ರೀತಿ ಕಚ್ಚಾಡುವುದು ಸರಿಯಲ್ಲ. ಎಲ್ಲರೂ ಸಹೋದರರಂತೆ ಬಾಳುವುದನ್ನು ಕಲಿಯಬೇಕು. ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಒಟ್ಟಾಗಿ ಹೋಗಬೇಕು’ ಎಂದು ಬಿ.ಎಸ್. ಯಡಿಯೂರಪ್ಪ ಸಲಹೆ ನೀಡಿದರು.

ಜನಸಂಖ್ಯಾ ನಿಯಂತ್ರಣ ಕರಡು ಮಸೂದೆ ಬಿಡುಗಡೆ ಮಾಡಿದ ಉತ್ತರ ಪ್ರದೇಶ ಸರ್ಕಾರ

‘2 ಮಕ್ಕಳ ನೀತಿ ಉಲ್ಲಂಘನೆ: ಸರ್ಕಾರಿ ನೌಕರಿ ಇಲ್ಲ’

ಲಖನೌ (ಪಿಟಿಐ): ‘ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿದವರಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ. ಅವರು ಸರ್ಕಾರಿ ನೌಕರಿಗೆ ಅರ್ಜಿ ಸಲ್ಲಿಸುವಂತಿಲ್ಲ ಮತ್ತು ಅಂತಹವರಿಗೆ ಬಡ್ತಿ ದೊರೆಯುವುದಿಲ್ಲ. ರಾಜ್ಯ ಸರ್ಕಾರದ ಯಾವುದೇ ಸಹಾಯಧನ ದೊರೆಯುವುದಿಲ್ಲ’ ಎಂದು ಉತ್ತರ ಪ್ರದೇಶದ ಜನಸಂಖ್ಯಾ ನಿಯಂತ್ರಣ ಕರಡು ಮಸೂದೆ-2021ರಲ್ಲಿ ಹೇಳಲಾಗಿದೆ.

ರಾಜ್ಯದ ಜನಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ತರಲಾಗುತ್ತಿರುವ ‘ಉತ್ತರ ಪ್ರದೇಶ ಜನಸಂಖ್ಯಾ (ನಿಯಂತ್ರಣ, ಸ್ಥಿರತೆ ಮತ್ತು ಕಲ್ಯಾಣ) ಮಸೂದೆ-2021’ರ ಕರಡನ್ನು ರಾಜ್ಯದ ಕಾನೂನು ಇಲಾಖೆ ಬಿಡುಗಡೆ ಮಾಡಿದ್ದು, ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

‘ಜನಸಂಖ್ಯೆಯ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರವು ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು’ ಎಂದು ಮಸೂದೆಯಲ್ಲಿ ಶಿಫಾರಸು ಮಾಡಲಾಗಿದೆ.

‘ರಾಜ್ಯದ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲ ಬಹಳ ಸೀಮಿತವಾದುದು. ರಾಜ್ಯದ ಪ್ರತಿಯೊಬ್ಬರಿಗೂ ಆಹಾರ, ಶುದ್ಧ ಕುಡಿಯುವ ನೀರು, ವಸತಿ, ಗುಣಮಟ್ಟದ ಶಿಕ್ಷಣ, ಆರ್ಥಿಕ ಮತ್ತು ಔದ್ಯೋಗಿಕ ಅವಕಾಶಗಳು, ವಿದ್ಯುತ್ ಸಂಪರ್ಕ ಮತ್ತು ಭದ್ರತೆಯನ್ನು ಒದಗಿಸಬೇಕಿದೆ. ಈ ಎಲ್ಲಾ ಗುರಿಗಳನ್ನು ಮುಟ್ಟಲು ಜನಸಂಖ್ಯೆಯನ್ನು ನಿಯಂತ್ರಿಸುವುದು ಅನಿವಾರ್ಯ. ಜನಸಂಖ್ಯೆಯ ನಿಯಂತ್ರಣದಿಂದ ಮಾತ್ರವೇ ಈ ಸಂಪನ್ಮೂಲಗಳನ್ನು ಸಮಾನವಾಗಿ ಹಂಚಿಕೆ ಮಾಡಲು ಸಾಧ್ಯ’ ಎಂದು ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

ಜನಸಂಖ್ಯೆಯನ್ನು ನಿಯಂತ್ರಿಸಲು, ಸ್ಥಿರಗೊಳಿಸಲು ಮತ್ತು ಜನರ ಕಲ್ಯಾಣವನ್ನು ಸಾಧಿಸಲು, ಕೈಗೆಟುಕುವ ದರದಲ್ಲಿ ಉತ್ತಮ ಆರೋಗ್ಯ ಸೇವೆಯ ಸವಲತ್ತನ್ನು ಒದಗಿಸಬೇಕು ಎಂದು ಕರಡು ಮಸೂದೆಯಲ್ಲಿ ಶಿಫಾರಸು ಮಾಡಲಾಗಿದೆ.

ಉತ್ತೇಜನ ಕ್ರಮ

ಎರಡು ಮಕ್ಕಳ ನೀತಿಯನ್ನು ಪಾಲಿಸುವಂತೆ ಮತ್ತು ಪಾಲಿಸುವವರಿಗೆ ಉತ್ತೇಜನ ನೀಡುವ ಸಲುವಾಗಿ ಜನಸಂಖ್ಯಾ ನಿಯಂತ್ರಣ ಕರಡು ಮಸೂದೆಯಲ್ಲಿ ಕೆಲವಾರು ಕ್ರಮಗಳನ್ನು ಸೂಚಿಸಲಾಗಿದೆ. ಎರಡು ಮಕ್ಕಳ ನೀತಿಯನ್ನು ಅನುಸರಿಸುವ ಸರ್ಕಾರಿ ನೌಕರರಿಗೆ ಇದು ಅನ್ವಯವಾಗುತ್ತದೆ ಎಂದು ಕರಡು ಮಸೂದೆಯಲ್ಲಿ ಹೇಳಲಾಗಿದೆ

- ಒಟ್ಟು ಸೇವಾವಧಿಯಲ್ಲಿ ಎರಡು ಹೆಚ್ಚುವರಿ ವೇತನ ಬಡ್ತಿ
- ಪೂರ್ಣ ವೇತನ ಮತ್ತು ಭತ್ಯೆ ಸಹಿತ 12 ತಿಂಗಳ ಅವಧಿಯ ತಾಯ್ತನ/ಪಿತೃತ್ವ ರಜೆ
- ರಾಷ್ಟ್ರೀಯ ಪಿಂಚಣಿ ಯೋಜನೆ ಅಡಿ, ಉದ್ಯೋಗದಾತರ ಕೊಡುಗೆಯಲ್ಲಿ ಶೇ 3ರಷ್ಟು ಹೆಚ್ಚುವರಿ ಕೊಡುಗೆ

ಜಾಗೃತಿ ಮತ್ತು ಅನುಷ್ಠಾನ

ಜನಸಂಖ್ಯೆ ನಿಯಂತ್ರಣದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಮತ್ತು ಜನಸಂಖ್ಯೆ ನಿಯಂತ್ರಣವನ್ನು ಅನುಷ್ಠಾನಕ್ಕೆ ತರಲು ಒಂದು ವ್ಯವಸ್ಥೆಯನ್ನು ರೂಪಿಸಬೇಕು ಎಂದು ಕರಡು ಮಸೂದೆಯಲ್ಲಿ ಹೇಳಲಾಗಿದೆ

- ಜನಸಂಖ್ಯೆ ನಿಯಂತ್ರಣ ಕಾರ್ಯಕ್ರಮವನ್ನು ಸಾಧಿಸಲು ರಾಜ್ಯ ನಿಧಿಯೊಂದನ್ನು ಸ್ಥಾಪಿಸಬೇಕು
- ರಾಜ್ಯದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಾಯ್ತನ ಆರೈಕೆ ಕೇಂದ್ರಗಳನ್ನು ಆರಂಭಿಸಬೇಕು
- ಈ ಕೇಂದ್ರಗಳು ಮತ್ತು ಸ್ವಯಂಸೇವಾ ಸಂಘಟನೆಗಳ ನೆರವಿನೊಂದಿಗೆ ಜನಸಂಖ್ಯೆ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸಬೇಕು
- ಈ ಕೇಂದ್ರಗಳ ಮೂಲಕ ಗರ್ಭಧಾರಣೆ ನಿರೋಧಕ ಮಾತ್ರೆಗಳು ಮತ್ತು ಸಲಕರಣೆಗಳನ್ನು ವಿತರಣೆ ಮಾಡಬೇಕು
- ಕುಟುಂಬ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಸಮುದಾಯ ಆರೋಗ್ಯ ಕಾರ್ಯಕರ್ತರ ಮೂಲಕ ಜನರಲ್ಲಿ ಅರಿವು ಮೂಡಿಸಬೇಕು
- ಗರ್ಭಧಾರಣೆ, ಹೆರಿಗೆ, ಜನನ ಮತ್ತು ಮರಣ ನೋಂದಣಿಯನ್ನು ಕಡ್ಡಾಯವಾಗಿ ಮಾಡಿಸಬೇಕು
- ಪ್ರೌಢಶಾಲಾ ಶಿಕ್ಷಣದ ಪಠ್ಯಕ್ರಮದಲ್ಲಿ ಜನಸಂಖ್ಯೆ ನಿಯಂತ್ರಣದ ಬಗ್ಗೆ ಕಡ್ಡಾಯವಾಗಿ ಬೋಧಿಸಬೇಕು

‘ತುರ್ತು ಸಂದರ್ಭದ ಬಳಕೆಗೆ ಕೋವ್ಯಾಕ್ಸಿನ್: 6 ವಾರಗಳಲ್ಲಿ ನಿರ್ಧಾರ’

ನವದೆಹಲಿ (ಪಿಟಿಐ): ‘ತುರ್ತು ಬಳಕೆಗೆ ಭಾರತ್ ಬಯೊಟೆಕ್ ಸಂಸ್ಥೆಯ ಕೋವ್ಯಾಕ್ಸಿನ್ ಲಸಿಕೆಗೆ ಅನುಮೋದನೆ ಕುರಿತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) 4 ರಿಂದ 6 ವಾರಗಳಲ್ಲಿ ತೀರ್ಮಾನಿಸುವ ಸಂಭವವಿದೆ’ ಎಂದು ಡಬ್ಲ್ಯುಎಚ್‌ಒದ ಮುಖ್ಯ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ತಿಳಿಸಿದ್ದಾರೆ.

ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸ್‌ಇ) ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ‘ಕೋವ್ಯಾಕ್ಸಿನ್ ಲಸಿಕೆ ಡಬ್ಲ್ಯುಎಚ್‌ಒ ಪರಿಶೀಲನೆಯಲ್ಲಿದೆ. ಭಾರತ್ ಬಯೊಟೆಕ್ ಸಂಸ್ಥೆಯು ಪೂರಕ ದಾಖಲೆಗಳನ್ನು ಡಬ್ಲ್ಯುಎಚ್‌ಒ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುತ್ತಿದೆ’ ಎಂದು ತಿಳಿಸಿದರು.

ಡಬ್ಲ್ಯುಎಚ್‌ಒ ಮಾರ್ಗದರ್ಶಿ ಸೂತ್ರಗಳ ಅನುಸಾರ, ‘ತುರ್ತು ಸಂದರ್ಭದಲ್ಲಿ ಬಳಸಬಹುದಾದ ಔಷಧ, ಲಸಿಕೆಗಳ ತುರ್ತು ಬಳಕೆ ಪಟ್ಟಿಗೆ (ಇಯುಎಲ್) ಸೇರಿಸಲು ಕೆಲ ಪ್ರಕ್ರಿಯೆಗಳಿವೆ. ಕಂಪನಿಯು ಲಸಿಕೆಯ ಮೂರು ಹಂತದ ಪ್ರಯೋಗಗಳನ್ನು ಪೂರೈಸಿದ್ದು, ಪೂರಕ ಅಂಕಿ-ಅಂಶಗಳನ್ನು ಸಲ್ಲಿಸಬೇಕಾಗುತ್ತದೆ. ಅದನ್ನು ವಿಶ್ವ ಆರೋಗ್ಯ ಸಂಸ್ಥೆಯ ಪರಿಣತ ಸಲಹಾ ಸಂಸ್ಥೆ ಪರಿಶೀಲಿಸಲಿದೆ’ ಎಂದು ಅವರು ತಿಳಿಸಿದರು.

ಕೋವಿಡ್ ಕ್ಷೀಣಿಸುತ್ತಿಲ್ಲ: ಕೊರೊನಾ ಸೋಂಕು ವಿಶ್ವದಾದ್ಯಂತ ಹಲವು ಪ್ರದೇಶಗಳಲ್ಲಿ ಹೆಚ್ಚುತ್ತಿದೆ. ಡೆಲ್ಟಾ ತಳಿ ಹರಡುತ್ತಿರುವುದು ಕೋವಿಡ್ ಪರಿಸ್ಥಿತಿಯು ಕ್ಷೀಣಿಸುತ್ತಿಲ್ಲ ಎಂಬುದರ ಸೂಚನೆಯಾಗಿದೆ ಎಂದು ಸೌಮ್ಯಾ ಸ್ವಾಮಿನಾಥನ್ ಅಭಿಪ್ರಾಯಪಟ್ಟರು.

ಕಳೆದ 24 ಗಂಟೆಗಳ ಅವಧಿಯಲ್ಲಿ ವಿಶ್ವಾದಾದ್ಯಂತ ಸುಮಾರು 5 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. ಸುಮಾರು 9,300 ಜನರು ಸತ್ತಿದ್ದಾರೆ. ಅಂದರೆ ಇದರರ್ಥ ಕೋವಿಡ್ ಪರಿಣಾಮ ಕಡಿಮೆ ಆಗುತ್ತಿಲ್ಲ ಎಂಬುದೇ ಆಗಿದೆ ಎಂದು ಹೇಳಿದರು.

ಕೋವಿಡ್ ಮೂರನೇ ಅಲೆ: ಸಲಹಾ ಸಮಿತಿ ಎಚ್ಚರಿಕೆ ಕಡೆಗಣನೆ

19 ಜಿಲ್ಲೆ: ಸರಾಸರಿಗಿಂತ ಕಡಿಮೆ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಹತ್ತು ಲಕ್ಷ ಜನರಿಗೆ ನಡೆಸಲಾಗುತ್ತಿರುವ ಕೋವಿಡ್ ಪರೀಕ್ಷೆಗಳ ಸಂಖ್ಯೆಯು 19 ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿ 21,151ಕ್ಕಿಂತ ಕಡಿಮೆಯಿದೆ.

ರಾಯಚೂರಿನಲ್ಲಿ ಕನಿಷ್ಠ (6,496) ಹಾಗೂ ದಕ್ಷಿಣ ಕನ್ನಡದಲ್ಲಿ ಗರಿಷ್ಠ ಪರೀಕ್ಷೆ (39,578) ನಡೆಸಲಾಗುತ್ತಿದೆ. ರಾಜ್ಯ ಕೋವಿಡ್ ವಾರ್ ರೂಮ್ ಬೆಂಗಳೂರನ್ನು ಹೊರತುಪಡಿಸಿ, ಉಳಿದ 29 ಜಿಲ್ಲೆಗಳಲ್ಲಿ ಕಳೆದ 10 ದಿನಗಳಲ್ಲಿ ನಡೆಸಲಾದ ಪರೀಕ್ಷೆಗಳ ಆಧಾರದಲ್ಲಿ ವಿಶ್ಲೇಷಣೆ ಮಾಡಿದೆ. ಕೋವಿಡ್ ಮೂರನೇ ಅಲೆಯು ಅಕ್ಟೋಬರ್ ಅಥವಾ ನವೆಂಬರ್ ಬಳಿಕ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಲೆಕ್ಕಾಚಾರ ಹಾಕಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಮುನ್ನೆಚ್ಚರಿಕೆ ಕ್ರಮವಾಗಿ ಅಧಿಕ ಸಂಖ್ಯೆಯಲ್ಲಿ ಪರೀಕ್ಷೆ ಹಾಗೂ ಸಂಪರ್ಕ ಪತ್ತೆ ಕಾರ್ಯ ನಡೆಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ದೃಢ ಪ್ರಮಾಣ 12 ಜಿಲ್ಲೆಗಳಲ್ಲಿ ಶೇ 2ಕ್ಕಿಂತ ಅಧಿಕ

ರಾಜ್ಯದಲ್ಲಿ ಕಳೆದ ಒಂದು ವಾರದಲ್ಲಿ ವರದಿಯಾದ ಕೋವಿಡ್ ಪ್ರಕರಣಗಳ ಅನುಸಾರ ಸೋಂಕು ದೃಢ ಪ್ರಮಾಣವು ಶೇ 1.77ರಷ್ಟಿದೆ. ಈ ಪ್ರಮಾಣ 12 ಜಿಲ್ಲೆಗಳಲ್ಲಿ ಶೇ 2ಕ್ಕಿಂತ ಅಧಿಕವಿದೆ. ಕೊಡಗಿನಲ್ಲಿ ಗರಿಷ್ಠ (ಶೇ 6.14) ಹಾಗೂ ಬಾಗಲಕೋಟೆಯಲ್ಲಿ ಕನಿಷ್ಠ (ಶೇ 0.19) ಇದೆ. ಹಾಸನ (ಶೇ 5.24), ಚಿಕ್ಕಮಗಳೂರು (ಶೇ 4.66), ಉಡುಪಿ (ಶೇ 4.02), ಚಾಮರಾಜನಗರ (ಶೇ 3.47), ಮೈಸೂರು (ಶೇ 3.33), ಶಿವಮೊಗ್ಗ (ಶೇ 3.5) ಜಿಲ್ಲೆಯಲ್ಲಿ ಸೋಂಕು ದೃಢ ಪ್ರಮಾಣವು ರಾಜ್ಯದ ಸರಾಸರಿಗೆ ಹೋಲಿಸಿದಲ್ಲಿ ಅಧಿಕವಿದೆ. ಉಳಿದ ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 3ಕ್ಕಿಂತ ಕಡಿಮೆಯಿದೆ.

ಕಳೆದ ವರ್ಷಾಂತ್ಯಕ್ಕೆ ಎರಡನೇ ಅಲೆಯ ಎಚ್ಚರಿಕೆ ನೀಡಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರು, ಪ್ರತಿನಿತ್ಯ ಸರಾಸರಿ 1.50 ಲಕ್ಷ ಪರೀಕ್ಷೆಗಳನ್ನು ನಡೆಸಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಮಾರ್ಚ್ ತಿಂಗಳಲ್ಲಿ ಹೊಸ ಪ್ರಕರಣಗಳು ಏರಿಕೆ ಕಂಡ ಕಾರಣ ಕೆಲ ದಿನಗಳು ಲಕ್ಷಕ್ಕೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು. ಏಪ್ರಿಲ್ ಕಡೆಯ ವಾರದಲ್ಲಿ ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿಯ ಆಸುಪಾಸಿಗೆ ತಲುಪಿತ್ತು. ಆ ವೇಳೆ ಪರೀಕ್ಷೆಗಳ ಸಂಖ್ಯೆಯ ಸಂಖ್ಯೆಯನ್ನು 1.90 ಲಕ್ಷಕ್ಕೆ ಏರಿಕೆ ಮಾಡಲಾಗಿತ್ತು.

10 ಜಿಲ್ಲೆಗಳಲ್ಲಿ ಅಧಿಕ: ಮೇ ತಿಂಗಳಲ್ಲಿ ಸೋಂಕು ದೃಢ ಪ್ರಮಾಣವು ಶೇ 40ರ ಗಡಿಗೆ ಏರಿಕೆಯಾದಾಗ ಪರೀಕ್ಷೆಗಳ ಸಂಖ್ಯೆಯನ್ನು 93 ಸಾವಿರಕ್ಕೆ ಇಳಿಕೆ ಮಾಡಲಾಗಿತ್ತು. ಈಗ ಶೇ 5 ರೊಳಗಡೆ ದೃಢ ಪ್ರಮಾಣವಿದ್ದು, ಪ್ರತಿನಿತ್ಯ ಸರಾಸರಿ 1.50 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗುತ್ತಿದೆ. ಆದರೆ, 10 ಜಿಲ್ಲೆಗಳಲ್ಲಿ ಮಾತ್ರ ಅಧಿಕ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಹಾಗೂ ಜನರ ಹಿಂಜರಿಕೆಯೇ ಕೆಲ ಜಿಲ್ಲೆಗಳಲ್ಲಿ ಪರೀಕ್ಷೆಗಳ ಸಂಖ್ಯೆ ಕಡಿಮೆಯಾಗಲು ಕಾರಣ ಎನ್ನಲಾಗುತ್ತಿದೆ.

ಪ್ರತಿ 10 ಲಕ್ಷ ಮಂದಿಗೆ ಬಳ್ಳಾರಿ (7,236), ಬೆಳಗಾವಿ (8,063), ವಿಜಯಪುರ (8,135), ಕಲಬುರ್ಗಿ (8,313) ಹಾಗೂ ಕೊಪ್ಪಳ (8,323) ಜಿಲ್ಲೆಯಲ್ಲಿ 10 ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಕೊಡಗು (37,288), ಮೈಸೂರು (31,091), ಮಂಡ್ಯ (27,000), ಚಿಕ್ಕಮಗಳೂರು (25,853), ಬೆಂಗಳೂರು ಗ್ರಾಮಾಂತರ (25,794) ಹಾಗೂ ಹಾಸನದಲ್ಲಿ (25,699) 25 ಸಾವಿರಕ್ಕೂ ಅಧಿಕ ಪರೀಕ್ಷೆಗಳು ನಡೆಯುತ್ತಿವೆ.

ಉತ್ತರ ಪ್ರದೇಶದ ಕೆಲವೆಡೆ ಮಳೆಯಿಂದ ಪ್ರವಾಹ ಸ್ಥಿತಿ ನಿರ್ಮಾಣವಾಗಿದ್ದು, ಮುಜಾಫರಪುರದಲ್ಲಿನ ಪ್ರವಾಹ ಪೀಡಿತ ಪ್ರದೇಶವೊಂದರಲ್ಲಿ ಜನರಿಗೆ ಕೋವಿಡ್ ಲಸಿಕೆ ಹಾಕಿಸಲು ಆರೋಗ್ಯ ಸಿಬ್ಬಂದಿ ಶನಿವಾರ ದೋಣಿಯಲ್ಲಿ ತೆರಳಿದರು —ಪಿಟಿಐ ಚಿತ್ರ

ದೇಶದಲ್ಲಿ 42,766 ಹೊಸ ಕೋವಿಡ್ ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ‘ದೇಶದಲ್ಲಿ ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ 42,766 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಮೂಲಕ ದೇಶದ ಒಟ್ಟು ಪ್ರಕರಣಗಳ ಸಂಖ್ಯೆ 3,07,95,716ಕ್ಕೆ ಏರಿಕೆಯಾಗಿದೆ. ಇದೇ ವೇಳೆ ಸಕ್ರಿಯ ಪ್ರಕರಣಗಳು 4,55,033ಕ್ಕೆ ಇಳಿಕೆಯಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಶನಿವಾರ ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ 1,206 ಮಂದಿ ಮೃತಪಟ್ಟಿದ್ದಾರೆ. ಈ ಮೂಲಕ ಒಟ್ಟು ಮೃತರ ಸಂಖ್ಯೆ 4,07,145ಕ್ಕೆ ಹೆಚ್ಚಿದೆ. ದೇಶದ ಒಟ್ಟು ಪ್ರಕರಣಗಳ ಪೈಕಿ ಸಕ್ರಿಯ ಪ್ರಕರಣಗಳು ಶೇ 1.48ರಷ್ಟು ಪಾಲನ್ನು ಹೊಂದಿದ್ದರೆ, ದೇಶದ ಗುಣಮುಖರಾಗುವವರ ಪ್ರಮಾಣವು ಶೇಕಡ 97.20ರಷ್ಟಿದೆ.

‘ಶುಕ್ರವಾರ 19,55,225 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, ಈವರೆಗೆ 42,90,41,970 ಮಂದಿಯನ್ನು ಪರೀಕ್ಷಿಸಲಾಗಿದೆ. ದೇಶದಲ್ಲಿ ಪಾಸಿಟಿವಿಟಿ ದರವು ಶೇಕಡ 2.19ಕ್ಕೆ ಇಳಿಕೆಯಾಗಿದೆ. 2,99,33,538 ಮಂದಿ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಮರಣ ದರವು ಶೇಕಡ 1.32ರಷ್ಟಿದೆ’ ಎಂದು ಸಚಿವಾಲಯವು ಹೇಳಿದೆ.

ದೇಶದಲ್ಲಿ ಈವರೆಗೆ 37.21 ಕೋಟಿ ಲಸಿಕೆಯ ಡೋಸ್‌ಗಳನ್ನು ವಿತರಿಸಲಾಗಿದೆ.

ಮೆಕ್ಸಿಕೊ: ಮೂರನೇ ಅಲೆ ಪ್ರಾರಂಭ

ಮೆಕ್ಸಿಕೊ ನಗರ (ಎಪಿ): ಮೆಕ್ಸಿಕೊದಲ್ಲಿ ಕೋವಿಡ್–19 ಮೂರನೇ ಅಲೆ ಆರಂಭವಾಗಿದ್ದು, ಕಳೆದ ವಾರಕ್ಕಿಂತ ಸೋಂಕು ಪ್ರಮಾಣ ಶೇಕಡ 29ರಷ್ಟು ಹೆಚ್ಚಾಗಿದೆ.

‘ಈ ಬಾರಿ ಯುವಕರಲ್ಲಿ ಸೋಂಕು ಹೆಚ್ಚಾಗಿ ಕಾಣಿಸುತ್ತಿದೆ. ಈ ಹಿಂದಿನ ಅಲೆಯು ಸೆಪ್ಟೆಂಬರ್‌ನಲ್ಲಿ ಆರಂಭವಾಗಿತ್ತು. ಆಗ ಸೋಂಕು ಎಷ್ಟು ಪ್ರಮಾಣದಲ್ಲಿ ಇತ್ತೋ, ಅಷ್ಟೇ ಪ್ರಮಾಣದಲ್ಲಿ ಈಗ ಸೋಂಕು ಹರಡುತ್ತಿದೆ. ಕಳೆದ ಬಾರಿ ಜನವರಿಯಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿತ್ತು. ಜೂನ್ ವೇಳೆಗೆ ಕಡಿಮೆಯಾಗಿತ್ತು’ ಎಂದು ಮೆಕ್ಸಿಕೊದ ಆರೋಗ್ಯ ಇಲಾಖೆ ತಿಳಿಸಿದೆ.

‘ಲಸಿಕೆ ಅಭಿಯಾನದಿಂದಾಗಿ ಹಿರಿಯ ನಾಗರಿಕರಲ್ಲಿ ಸೋಂಕು ಗಂಭೀರ ಸ್ವರೂಪದಲ್ಲಿ ಕಾಣಿಸಿಕೊಂಡಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್: ಇಂಡೊನೇಷ್ಯಾದಲ್ಲಿ ಆಮ್ಲಜನಕ ಕೊರತೆ

ಜಕಾರ್ತ (ಎಪಿ): ಇಂಡೊನೇಷ್ಯಾದಲ್ಲಿ ಕೊರೊನಾ ಸೋಂಕು ಪ್ರಕರಣಗಳು ತೀವ್ರವಾಗಿ ಹೆಚ್ಚಾಗಿದ್ದು, ಆಮ್ಲಜನಕ ಕೊರತೆಯನ್ನು ಎದುರಿಸುತ್ತಿದೆ.

ಇಂಡೊನೇಷ್ಯಾ ಸರ್ಕಾರವು ಅವಶ್ಯಕ ವೈದ್ಯಕೀಯ ಸಾಮಗ್ರಿಗಳನ್ನು ಕಳುಹಿಸುವಂತೆ ಸಿಂಗಪುರ, ಚೀನಾ ಸೇರಿದಂತೆಇತರೆದೇಶಗಳಲ್ಲಿಮನವಿಮಾಡಿದೆ. ಭಾರತದಲ್ಲಿ ಸೋಂಕು ಉಲ್ಬಣಗೊಂಡಿದ್ದ ಸಂದರ್ಭದಲ್ಲಿ ಇಂಡೊನೇಷ್ಯಾ ಆಮ್ಲಜನಕ ಕಳುಹಿಸುವ ಮೂಲಕ ನೆರವಾಗಿತ್ತು.

‘1,000 ಆಮ್ಲಜನಕ ಸಿಲಿಂಡರ್‌ಗಳು, ಆಮ್ಲಜನಕ ಸಾಂದ್ರಕಗಳು, ವೆಂಟಿಲೇಟರ್ ಸೇರಿದಂತೆ ಇತರೆ ವೈದ್ಯಕೀಯ ಸಾಮಗ್ರಿಗಳು ಸಿಂಗಪುರದಿಂದ ಇಂಡೊನೇಷ್ಯಾಗೆ ಶುಕ್ರವಾರ ಬಂದಿವೆ. ಆಸ್ಟ್ರೇಲಿಯಾವು 1,000 ವೆಂಟಿಲೇಟರ್‌ಗಳನ್ನು ಕಳುಹಿಸಿದೆ’ ಎಂದು ಇಂಡೊನೇಷ್ಯಾದ ಸಚಿವ ಲುಹುತ್ ಬಿನ್ಸಾರ್ ಪಾಂಡ್‌ಜೈತಾನ್ ತಿಳಿಸಿದ್ದಾರೆ.

ರೌಡಿಗಳ ವಿರುದ್ಧ ಪೊಲೀಸರ ಕಾರ್ಯಾಚರಣೆ

ಕಾರಾಗೃಹದಲ್ಲಿ ಗಾಂಜಾ, ಮಾರಕಾಸ್ತ್ರ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಕೃತ್ಯ ಎಸಗುತ್ತ ಸಾರ್ವಜನಿಕರಲ್ಲಿ ಭಯವನ್ನು ಉಂಟುಮಾಡುತ್ತಿರುವ ರೌಡಿಗಳ ಮನೆಗಳು ಹಾಗೂ ಕೇಂದ್ರ ಕಾರಾಗೃಹದ ಮೇಲೆ ಶನಿವಾರ ಬೆಳಿಗ್ಗೆ ದಿಢೀರ್ ದಾಳಿ ನಡೆಸಿದರು.

ನಗರದ ಹೆಚ್ಚುವರಿ ಪೊಲೀಸ್ ಕಮಿಷನರ್ ಮುರುಗನ್ ನೇತೃತ್ವದಲ್ಲಿ 7 ವಿಭಾಗಗಳ ಪೊಲೀಸರು ಹಾಗೂ ಸಿಸಿಬಿ ಜಂಟಿ ಕಮಿಷನರ್ ನೇತೃತ್ವದ ತಂಡಗಳು ಏಕಕಾಲದಲ್ಲಿ ದಾಳಿ ಮಾಡಿ ಶೋಧ ನಡೆಸಿದವು. ಶ್ವಾನ ದಳ, ಮಾದಕ ವಸ್ತು ನಿಯಂತ್ರಣ ದಳ, ಲೋಹ ಶೋಧ ತಂಡದ ಸಿಬ್ಬಂದಿಯೂ ದಾಳಿಯಲ್ಲಿ ಭಾಗವಹಿಸಿದ್ದರು.

ಪ್ರತಿ ವಿಭಾಗದ ರೌಡಿಗಳ ಪಟ್ಟಿ ಸಿದ್ಧಪಡಿಸಿದ್ದ ಪೊಲೀಸರು, ಬೆಳಿಗ್ಗೆ ಅವರ ಮನೆ ಬಾಗಿಲು ಬಡಿದರು. ಮನೆಯವರನ್ನು ವಿಚಾರಿಸಿ ರೌಡಿಗಳ ಚಲನವಲನ ಬಗ್ಗೆ ಮಾಹಿತಿ ಪಡೆದುಕೊಂಡರು. ಜೈಲಿನಲ್ಲಿರುವ ರೌಡಿಗಳ ಕೊಠಡಿ ಹಾಗೂ ಅವರ ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಲಾಗಿತ್ತು. ಹಲವು ಮನೆಗಳಲ್ಲಿ ಗಾಂಜಾ ಹಾಗೂ ಆಯುಧಗಳು ಪತ್ತೆಯಾದವು.

1,548 ರೌಡಿಗಳು ವಶಕ್ಕೆ: ದಾಳಿ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಮಿಷನರ್ ಕಮಲ್ ಪಂತ್, ‘ರೌಡಿ ಚಟುವಟಿಕೆ ನಿಯಂತ್ರಣಕ್ಕಾಗಿ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರ ಭಾಗವಾಗಿ 2,144 ರೌಡಿಗಳ ಮನೆಗಳ ಮೇಲೆ ಶನಿವಾರ ದಾಳಿ ಮಾಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ 1,548 ರೌಡಿಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮಾಹಿತಿ ನೀಡಿದರು.

‘ರೌಡಿಗಳಾದ ಜೆಸಿಬಿ ನಾರಾಯಣ, ಸೈಕಲ್ ರವಿ, ಪಾಯ್ಸನ್ ರಾಮ್, ಯುವರಾಜ್ ಅಲಿಯಾಸ್ ಪಾಪ, ಕಿರಣ್ ಪಾವ್, ಟ್ಯಾಟೂ ಜಗ್ಗ, ಸ್ಲಂ ವೆಂಕಟೇಶ್, ಕೋತ ರಘು, ಹರೀಶ್ ಅಲಿಯಾಸ್ ಕೋಳಿ ಫಯಾಜ್ ಹಾಗೂ ಇತರೆ ರೌಡಿಗಳ ಮನೆಗಳ ಮೇಲೆ ದಾಳಿ ನಡೆದಿದೆ. 91 ಆಯುಧಗಳು (ಲಾಂಗ್, ಮಚ್ಚು, ಚಾಕು ಹಾಗೂ ಇತರೆ), ಸುಮಾರು 12 ಕೆ.ಜಿ ಗಾಂಜಾ, ಮೊಬೈಲ್‌ಗಳು, ಸಿಮ್ ಕಾರ್ಡ್‌ಗಳು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.’

‘ಮುಂಜಾಗ್ರತಾ ಕ್ರಮವಾಗಿ 409 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ 48 ಪ್ರಕರಣ, ಎನ್‌ಡಿಪಿಎಸ್ ಕಾಯ್ದೆಯಡಿ 84 ಪ್ರಕರಣ ಹಾಗೂ ದರೋಡೆಗೆ ಯತ್ನದಡಿ 2 ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಅವರು ಹೇಳಿದರು.

ಅಪರಾಧ ಕೃತ್ಯಕ್ಕೆ ಜೈಲಿನಿಂದಲೇ ಸಂಚು: ‘ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೆಲ ರೌಡಿಗಳು, ಅಪರಾಧ ಕೃತ್ಯ ಎಸಗಲು ಜೈಲಿನಲ್ಲೇ ಸಂಚು ರೂಪಿಸುತ್ತಿದ್ದರು. ತಮ್ಮ ಸಹಚರರ ಮೂಲಕ ನಗರದಲ್ಲಿ ಕೊಲೆ. ಸುಲಿಗೆ ಮಾಡಿಸಿ ಜನರನ್ನು ಬೆದರಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಕ್ಕಿದ್ದರಿಂದ ಜೈಲಿನ ಮೇಲೂ ದಾಳಿ ಮಾಡಲಾಯಿತು’ ಎಂದೂ ಕಮಲ್ ಪಂತ್ ತಿಳಿಸಿದರು.

‘ಜೈಲಿನಲ್ಲಿದ್ದ ರೌಡಿಗಳಾದ ಕುಣಿಗಲ್ ರೌಡಿ, ಉಳ್ಳಾಲ ಕಾರ್ತಿಕ್, ಕುಳ್ಳ ರಿಜ್ವಾನ್, ಬಾಂಬೆ ಸಲೀಂ, ಆಟೊ ರಾಮ, ಸುಜಿತ್ ಭಾರ್ಗವ್ ಹಾಗೂ ಇತರರ ಕೊಠಡಿಯಲ್ಲಿ ತಪಾಸಣೆ ನಡೆಸಿದರು. 200 ಗ್ರಾಂ ಗಾಂಜಾ, 2 ಮೊಬೈಲ್, 4 ಸಿಮ್ ಕಾರ್ಡ್‌ಗಳು, 3 ಪೆನ್ ಡ್ರೈವ್, 3 ಮೆಮೋರಿ ಕಾರ್ಡ್, 26 ಚಾಕುಗಳು ಹಾಗೂ 7,710 ನಗದು ಜಪ್ತಿ ಮಾಡಲಾಗಿದೆ’ ಎಂದೂ ಮಾಹಿತಿ ನೀಡಿದರು.

‘ರೌಡಿಗಳು ಹಾಗೂ ಅವರ ಅಕ್ರಮ ಚಟುವಟಿಕೆ ವಿರುದ್ಧ ನಿಗಾ ವಹಿಸಲಾಗಿದೆ. ಇಂಥ ಕಾರ್ಯಾಚರಣೆಗಳು ಭವಿಷ್ಯದಲ್ಲೂ ನಡೆಯಲಿವೆ’ ಎಂದು ಕಮಿಷನರ್ ಹೇಳಿದರು.

ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪತ್ತೆಯಾದ ಆಯುಧಗಳು, ಗಾಂಜಾ ಹಾಗೂ ಇತರೆ ವಸ್ತುಗಳು

ಜೈಲಿನಲ್ಲೂ ಕೈದಿಗಳ ಐಷಾರಾಮಿ ಬದುಕು

ಕಾರಾಗೃಹದಲ್ಲಿದ್ದ ಕೆಲ ಕೈದಿಗಳ ಐಷಾರಾಮಿ ಬದುಕು ನೋಡಿ ಪೊಲೀಸರಿಗೂ ಆಶ್ಚರ್ಯ ಉಂಟಾಯಿತು. ಅಂಥ ಕೈದಿಗಳಿಗೆ ಒದಗಿಸಿದ್ದ ಸೌಲಭ್ಯಗಳನ್ನೂ ಪೊಲೀಸರು ವಿಡಿಯೊ ಚಿತ್ರೀಕರಣ ಮಾಡಿಕೊಂಡರು.

‘ಜೈಲಿನಲ್ಲಿ ಹಲವು ಸೌಲಭ್ಯಗಳು ಸಿಗುತ್ತಿವೆ. ಮನೆಯಲ್ಲಿರುವ ಮಲಗುವ ಕೋಣೆಗಿಂತಲೂ ಹೆಚ್ಚಿನ ವ್ಯವಸ್ಥೆ ಜೈಲಿನ ಕೆಲ ಕೊಠಡಿಗಳಲ್ಲಿ ಇವೆ. ಸೊಳ್ಳೆ ಪರದೆ, ಬೆಡ್, ಕುರ್ಚಿಗಳು ಹಾಗೂ ಇತರೆ ವ್ಯವಸ್ಥೆ ಕಲ್ಪಿಸಿರುವುದನ್ನು ದಾಖಲಿಸಿಕೊಂಡಿದ್ದೇವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲ ರೌಡಿಗಳು, ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಜೈಲಿನಲ್ಲೇ ಸೌಲಭ್ಯ ಪಡೆಯುತ್ತಿದ್ದಾರೆ. ಜೈಲಿನ ಕೆಲ ಸಿಬ್ಬಂದಿಯೂ ಇವರ ಜೊತೆ ಶಾಮೀಲಾಗಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿದಿದೆ’ ಎಂದೂ ಮೂಲಗಳು ತಿಳಿಸಿವೆ.

ಅಂಕಿ ಅಂಶ

1,548 ರೌಡಿಗಳು ವಶಕ್ಕೆ

12 ಕೆ.ಜಿ ಗಾಂಜಾ ಜಪ್ತಿ

91 ಮಾರಕಾಸ್ತ್ರಗಳು ಪತ್ತೆ

ವರ್ಷಗಳೇ ಕಳೆದರೂ ಸುಧಾರಣೆ ಕಾಣದ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಾಗೃಹಗಳ ಒಳಕ್ಕೆ ಮಾರಕಾಸ್ತ್ರ, ಮಾದಕವಸ್ತುಗಳನ್ನು ಕೊಂಡೊಯ್ಯುವುದನ್ನು ತಡೆಯುವಂತೆ 2019ರಿಂದಲೂ ಹಲವು ಬಾರಿ ಚರ್ಚೆ ನಡೆದಿದೆ. ಕೆಲವು ವರದಿಗಳೂ ಸಲ್ಲಿಕೆಯಾಗಿವೆ. ಆದರೆ, ಯಾವುದೇ ಸುಧಾರಣೆಯೂ ಕಾರ್ಯರೂಪಕ್ಕೆ ಬಂದಿಲ್ಲ.

ಸಜಾ ಕೈದಿಯಾಗಿದ್ದ ತಮಿಳುನಾಡು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಗೆಳತಿ ಶಶಿಕಲಾ ಅವರಿಗೆ ವಿಶೇಷ ಆತಿಥ್ಯ ನೀಡುತ್ತಿರುವ ಕುರಿತು 2019ರಲ್ಲಿ ವರದಿಯೊಂದನ್ನು ಸಲ್ಲಿಸಿದ್ದ ಬಂದಿಖಾನೆ ಇಲಾಖೆಯ ಆಗಿನ ಡಿಐಜಿ ಡಿ. ರೂಪಾ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಯುತ್ತಿದ್ದ ಅಕ್ರಮಗಳನ್ನು ಬಹಿರಂಗಪಡಿಸಿದ್ದರು.

ಕಾರಾಗೃಹದ ಒಳಕ್ಕೆ ಮಾದಕವಸ್ತು, ಮಾರಕಾಸ್ತ್ರಗಳನ್ನು ಕೊಂಡೊಯ್ಯುವುದಕ್ಕೆ ಅವಕಾಶವಿರುವುದು, ಮೊಬೈಲ್‌ಗಳ ಬಳಕೆ, ಪ್ರಭಾವಿ ಕೈದಿಗಳು ನಿಯಮ ಮೀರಿ ಹೊರಕ್ಕೆ ಬಂದು ಓಡಾಡಲು ಅವಕಾಶ ಕಲ್ಪಿಸುತ್ತಿರುವುದನ್ನೂ ವರದಿಯಲ್ಲಿ ದಾಖಲಿಸಿದ್ದರು. ಈ ಕುರಿತು ಹೆಚ್ಚಿನ ತನಿಖೆಗಾಗಿ ನಿವೃತ್ತ ಐಎಎಸ್ ಅಧಿಕಾರಿ ವಿನಯ್‌ಕುಮಾರ್ ನೇತೃತ್ವದ ಸಮಿತಿಯನ್ನು ನೇಮಿಸಲಾಗಿತ್ತು.

ಕಾರಾಗೃಹದಲ್ಲಿ ನಿಯಮ ಉಲ್ಲಂಘನೆ, ಭದ್ರತಾ ವೈಫಲ್ಯ ಇರುವುದನ್ನು ಖಚಿತಪಡಿಸಿದ್ದ ವಿನಯ್ ಕುಮಾರ್ ಸಮಿತಿ, ಸುಧಾರಣೆಗೆ ಹಲವು ಶಿಫಾರಸುಗಳನ್ನು ಮಾಡಿತ್ತು. 2020ರ ನವೆಂಬರ್‌ನಲ್ಲಿ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಐಪಿಎಸ್ ಅಧಿಕಾರಿ ಡಿ. ರೂಪಾ, ಕಾರಾಗೃಹಗಳಲ್ಲಿರುವ ಅವ್ಯವಸ್ಥೆ, ಅಕ್ರಮ ಮತ್ತು ನಿಯಮ ಉಲ್ಲಂಘನೆ ಕುರಿತು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವರದಿಯೊಂದನ್ನು ಸಲ್ಲಿಸಿದ್ದರು.

ರಾಜ್ಯದ ಕಾರಾಗೃಹಗಳಲ್ಲಿನ ಭದ್ರತಾ ವೈಫಲ್ಯದಿಂದ ಪದೇ ಪದೇ ಕೈದಿಗಳು ತಪ್ಪಿಸಿಕೊಳ್ಳುತ್ತಿರುವುದು, ಮಾರಕಾಸ್ತ್ರ ಮತ್ತು ಮಾದಕವಸ್ತುಗಳನ್ನು ನಿರಂತರವಾಗಿ ಕಾರಾಗೃಹಗಳ ಒಳಕ್ಕೆ ಕೊಂಡೊಯ್ಯುತ್ತಿರುವುದು ಹಾಗೂ ಮೊಬೈಲ್ ಬಳಕೆ ಅನಿಯಂತ್ರಿತವಾಗಿ ಮುಂದುವರಿದಿರುವುದನ್ನು ವರದಿಯಲ್ಲಿ ಉಲ್ಲೇಖಿಸಿದ್ದರು. ರಾಜ್ಯದ ಕಾರಾಗೃಹಗಳಲ್ಲಿ ಅಳವಡಿಸಿರುವ ಮೊಬೈಲ್ ಜಾಮರ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದನ್ನು ತಿಳಿಸಿದ್ದ ಅವರು, ಅತ್ಯುತ್ತಮ ಗುಣಮಟ್ಟದ ಜಾಮರ್ ಅಳವಡಿಸುವ ಅಗತ್ಯವಿದೆ ಎಂಬ ಶಿಫಾರಸು ಸಲ್ಲಿಸಿದ್ದರು.

‘ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದ ಕಾರಾಗೃಹಗಳ ಭದ್ರತಾ ವ್ಯವಸ್ಥೆಯಲ್ಲಿ ಹೆಚ್ಚಿನ ಬದಲಾವಣೆಗಳೇನೂ ಜಾರಿಗೆ ಬಂದಿಲ್ಲ. ಡಿ. ರೂಪಾ ಮತ್ತು ವಿನಯ್ ಕುಮಾರ್ ಸಮಿತಿಗಳು ಸಲ್ಲಿಸಿರುವ ವರದಿಗಳು ಎಲ್ಲಿವೆ? ಅವುಗಳ ಆಧಾರದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಮಾಹಿತಿ ಯಾರಿಗೂ ತಿಳಿದಿಲ್ಲ’ ಎಂದು ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- ಅಕ್ರಮ ಬಯಲಿಗೆ ತಂದಿದ್ದ ರೂಪಾ, ವಿನಯಕುಮಾರ್ ವರದಿಯೂ ನನೆಗುದಿಗೆ
- ‘ಕಾರಾಗೃಹದಲ್ಲಿ ನಿಯಮ ಉಲ್ಲಂಘನೆ, ಭದ್ರತಾ ವೈಫಲ್ಯ’

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಸಂವಾದ

ಕೇಂದ್ರ ಸಚಿವ ಸಂಪುಟ ಪುನಾರಚನೆ: ರಾಜ್ಯಕ್ಕೆ ಆದ ಲಾಭ- ನಷ್ಟಗಳೇನು?

ಸಂವಾದದಲ್ಲಿ ಭಾಗವಹಿಸುವವರು

ಯು.ಟಿ.ಖಾದರ್ ಶಾಸಕ, ಕಾಂಗ್ರೆಸ್ | ಅಶ್ವತ್ಥನಾರಾಯಣ ಗೌಡ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ | ಕೆ.ಎಂ. ಶಿವಲಿಂಗೇಗೌಡ ಶಾಸಕ, ಜೆಡಿಎಸ್

ಸೋಮವಾರ, 12-7-2021 ಸಮಯ- ಬೆಳಿಗ್ಗೆ 12 ರಿಂದ 1

ಕರ್ನಾಟಕದಲ್ಲಿ ಹೂಡಿಕೆ: ಕಿಟೆಕ್ಸ್ ಗಾರ್ಮೆಂಟ್ಸ್‌ಗೆ ಆಹ್ವಾನ

ರಾಜೀವ್ ಚಂದ್ರಶೇಖರ್

ತಿರುವನಂತಪುರ: ಕರ್ನಾಟಕದಲ್ಲಿ ಬಂಡವಾಳ ಹೂಡಬೇಕು ಎಂದು ಕೇರಳ ಮೂಲದ ಸಿದ್ಧ ಉಡುಪುಗಳ ಉತ್ಪಾದನಾ ಸಂಸ್ಥೆ ಕಿಟೆಕ್ಸ್ ಗಾರ್ಮೆಂಟ್ಸ್‌ಗೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಆಹ್ವಾನಿಸಿದ್ದಾರೆ.

ಕೇರಳ ಸರ್ಕಾರದಿಂದ ಕಿರುಕುಳ ಆರೋಪದ ಹಿನ್ನೆಲೆಯಲ್ಲಿ ₹ 3,500 ಕೋಟಿ ಹೂಡಿಕೆ ಮಾಡುವ ಪ್ರಸ್ತಾಪ ಹಿಂಪಡೆಯಲು ಸಂಸ್ಥೆ ಚಿಂತನೆ ನಡೆಸಿದೆ ಎಂಬ ಬೆಳವಣಿಗೆಯ ಹಿಂದೆಯೇ ಈ ಆಹ್ವಾನ ನೀಡಲಾಗಿದೆ.

ತೆಲಂಗಾಣ ಸರ್ಕಾರದ ಆಹ್ವಾನದ ಬಳಿಕ ಈಚೆಗೆ ಸಂಸ್ಥೆಯು ಆ ರಾಜ್ಯದಲ್ಲಿ ₹ 1,000 ಕೋಟಿ ಬಂಡವಾಳವನ್ನು ಹೂಡಿಕೆ ಮಾಡುವ ತೀರ್ಮಾನವನ್ನು ಪ್ರಕಟಿಸಿತ್ತು.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ರಾಜೀವ್ ಚಂದ್ರಶೇಖರ್, ಈಚೆಗೆ ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದರು. ಈ ಕುರಿತು ಟ್ವೀಟ್ ಮಾಡಿರುವ ಸಚಿವರು, ನಾನು ಕಿಟೆಕ್ಸ್ ಗಾರ್ಮೆಂಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸಬು ಜಾಕೋಬ್ ಜೊತೆ ಚರ್ಚಿಸಿದ್ದು, ಕರ್ನಾಟಕದಲ್ಲಿ ಹೂಡಿಕೆಗೆ ಆಹ್ವಾನಿಸಿದ್ದೇನೆ ಎಂದು ತಿಳಿಸಿದ್ದಾರೆ.

‘ಮುಸ್ಲಿಮರು, ಕ್ರೈಸ್ತರು ಹಿಂದೂಗಳೇ ಆಗಿದ್ದರು’

ಪ್ರಜಾವಾಣಿ ವಾರ್ತೆ

ಗುವಾಹಟಿ: ‘ಭಾರತದಲ್ಲಿರುವ ಎಲ್ಲಾ ಮುಸ್ಲಿಮರು ಮತ್ತು ಕ್ರೈಸ್ತರು ತಲೆಮಾರುಗಳ ಹಿಂದೆ ಹಿಂದೂಗಳೇ ಆಗಿದ್ದರು’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಪ್ರತಿಪಾದಿಸಿದ್ದಾರೆ. ಈ ಮೂಲಕ ರಾಜೋರಿ ದಳದ ಶಾಸಕ ಅಖಿಲ್ ಗೊಗೊಯಿ ಜತೆಗಿನ ವಾಗ್ವಾದವನ್ನು ಶರ್ಮಾ ಮುಂದುವರಿಸಿದ್ದಾರೆ.

‘ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಅಸ್ಸಾಮಿ ಜನರಿಗೆ ಪ್ರಾತಿನಿಧ್ಯ ಇರಲಿಲ್ಲ. ಬಿಜೆಪಿ ನಾಯಕ ಶ್ಯಾಂ ಪ್ರಸಾದ್ ಮುಖರ್ಜಿ ಅವರು ಕಲ್ಕತ್ತಾ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದಾಗ ಅಸ್ಸಾಮಿ ಭಾಷೆಗೆ ಪ್ರತ್ಯೇಕ ಭಾಷೆಯ ಸ್ಥಾನಮಾನ ನೀಡಿದ್ದರು’ ಎಂದು ಹಿಮಂತ ಹೇಳಿದ್ದರು. ಇದನ್ನು ಅಲ್ಲಗೆಳೆದಿದ್ದ ಅಖಿಲ್ ಗೊಗೊಯಿ, ‘ಮುಖ್ಯಮಂತ್ರಿ ಹೇಳುತ್ತಿರುವ ಮಾತಿನಲ್ಲಿ ಸತ್ಯ ಇಲ್ಲ. ಅಸ್ಸಾಂ ಜನರ ಅಸ್ಮಿತೆಯನ್ನು ಬಿಜೆಪಿ-ಆರ್‌ಎಸ್‌ಎಸ್ ಸಿದ್ಧಾಂತಗಳಿಗೆ ಅಡವಿಡಲಾಗುತ್ತಿದೆ’ ಎಂದು ಟೀಕಿಸಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಹಿಮಂತ ಬಿಸ್ವಾ ಶರ್ಮಾ ಅವರು ಶನಿವಾರ ಈ ಮಾತು ಹೇಳಿದ್ದಾರೆ.

ಪ್ರಸಿದ್ಧ ಆಯುರ್ವೇದ ವೈದ್ಯ ಡಾ.ಪಿ.ಕೆ ವಾರಿಯರ್ ನಿಧನ



ಮಲಪ್ಪುರಂ (ಪಿಟಿಐ): ಪ್ರಸಿದ್ಧ ಆಯುರ್ವೇದ ವೈದ್ಯ, ಕೊಟ್ಟಕ್ಕಲ್ ಆರ್ಯ ವೈದ್ಯ ಶಾಲೆಯ ಟ್ರಸ್ಟಿ ಡಾ.ಪಿ.ಕೆ ವಾರಿಯರ್ ಅವರು (100) ಇಲ್ಲಿ ಶನಿವಾರ ನಿಧನರಾಗಿದ್ದಾರೆ.

ಭಾರತ ಸರ್ಕಾರವು 1999ರಲ್ಲಿ ಪದ್ಮಶ್ರೀ ಮತ್ತು 2010ರಲ್ಲಿ ಪದ್ಮಭೂಷಣ ನೀಡುವ ಮೂಲಕ ವಾರಿಯರ್ ಅವರನ್ನು ಗೌರವಿಸಿತ್ತು. ವಿಶ್ವದಾದ್ಯಂತ ಶಾಸ್ತ್ರೀಯ ಆಯುರ್ವೇದ ಚಿಕಿತ್ಸೆಯನ್ನು ಜನಪ್ರಿಯಗೊಳಿಸಿದ ಖ್ಯಾತಿ ಅವರಿಗೆ ಸಲ್ಲುತ್ತದೆ.

1921ರ ಜೂನ್ 5ರಂದು ಜನಿಸಿದ ಪನ್ನಿಯಂಪಿಲ್ಲಿ ಕೃಷ್ಣಂಕುಟ್ಟಿ ವಾರಿಯರ್ ಅವರು, ಆಯುರ್ವೇದ ಪದ್ಧತಿಗೆ ಜಗತ್ತಿನಾದ್ಯಂತ ಅಧಿಕೃತ ಮಾನ್ಯತೆ ದೊರಕಿಸಿಕೊಡಲು ಶ್ರಮಿಸಿದ್ದರು.

KISHORE VAIGYANIK PROTSAHAN YOJANA
किशोर वैज्ञानिक प्रोत्साहन योजना
KVPY

NATIONAL FELLOWSHIPS FOR STUDENTS INTERESTED IN RESEARCH CAREERS

KVPY Fellowship-2021

- **Stream SA**: Students enrolled in/planning to join XI Standard (Science Subjects) during the academic year 2021–22 and aspiring to join an undergraduate program in basic sciences (B.Sc/B.S./B.Stat./B.Math./Int. M.Sc./Int. M.S.) during the academic year 2023-24.
- **Stream SX**: Students enrolled in/planning to join XII standard (Science Subjects) during the academic year 2021–22 and aspiring to join an undergraduate program in basic sciences (B.Sc./B.S./B.Stat./B.Math./Int. M.Sc./Int. M.S.) during the academic year 2022-23.
- **Stream SB**: Students enrolled in/planning to join First Year B.Sc./B.S./B.Stat./B.Math./Int. M.Sc./Int. M.S. in basic sciences during the academic year 2021-22.

Rank certificates will also be available to an extended list of candidates.

1	Start of online submission of Application	12th July 2021@ 1700 Hrs.
2	Last date for closing of online Application	25th August 2021
3	KVPY Aptitude Test	7th November 2021

For more details please visit: http:// www.kvpy.iisc.ac.in

Convener, KVPY, IISc, Bengaluru-560 012

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಚಿಕ್ಕೋಡಿ

ದೂರವಾಣಿ : 08338-275101, ಇ-ಮೇಲ್ : ee.rdws.ckd@gmail.com

ನಂ.ಕಾ.ಇಂ./ಗ್ರಾ.ಕು.ನೀ&ನೈ/ವಿಚಿ/ತಾಂಶಾ/ಕೆಡಬ್ಲ್ಯೂ–1&2/ಟೆಂಡರ್/11/21–22/888 ದಿ: 08–07–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕೋಡಿ ವ್ಯಾಪ್ತಿಯ ಅಥಣಿ ತಾಲ್ಲೂಕಿನಲ್ಲಿ 2021–22 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದಿತ ಅಥಣಿ ತಾಲ್ಲೂಕಿನ ಸತ್ತಿ ಮತ್ತು ಇತರೆ 08 ಗ್ರಾಮಗಳಿಗೆ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರನ್ನು ಒದಗಿಸುವ (5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿ (O&M) DBOT ಆಧಾರದ ಮೇಲೆ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಕಾಮಗಾರಿಯ ವಿವರ : 1) Providing Multi Village Water supply Scheme to Satti and other 8 Villages of Athani Taluka in Belagavi District (Indent No.34307). ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ : 3432.20. ಇ.ಎಂ.ಡಿ. ರೂ. ಗಳಲ್ಲಿ : 34,50,000/–. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ) : 24 ತಿಂಗಳು.

1) ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ ಪರಿಶೀಲನೆ : 26–07–2021 ರ ಬೆಳಿಗ್ಗೆ 11.00 ಗಂಟೆಗೆ. ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ. & ನೈ. ಇಲಾಖೆ ಕೆ. ಹೆಚ್. ಬಿ. ಕಟ್ಟಡ, ‘ಇ’ ಬ್ಲಾಕ್ 1ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು. 2) ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ : 11–08–2021 ರ ಸಂಜೆ 5.30 ಗಂಟೆವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 13–08–2021 ರ ಸಂಜೆ 5.30 ಗಂಟೆಯವರೆಗೆ 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 16–08–2021 ರ ಬೆಳಿಗ್ಗೆ 11.00 ಗಂಟೆಗೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.

ಡಿಐಪಿಆರ್/ಬೆಳಗಾವಿ/373/ಮಣಿಪಾಲ್/2021–22

ಕೃಷಿಯಲ್ಲೂ ಬಾಲಕಾರ್ಮಿಕರು

• ಗಣೇಶ ಚಂದನಶಿವ

ಕಲಬುರ್ಗಿ: ತಾಲ್ಲೂಕಿನ ಆಲಗೂಡ (ಬಿ), ಮಾಲಗತ್ತಿ, ಅಜಾದಪುರ, ಭೂಪಾಲ- ತೆಗನೂರ, ತೆಗನೂರ, ಕಿಣ್ಣಿ ಸುಲ್ತಾನ ಗ್ರಾಮಗಳಲ್ಲಿ ಬಹುಪಾಲು ರೈತರು ಚೆಂಡು ಹೂ, ಗುಲಾಬಿ ಬೆಳೆದಿದ್ದಾರೆ. ಈ ಹೂವುಗಳನ್ನು ಕೀಳಲು ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ.

ಬೆಳಿಗ್ಗೆ ಎರಡು ತಾಸು ಈ ಕೆಲಸ ಮಾಡಿದರೆ ಅವರಿಗೆ ತಲಾ ₹50ರಿಂದ ₹80 ಕೂಲಿ ನೀಡಲಾಗುತ್ತಿದೆ. 'ದೊಡ್ಡವರು ₹250 ಕೂಲಿ ಕೇಳುತ್ತಾರೆ. ಮಕ್ಕಳು ಬೆಳಿಗ್ಗೆ ಬೇಗ ಬಂದು ಕೆಲಸ ಮಾಡಿ ಮತ್ತೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇವರೊಂದಿಗೆ ನಮ್ಮ ಇಬ್ಬರು ಮಕ್ಕಳೂ ಸೇರಿಕೊಳ್ಳುತ್ತಾರೆ. ನಮ್ಮೂರಲ್ಲಿ ಸುಮಾರು 35 ಮಕ್ಕಳು ಸ್ವಯಂ ಪ್ರೇರಣೆಯಿಂದ ತೋಟಗಳಿಗೆ ಹೋಗುತ್ತಿದ್ದಾರೆ. ಶಾಲೆಗಳು ಆರಂಭವಾದರೆ ನಾವು ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ' ಎನ್ನುತ್ತಾರೆ ಆಲಗೂಡಿನ ರೈತರೊಬ್ಬರು.

ಕಲ್ಯಾಣ ಕರ್ನಾಟಕದ ಬಹುಪಾಲು ಗ್ರಾಮೀಣ ಪ್ರದೇಶದಲ್ಲಿ ಮಕ್ಕಳನ್ನು ಹತ್ತಿ ಬಿಡಿಸಲು, ಹೂವು ಕೀಳಲು, ಕಳೆ ತೆಗೆಯಲು ಹಾಗೂ ರಾಶಿ ಮಾಡಲು ಬಳಸಿಕೊಳ್ಳಲಾಗುತ್ತಿದೆ. ಬಡತನದ ಕಾರಣದಿಂದ ಪಾಲಕರೇ ಮಕ್ಕಳನ್ನು ಕೂಲಿಗೆ ಕರೆದೊಯ್ಯುತ್ತಾರೆ.

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹತ್ತಿ ಬಿಡಿಸುವ ಹಂಗಾಮಿನಲ್ಲಿ ಮಕ್ಕಳನ್ನು ವಾಹನಗಳಲ್ಲಿ ಜಮೀನುಗಳಿಗೆ ಕರೆದೊಯ್ಯಲಾಗುತ್ತದೆ. 'ದೊಡ್ಡವರಿಗೆ ₹200ರಿಂದ ₹300 ಕೂಲಿ ಕೊಡಬೇಕು. ಮಕ್ಕಳಿಗೆ ₹100 ಕೊಟ್ಟರೂ ಸಾಕು. ನೆಲಮಟ್ಟದಲ್ಲಿರುವ ಹತ್ತಿ ಕಾಯಿಗಳನ್ನು ಮಕ್ಕಳು ಸುಲಭವಾಗಿ ಬಿಡಿಸುತ್ತಾರೆ. ಅವರಿಗೆ ಆದ್ಯತೆ ನೀಡಲು ಇದೂ ಕಾರಣ' ಎನ್ನುತ್ತಾರೆ ರೈತರು.

ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ- 1986ಕ್ಕೆ 2016ರಲ್ಲಿ ತಿದ್ದುಪಡಿ ಮಾಡಲಾಗಿದೆ. 14 ವರ್ಷದೊಳಗಿನ ಮಕ್ಕಳು ಯಾವುದೇ ಕ್ಷೇತ್ರದಲ್ಲಿ ದುಡಿಯುವಂತಿಲ್ಲ. ಈ ಕಾಯ್ದೆ ಜಾರಿಯ ನಂತರ, ಕೃಷಿಯಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವವರ ವಿರುದ್ಧ ಪ್ರಕರಣ ದಾಖಲಿಸುವುದು ಆರಂಭವಾಗಿದೆ.

ಪೂರಕ ಮಾಹಿತಿ: ನಾಗರಾಜ ಚಿನಗುಂಡಿ, ಬಿ.ಜಿ.ಪ್ರವೀಣಕುಮಾರ್, ಆದಿತ್ಯ ಕೆ.ಎ., ಧನ್ಯಪ್ರಸಾದ ಬಿ.ಜೆ.

ಪೋಷಕರ ಕಷ್ಟ ನೋಡಲಾಗುತ್ತಿಲ್ಲ. ಸ್ವಂತ ಊರು ತೊರೆದು ಬಂದ ಮೇಲೆ ಬದುಕು ನಡೆಸಲು ದುಡಿಮೆ ಅನಿವಾರ್ಯ. ಪೋಷಕರೊಂದಿಗೆ ನಾನೂ ಕೆಲಸಕ್ಕೆ ಹೋಗುತ್ತಿದ್ದೇನೆ

ಬಾಲಕಾರ್ಮಿಕ, ಕೊಡಗು

ರಾಯಚೂರು ಜಿಲ್ಲೆಯಲ್ಲಿ ಕೃಷಿಯಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದು ಬಹಳಷ್ಟು ಕಡೆಗಳಲ್ಲಿ ನಡೆಯುತ್ತಿದೆ. ಜಾಗೃತಿ- ಕಾನೂನು ಕ್ರಮ ಕೈಗೊಂಡರೂ ಇದು ಕಡಿಮೆಯಾಗುತ್ತಿಲ್ಲ

ಮಂಜುನಾಥರೆಡ್ಡಿ, ಬಾಲಕಾರ್ಮಿಕ ತಡೆ ಯೋಜನಾ ನಿರ್ದೇಶಕ, ರಾಯಚೂರು

ಜಮೀನು ಮಾಲೀಕರ ವಿರುದ್ಧ ಪ್ರಕರಣ

ರಾಯಚೂರು ಜಿಲ್ಲೆಯಲ್ಲಿ ಬಾಲಕಾರ್ಮಿಕ ಕಲ್ಯಾಣ ಸಮಿತಿಯವರು ಕೃಷಿ ಜಮೀನಿನ ಮೇಲೆ ದಾಳಿ ನಡೆಸಿ, ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ. 2020ರ ಜನವರಿ 1ರಿಂದ 2021ರ ಜನವರಿ 31ರ ಅವಧಿಯಲ್ಲಿ ಬಾಲಕಾರ್ಮಿಕರನ್ನು ಸಾಗಿಸುತ್ತಿದ್ದ 47 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 255 ಬಾಲಕಾರ್ಮಿಕರನ್ನು ಪತ್ತೆ ಮಾಡಲಾಗಿದೆ. ಜಮೀನು ಮಾಲೀಕರ ವಿರುದ್ಧ 11 ಪ್ರಕರಣಗಳು ದಾಖಲಾಗಿದ್ದು, ವಿಚಾರಣೆ ಹಂತದಲ್ಲಿವೆ. ಆರೋಪ ಸಾಬೀತಾದರೆ, ಕನಿಷ್ಠ 6 ತಿಂಗಳಿಂದ ಗರಿಷ್ಠ 2 ವರ್ಷದವರೆಗೂ ಜೈಲು ಶಿಕ್ಷೆ, ಕನಿಷ್ಠ ₹ 20 ಸಾವಿರದಿಂದ ಗರಿಷ್ಠ ₹ 50 ಸಾವಿರವರೆಗೂ ದಂಡ ವಿಧಿಸಲು ಅವಕಾಶ ಇದೆ.

ಕಾಫಿ ತೋಟಗಳಲ್ಲೂ ಬಳಕೆ ಅವ್ಯಾಹತ

ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಕಾಫಿ ತೋಟಗಳಲ್ಲಿ ಉತ್ತರ ಭಾರತದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಭಾಷಾ ತೊಡಕು ಸೇರಿದಂತೆ ಹಲವು ಕಾರಣಗಳಿಂದ ಅವರ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದು, ದುಡಿಮೆಗೆ ದೂಡಲಾಗುತ್ತಿದೆ.

'ತೋಟದ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸಿರುವ ಬಗ್ಗೆ ಸಹಾಯವಾಣಿಗೆ ಕರೆಗಳು ಬರುತ್ತವೆ. ತೋಟಗಳಿಗೆ ತೆರಳಿ ಪರಿಶೀಲಿಸಿದ್ದೇವೆ. ಕೋವಿಡ್‌ನಿಂದಾಗಿ, ಈಗ ಶಾಲೆ ಇಲ್ಲ. ಮಕ್ಕಳಿಂದ ಕೆಲಸ ಮಾಡಿಸಲ್ಲ ಎಂದು ಮಕ್ಕಳ ಜತೆಗಿರುವವರು ಸಬೂಬು ಹೇಳಿ ನುಣುಚಿಕೊಳ್ಳುತ್ತಾರೆ' ಎಂದು ಚಿಕ್ಕಮಗಳೂರು ಮಕ್ಕಳ ಸಹಾಯವಾಣಿ ಸಂಯೋಜಕ ಪ್ರದೀಪ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೊಡಗಿನಲ್ಲಿ ಶಿಕ್ಷಣ ಇಲಾಖೆಯು ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿಲ್ಲ. ಜತೆಗೆ ಕಾರ್ಮಿಕ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕಾರ್ಮಿಕರ ಮಕ್ಕಳೂ ಕಾರ್ಮಿಕರೇ ಆಗುವ ಸ್ಥಿತಿಯಿದೆ' ಎಂದು ಸಿದ್ದಾಪುರದ ಕಾರ್ಮಿಕ ಮುಖಂಡ ಭರತ್ ಆಪಾದಿಸಿದರು.

ಸೊಪ್ಪು ಮಾರಾಟಕ್ಕಿಳಿದ ಬಾಲಕಿ

• ಕೆ.ಓಂಕಾರ ಮೂರ್ತಿ

ಬಾಲಕಿ

ಮೈಸೂರು: 'ಅಪ್ಪ, ಅಮ್ಮ ಬೀದಿಬದಿ ವ್ಯಾಪಾರ ಮಾಡುತ್ತಾರೆ. ಮೊಬೈಲ್ ಕೆಟ್ಟು ಹೋಗಿದ್ದು, ಆನ್‌ಲೈನ್ ಪಾಠ ಕೇಳಲು ಆಗುತ್ತಿಲ್ಲ. ಹೊಸ ಮೊಬೈಲ್ ಖರೀದಿಸೋಣವೆಂದು ನಾನೂ ಸೊಪ್ಪು ಮಾರಲು ಆರಂಭಿಸಿದೆ...'

ಹೀಗೆಂದ ಮೈಸೂರಿನ ಸಾತಗಳ್ಳಿ ನಿವಾಸಿ, 16ರ ಹರೆಯದ ಬಾಲಕಿಯ ಕಂಗಳಲ್ಲಿ ನೀರು ತುಂಬಿಕೊಂಡಿತು. ಈಕೆ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾಳೆ.

ಬಾಲಕಿ ತಂದೆ ಹನುಮಂತು, ಮದುವೆ ಹಾಗೂ ಇತರ ಸಮಾರಂಭಗಳಲ್ಲಿ ಲೈಟಿಂಗ್ಸ್ ಅಲಂಕಾರದ ಕೆಲಸ ಮಾಡುತ್ತಾರೆ. ಆದರೆ, ಕೋವಿಡ್ ಲಾಕ್‌ಡೌನ್ ಕಾರಣ ಆ ಕೆಲಸವೂ ಇಲ್ಲದೆ ಸಂಕಷ್ಟಕ್ಕೆ ಒಳಗಾದರು. ಕುಟುಂಬ ನಿರ್ವಹಣೆಗಾಗಿ ಸೊಪ್ಪು ಮಾರಾಟಕ್ಕೆ ಮುಂದಾದರು. ಚೆನ್ನಾಗಿ ಓದಬೇಕು, ಮುಂದೆ ಬರಬೇಕು ಎಂಬ ಛಲ ಬಾಲಕಿಗೆ. ಆದರೆ, ಆನ್‌ಲೈನ್ ಕ್ಲಾಸ್‌ಗೆ ಮೊಬೈಲ್, ಕಂಪ್ಯೂಟರ್ ಎಲ್ಲಿಂದ ತರುವುದು? ಅದನ್ನು ಖರೀದಿಸಿಕೊಡುವ ಸಾಮರ್ಥ್ಯವೂ ಪೋಷಕರಿಗಿಲ್ಲ. ಅದಕ್ಕಾಗಿ ಆಕೆ ಕಂಡುಕೊಂಡ ಹಾದಿ ತಂದೆ ಜೊತೆ ತೆರಳಿ, ಸೊಪ್ಪು ಮಾರಿ ಹಣ ಸಂಪಾದಿಸುವುದು.

'ಬೆಳಿಗ್ಗೆ 5 ಗಂಟೆ ಸೊಪ್ಪು ಮಾರಾಟಕ್ಕೆ ಮಗಳನ್ನು ಕರೆದುಕೊಂಡು ಹೋಗುತ್ತೇನೆ. ನಾನು ಬಡಾವಣೆಗಳಲ್ಲಿ ಮನೆಮನೆ ಬಳಿ ತೆರಳಿ ಮಾರುತ್ತೇನೆ. ಆ ಸಮಯದಲ್ಲಿ ಮಗಳು ಬೀದಿಬದಿಯಲ್ಲಿ ಕುಳಿತು ಸೊಪ್ಪು ಮಾರುತ್ತಿರುತ್ತಾಳೆ. ನಮ್ಮ ಕಷ್ಟ ಕೇಳಿ ಈಚೆಗೆ ದಾನಿಗಳು ಮಗಳಿಗೆ ಟ್ಯಾಬ್ ಖರೀದಿಸಿಕೊಟ್ಟರು' ಎಂದು ಹನುಮಂತು ಹೇಳುತ್ತಾರೆ.

'ಮಕ್ಕಳ ಮನಸ್ಸು ಜರ್ಜರಿತಗೊಂಡಿದೆ'

ಲಾಕ್‌ಡೌನ್‌ನಿಂದಾಗಿ ಮಕ್ಕಳ ಸ್ಥಿತಿ ಚಿಂತಾಜನಕವಾಗಿದೆ. ಹಸಿವಿನ ಅಂಶವೂ ಹೆಚ್ಚಳವಾಗಿದೆ. ಪೋಷಕರಿಗೆ ಉದ್ಯೋಗ ಸಿಗದ ಕಾರಣ ಮಕ್ಕಳೂ ಕೆಲಸಕ್ಕೆ ಇಳಿದಿದ್ದಾರೆ. ಭೌತಿಕ ತರಗತಿಗಳು ಆರಂಭವಾಗದೇ ಮಕ್ಕಳ ಮನಸ್ಸು ಜರ್ಜರಿತಗೊಂಡಿದೆ. ಗ್ರಾಮೀಣ ಪ್ರದೇಶದ ಬಡ ಮಕ್ಕಳ ಬಳಿ ಮೊಬೈಲ್ ಇಲ್ಲ. ಕೆಲವು ಕಡೆ ನೆಟ್‌ವರ್ಕ್ ಸಿಗದೆ ಮಕ್ಕಳಲ್ಲಿ ಕೀಳರಿಮೆ ಮೂಡಿದೆ.

–**ಪರಶುರಾಂ,** ಒಡನಾಡಿ ಸಂಸ್ಥೆ, ಮೈಸೂರು

ಆಡುವ ಮಕ್ಕಳು ದುಡಿಮೆಗೆ

ಒಂದನೇ ಪುಟದಿಂದ

ಆದರೆ, ನಮ್ಮ ಪರಿಸರದಲ್ಲೇ ಆಡಿಕೊಂಡಿದ್ದ, ದಿನ ಬೆಳಗಾದರೆ ಶಾಲಾ ಬ್ಯಾಗ್ ಬೆನ್ನಿಗೇರಿಸಿಕೊಂಡು ಶಾಲೆಗೆ ಹೋಗಿ ಬರುತ್ತಿದ್ದ ಸಾವಿರಾರು ಅಮಾಯಕ ಮಕ್ಕಳು ಅನುಭವಿಸುತ್ತಿರುವ ಯಾತನೆಯು ಕಣ್ಣಿಗೆ ಕಾಣಿಸದೇಹೋಗಿದೆ. ಎಷ್ಟು ಮಕ್ಕಳು ಇಂಥ ಯಾತನೆಯನ್ನು ಮೌನವಾಗಿ ಸಹಿಸುತ್ತಿದ್ದಾರೆ ಎಂಬುದರ ಅಂದಾಜು ಕೂಡ ಲಭ್ಯವಾಗುತ್ತಿಲ್ಲ ಎಂಬುದು ಆತಂಕದ ವಿಚಾರ.

ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಂಡ ನಂತರ ರಾಜ್ಯದಲ್ಲೂ ಬಾಲಕಾರ್ಮಿಕ ಪದ್ಧತಿ ಹೆಚ್ಚಳವಾಗಿದೆ ಎನ್ನುವ ವರದಿಗಳಿವೆ. ಹೆಚ್ಚಿನ ಜಿಲ್ಲೆಗಳಲ್ಲಿ ಕೃಷಿ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲಾಗುತ್ತಿದೆ. ಕೊಡಗು ಜಿಲ್ಲೆಯ ಕಾಫಿ ತೋಟಗಳಲ್ಲಿ, ಕರಾವಳಿಯ ಮೀನುಗಾರಿಕೆಯಲ್ಲಿ, ಶಿವಮೊಗ್ಗದ ನೆಡುತೋಪುಗಳಲ್ಲಿ, ಕಲ್ಯಾಣ ಕರ್ನಾಟಕದಲ್ಲಿ ಹತ್ತಿ ಬಿಡಿಸುವ ಕೆಲಸದಲ್ಲಿ, ವಿವಿಧ ಭಾಗಗಳ ಕಲ್ಲು ಕ್ವಾರಿಗಳಲ್ಲಿ ಮಕ್ಕಳು ದುಡಿಯುತ್ತಿರುವ ಬಗ್ಗೆ ವರದಿಗಳಿವೆ. ಮೈಸೂರು ಹಾಗೂ ಇತರ ಭಾಗಗಳಲ್ಲಿ ಮಕ್ಕಳು ಸೊಪ್ಪು, ತರಕಾರಿ ಮಾರಾಟ ಮಾಡುತ್ತಿರುವುದೂ ಕಂಡುಬಂದಿದೆ. ಆದರೆ, ಎಲ್ಲಿ ಎಷ್ಟು ಮಕ್ಕಳಿದ್ದಾರೆ, ಶಿಕ್ಷಣದಿಂದ ಎಷ್ಟು ಮಂದಿ ವಂಚಿತರಾಗಿದ್ದಾರೆ ಎಂಬ ನಿಖರ ಮಾಹಿತಿ ಎಲ್ಲೂ ಲಭ್ಯವಾಗುತ್ತಿಲ್ಲ.

ಕೊರೊನಾದಿಂದಾಗಿ ಸುಮಾರು ಒಂದೂವರೆ ವರ್ಷದಿಂದ ಉದ್ದಿಮೆಗಳು ಸರಿಯಾಗಿ ನಡೆಯುತ್ತಿಲ್ಲ. ಹಾಗಾಗಿ ಕಾರ್ಮಿಕ ಇಲಾಖೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ದಾಳಿಗಳೂ ನಡೆಯುತ್ತಿಲ್ಲ. ಕಾರ್ಖಾನೆಗಳು ಹಾಗೂ ಬೇರೆ ಬೇರೆ ಉದ್ದಿಮೆಗಳ ಮೇಲೆ ಆಗಾಗ ದಾಳಿ ನಡೆಯುತ್ತಿದ್ದರೆ ಎಲ್ಲೆಲ್ಲಿ ಯಾವ ಪ್ರಮಾಣದಲ್ಲಿ ಮಕ್ಕಳನ್ನು ದುಡಿಸಿಕೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಒಂದಷ್ಟು ಅಂಕಿ ಅಂಶಗಳಾದರೂ ಲಭಿಸುತ್ತವೆ. ಈಗಿನ ಸ್ಥಿತಿಯಲ್ಲಿ ಬಾಲಕಾರ್ಮಿಕರ ಪ್ರಮಾಣ ಯಾವ ಮಟ್ಟದಲ್ಲಿ ಹೆಚ್ಚಿದೆ ಎಂದು ಊಹಿಸುವುದೂ ಕಷ್ಟ ಎಂದು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಸಂಸ್ಥೆಗಳು ಹೇಳುತ್ತವೆ.

'ಬಡ ಕುಟುಂಬಗಳ ಮಕ್ಕಳನ್ನು ಕೋವಿಡ್ ಪಿಡುಗು ಎಂಥ ಸಂಕಷ್ಟಕ್ಕೆ ತಳ್ಳಿದೆ ಎಂಬುದರ ಸ್ಪಷ್ಟ ಚಿತ್ರಣ ಸಿಗಬೇಕಾದರೆ ಶಾಲೆಗಳು ಪುನಃ ಆರಂಭವಾಗಬೇಕು. ಹಿಂದೆ ಬರುತ್ತಿದ್ದವರಲ್ಲಿ ಎಷ್ಟು ಮಂದಿ ಮತ್ತೆ ಶಾಲೆಗೆ ಬರಲಾರಂಭಿಸಿದ್ದಾರೆ ಎಂಬ ಮಾಹಿತಿ ಶಾಲೆ ಆರಂಭವಾದರೆ ಲಭಿಸುತ್ತದೆ. ಶಾಲೆ ಬಿಟ್ಟವರ ಸಂಖ್ಯೆ ದೊಡ್ಡದಿದ್ದರೆ, ಅಂಥ ಮಕ್ಕಳನ್ನು ಹುಡುಕಿ, ಪುನಃ ಶಾಲೆಗೆ ಕರೆತರುವ ಬಹುದೊಡ್ಡ ಹೊಣೆ ಸರ್ಕಾರ ಮತ್ತು ಸಮಾಜದ ಮೇಲೆ ಇದೆ' ಎನ್ನುತ್ತಾರೆ ಮಕ್ಕಳ ಹಕ್ಕುಗಳಿಗೆ ಹೋರಾಟ ನಡೆಸುತ್ತಿರುವ 'ಪಡಿ' ಸಂಸ್ಥೆಯ ಮುಖ್ಯಸ್ಥ ಹಾಗೂ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರೆನ್ನಿ ಡಿಸೋಜ.

ಬೇಸಿಗೆ ರಜೆಯಲ್ಲಿ ಮಕ್ಕಳನ್ನು ದುಡಿಮೆಗೆ ಹಚ್ಚುವ ಪ್ರವೃತ್ತಿ ಹಿಂದೆಯೂ ಇತ್ತು, ಸ್ವಲ್ಪ ಪ್ರಮಾಣದಲ್ಲಿ ಈಗಲೂ ಇದೆ. ಗ್ರಾಮೀಣ ಪ್ರದೇಶದ ಬಡ ಕುಟುಂಬಗಳಿಗೆ ಇದು ಅನಿವಾರ್ಯವೂ ಸಹ. ನಮ್ಮ ಜತೆಗೆ ಮಕ್ಕಳು ಸಹ ದುಡಿದು ನಾಲ್ಕು ಕಾಸು ಸಂಪಾದಿಸಿದರೆ ಸಂಸಾರದ ಹೊರೆ ಸ್ವಲ್ಪ ಕಡಿಮೆಯಾಗುತ್ತದೆ ಎಂಬ ಭಾವನೆ ಅವರದ್ದು. ಮಕ್ಕಳು ಶಾಲೆಗೆ ಹೋಗುತ್ತಿದ್ದಷ್ಟು ದಿನ ಒಂದು ರೀತಿಯಾದರೆ, ಶಾಲೆ ಮುಗಿಯುತ್ತಿದ್ದಂತೆಯೇ ಇಂಥ ಪಾಲಕರ ಮನಸ್ಥಿತಿ ಬದಲಾಗುತ್ತದೆ. ಕಳೆದ ಒಂದೂವರೆ ವರ್ಷದಿಂದ ಶಾಲೆಯೇ ನಡೆಯದೆ, ಮಕ್ಕಳು ಮನೆಯಲ್ಲೇ ಇದ್ದಾರೆ. ಸೌಲಭ್ಯ ಇರುವವರು ಮಾತ್ರ ಆನ್‌ಲೈನ್ ತರಗತಿಗಳಿಗೆ ಹಾಜರಾಗಿದ್ದಾರೆ. ಉಳಿದ ಮಕ್ಕಳು ಇಡೀ ದಿನ ಮನೆಯಲ್ಲೇ ಇದ್ದಾರೆ. ಸಹಜವಾಗಿಯೇ ಪಾಲಕರು ಅವರನ್ನು ದುಡಿಮೆಗೆ ಹಚ್ಚಿದ್ದಾರೆ. ಕೋವಿಡ್ ಪಿಡುಗು ಇದನ್ನು ಅನಿವಾರ್ಯವಾಗಿಸಿದೆ ಎನ್ನುತ್ತಾರೆ ರೆನ್ನಿ.

ದುಡಿಮೆ ಅನಿವಾರ್ಯ

ಮಕ್ಕಳನ್ನು ದುಡಿಮೆಗೆ ಹಚ್ಚಿದ ಪೋಷಕರೆಲ್ಲರೂ, ಮಕ್ಕಳೂ ಹಣ ಸಂಪಾದಿಸಲಿ ಎಂಬ ಒಂದೇ ಉದ್ದೇಶದಿಂದ ಆ ಕೆಲಸ ಮಾಡಿಲ್ಲ. ಬದಲಿಗೆ, ಹೊಟ್ಟೆ ಹೊರೆಯಲು ಅದು ಅನಿವಾರ್ಯವಾಗಿದೆ. ವ್ಯಾಪಾರ- ಉದ್ಯೋಗ ಸ್ಥಗಿತಗೊಂಡಿದ್ದರಿಂದ ಕೆಲಸ ಇಲ್ಲದೆ ಕೈಗಳು ಬರಿದಾಗಿವೆ. ಕಡಿಮೆ ಸಂಬಳ ಕೊಟ್ಟು ಕೃಷಿ, ಮನೆಗೆಲಸದಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವವರು ಇದ್ದಾರೆ. ಹಾಗಾದರೂ ಬಂದಷ್ಟು ಹಣ ಬರಲಿ ಎಂದು ಒಲ್ಲದ ಮನಸ್ಸಿನಿಂದ ಮಕ್ಕಳನ್ನು ಕಳುಹಿಸಿದವರಿದ್ದಾರೆ.

'ಲಾಕ್‌ಡೌನ್‌ನಿಂದ ತುಂಬಾ ಕಷ್ಟವಾಯಿತು. ಐದು ತಿಂಗಳಿಂದ ಮನೆ ಬಾಡಿಗೆ ಕಟ್ಟಲೂ ಹಣವಿಲ್ಲ. ಪತ್ನಿಗೂ ಅನಾರೋಗ್ಯ. ಮಕ್ಕಳ ಓದಿಗೂ ಹಣ ಹೊಂದಿಸುವುದು ಕಷ್ಟ. ಮಗಳನ್ನೂ ಕೆಲಸಕ್ಕೆ ಇಳಿಸಬೇಕಾಯಿತು' ಎಂದು, ಮಗಳನ್ನು ತರಕಾರಿ ಮಾರಾಟಕ್ಕೆ ಹಚ್ಚಿದ ಮೈಸೂರಿನ ಹನುಮಂತು ಎಂಬುವವರು ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತಲೇ ತಿಳಿಸಿದರು.

ಬಾಲ ಕಾರ್ಮಿಕರ ಸಮೀಕ್ಷೆ ಈಗ ಶುರು

ಒಂದನೇ ಪುಟದಿಂದ

ಹೀಗೆ ಶಾಲೆ ಬಿಟ್ಟಿರುವ, ಶಾಲೆ ಮೆಟ್ಟಿಲನ್ನೇ ತುಳಿಯದ ಮಕ್ಕಳ ಪೈಕಿ ಅನೇಕರು ಬಾಲ ಕಾರ್ಮಿಕರಾಗಿರುವ ಸಾಧ್ಯತೆಯನ್ನು ಶಿಕ್ಷಣ ಇಲಾಖೆ ಅಲ್ಲಗಳೆಯುವುದಿಲ್ಲ.

ಸಮೀಕ್ಷೆಗೆ ಸೂಚನೆ: 'ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚಾಗಿರಬಹುದು ಎಂದು ಅನುಮಾನ ವ್ಯಕ್ತಪಡಿಸಿ ಈ ಬಗ್ಗೆ ಸಮೀಕ್ಷೆಗೆ ಶಿಕ್ಷಣ ಇಲಾಖೆ ಸೂಚಿಸಿದೆ. ಎಲ್ಲ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ನಿರ್ದೇಶನ ನೀಡಲಾಗಿದ್ದು, ಜುಲೈ 5ರಂದು ಸಮೀಕ್ಷೆ ಆರಂಭವಾಗಿದೆ' ಎಂದು ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷಾ 'ಪ್ರಜಾವಾಣಿ'ಗೆ ತಿಳಿಸಿದರು.

'ಲಾಕ್‌ಡೌನ್ ಸಂದರ್ಭದಲ್ಲಿ ಹೋಟೆಲ್, ಕಾರ್ಖಾನೆ ಹಾಗೂ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದವು. ಅಲ್ಲದೆ, ನಮ್ಮ ಇಲಾಖೆಯ ಸಿಬ್ಬಂದಿ ಕೋವಿಡ್ ಕರ್ತವ್ಯದಲ್ಲಿ ಮತ್ತು ಆಹಾರ ಕಿಟ್ ವಿತರಣೆಯಲ್ಲಿ ತೊಡಗಿದ್ದರು. ಈ ಸಂದರ್ಭದಲ್ಲಿ ದಾಳಿ ನಡೆಸಲಾಗಿಲ್ಲ. ಸಮೀಕ್ಷೆಯ ನಂತರ ಸ್ಪಷ್ಟ ಅಂಕಿ-ಅಂಶ ಸಿಗಬಹುದು' ಎಂದರು.

ಕೃಷಿಯಲ್ಲಿ ಹೆಚ್ಚು: 'ಈ ಬಾರಿ ಕೃಷಿ ಕ್ಷೇತ್ರದಲ್ಲಿ ಹೆಚ್ಚಾಗಿ ಮಕ್ಕಳು ದುಡಿಯುತ್ತಿರುವ ಸಾಧ್ಯತೆ ಇದೆ. ಸಮೀಕ್ಷೆಯ ನಿಖರ ಅಂಕಿ-ಅಂಶಗಳಿಗಾಗಿ ನಾವೂ ಕಾಯುತ್ತಿದ್ದೇವೆ' ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್‌ನ ನಿರ್ದೇಶಕ ನಾಗಸಿಂಹ ಜಿ. ರಾವ್ ಹೇಳಿದರು.

'1992ರ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸಹಿ ಹಾಕಿತ್ತು. ಅದರ ಪ್ರಕಾರ, ಐದು ವರ್ಷಗಳಲ್ಲಿ ಬಾಲಕಾರ್ಮಿಕ ಪದ್ಧತಿ ತೊಲಗಬೇಕಿತ್ತು. ಆದರೆ, 30 ವರ್ಷಗಳಾದರೂ ಆಗಿಲ್ಲ' ಎಂದು ಬೇಸರಿಸಿದರು.

'ಈ ಒಡಂಬಡಿಕೆಗೆ ಇತ್ತೀಚೆಗೆ ಹದಿಹರೆಯದವರ ಕಾಯ್ದೆಯನ್ನೂ ಸೇರಿಸಲಾಗಿದೆ. ಇದರಲ್ಲಿ, ಮಕ್ಕಳೂ ಮನೆ ಕೆಲಸಗಳಿಗೆ ಸಹಕರಿಸಬಹುದು ಎಂದು ಹೇಳಲಾಗಿದೆ. ಮನೆಗೆಲಸದ ಹೆಸರಲ್ಲಿ ಮಕ್ಕಳನ್ನು ದುಡಿಮೆಗೆ ಹಚ್ಚಲು ಈ ಕಾಯ್ದೆಯು ಪೋಷಕರಿಗೆ ಸ್ವಾತಂತ್ರ್ಯ ನೀಡಿದೆ. ಇಂಥ ಪ್ರಕರಣಗಳಲ್ಲಿ ಯಾರೂ ದೂರು ನೀಡದ ಕಾರಣ ಸ್ಪಷ್ಟ ಅಂಕಿ-ಅಂಶ ಸಿಗುವುದೇ ಇಲ್ಲ' ಎನ್ನುತ್ತಾರೆ ಅವರು.

'ಭೌತಿಕ ತರಗತಿ ಆರಂಭವಾದ ನಂತರ ಎಷ್ಟು ಮಕ್ಕಳು ಶಾಲೆಗೆ ಗೈರಾಗುತ್ತಾರೆ ಎಂಬುದನ್ನು ಗಮನಿಸಬೇಕು. ಶಾಲೆ ಆರಂಭವಾಗಿ ಮೂರ್ನಾಲ್ಕು ತಿಂಗಳು ಸಮಯ ನೀಡಬೇಕು. ಆನಂತರವೂ ವಿದ್ಯಾರ್ಥಿಗಳು ಬಂದಿಲ್ಲವೆಂದರೆ ಅವರನ್ನು ಶಾಲೆಯಿಂದ ದೂರ ಉಳಿದವರು ಎನ್ನಬಹುದು' ಎನ್ನುತ್ತಾರೆ ಚೈಲ್ಡ್ ರೈಟ್ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕ ವಾಸುದೇವ ಶರ್ಮಾ.

ಕಾನೂನು ಸರಳವಾಗಬೇಕು

ಕಾರ್ಖಾನೆಯಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದು ಕಂಡುಬಂದರೆ ಅದರ ಮಾಲೀಕರಿಗೆ ಶಿಕ್ಷೆ ಕೊಡಿಸಬಹುದು. ಆದರೆ ಕೃಷಿ, ಮನೆಗೆಲಸದಲ್ಲಿ ತೊಡಗಿದ್ದ ಮಕ್ಕಳ ರಕ್ಷಣೆ ಅಷ್ಟು ಸುಲಭವಲ್ಲ ಎನ್ನುತ್ತಾರೆ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು.

ಕೃಷಿ ಮತ್ತು ಅಪಾಯಕಾರಿಯಲ್ಲದ ಮನೆಗೆಲಸಗಳಲ್ಲಿ 14ರಿಂದ 18 ವರ್ಷದೊಳಗಿನ ಮಕ್ಕಳನ್ನೂ ತೊಡಗಿಸಿಕೊಳ್ಳಲು ಅವಕಾಶ ಇದೆ. ಆದರೆ ಇದಕ್ಕೂ ನಿಬಂಧನೆಗಳಿವೆ. ಇಂತಿಷ್ಟು ಗಂಟೆಗಳ ದುಡಿಮೆಯ ನಂತರ ಒಂದು ಗಂಟೆ ವಿರಾಮ, ಕನಿಷ್ಠ ವೇತನದ ಜೊತೆಗೆ ಮಕ್ಕಳ ಮೇಲ್ವಿಚಾರಣೆಗೆ ಯಾರಾದರೂ ಇರಬೇಕು ಎಂದೆಲ್ಲ ನಿಯಮಗಳು ಹೇಳುತ್ತವೆ. ಆದರೆ, ಪಾಲನೆಯಾಗುತ್ತಿಲ್ಲ.

ಕುಟುಂಬವೇ ನಡೆಸುವ ವ್ಯಾಪಾರದಲ್ಲೂ ಮಕ್ಕಳು ಮನೆಯವರಿಗೆ ನೆರವಾಗಲು ಅವಕಾಶ ಇದೆ. ಆದರೆ ಕುಟುಂಬ ಎಂದರೆ ಯಾರ್‍ಯಾರು ಎಂಬ ಪ್ರಶ್ನೆ ಎದುರಾಗುತ್ತದೆ.

'ಇಂಥ ಮಕ್ಕಳ ರಕ್ಷಣೆಗೆ ಹೋದರೆ ಕಾನೂನಿನ ಅವಕಾಶ ಮುಂದಿಟ್ಟು ವಾದಿಸುತ್ತಾರೆ. ಅದನ್ನೂ ಮೀರಿ ಮಕ್ಕಳನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸಲು ಮುಂದಾದರೆ, ಪಾಲಕರೇ ಬಂದು ತಾವೇ ಕೆಲಸಕ್ಕೆ ಕಳುಹಿಸಿದ್ದಾಗಿ, ಮಾಲೀಕರ ಪರ ಹೇಳಿಕೆ ನೀಡಿ ಮಕ್ಕಳನ್ನು ಬಿಡಿಸಿಕೊಂಡು ಹೋಗುತ್ತಾರೆ' ಎನ್ನುತ್ತಾರೆ ರೆನ್ನಿ ಡಿಸೋಜ.

ಮಕ್ಕಳ ಹಕ್ಕುಗಳ ರಕ್ಷಣೆ ವಿಚಾರದಲ್ಲಿ ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಕ್ಕಳ ಸಹಾಯವಾಣಿಗೆ ಬೇರೆಬೇರೆ ನಿಯಮಾವಳಿಗಳಿವೆ. ಕೆಲವು ನಿಯಮ ಪರಸ್ಪರ ತಾಳೆಯಾಗದಿರುವುದರಿಂದ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದು ಕಷ್ಟವಾಗುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿ ಒಂದಿಷ್ಟು ದಂಡ ವಿಧಿಸಲು ಮಾತ್ರ ಸಾಧ್ಯವಾಗುತ್ತದೆ. ಎಲ್ಲವನ್ನೂ ಸಮನ್ವಯಗೊಳಿಸುವಂಥ, ಸರಳ ನಿಯಮಾವಳಿ ರೂಪಿಸುವ ಅಗತ್ಯವಿದೆ.

ತಪ್ಪಿತಸ್ಥರಿಗೆ ಶಿಕ್ಷೆಯಾಗಬಹುದು, ಕುಟುಂಬಕ್ಕೆ ಪರಿಹಾರವೂ ಬರಬಹುದು. ಆದರೆ ಯಾತನೆ ಅನುಭವಿಸಿದ ಮಗುವಿಗೆ ಸಿಗುವುದೇನು? ಭವಿಷ್ಯ ರೂಪಿಸಿಕೊಳ್ಳಲು ಅಂಥ ಮಕ್ಕಳಿಗೆ ಇರುವ ಹಾದಿ ಯಾವುದು ಎಂಬ ಪ್ರಶ್ನೆಗಳಿಗೆ ಬಹುತೇಕ ಸಂದರ್ಭಗಳಲ್ಲಿ ಉತ್ತರ ಇರುವುದಿಲ್ಲ.

ಸಂಬಳ ನೀಡದೇ ದುಡಿಸಿಕೊಳ್ಳುತ್ತಿದ್ದ ಬಗ್ಗೆ ದೂರು

ಅಧಿಕಾರಿಗಳ ದಾಳಿ: 7 ಮಕ್ಕಳ ರಕ್ಷಣೆ

ಪ್ರಜಾವಾಣಿ ವಾರ್ತೆ

ಸುಬ್ರಮಣ್ಯ: ಮಕ್ಕಳು, ಮಹಿಳೆಯರು ಸೇರಿದಂತೆ ಇತರರನ್ನು ಸಂಬಳ ನೀಡದೆ ಜೀತದಾಳಿನಂತೆ ದುಡಿಸಿಕೊಳ್ಳುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಶನಿವಾರ ಸುಳ್ಯ ತಾಲ್ಲೂಕಿನ ಪಂಬೆತ್ತಾಡಿ ಗ್ರಾಮದ ವಿಶ್ವನಾಥ ಭಟ್ ಅವರ ಮನೆಯ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

7 ಮಕ್ಕಳನ್ನು ರಕ್ಷಿಸಲಾಗಿದ್ದು, ಅವರನ್ನು ಜಿಲ್ಲಾ ಮಕ್ಕಳ ರಕ್ಷಣಾ ಕೇಂದ್ರದ ಎದುರು ಹಾಜರುಪಡಿಸಲಾಗಿದೆ. ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಅಂಗವಿಕಲರೂ ಈ ಮನೆಯಲ್ಲಿದ್ದು, ಸರಿಯಾದ ದಾಖಲೆ ಕಂಡು ಬಂದಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವನಾಥ ಅವರು 8–10 ಮಕ್ಕಳು ಹಾಗೂ ಮಹಿಳೆಯರನ್ನು ದುಡಿಸಿಕೊಳ್ಳುತ್ತಿದ್ದು, ಸಂಬಳ ನೀಡುತ್ತಿಲ್ಲ ಎಂಬ ಆರೋಪ ಕೇಳಿಬಂದಿತ್ತು. ಅಲ್ಲದೇ ಪುಟ್ಟ ಮಕ್ಕಳು ದನ ಮೇಯಿಸುತ್ತಿರುವ ವಿಡಿಯೊ ವೈರಲ್ ಆಗಿತ್ತು. ಸಾಮಾಜಿಕ ಸಂಘಟನೆ ನೀತಿ ತಂಡಕ್ಕೆ ದೊರೆತ ಮಾಹಿತಿ ಹಿನ್ನೆಲೆಯಲ್ಲಿ 'ಬಚಪನ್ ಬಚಾವೊ' ಸಂಸ್ಥೆಯು, ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶಕರಿಗೆ ದೂರು ನೀಡಿತ್ತು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಕಾರ್ಮಿಕ ಇಲಾಖೆ ಅಧಿಕಾರಿಗಳು, ಬಚಪನ್ ಬಚಾವೋ ರಾಜ್ಯ ಸಮನ್ವಯಾಧಿಕಾರಿ ಬಿನು ವರ್ಗೀಸ್, ಸುಳ್ಯ ತಹಶೀಲ್ದಾರ್ ಅನಿತಾಲಕ್ಷ್ಮೀ ನೇತೃತ್ವದಲ್ಲಿ, ಸುಳ್ಯ ಸಿಡಿಪಿಒ ರಶ್ಮಿ ದಾಳಿ ನಡೆಸಿದ್ದಾರೆ.

ನೆಡುತೋಪು, ಕ್ವಾರಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಮರೀಚಿಕೆ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಮೈಸೂರು ಕಾಗದ ಕಾರ್ಖಾನೆಗೆ (ಎಂಪಿಎಂ) ಕಚ್ಚಾ ಸಾಮಗ್ರಿ ಪೂರೈಸಲು ಮೀಸಲಿಟ್ಟ ಎಪಿಎಂ ನೆಡುತೋಪುಗಳು ಹಾಗೂ ಕಲ್ಲು ಕ್ವಾರಿಗಳಲ್ಲಿ ಕೆಲಸ ಮಾಡುತ್ತಿರುವ ಹೊರ ಜಿಲ್ಲೆ, ಹೊರ ರಾಜ್ಯಗಳ ಕಾರ್ಮಿಕರ ಮಕ್ಕಳಿಗೆ ಹಲವು ವರ್ಷಗಳಿಂದ ಅವರಿರುವ ಜಾಗದಲ್ಲೇ ಟೆಂಟ್ ಶಾಲೆಗಳನ್ನು ತೆರೆದು ಪಾಠ ಮಾಡಲಾಗುತ್ತಿತ್ತು. ಇಂತಹ ಶಾಲೆಗಳು, ಕೋವಿಡ್ ಸಂಕಷ್ಟ ಆರಂಭವಾದ ನಂತರ ಕಣ್ಮರೆಯಾಗಿವೆ.

ಟೆಂಟ್ ಶಾಲೆಗಳೇ ಕಣ್ಮರೆ

ಶಾಲೆಗಳು ಆರಂಭವಾಗಲಿಲ್ಲ. ಆನ್‌ಲೈನ್ ಪಾಠಕ್ಕೆ ಅಗತ್ಯವಾದ ಮೊಬೈಲ್ ಫೋನ್, ಟ್ಯಾಬ್‌ಗಳು ಕಾರ್ಮಿಕ ಕುಟುಂಬಗಳ ಬಳಿ ಇಲ್ಲ. ಒಬ್ಬಿಬ್ಬರ ಬಳಿ ಇದ್ದರೂ ಅವರು ಕೆಲಸ ಮಾಡುವ ಸ್ಥಳಗಳಲ್ಲಿ ನೆಟ್‌ವರ್ಕ್ ಸಿಗುವುದಿಲ್ಲ. 22,500 ಹೆಕ್ಟೇರ್ ವ್ಯಾಪಿಸಿರುವ ನೆಡುತೋಪುಗಳಲ್ಲಿ ಮರ ಕಡಿಯಲು, ಹೊಸದಾಗಿ ಸಸಿ ನೆಡುವ ಕೆಲಸಗಳಲ್ಲಿ ಹಲವು ಕುಟುಂಬಗಳು ತೊಡಗಿಸಿಕೊಂಡಿವೆ. 100ಕ್ಕೂ ಹೆಚ್ಚು ಕಲ್ಲುಕ್ವಾರಿಗಳಲ್ಲಿ ಬಿಹಾರ, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ ಮತ್ತಿತರ ರಾಜ್ಯಗಳ ಕಾರ್ಮಿಕರು ಇದ್ದಾರೆ. ಅಂತಹ ಕುಟುಂಬಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಬಹುತೇಕ ಮಕ್ಕಳು ಅಪ್ಪ, ಅಮ್ಮನ ಕೆಲಸಕ್ಕೆ ಸಹಾಯಕರಾಗಿದ್ದಾರೆ. ವಿದ್ಯಾಗಮ ಮತ್ತಿತರ ಪ್ರಯೋಗಗಳ ಸಮಯದಲ್ಲೂ ಇಂತಹ ಮಕ್ಕಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ಹಾಗಾಗಿ, ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಮರೀಚಿಕೆಯಾಗಿದೆ.

'ನಮಗೆ ಇಬ್ಬರು ಮಕ್ಕಳು, 5ನೇ ತರಗತಿಯವರೆಗೆ ಹೊಸೂರಿನಲ್ಲೇ ಓದಿದ್ದರು. ಇಲ್ಲಿ ಬಂದ ನಂತರ ಟೆಂಟ್ ಶಾಲೆಯಲ್ಲಿ ಕಲಿತರು. ಕೋವಿಡ್ ನಂತರ ಶಾಲೆಗೆ ಹೋಗಿಲ್ಲ. ಟೆಂಟ್‌ನಲ್ಲೇ ಇರಲು ಬೇಸರವಾಗಿ ನಮ್ಮ ಜತೆ ದುಡಿಯುತ್ತಿದ್ದಾರೆ. ಮತ್ತೆ ಟೆಂಟ್ ಶಾಲೆ ಆರಂಭಿಸಿದರೆ ಕಳುಹಿಸುತ್ತೇವೆ' ಎನ್ನುತ್ತಾರೆ ಜಿಲ್ಲೆಯ ಕಲ್ಲು ಕ್ವಾರಿಯಲ್ಲಿ ಕೆಲಸ ಮಾಡುವ ತಮಿಳುನಾಡಿನ ದಂಪತಿ.

ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿದರೂ ಬಾಲ ಕಾರ್ಮಿಕರು ಪತ್ತೆಯಾಗಿಲ್ಲ ಎನ್ನುವುದು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಹೇಳಿಕೆ. ಹಿಂದೆ ಜಿಲ್ಲೆಯಲ್ಲಿ 10ಕ್ಕೂ ಹೆಚ್ಚು ಬಾಲ ಕಾರ್ಮಿಕ ಶಾಲೆಗಳು ಇದ್ದವು. ಈಗ, ಅಂತಹ ಯಾವ ಶಾಲೆಯೂ ಕಾರ್ಯನಿರ್ವಹಿಸುತ್ತಿಲ್ಲ. ಇಲಾಖೆಯ ಅಂಕಿಸಂಖ್ಯೆಗಳ ಪ್ರಕಾರ, ಜಿಲ್ಲೆಯು ಬಾಲಕಾರ್ಮಿಕ ಪದ್ಧತಿಯಿಂದ ಮುಕ್ತವಾಗಿದೆ. ಆದರೆ, ಶಾಲೆ ಇಲ್ಲದ ಪರಿಣಾಮ ಮಕ್ಕಳು ಹಲವು ಕಡೆ ಕೆಲಸ ಮಾಡುತ್ತಿದ್ದರೂ ಅದು ತಾತ್ಕಾಲಿಕ ಅಷ್ಟೆ ಎಂಬ ಸಮರ್ಥನೆ ಅಧಿಕಾರಿಗಳದ್ದು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 11-7-1996

• **ತಮಿಳುನಾಡಿಗೆ ನೀರು: ಖಂಡನೆ**

ಬೆಂಗಳೂರು, ಜುಲೈ 10– ತಮಿಳುನಾಡಿಗೆ ಐದು ಟಿಎಂಸಿ ಕಾವೇರಿ ನೀರು ಬಿಟ್ಟ ರಾಜ್ಯ ಸರ್ಕಾರದ ನಿರ್ಧಾರವನ್ನು ಖಂಡಿಸುವ ಹಾಗೂ ತಕ್ಷಣವೇ ನೀರು ಬಿಡುವುದನ್ನು ನಿಲ್ಲಿಸುವಂತೆ ಆಗ್ರಹಿಸುವ ನಿರ್ಣಯವನ್ನು ವಿರೋಧ ಪಕ್ಷಗಳು ಇಂದು ವಿಧಾನಸಭೆಯಲ್ಲಿ ಮಂಡಿಸಿದವು.

'ಪ್ರಧಾನಿ ಎಚ್.ಡಿ. ದೇವೇಗೌಡರನ್ನು ತೃಪ್ತಿಪಡಿಸಲು ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಟ್ಟಿದೆ' ಎಂದು ವಿರೋಧ ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ನೇರವಾಗಿ ಆರೋಪಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 11-7-1971

• **ಪ್ರಧಾನಿ ಜತೆ ಸಿ.ಎಸ್. ಚರ್ಚೆ**

ಮದ್ರಾಸ್, ಜುಲೈ 10– ಕಾವೇರಿ ಜಲವಿವಾದವನ್ನು ಪಂಚಾಯ್ತಿಗೆ ಒಪ್ಪಿಸುವುದನ್ನು ಮೈಸೂರಿನಲ್ಲಿ ಜನಪ್ರಿಯ ಸರ್ಕಾರ ರಚನೆಯಾಗುವವರೆಗೆ ಮುಂದಕ್ಕೆ ಹಾಕಬೇಕಾದರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಹೇಮಾವತಿ ಮತ್ತಿತರ ಅಣೆಕಟ್ಟುಗಳ ನಿರ್ಮಾಣ ಕಾರ್ಯವನ್ನು ಕೂಡಲೇ ನಿಲ್ಲಿಸುವಂತೆ ಮೈಸೂರಿಗೆ ಸೂಚಿಸಬೇಕು ಎಂಬ ತಮಿಳುನಾಡು ನಿಲುವಿನ ಬಗ್ಗೆ ಪ್ರಧಾನಿ ಜತೆ ಚರ್ಚಿಸಲು ಕೇಂದ್ರ ಯೋಜನಾ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ಅಂಗೀಕರಿಸಿದ್ದಾರೆ.

ದಿನ ಭವಿಷ್ಯ

ಭಾನುವಾರ ಜುಲೈ 11, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ಪ್ರತಿಪದೆ ಗಂ. 0-53 (ಬೆ. 6-29) ಭಾನುವಾರ ನಿತ್ಯ ನಕ್ಷತ್ರ ಪುಷ್ಯ ಗಂ. 49-10 (ರಾ 1-48) ಹರ್ಷ ನಾಮ ಯೋಗ ಗಂ. 26-42 ಬವ ಕರಣ ಗಂ. 0-53 ವಿಷ ಗಂ. 6-53 ಅಮೃತ ಗಂ. 31-55 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-03 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 2, 7

ಮೇಷ: ಹಣಕಾಸು ವ್ಯವಹಾರಗಳಲ್ಲಿ ಎಚ್ಚರಿಕೆಯಿಂದಿರುವುದು ಒಳಿತು. ಮನೆಯಲ್ಲಿ ಮಂಗಳ ಕಾರ್ಯಗಳಿಗೆ ಚಾಲನೆ ದೊರಕಲಿದೆ. ದಾಂಪತ್ಯದಲ್ಲಿ ಸಂತೃಪ್ತಿ. ಯಾವುದೇ ವಿಚಾರದಲ್ಲಿ ಜಾಮೀನು ನೀಡದಿರುವುದೇ ಉತ್ತಮ.

ವೃಷಭ: ವ್ಯಾಪಾರ, ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಏರುಪೇರು. ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ. ಮಕ್ಕಳ ಆರೋಗ್ಯದಲ್ಲಿ ತೊಂದರೆ ಕಾಣುವ ಸಾಧ್ಯತೆ. ಗೃಹಾಲಂಕಾರ ಸಾಮಗ್ರಿಗಳಿಗಾಗಿ ಖರ್ಚು.

ಮಿಥುನ: ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಆರೋಗ್ಯದಲ್ಲಿ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ವಿದ್ಯಾಭ್ಯಾಸದಲ್ಲಿ ತೊಡಕು. ಸಹೋದರರೊಂದಿಗೆ ಹೊಂದಾಣಿಕೆಯಿಂದಿರುವುದು ಉತ್ತಮ.

ಕರ್ಕಾಟಕ: ಧವಸ ಧಾನ್ಯಗಳ ವ್ಯಾಪಾರಸ್ಥರಿಗೆ ಹೆಚ್ಚಿನ ವಹಿವಾಟಿನಿಂದಾಗಿ ಆದಾಯದಲ್ಲಿ ಹೆಚ್ಚಳ. ತಾಯಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ನೌಕರರು ಸಹೋದ್ಯೋಗಿಗಳೊಂದಿಗೆ ಹೊಂದಾಣಿಕೆಯಿಂದಿರುವುದು ಸೂಕ್ತ.

ಸಿಂಹ: ರಾಜಕೀಯದಲ್ಲಿ ಯಶಸ್ಸು. ಮಹಿಳೆಯರಿಗೆ ಸಾಮಾಜಿಕ ಗೌರವಗಳು ದೊರೆಯುವುದು. ಅತಿಯಾದ ಮಾತಿನಿಂದ ತೊಂದರೆಗೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ತಾಯಿಯ ಆರೋಗ್ಯದ ವಿಚಾರವಾಗಿ ಅಧಿಕ ವೆಚ್ಚ ಭರಿಸಬೇಕಾದೀತು.

ಕನ್ಯಾ: ಉದ್ಯೋಗ ವ್ಯವಹಾರಗಳಲ್ಲಿ ಧನಲಾಭ. ಸಂಗೀತಗಾರರಿಗೆ ಉತ್ತಮ ಅವಕಾಶಗಳು ದೊರೆತು ಆದಾಯ. ನೌಕರಸ್ಥರಿಗೆ ಕಚೇರಿಯಲ್ಲಿ ಬಿಡುವಿಲ್ಲದ ಕೆಲಸ ಕಾರ್ಯಗಳು. ತಂದೆಯ ಆರೋಗ್ಯದಲ್ಲಿ ವ್ಯತ್ಯಯ ಸಂಭವ.

ತುಲಾ: ವ್ಯವಹಾರದಲ್ಲಿ ಸುಧಾರಣೆ. ವೈಯಕ್ತಿಕ ಹಾಗೂ ಮನೆಯ ವಿಚಾರಗಳನ್ನು ಯಾರಲ್ಲಿಯೂ ಹೇಳಿಕೊಳ್ಳದಿರುವುದು ಉತ್ತಮ. ವಸ್ತ್ರ ವ್ಯಾಪಾರಿಗಳಿಗೆ ಲಾಭ. ಮಹಿಳೆಯರ ಮನೋಭಿಲಾಷೆಗಳು ಈಡೇರಿ ಸಂತಸ.

ವೃಶ್ಚಿಕ: ಸರ್ಕಾರಿ ಅಧಿಕಾರಿಗಳಿಂದ ನೆರವು ದೊರಕಿ ವ್ಯವಹಾರಗಳು ಸುಗಮಗೊಳ್ಳಲಿವೆ. ಸ್ಥಿರಾಸ್ತಿಯನ್ನು ಖರೀದಿಸುವ ಸಾಧ್ಯತೆ. ಉದ್ಯಮದಲ್ಲಿ ಸಂಗಾತಿಯಿಂದ ಉತ್ತಮ ಸಹಕಾರ ದೊರೆತು ಉತ್ಸಾಹ ಮೂಡುವುದು.

ಧನು: ಮಿತ್ರರ ಸಹಾಯದಿಂದ ಧನಲಾಭ. ಆಸ್ತಿ ವಿವಾದಗಳು ಬಗೆಹರಿಯುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದು ಸೂಕ್ತ. ಕುಟುಂಬ ಸದಸ್ಯರ ಜೊತೆಯಲ್ಲಿ ಪುಣ್ಯಕ್ಷೇತ್ರಗಳ ದರ್ಶನ ಮಾಡುವ ಸಾಧ್ಯತೆ.

ಮಕರ: ಆರ್ಥಿಕ ಸಮಸ್ಯೆಗಳು ಪರಿಹಾರವಾಗಿ ಹೊಸ ವಾಹನ ಖರೀದಿ ಸಾಧ್ಯತೆ. ಮಂಗಳಕಾರ್ಯ ನಿಶ್ಚಯವಾಗುವ ನಿರೀಕ್ಷೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧ ಕೂಡಿಬರುವ ಸಾಧ್ಯತೆ. ಬಂಧುಗಳ ಆಗಮನದಿಂದ ಸಂತಸ.

ಕುಂಭ: ಮಹಿಳೆಯರಿಗೆ ಅತ್ಯಂತ ಸಂತಸದ ದಿನ. ವ್ಯವಹಾರದಲ್ಲಿ ಹೊಸತನವನ್ನು ರೂಢಿಸಿಕೊಳ್ಳಲಿದ್ದೀರಿ. ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ಸಂಶೋಧನಾ ಕ್ಷೇತ್ರದಲ್ಲಿರುವವರಿಗೆ ಪ್ರಯತ್ನದಲ್ಲಿ ಯಶಸ್ಸು.

ಮೀನ: ಲೇವಾದೇವಿ ವ್ಯವಹಾರಗಳಿಂದ ಅಧಿಕ ಆದಾಯ ನಿರೀಕ್ಷೆ. ಕುಶಲ ಕರ್ಮಿಗಳಿಗೆ ಅತ್ಯಂತ ಹೆಚ್ಚಿನ ಬೇಡಿಕೆ ಬರುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಯಶಸ್ಸು. ಸಂಬಂಧಿಗಳಿಂದ ಶುಭವಾರ್ತೆ.

ನಿಮ್ಮ ಜನ್ಮದಿನ 11-ಜುಲೈ ಇಂದು ಅತ್ಯಂತ ಶುಭದಾಯಕ. ಹೊಸ ಆಸ್ತಿಗಳನ್ನು ಖರೀದಿಸಲಿದ್ದೀರಿ. ಹೊಸ ಯೋಜನೆಗಳನ್ನು ಪ್ರಾರಂಭಿಸುವ ವಿಚಾರದಲ್ಲಿ ಎಚ್ಚರಿಕೆಯ ನಡೆಯ ಅಗತ್ಯ. ವರ್ಷಪೂರ್ತಿ ಸಂತೋಷ ಸಂಭ್ರಮ ಮನೆ ಮಾಡಲಿವೆ. ಉತ್ತಮ ಹೊಸ ಬಾಂಧವ್ಯಗಳು ಬೆಳೆದು ಬರಲಿವೆ.

ಪದಬಂಧ 4654

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೌರವರ ಸೋದರಮಾವ (3)
6.ನಾಜೂಕಾಗಿರುವ ಸ್ವಭಾವ (5)
7.ಚಿನ್ನ, ಬೆಳ್ಳಿ ಕೆಲಸ ಮಾಡುವವನು (3)
10.ಆಶ್ರಯವನ್ನು ಬಯಸುವುದು (5)
15.ವ್ಯತಿರಿಕ್ತವಾದುದನ್ನು ಹೀಗನ್ನಿ (3)
16.ಮನಸ್ಸನ್ನು ಹತೋಟಿಯಲ್ಲಿಡುವುದು (5)
17.ವರ ಪಡೆದಿರುವ ವಾಚಾಳಿ (3)

ಮೇಲಿಂದ ಕೆಳಕ್ಕೆ

1.ನೂರು ಹೆಜ್ಜೆ ನಡೆಯುವುದು (4)
2.ದಯೆಯಿಲ್ಲದ ಮಾತು (3)
3.ಕನ್ನಡಿಗ ಹಿಡಿದಿರುವ ಲೆನ್ಸ್ (3)
4.ಸದ್ಯದ ಪರಿಸ್ಥಿತಿಯಿದು (3)
5.ಒಬ್ಬ ವ್ಯಕ್ತಿ ಅಥವಾ ಸಂಘದ ಪರವಾಗಿ ನೇಮಿಸಲ್ಪಟ್ಟವ (4)
8.ಪದ್ಯಗಳ ಸಾಲು (3)
9.ಮಗನೊಡನಿರುವ ಪುತ್ರಿ (3)
11.ಮುಟ್ಟಿದುದುದನ್ನು ಚಿನ್ನವನ್ನಾಗಿ ಮಾಡುವ ಶಿಲೆ (4)
12.ಎಲ್ಲವೂ ನನ್ನದೆಂಬ ಭಾವನೆ (4)
13.ನಿಯಮಿತವಾಗಿ ಕಾಣಿಸುವ ಹೆಂಗಸು (3)
14.ಅಪಹಾಸ್ಯವನ್ನು ಮಾಡುವವನು (3)
15.ಹಿಂದೂ ಸಂವತ್ಸರದಲ್ಲಿ ಎರಡನೆಯದು (3)



4653ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚದುರಂಗ 3.ಆಯುರ್ವೇದ 5.ಯಾತ್ರಿಕ 7.ದಿನಕರ 8.ವಿದ್ಯಮಾನ 10.ಕಬಳಿಸು 12.ಅವಾಂತರ 14.ದಡಿಯ 15.ಗೆಳೆತನ 16.ತರಕಾರಿ

ಮೇಲಿಂದ ಕೆಳಕ್ಕೆ: 1.ಚತುಷ್ಪಾದಿ 2.ಗಡಿಯಾರ 3.ಆಶುಕವಿ 4.ದಶಮಾನ 7.ನವಾಬ 9.ಮಾವುತ 10.ಕವಳಿಗೆ 11.ಸುದರ್ಶನ 12.ಆಯಸ್ಕಾಂತ 13.ರಹದಾರಿ

ಸುಡೊಕು 5040

	6			9				8
1			8			5		
		2		6			9	7
		7			9	6		
4	2			3			5	9
6			7		8			
2		5	4		7	9		6
	4						7	
9		6	3		5		4	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5039 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಕ್ಷಿಪ್ತ ಸುದ್ದಿ

ಇರಾನ್: ರೈಲು ಸೇವೆ ಅಸ್ತವ್ಯಸ್ತಗೊಳಿಸಿದ 'ಸೈಬರ್ ಹ್ಯಾಕರ್ಸ್'

ಟೆಹ್ರಾನ್ (ಎಪಿ): ಸುಳ್ಳು ಸಂದೇಶಗಳನ್ನು ರವಾನಿಸುವ ಮೂಲಕ ಇರಾನ್‌ನಲ್ಲಿ ರೈಲು ಸೇವೆಯನ್ನು 'ಹ್ಯಾಕರ್'ಗಳು ಅಸ್ತವ್ಯಸ್ತಗೊಳಿಸಿದ ಘಟನೆ ನಡೆದಿದೆ.

ರೈಲ್ವೆ ಸಂಚಾರ ವ್ಯವಸ್ಥೆಯ ಮೇಲೆ ದಾಳಿ ಮಾಡಿದ ಸೈಬರ್ ಹ್ಯಾಕರ್‌ಗಳು, ರೈಲು ಸಂಚಾರ ವಿಳಂಬ ಅಥವಾ ರದ್ದಾಗಿರುವ ಕುರಿತು ದೇಶದ ಎಲ್ಲ ರೈಲ್ವೆ ನಿಲ್ದಾಣಗಳ ಫಲಕಗಳಲ್ಲಿ ಸುಳ್ಳು ಮಾಹಿತಿ ಪ್ರಕಟಿಸಿದ್ದಾರೆ. ಇದರಿಂದಾಗಿ, ಶುಕ್ರವಾರ ದೇಶದಾದ್ಯಂತ ರೈಲು ಸೇವೆ ಅಸ್ತವ್ಯಸ್ಥಗೊಂಡಿತು.

ಚೀನಾ ಅಫ್ಗಾನಿಸ್ತಾನದ ಸ್ನೇಹಿತ: ತಾಲಿಬಾನ್

ಬೀಜಿಂಗ್ (ಪಿಟಿಐ): ಚೀನಾವನ್ನು ಅಫ್ಗಾನಿಸ್ತಾನದ 'ಸ್ನೇಹಿತ' ಎಂದೇ ತಾನು ನೋಡುವುದಾಗಿ ಅಲ್ಲಿನ ತಾಲಿಬಾನ್ ಹೇಳಿದ್ದು, ನಿಷೇದಿತ ಕ್ಸಿನ್‌ಜಿಯಾಗ್ ಪ್ರಾಂತ್ಯದಲ್ಲಿನ ಉಯಿಗರ್ ಇಸ್ಲಾಮಿ ಉಗ್ರರನ್ನು ಪುರಸ್ಕರಿಸುವುದಿಲ್ಲ ಎಂದು ಚೀನಾಗೆ ಭರವಸೆ ನೀಡಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಈ ಭರವಸೆ ಚೀನಾ ಸರ್ಕಾರಕ್ಕೆ ದೊಡ್ಡ ನಿರಾಳತೆನೀಡಿದೆ. ಅಫ್ಗಾನಿಸ್ತಾನದಿಂದ ಅಮೆರಿಕ ಸೇನೆಯ ವಾಪಸಾತಿ ಪ್ರಕ್ರಿಯೆ ಹಿಂದೆಯೇ ಅಲ್ಲಿ ನೆಲೆ ಕಂಡುಕೊಂಡಿರುವ ತಾಲಿಬಾನ್ ಈ ಭರವಸೆ ನೀಡಿದೆ.

ಅಮೆರಿಕ ಸೇನೆಯ ನೆರವು ಕೋರಿದ ಹೈಟಿ ಹಂಗಾಮಿ ಪ್ರಧಾನಿ

ಪೋರ್ಟ್-ಓ-ಪ್ರಿನ್ಸ್ (ಎಪಿ): ಹೈಟಿ ಅಧ್ಯಕ್ಷ ಜೊವಿನೆಲ್ ಮೊಯಿಸ್ ಹತ್ಯೆಯ ನಂತರ ದೇಶದಲ್ಲಿ ಶಾಂತಿ ಕಾಪಾಡುವುದರ ಜೊತೆಗೆ ಮೂಲಸೌಕರ್ಯಗಳನ್ನು ರಕ್ಷಿಸುವ ನಿಟ್ಟನಲ್ಲಿ ಹಂಗಾಮಿ ಪ್ರಧಾನಿ ಕ್ಲೌಡ್ ಜೋಸೆಫ್, ಅಮೆರಿಕ ಸೇನೆಯ ನೆರವು ಕೋರಿದ್ದಾರೆ.

'ಖಂಡಿತವಾಗಿಯೂ ನಮಗೆ ಸಹಾಯ ಬೇಕು ಮತ್ತು ನಮ್ಮ ಅಂತರರಾಷ್ಟ್ರೀಯ ಪಾಲುದಾರರನ್ನು ಸಹಾಯಕ್ಕಾಗಿ ವಿನಂತಿ ಮಾಡಿದ್ದೇವೆ ಎಂದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಜೂನ್‌ನಲ್ಲಿ ಕೋವಿಡ್ ಪ್ರಕರಣ ಇಳಿಕೆ: ಲಾಕ್‌ಡೌನ್ ನಿರ್ಬಂಧ ಸಡಿಲಿಕೆ

ಇಂಧನ ಬೇಡಿಕೆ ಚೇತರಿಕೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಮತ್ತು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿದ್ದರಿಂದ ಜೂನ್‌ನಲ್ಲಿ ದೇಶದ ಇಂಧನ ಬೇಡಿಕೆಯು ಚೇತರಿಕೆ ಹಾದಿಗೆ ಮರಳಿದೆ.

2020ರ ಜೂನ್‌ಗೆ ಹೋಲಿಸಿದರೆ 2021ರ ಜೂನ್‌ನಲ್ಲಿ ಇಂಧನ ಬಳಕೆ ಶೇ 1.5ರಷ್ಟು ಹೆಚ್ಚಾಗಿದ್ದು, 1.63 ಕೋಟಿ ಟನ್‌ಗಳಷ್ಟಾಗಿದೆ. 2021ರ ಮೇ ತಿಂಗಳಿಗೆ ಹೋಲಿಸಿದರೆ ಬಳಕೆ ಪ್ರಮಾಣ ಶೇ 8ರಷ್ಟು ಏರಿಕೆ ಆಗಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧೀನದ 'ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ'ದಲ್ಲಿ (ಪಿಪಿಎಸಿ) ಈ ಮಾಹಿತಿ ಇದೆ.

ಮೇ ತಿಂಗಳಿನಲ್ಲಿ ಇಂಧನ ಬೇಡಿಕೆಯು ಒಂಭತ್ತು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿತ್ತು. ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ಈ ವರ್ಷದ ಜೂನ್‌ನಲ್ಲಿ ಪೆಟ್ರೋಲ್

ಮಾರಾಟ ಶೇ 5.6ರಷ್ಟು ಹೆಚ್ಚಾಗಿದ್ದು, ₹ 24 ಲಕ್ಷ ಟನ್‌ಗಳಿಗೆ ತಲುಪಿದೆ. ಡೀಸೆಲ್ ಮಾರಾಟ ಶೇ 1.5ರಷ್ಟು ಇಳಿಕೆ ಕಂಡಿದೆ.

ಕೋವಿಡ್‌ನ ಎರಡನೇ ಅಲೆಯು ಬರುವುದಕ್ಕೂ ಮೊದಲು ಇಂಧನ ಬೇಡಿಕೆಯು ಮಾರ್ಚ್‌ನಲ್ಲಿ ಸಹಜ ಸ್ಥಿತಿಗೆ ಮರಳಿತ್ತು. ಆದರೆ, ಎರಡನೇ ಅಲೆಯನ್ನು ನಿಯಂತ್ರಿಸಲು ಹಲವು ರಾಜ್ಯಗಳಲ್ಲಿ ಲಾಕ್‌ಡೌನ್ ಮತ್ತು ಕೆಲವು ನಿರ್ಬಂಧಗಳನ್ನು ಜಾರಿಗೊಳಿಸಿದ್ದರಿಂದ ಮೇನಲ್ಲಿ ಇಂಧನ ಬೇಡಿಕೆ ಕುಸಿತ ಕಂಡಿತ್ತು.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶನಿವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಇದರಿಂದಾಗಿ ಉತ್ತರ ಪ್ರದೇಶ, ಛತ್ತೀಸಗಢ ಮತ್ತು ನಾಗಾಲ್ಯಾಂಡ್‌ನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ.

ಪೆಟ್ರೋಲ್ ದರ ಲೀಟರಿಗೆ 35 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 26 ಪೈಸೆ ಹೆಚ್ಚಿಸಲಾಗಿದೆ. ಹೀಗಾಗಿ ಉತ್ತರ ಪ್ರದೇಶದ ರಾಂಪುರ ಜಿಲ್ಲೆ, ಛತ್ತೀಸಗಢದ ಜಶ್‌ಪುರ್, ಕಾಂಕೆರ್ ಮತ್ತು ನಾರಾಯಣಪುರ ಜಿಲ್ಲೆಗಳಲ್ಲಿ ಹಾಗೂ ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ಕ್ಕಿಂತ ಮೇಲಕ್ಕೆ ಏರಿಕೆ ಕಂಡಿತು.

ದೆಹಲಿಯಲ್ಲಿ ಪೆಟ್ರೋಲ್ ದರ ₹ 100.91 ಮತ್ತು ಡೀಸೆಲ್ ದರ ₹ 89.88ರಷ್ಟಾಗಿದೆ. ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರ ₹ 104.35 ಮತ್ತು ಡೀಸೆಲ್ ದರ 95.32ಕ್ಕೆ ತಲುಪಿದೆ.

ಮಧ್ಯಪ್ರದೇಶದ ಇಂದೋರ್ ಮತ್ತು ಭೋಪಾಲ್‌ನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 110ರ ಸಮೀಪಕ್ಕೆ ಬಂದಿದೆ. ಇಂದೋರ್‌ನಲ್ಲಿ ಪೆಟ್ರೋಲ್ ದರ ₹ 100.32 ಮತ್ತು ಡೀಸೆಲ್ ದರ ₹ 96.76ಕ್ಕೆ ಏರಿಕೆ ಕಂಡಿದೆ. ಭೋಪಾಲ್‌ನಲ್ಲಿ ಪೆಟ್ರೋಲ್ ದರ ₹ 109.30 ಮತ್ತು ಡೀಸೆಲ್ ದರ ₹ 98.73ಕ್ಕೆ ತಲುಪಿದೆ.

ಮೇ 4 ರಿಂದ ಇಲ್ಲಿಯವರೆಗೆ ಪೆಟ್ರೋಲ್ ದರವನ್ನು ಒಟ್ಟಾರೆ 38 ಬಾರಿ ಹೆಚ್ಚಿಸಲಾಗಿದೆ. ಇದರಿಂದ ಪ್ರತಿ ಲೀಟರಿಗೆ ₹ 10.51ರಷ್ಟು ಏರಿಕೆ ಆಗಿದೆ. ಮೇ 4 ರಿಂದ ಇಲ್ಲಿಯವರೆಗೆ 36 ಬಾರಿ ಡೀಸೆಲ್ ದರ ಹೆಚ್ಚಿಸಲಾಗಿದ್ದು, ಪ್ರತಿ ಲೀಟರಿಗೆ ₹ 9.15ರಷ್ಟು ಹೆಚ್ಚಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ರಂಗನಾಯಕಮ್ಮ
ಶ್ರೀ ಮತ್ತೋಡಿ ಲಕ್ಷ್ಮೀನಾರಾಯಣರವರ ಧರ್ಮ ಪತ್ನಿ
ಜನನ: 02-10-1962 – ನಿಧನ: 11-07-2020
ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ದು:ಖತಪ್ತರು: ಮತ್ತೋಡಿ ಲಕ್ಷ್ಮೀನಾರಾಯಣ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು.

LOOKING FOR JOB OPPORTUNITY
Refer Classifieds on Wednesday

ಮುಂಬೈ ಧಾರಣೆ

ಶೇಂಗಾ

10-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1400 (1400)
ಒಂದು ವಾರದ ಡೆಲಿವರಿ	1395 (1395)
ಸೋಯಾ ಕಚ್ಚಾ	1270 (1270)
ಪಾಮ್ ವಾರದ ಡೆಲಿವರಿ	1163 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,800 (47,750)
ಬೆಳ್ಳಿ ಕೆ.ಜಿ 69,200 (68,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೋಮವಾರದಿಂದ ಚಿನ್ನದ ಬಾಂಡ್‌ನ ನಾಲ್ಕನೇ ಕಂತು

ಮುಂಬೈ (ಪಿಟಿಐ): ಚಿನ್ನದ ಬಾಂಡ್ ಯೋಜನೆಯ 2021-22ನೇ ಸಾಲಿನ ನಾಲ್ಕನೇ ಕಂತು ಸೋಮವಾರದಿಂದ ಆರಂಭ ಆಗಲಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ಬೆಲೆಯನ್ನು ಪ್ರತಿ ಗ್ರಾಂಗೆ ₹ 4,807ರಂತೆ ನಿಗದಿಪಡಿಸಿದೆ.

ಬಾಂಡ್ ಖರೀದಿಸಲು ಆನ್‌ಲೈನ್ ಮೂಲಕ ಹಣ ಪಾವತಿಸುವವರಿಗೆ ಪ್ರತಿ ಗ್ರಾಂಗೆ ₹ 50ರಂತೆ ವಿನಾಯಿತಿ ಸಿಗಲಿದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ನೀಡಿಕೆ ಬೆಲೆ ₹ 4,757 ಇರಲಿದೆ. ಸೋಮವಾರದಿಂದ ಶುಕ್ರವಾರದವ-

ರೆಗೆ ಬಾಂಡ್ ಖರೀದಿಸಲು ಅವಕಾಶ ಇರಲಿದೆ.

ಬ್ಯಾಂಕುಗಳು (ಕಿರು ಹಣಕಾಸು ಬ್ಯಾಂಕ್ ಮತ್ತು ಪೇಮೆಂಟ್ ಬ್ಯಾಕ್ಸ್ ಹೊರತುಪಡಿಸಿ), ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ ಎಂದು ಸಚಿವಾಲಯ ತಿಳಿಸಿದೆ. ಪ್ರಕಟಣೆಯ ಪ್ರಕಾರ, ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ. ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಒಟ್ಟು 6 ಕಂತುಗಳಲ್ಲಿ ಚಿನ್ನದ ಬಾಂಡ್ ವಿತರಣೆ ಆಗಲಿದೆ ಎಂದು ಸರ್ಕಾರ ತಿಳಿಸಿದೆ.

ಎರಿಕ್ ಗಾರ್ಸೆಟ್ಟಿ ಭಾರತಕ್ಕೆ ಅಮೆರಿಕದ ರಾಯಭಾರಿ

ವಾಷಿಂಗ್ಟನ್ (ಪಿಟಿಐ): ಲಾಸ್ ಏಂಜಲೀಸ್‌ನ ಮೇಯರ್ ಎರಿಕ್ ಗಾರ್ಸೆಟ್ಟಿ ಅವರನ್ನು ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ನೇಮಕ ಮಾಡಿ ಅಧ್ಯಕ್ಷ ಜೋ ಬೈಡನ್ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ರಾಯಭಾರಿಯಾಗಿದ್ದ ಕೆನೆತ್ ಜೆಸ್ಟರ್ ಅವರ ಸ್ಥಾನವನ್ನು ಗಾರ್ಸೆಟ್ಟಿ ತುಂಬಲಿದ್ದಾರೆ ಎಂದು ಶ್ವೇತಭವನ ಅಧಿಕೃತವಾಗಿ ಘೋಷಿಸಿದೆ.

ಅವರ ನೇಮಕವನ್ನು ಭಾರತ ಮೂಲದ ಅಮೆರಿಕ ಸಂಸದರು ಸ್ವಾಗತಿಸಿದ್ದಾರೆ. ಭಾರತಕ್ಕೆ ರಾಯಭಾರಿಯಾಗಿ ಆಯ್ಕೆಯಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ಗಾರ್ಸೆಟ್ಟಿ, ಇದು ನನಗೆ

ಎರಿಕ್ ಗಾರ್ಸೆಟ್ಟಿ

ಸಿಕ್ಕ ಗೌರವ ಎಂದಿದ್ದಾರೆ. ಅಲ್ಲದೆ ಲಾಸ್ ಏಂಜಲೀಸ್ ಮೇಯರ್ ಆಗಿದ್ದಾಗಿನ ಅದೇ ಶಕ್ತಿ, ಬದ್ಧತೆ ಹಾಗೂ ಪ್ರೀತಿಯನ್ನು ಹೊಸ ಜವಾಬ್ದಾರಿಯಲ್ಲೂ ಆಳವಡಿಸುವುದಾಗಿ ತಿಳಿಸಿದ್ದಾರೆ.

ಎರಿಕ್ ಗಾರ್ಸೆಟ್ಟಿ, 2013ರಿಂದ ಲಾಸ್ ಏಂಜಲೀಸ್‌ನ ಮೇಯರ್ ಆಗಿದ್ದಾರೆ. ಸಿಟಿ ಕೌನ್ಸಿಲ್ ಸದಸ್ಯರಾಗಿ 12 ವರ್ಷ ಹಾಗೂ ಆರು ಬಾರಿ ಕೌನ್ಸಿಲ್ ಅಧ್ಯಕ್ಷರಾಗಿದ್ದರು. ಅಮೆರಿಕ ನೌಕಾಪಡೆಯಲ್ಲಿ 12 ವರ್ಷಗಳ ಕಾಲ ಗುಪ್ತಚರ ಅಧಿಕಾರಿಯಾಗಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1390 (1390)
ಸೋಯಾ (ರಿಫೈನ್ಡ್)	₹1330 (1325)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1165 (1165)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500

ಕಾಳು ಮೆಣಸು	385-390
ರಾಮನಗರ ರೇಷ್ಮೆ	
ಮಿಶ್ರತಳಿ	285-382
ದ್ವಿತಳಿ	331-466

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11600	11100	10800	151.50 ಸೆಂಟ್ಸ್
ಎಸಿ	4620	4400	4275	
ಆರ್‌ಪಿ	5550	5500	5750	ಲಂಡನ್
ಆರ್‌ಸಿ	3300	3200	3375	1759 ಡಾಲರ್ಸ್

ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್

ಪ್ರಶಸ್ತಿಗಾಗಿ ಇಂಗ್ಲೆಂಡ್–ಇಟಲಿ ಪೈಪೋಟಿ

ಲಂಡನ್ (ಎಎಫ್‌ಪಿ): ಐದೂವರೆ ದಶಕದಿಂದ ಪ್ರಶಸ್ತಿಯ ಬರ ಅನುಭವಿಸುತ್ತಿರುವ ಇಂಗ್ಲೆಂಡ್ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಭಾನುವಾರ ಇಟಲಿಯನ್ನು ಎದುರಿಸಲಿದೆ.

ಗರೆತ್ ಸೌತ್‌ಗೇಟ್ ಅವರ ಮಾರ್ಗದರ್ಶನದಲ್ಲಿ ಕಣಕ್ಕೆ ಇಳಿದಿರುವ ಹ್ಯಾರಿ ಕೇನ್ ನಾಯಕತ್ವದ ಇಂಗ್ಲೆಂಡ್ ತಂಡ ಈ ಬಾರಿ ಎಲ್ಲ ವಿಭಾಗದಲ್ಲೂ ಅಮೋಘ ಸಾಮರ್ಥ್ಯ ತೋರಿದೆ. ಅತ್ತ ಇಟಲಿ ಕೂಡ ಗಮನಾರ್ಹ ಆಟದೊಂದಿಗೆ ಫೈನಲ್ ಪ್ರವೇಶಿಸಿದೆ. ಹೀಗಾಗಿ ಪ್ರಶಸ್ತಿ ಸುತ್ತಿನ ಹಣಾಹಣಿ ರೋಚಕವಾಗುವ ನಿರೀಕ್ಷೆ ಇದೆ.

ವೆಂಬ್ಲಿ ಕ್ರೀಡಾಂಗಣದಲ್ಲಿ ಇಂಗ್ಲೆಂಡ್

ಹ್ಯಾರಿ ಕೇನ್ –ರಾಯಿಟರ್ಸ್ ಚಿತ್ರ

ಈ ಬಾರಿ ಆಡಿದ ಎಲ್ಲ ಪಂದ್ಯಗಳಲ್ಲೂ ಭರ್ಜರಿ ಜಯ ಸಾಧಿಸಿದೆ. ತಂಡ 1966ರಲ್ಲಿ ವಿಶ್ವಕಪ್ ಪ್ರಶಸ್ತಿ ಗೆದ್ದಿರುವುದು ಕೂಡ ಇದೇ ಅಂಗಣದಲ್ಲಿ. ಅದೃಷ್ಟದ ತಾಣದಲ್ಲಿ ಪಂದ್ಯ ವೀಕ್ಷಿಸಲು 65 ಸಾವಿರ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ. ಇಟಲಿಯ ಒಂದು ಸಾವಿರ ಮಂದಿಗೂ ಪ್ರವೇಶ ನೀಡಲು ನಿರ್ಧರಿಸಲಾಗಿದೆ.

2018ರ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಲೂ ಸಾಧ್ಯವಾಗದ ಇಟಲಿ ಯೂರೊ ಕಪ್‌ನಲ್ಲಿ ಫೈನಲ್ ಪ್ರವೇಶಿಸುವ ಮೂಲಕ ಗೌರವ ಮರಳಿ ಪಡೆದುಕೊಂಡಿದೆ. ಪ್ರಮುಖ ಟೂರ್ನಿಯೊಂದರಲ್ಲಿ ಇಂಗ್ಲೆಂಡ್ ಒಮ್ಮೆಯೂ ಇಟಲಿಯನ್ನು ಸೋಲಿಸಿಲ್ಲ. ಹೀಗಾಗಿ ಈ ಪಂದ್ಯದ ಫಲಿತಾಂಶದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ನಾಲ್ಕು ಬಾರಿ ವಿಶ್ವಕಪ್ ಪ್ರಶಸ್ತಿ ಗೆದ್ದಿರುವ ಇಟಲಿ ಒಮ್ಮೆ ಮಾತ್ರ ಯೂರೊ ಕಪ್‌ನಲ್ಲಿ ಚಾಂಪಿಯನ್ ಆಗಿದೆ. 1968ರಲ್ಲಿ ತಂಡ ಈ ಸಾಧನೆ ಮಾಡಿದಾಗ ನಾಲ್ಕು ತಂಡಗಳು ಮಾತ್ರ ಟೂರ್ನಿಯಲ್ಲಿದ್ದವು.

ಆ ನಂತರ ಎರಡು ಬಾರಿ ಫೈನಲ್ ಪ್ರವೇಶಿಸಿರುವ ತಂಡ 2000ನೇ ಇಸವಿಯಲ್ಲಿ ಫ್ರಾನ್ಸ್‌ಗೂ 2012ರಲ್ಲಿ ಸ್ಪೇನ್‌ಗೂ ಮಣಿದಿತ್ತು.

ಕೊಲಂಬಿಯಾಗೆ ಮೂರನೇ ಸ್ಥಾನ

ಬ್ರೆಸಿಲಿಯಾ, ಬ್ರೆಜಿಲ್ (ಎಪಿ): ಕೊಲಂಬಿಯಾ ತಂಡವು ಪೆರು ತಂಡವನ್ನು 3-2ರಿಂದ ಮಣಿಸಿ ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿತು.

ಪಂದ್ಯದಲ್ಲಿ ಪೆರು ತಂಡದ ಯೋಶಿಮರ್ ಯೋಟುನ್ 28ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸಿದರು. ಕೊಲಂಬಿಯಾದ ಜುವಾನ್ ಕ್ವಾಡ್ರಾಡೊ ((49ನೇ ನಿ.) ಸಮಬಲದ ಗೋಲು ಹೊಡೆದರು. 66ನೇ ನಿಮಿಷದಲ್ಲಿ ಗೋಲು ದಾಖಲಿಸಿದ ದಿಯಾಜ್, ಕೊಲಂಬಿಯಾ ಕ್ಕೆ ಮುನ್ನಡೆ ತಂದರು. 82ನೇ ನಿಮಿ ಷದಲ್ಲಿ ಗೋಲು ಹೊಡೆದ ಪೆರುವಿನ ಗಿಯಾನ್‌ಲೂಕಾ ಲಾಪಡುಲಾ ಸಮಬಲಕ್ಕೆ ತಂದರು. ಹೆಚ್ಚುವರಿ ವೇಳೆ ದಿಯಾಜ್ ಮತ್ತೊಂದು ಗೋಲು ದಾಖಲಿಸಿದರು.

ಕ್ರೀಡಾ ಸಾಮಗ್ರಿಗಳ 'ಹ್ಯಾಟ್ರಿಕ್', 'ಚಾನ್ಸ್‌ಲೆಸ್'ಗೆ ಆಗಸ್ಟ್ ಕೊನೆಯಲ್ಲಿ ಬೀಗ

ವ್ಯಾಪಾರದ 'ಇನಿಂಗ್ಸ್' ಮುಕ್ತಾಯಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಶಕಗಳಿಂದ ಕ್ರೀಡಾ ಸಾಮಗ್ರಿಗಳ ಮಾರಾಟದಲ್ಲಿ ತೊಡಗಿಸಿಕೊಂಡಿರುವ ಒಬ್ಬರದೇ ಮಾಲೀಕತ್ವದ ಮೂರು ಮಳಿಗೆಗಳು ವ್ಯಾಪಾರದ 'ಇನಿಂಗ್ಸ್'ಗೆ ಮುಕ್ತಾಯ ಹಾಡಲು ಸಜ್ಜಾಗಿವೆ. ಖ್ಯಾತ ಕ್ರಿಕೆಟ್ ಪಟುಗಳು ಉದ್ಘಾಟಿಸಿದ ಮತ್ತು ದೇಶದ ಪ್ರಮುಖ ಕ್ರೀಡಾಪಟುಗಳು ಸಂದರ್ಶಿಸಿರುವ 'ಹ್ಯಾಟ್ರಿಕ್', 'ಚಾನ್ಸ್‌ಲೆಸ್' ಹಾಗೂ 'ಸಿಲ್ಲಿ ಪಾಯಿಂಟ್' ಮಳಿಗೆಗಳ ಬಾಗಿಲು ಮುಂದಿನ ತಿಂಗಳ ಕೊನೆಯಲ್ಲಿ ಶಾಶ್ವತವಾಗಿ ಮುಚ್ಚಲಿದೆ.

ಕ್ರೀಡಾ ಪ್ರಿಯರಾಗಿದ್ದ ರವಿ ಸೋಂದಿ ಅವರು 1977ರಲ್ಲಿ ಬೆಂಗಳೂರಿನಲ್ಲಿ ಐದು ಮಳಿಗೆಗಳನ್ನು ತೆರೆದಿದ್ದರು. ಈ ಪೈಕಿ ಗುಪ್ತ ರಸ್ತೆ ಮತ್ತು ಬ್ರಿಗೇಡ್ ರಸ್ತೆಯಲ್ಲಿದ್ದ ಮಳಿಗೆಗಳನ್ನು ಎರಡು ವರ್ಷಗಳ ಹಿಂದೆ ಮುಚ್ಚಲಾಗಿತ್ತು. ಗಾಂಧಿನಗರ, ಹೊಸ ಬಿಇಎಲ್ ರಸ್ತೆಯಲ್ಲಿ ಒಟ್ಟು ಮೂರು ಮಳಿಗೆಗಳು ಉಳಿದಿದ್ದವು. ಕೊರೊನಾದಿಂದಾಗಿ ವ್ಯಾಪಾರ ಕುಸಿದಿರುವಾಗಲೇ ರವಿ ಸೋಂದಿ ಅವರು ಈಚೆಗೆ ತೀರಿಹೋದರು. ಅವರ ಪುತ್ರ, ವಕೀಲ ಆದಿತ್ಯ ಸೋಂದಿ ಅವರಿಗೆ ವ್ಯಾಪಾರ ಮುನ್ನಡೆಸುವುದು ಕಷ್ಟಕರವಾದ ಹಿನ್ನೆಲೆಯಲ್ಲಿ ಮುಚ್ಚಲು ನಿರ್ಧರಿಸಲಾಗಿದೆ.

'ಹ್ಯಾಟ್ರಿಕ್ ಸ್ಪೋರ್ಟ್ಸ್' ಕ್ರೀಡಾ ಸಾಮಗ್ರಿ ಮಾರಾಟ ಮಳಿಗೆ– ಪ್ರಜಾವಾಣಿ ಚಿತ್ರ

'44 ವರ್ಷಗಳಿಂದ ಸಾಮಾಗ್ರಿಗಳ ಮಾರಾಟದ ಮೂಲಕ ಕ್ರೀಡಾಕ್ಷೇತ್ರದ ಸೇವೆ ಮಾಡಿದ್ದೇವೆ. ಕೊರೊನಾದ ಹೊಡೆತದಿಂದಾಗಿ ಎರಡು ವರ್ಷಗಳಿಂದ ವ್ಯಾಪಾರ ಕುಸಿದಿದೆ. ಚೇತರಿಸಿಕೊಳ್ಳಲು ಇನ್ನೂ ಕನಿಷ್ಠ ಒಂದೆ ರಡು ವರ್ಷವಾದರೂ ಬೇಕು. ಹೀಗಾಗಿ ಮಳಿಗೆಯನ್ನು ಮುಚ್ಚುವ ನಿರ್ಧಾರಕ್ಕೆ ಬರಲಾಗಿದೆ' ಎಂದು ವ್ಯವಸ್ಥಾಪಕ ಈರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಹ್ಯಾಟ್ರಿಕ್ ಮಳಿಗೆಯನ್ನು ಮಾಜಿ ಟೆಸ್ಟ್ ಕ್ರಿಕೆಟಿಗ ಅಜಿತ್ ವಾಡೇಕರ್ ಉದ್ಘಾಟಿಸಿದ್ದರು. ಸುನಿಲ್ ಗಾವಸ್ಕರ್ ಅವರಿಂದ ಸಿಲ್ಲಿ ಪಾಯಿಂಟ್ ಉದ್ಘಾಟಿಸಲಾಗಿತ್ತು. ರಾಹುಲ್ ದ್ರಾವಿಡ್, ವೆಂಕಟೇಶ ಪ್ರಸಾದ್, ರಾಬಿನ್ ಉತ್ತಪ್ಪ ಮುಂತಾದವರು ನಮ್ಮ ಗ್ರಾಹಕರಾಗಿದ್ದರು. ಈಗ ಬಾಗಿಲು ಜಡಿಯಲು ಬೇಸರವಾಗುತ್ತಿದೆ. ಆದರೆ ಪರಿಸ್ಥಿತಿ ಈ ರೀತಿ ಮಾಡಿದೆ' ಎಂದು ಈರಪ್ಪ ಬೇಸರ ವ್ಯಕ್ತಪಡಿಸಿದರು.

'ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಕಂಪನಿಗಳ ಉದ್ಯೋಗಿಗಳು ಮತ್ತಿತರರು ನಮ್ಮ ಪ್ರ ಮುಖ ಗ್ರಾಹಕರು. ಶಾಲೆಗಳು ಕಾರ್ಯಾಚರಿಸದ ಕಾರಣ ಕ್ರೀಡಾ ಶಿಬಿರಗಳು ನಡೆಯುತ್ತಿಲ್ಲ. ಸಾಫ್ಟ್‌ವೇರ್ ಎಂಜಿನಿಯರ್‌ಗಳು ಕೂಡ ಖರೀದಿಗೆ ಬರುತ್ತಿಲ್ಲ. ಈಜು ಕ್ರೀಡೆಗೆ ಸಂಬಂಧಿಸಿದ ಸಾಮಗ್ರಿಗಳು ಹೆಚ್ಚು ಮಾರಾಟವಾಗುತ್ತಿದ್ದವು. ರೆಸಾರ್ಟ್‌ಗಳಿಂದಲೂ ಬೇಡಿಕೆ ಇರುತ್ತಿತ್ತು. ಈಗ ಈಜು ಚಟುವಟಿಕೆ ನಿಂತಿರುವುದರಿಂದ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ' ಎಂದು ಅವರು ವಿವರಿಸಿದರು.

ಆದಾಯ ಕಡಿಮೆ; ವೆಚ್ಚ ಹೆಚ್ಚು

ಕೊರೊನಾ ಆಘಾತದ ನಡುವೆಯೇ ಆನ್‌ಲೈನ್ ವ್ಯಾಪಾರದ ಕಡೆಗೆ ಜನರು ವಾಲುತ್ತಿರುವುದು ಮತ್ತು ಆಕರ್ಷಕ ಸೌಲಭ್ಯಗಳ ದೊಡ್ಡ ಮಳಿಗೆಗಳು ಆರಂಭವಾಗುತ್ತಿರುವುದು ವ್ಯವಹಾರಕ್ಕೆ ಪೆಟ್ಟುಕೊಟ್ಟಿದೆ. ಹೀಗಾಗಿ ಆದಾಯ ಕಡಿಮೆಯಾಗುತ್ತಿದೆ. ವೆಚ್ಚದಲ್ಲಿ ಯಾವ ಬದಲಾವಣೆಯೂ ಇಲ್ಲ. 44 ಸಿಬ್ಬಂದಿಯ ವೇತನ, ವಿದ್ಯುತ್ ಬಿಲ್ ಇತ್ಯಾದಿಗಳಿಗೆ ತಿಂಗಳಿಗೆ ₹ 16 ಲಕ್ಷ ಬೇಕು. ಇದನ್ನು ಭರಿಸುವುದು ಕಷ್ಟ. ಸಿಬ್ಬಂದಿಗೆ ಎಲ್ಲ ಸೌಲಭ್ಯಗಳನ್ನು ನೀಡಿ ಕಳುಹಿಸಲು ನಿರ್ಧರಿಸಲಾಗಿದೆ. ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ಕೊಟ್ಟು ಖಾಲಿ ಮಾಡಲಾಗುತ್ತಿದೆ. ಆಗಸ್ಟ್ ಕೊನೆಯ ವರೆಗೂ ಮಳಿಗೆಗಳು ತೆರೆದಿರುತ್ತವೆ ಎಂದು ಮಳಿಗೆಗಳ ವ್ಯವಸ್ಥಾಪಕ ಈರಪ್ಪ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

EMIRATES & Singapore Airlines Reg Ugtly Females: Catering_Cook/ Care_Givers/ Store Assistants AGENTS Contact: 9599174474 Bangalore-39 Reg:0009/Chennai/ PER/1000+/7606/2006

Domestic Helpers / Housekeeping

ಬೆಂಗಳೂರಿನಲ್ಲಿ ಮನೆ ಕೆಲಸದವರು, ಮಗು ನೋಡಿಕೊಳ್ಳುವವರು, ವಯಸ್ಸಾದವರನ್ನು ನೋಡಿಕೊಳ್ಳುವವರು ಬೇಕಾಗಿದ್ದಾರೆ. ಊಟ ವಸತಿ ಉಚಿತ. ಸಂಪರ್ಕಿಸಿ: 9686283582, 9108200185

Drivers

ಬೆಂಗಳೂರಿನಲ್ಲಿ ೪ ಜನರ ಒಂದು ಕುಟುಂಬಕ್ಕೆ ಚಾಲಕ ಮತ್ತು ಅಡುಗೆ ಕೆಲಸಕ್ಕೆ ದಂಪತಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ವ್ಯವಸ್ಥೆ ನೀಡಲಾಗುತ್ತದೆ. ಸಂಪರ್ಕಿಸಿ: 9741900909

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಬೆಂಗಳೂರಿನಲ್ಲಿರುವ ಆಯುರ್ವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆಯುರ್ವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ : 9606385001, 9606523337

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 - 86,000. 7259685221, 7760116548

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ ಸಂಪರ್ಕಿಸಿ: 7019132200, 08025300714

ಸಮಾಜಸೇವೆ

Old Age Home

ವೃದ್ಧಾಶ್ರಮ: ಮಹಿಳಾ ವೃದ್ಧರು ಕಡಿಮೆ ವೆಚ್ಚದಲ್ಲಿ ಶಾಂತಿಯಿಂದ ಜೀವಿಸಲು ಅನುಕೂಲಕರವಾದ ಆಶ್ರಮ. ಸೇರಲು ಬಯಸುವವರು ಸಂಪರ್ಕಿಸಿ: 8147217487

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Industrial & Factory

Tumkur

NEWLY CONST Shed 6000 Sqft area Rent for Godown or Industry in Sathyamangala Industrial Area Tumkur Contact: 9880201335

Sites

Kempegowda Layout

DC CONVERSION 'E'-Khata Site 30x56 W/F behind Ramasandra Busstand adjoining KEMPEGOWDA LAYOUT,58 lakhs. Contact: 9480690788

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಪ್ರವಾಸ

Travel

27.07.2021 6 ದಿನಗಳ 27 ಸ್ಥಳಗಳ ದಕ್ಷಿಣಕನ್ನಡ. 30.07.2021 5 ದಿನಗಳ ಮೈಸೂರು ಊಟಿ ಕೊಡೈಕೆನಾಲ್. 24.07.2021 3 ದಿನಗಳ ಸಿಗಂದೂರು, ಸಕ್ಕರೆಬೈಲು,ಚಿಕ್ಕಮಗಳೂರು. 30.07.2021 3 ದಿನಗಳ ಹಂಪಿ,ಬಾದಾಮಿ. 24.07.2021 1 ದಿನದ ಯಡಿಯೂರು, ಮೇಲುಕೋಟೆ, ಶ್ರವಣಬೆಳಗೊಳ. 25.07.2021 1 ದಿನದ ಶಿವಗಂಗೆ ದೇವರಾಯನದುರ್ಗ ಘಾಟಿ,ಸುಬ್ರಮಣ್ಯ. 24.07.2021 1 ದಿನದ ಕೋಟಿಲಿಂಗೇಶ್ವರ, ಅಂತರಗಂಗೆ, ಚಿಕ್ಕತಿರುಪತಿ. 25.07.2021 1 ದಿನದ ತಿರುವನಮಲೈ ಗೋಲ್ಡನ್ ಟೆಂಪಲ್. 05.08.2021 2 ದಿನಗಳ ತಿರುಪತಿ ಕಾಳಹಸ್ತಿ. 30.08.2021 3 ದಿನಗಳ ದಾಂಡೇಲಿ. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001, 9342848791

★ಶ್ರೇಯಸ್ ಟೂರ್ಸ್★ 29.07.2021 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ (ಸರದಾರ್ ಪ್ರತಿಮೆ, ನಿಷ್ಕಳಂಕ,ಡಿಯು,ಮಾತೃಗಯಾ) 29.07.2021 5/10/15ದಿನ ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಠಕ, ಚಿತ್ರಕೂಟ)12.08.2021 6ದಿನಗಳು ಪೂರಿ,ಕೊನಾರ್ಕ್, ಭುವನೇಶ್ವರ,ಜಾಜ್‌ಪುರ, ಕೊಲ್ಕತ್ತಾ.21.08.2021 7ದಿನಗಳು ಕಾಶಿ, ಗಯಾ, ಅಯೋಧ್ಯೆ,ನೈಮಿಷ್ಯಾರಣ್ಯ, ಪ್ರಯಾಗ,ಚಿತ್ರಕೂಟ. 21.08.2021 10ದಿನಗಳು ಸಿಮ್ಲಾ, ಕುಲುಮನಾಲಿ, 5 ದೇವಿಯರು,ವೈಷ್ಣೋದೇವಿ, ಅಮೃತಸರ್,ಕುರುಕ್ಷೇತ್ರ,ದೆಹಲಿ. 11.09.2021, 22.09.2021 12ದಿನಗಳು ಚಾರ್‌ದಾಂ ಯಾತ್ರಾ ವಿಶೇಷ.9743351212/ 9902050065/ 9206979202

★ಶ್ರೇಯಸ್ಟೂರ್ಸ್★ 16.07.2021 5ದಿನಗಳು 8000 ಅಹೋಬಲಂ ನವನರಸಿಂಹ, ಮಹಾನಂದಿ,ಶ್ರೀಶೈಲಂ, ಮಂತ್ರಾಲಯ,ಯಾಗಂಟಿ, ಬೇಲಂಗುಹೆ.21.07.2021 7ದಿನಗಳು 15000/ ವಿಜಯವಾಡ,ಪಂಚರಾಮ, ಮಂಗಳಗಿರಿ,ಭದ್ರಾಚಲಂ, ಪೀಠಾಪುರಂ,ಅನ್ನಾವರಂ, ವಾಸವಿಪೆನುಗೊಂಡ, ವಿಶಾಖಪಟ್ಟಣ,ಅರಕು, ರಾಮಲಯಂ.21.07.2021 5ದಿನಗಳು 8000 ಹೊರನಾಡು, ಶೃಂಗೇರಿ,ಕಮಲಶಿಲೆ,ಧರ್ಮಸ್ಥಳ, ಕುಕ್ಕೆ,ಕೊಲ್ಲೂರು,ಸಿರ್ಸಿ,ಬನವಾಸಿ, ಕಾಂತೇಶ,ಶಾಂತೇಶ,ಬ್ರಾಂತೇಶ. 9743351212/ 9902050065/ 9206979202

EDUCATION
To Place your Classified Ads Contact:
9845114560

ವೈವಾಹಿಕ

Matrimonial Bureaus

ಎಲ್ಲಾ ವೈವಾಹಿಕ ಸಂಬಂಧಗಳಿಗೆ ಸಂಪರ್ಕಿಸಿ: 8296595088

ಭವಿಷ್ಯ

Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮುಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ: ಪಂಡಿತ್ ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಯಿರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ. ಮಂತ್ರಾಲಯ 7760909072

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Deccan Herald Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 11 ಜುಲೈ 2021

ರಿಯಲ್ ಬಾದ್‌ಷಾ! 9

ಸ್ಟೈಲೋ ಟೈಲರ್‌ನ ಸಾಂಸ್ಕೃತಿಕ ಜಗತ್ತು! 10

ಇದು ರಮ್ಯಾ 'ರ್‍ಯಾಪ್' ಕಾಲ... 11

ಬಾ ಬಾರೋ ಈ ಊರಿಗೆ

ಮಳೆಯು ಎಳೆಯುವ ತೇರಿಗೆ

ಪ್ರಸಾದ್ ಶೆಣೈ ಆರ್.ಕೆ.

ಮಲೆನಾಡ ಹಳ್ಳ ಕೊಳ್ಳದ ಮೇಲೆ ಮಳೆ ಬೀಳುವುದನ್ನು ಕಣ್ತುಂಬಿಕೊಳ್ಳಬೇಕು. ಜಿಟಿ ಜಿಟಿ ಮಳೆಗೆ ಒದ್ದೆ ಮುದ್ದೆಯಾಗಿ ಮಲೆನಾಡ ಮಳೆಕಾಡ ಹಸಿರು ಹಬ್ಬದಲ್ಲಿ ಕಳೆದೇ ಹೋಗಿಬಿಡಬೇಕು. ಮತ್ತೆ ಮತ್ತೆ ಕಾಡುವ ಮಲೆನಾಡಿನ ಚುಂಬಕ ದಾರಿಯಲ್ಲಿ ಒಂದು ರೌಂಡು ಹೊಡೆದು ಬಂದರೂ ಸಾಕು, ಅದೇನೋ ಸಮಾಧಾನ ಎಂದೆಲ್ಲಾ ಕಣ್ಣರಳಿಸುವವರು ಲಾಕ್‌ಡೌನ್ ಕಳೆದದ್ದೇ ಮತ್ತೆ ಹೊಳಪೇರಿಸಿಕೊಂಡಿದ್ದಾರೆ.

ಮಳೆಗಾಲದ ಕಡಲ ಮೊರೆತ, ನದಿ ತೀರದ ಬೀಸುಗಾಳಿ, ಕೆನೆಮೊಸರಿನಂತೆ ಆ ದೊಡ್ಡ ಬೆಟ್ಟದ ಸುತ್ತ ಚೆಲ್ಲಿಕೊಂಡ ಮಂಜು, ಜಿಟಿ ಜಿಟಿ ಎಂದು ಮಳೆಯ ಜೊತೆಗೆ ಜೋಗುಳ ಹಾಡುತ್ತ ಎಷ್ಟೋ ದೂರ ಕರೆದೊಯ್ಯುವ ಹಸಿರು ಮೆತ್ತಿಕೊಂಡ ದಾರಿ, ಹಸಿರು ಸುರಂಗದೊಳಗೆ ಘೀಳಿಡುತ್ತಾ ಸಾಗಿಬಿಡುವ ರೈಲು, ಇವೆಲ್ಲ ಕೊಡುವ ಪುಳಕವನ್ನು ಅನುಭವಿಸಲು ಬಹಳಷ್ಟು ಮಂದಿ ಹಾತೊರೆಯುವ ಸಮಯವಿದು. ಗುಟುಕೇರಿಸಲು ಬಿಸಿಬಿಸಿ ಮಲ್ನಾಡ್ ಕಷಾಯ, ಒಂದು ಪ್ಲೇಟ್ ಮೆಣಸಿನ ಭಜ್ಜಿ –ಇಷ್ಟಿದ್ದರೆ ಆಹಾ ಬೇರೇನೂ ಬೇಕಾಗಿಲ್ಲ ಎಂದು ಬಾಯಿ ಚಪ್ಪರಿಸುವ ಕ್ಷಣವೂ ಹೌದು.

ಇಷ್ಟುದಿನ ಲಾಕ್‌ಡೌನ್ ಅನ್ನೋ ಗೂಡಿನಲ್ಲಿ ಕೂತು ನೂರಾರು ಆಸೆಯ ರೆಕ್ಕೆಗಳು ಮೂಡಿದ್ದರೂ ಹಾಯಾಗಿ ಹಾರಲಾಗದೇ ಚಡಚಡಿಸುತ್ತಿದ್ದವರ ಉಮೇದು ಈಗ ಮತ್ತೆ ಪುಟಿದೆದ್ದಿದೆ. ಮುಂಗಾರು ಮಳೆಯ ಗೆಜ್ಜೆ ನಾದಕೆ ಜೊತೆಯಾಗಿ ಹಿತವಾಗಿ ಕುಣಿಯಲು ಸಿದ್ಧರಾದವರಿಗೆ ಇಲ್ಲಿ ನೂರು ನೋಟಗಳಿವೆ, ಪರಿಸರ ಕಲಿಸುವ ಪಾಠಗಳಿವೆ. ಕನಸಿನಂತಹ ದಾರಿಗಳಿವೆ, ಹಾಲಿನಂತಹ ಧಾರೆಗಳಿವೆ. ಬಾಯಿಗೆ ಎಂದೂ ಮರೆಯದ ಸ್ವಾದವೂ ಇದೆ.

ಲೊನಾವಲಾ ಬೆಟ್ಟದ ಮೇಲಿನ ಕೋಟೆಯ ಮೇಲೆ ಸಾಗುತ್ತಾ... ಹಸಿರು–ಶ್ವೇತವರ್ಣದ ಆಟದ ಸೊಬಗನ್ನು ಸವಿಯುತ್ತಾ...

ಮೈಮನ ಬೆಚ್ಚಗೆ ಮಾಡುವ ಮಲೆನಾಡು ಕಷಾಯ

ನಾಲಗೆ ತಣಿಸುವ ಬಿಸಿ ಬಿಸಿ ತಿಂಡಿ ಅಡ್ಡಾ

ಗುಳ್ಳದ ಪೋಡಿ (ಬಜ್ಜಿ), ಕ್ಯಾಬೆಜ್ ಆಂಬೊಡೆ (ಬೋಂಡ), ಬಿಸಿ ಬಿಸಿ ಇಡ್ಲಿ ಸಾಂಬಾರ್, ಅನ್ನ, ತಿಳಿ ಸಾರು, ದಾಳಿತೊವ್ವೆ, ರುಚಿ ರುಚಿ ಉಪ್ಪಿನಕಾಯಿ, ಅಲಸಂಡೆ ಉಪ್ಕರಿ, ಬೀಟ್ರೂಟ್ ಪಲ್ಯ, ರಸಂ, ಹಪ್ಪಳ, ಸಂಜೆಗೆ ಬಿಸಿಬಿಸಿ ಮಲೆನಾಡು ಕಷಾಯ, ಬಿಸಿ ಬಿಸಿ ಮಂಗಳೂರು ಬನ್ಸ್, ಗೋಳಿಬಜೆ, ಮಂಡಕ್ಕಿ ಚುರುಮುರಿ ಮಳೆಗಾಲವನ್ನು ಮತ್ತೇರಿಸಲು ಇವಿಷ್ಟು ಖಾದ್ಯಗಳು ಸಾಕಲ್ಲವೇ?

ನೀವು ಮಲೆನಾಡಿನ ಆಗುಂಬೆಯ ಮಳೆಯಲ್ಲಿ ನೆನೆಯಲು ಆಸೆಪಡುತ್ತಿದ್ದರೆ, ಮಳೆಯಲ್ಲಿ ಬೇಕಾದಷ್ಟು ನೆನೆದು ಆಗುಂಬೆ-ಕೊಪ್ಪ ದಾರಿಯಲ್ಲಿರುವ ಅಪ್ಪಟ ಮನೆ ಸೊಗಡಿನ ಗುರುಪ್ರಸಾದ್ ಹೋಟೆಲ್‌ಗೆ ಲಗ್ಗೆ ಇಟ್ಟು ಇವನ್ನೆಲ್ಲಾ ಚಪ್ಪರಿಸಲೇಬೇಕು. ಮಳೆಗಾಲದ ನಿಜವಾದ ಅನುಭೂತಿ ಇನ್ನಷ್ಟು ಸಿದ್ಧಿಸುವುದೇ ಇಂತಹ ಬಿಸಿ ಬಿಸಿ ರುಚಿಕರ ತಿಂಡಿಗಳಿಂದ. ಏನಿಲ್ಲವೆಂದರೂ ಮಳೆಯಲ್ಲಿ ನೆನೆದು ಬಂದಾಗ ಹೊಟ್ಟೆಗೆ ಮಲೆನಾಡಿನ ಬಿಸಿಬಿಸಿ ಖಡಕ್ ಕಷಾಯವನ್ನೋ ಚಹಾವನ್ನೋ ಬಾಯಿಗಿಟ್ಟು ಹಾಯಾಗಿ ಹೀರುತ್ತಾ ಆಗುಂಬೆಯ ಮಳೆಯನ್ನು ನೋಡುತ್ತಾ ನಿಂತುಬಿಡಿ, ಅದರ ಜೊತೆಗೆ ಮೆಲ್ಲಲು ಮೆಣಸಿನಕಾಯಿ ಬಜ್ಜಿ ಇದ್ದರಂತೂ ಸ್ವರ್ಗವೇ ಬಾಯಿಗೆ ಬಂದಂತೆ, ಈ ಹೊಟೇಲಿನ ದಾಳಿತೋವೆ ಜೊತೆ ಇಡ್ಲಿ ಅಂಬೊಡೆ ಮುಳುಗಿಸಿ ತಿಂದರಂತೂ ಆ ರುಚಿಯನ್ನು ಎಂದೆಂದಿಗೂ ಮರೆಯಲಾರಿರಿ.

ಶೃಂಗೇರಿ ಭಟ್ರ ಮೆಸ್: ಮಲೆನಾಡಿನ ಶೃಂಗೇರಿಯ ಶಾರದಾಂಬೆ ದೇವಳದ ಬಳಿ ಇಂಥದ್ದೇ ಒಂದು ರುಚಿಕರ ತಿಂಡಿ ತಾಣವೊಂದಿದೆ. ಅದರ ಹೆಸರು ಭಟ್ರ ಮೆಸ್. ಇಲ್ಲಿನ ಅಕ್ಕಿರೊಟ್ಟಿ, ಶ್ಯಾವಿಗೆ ಉಪ್ಪಿಟ್ಟು, ಮಸಾಲದೋಸೆ, ಸಜ್ಜಿಗೆ ಅವಲಕ್ಕಿ ಮಲೆನಾಡಿನ ಸೊಗಡನ್ನು ನಿಮಗೆ ಹತ್ತಿಸಿಬಿಡುತ್ತವೆ. ಪಕ್ಕಾ ಸಾಂಪ್ರದಾಯಿಕ ಶೈಲಿಯಿಂದ ತಯಾರಿಸುವ ಇಲ್ಲಿನ ತಿಂಡಿಯ ರುಚಿ ನಾಲಗೆಯಲ್ಲಿ ಬಹುಹೊತ್ತು ಉಳಿಯುತ್ತದೆ.

ಉಡುಪಿ ಜಿಲ್ಲೆಯನ್ನು ಬಳಸಿ ಕಳಸ-ಹೊರನಾಡು-ಶೃಂಗೇರಿ-ಕುದುರೆಮುಖ ಮೊದಲಾದ ಸ್ಥಳಗಳಿಗೆ ಹೋಗುವ ಮೊದಲು ಕಾರ್ಕಳ ತಾಲ್ಲೂಕಿನ ಕಡಾರಿ ಎನ್ನುವ ಊರಿನಲ್ಲಿ ರೇಣುಕಾ ಹೋಟೆಲ್ ಅನ್ನುವ ತಿಂಡಿ ಅಡ್ಡಾ ಸಿಗುತ್ತದೆ. ಇಲ್ಲಿ ಕೊಂಕಣಿ ಶೈಲಿಯ ಸಾಂಪ್ರದಾಯಿಕ ತಿಂಡಿ ಭಾರೀ ಫೇಮಸ್. ಕೊಟ್ಟೆ ಕಡುಬು, ಕರಾವಳಿಯ ಸ್ಪೆಷಲ್ ಪತ್ರೊಡೆ ಮೊದಲಾದ ಬಿಸಿ ಬಿಸಿ ಖಾದ್ಯಗಳನ್ನು ಇಲ್ಲಿ ತಿನ್ನುವ ಸುಖವೇ ಬೇರೆ. ಕಳಸ ತಾಲ್ಲೂಕಿನಲ್ಲಿ ಗರಂ ಮಲೆನಾಡ ಕಾಫಿ, ಟೀ ಬೋಂಡ ಸವಿಯಲು ಮರೆಯಲೇಬೇಡಿ.

ಉತ್ತರ ಕನ್ನಡದ ಕಾಡಿನಲ್ಲಿ ಅವಿತುಕೊಂಡ ವಿಭೂತಿ ಜಲಪಾತ ಚಿತ್ರ: ಅಶ್ವಿನಿ ಕುಮಾರ್ ಭಟ್

ಜಲಪಾತಗಳ ದಾರಿ ಹಿಡಿದು

ಭೋರೆಂದು ಸುರಿವ ಮುಂಗಾರು ಮಳೆಗೆ ಒಂದಷ್ಟು ಜಲಪಾತಗಳನ್ನು ನೋಡದೇ ಇದ್ದರೆ ಹೇಗೆ ಹೇಳಿ. ಹುಣ್ಣಿಮೆಯ ಹಾಲು ಹರಿದಂತೆ ಕಾಣುವ ಜಲಪಾತಗಳನ್ನೊಮ್ಮೆ ನೋಡಿದರೆ ಬದುಕಿನ ಹುಮ್ಮಸ್ಸು ಜಾಸ್ತಿಯಾಗುತ್ತದೆ. ಗೋವಾ-ಕರ್ನಾಟಕ ಗಡಿಯಲ್ಲಿರುವ ದೂಧ್ ಸಾಗರದ ಶ್ವೇತರಸಧಾರೆಯನ್ನು ನೀವು ಮಳೆಗಾಲದಲ್ಲೇ ನೋಡಿ ಸಂಭ್ರಮಿಸಬೇಕು. ಮಾಂಡೋವಿ ನದಿ ಧಾರೆಯಾಗಿ ಬೀಳುವುದನ್ನು ನೋಡುತ್ತಾ ನಿಮ್ಮ ಮನಸ್ಸು ಹಗುರಾಗಿ ಕಾಣದ ಲೋಕದತ್ತ ತೇಲಿಬಿಡುತ್ತದೆ. ಒಮ್ಮೆ ಕೆನೆಮೊಸರಿನಂತೆ, ಮತ್ತೊಮ್ಮೆ ನೊರೆ ಹಾಲಿನಂತೆ, ಕೆಲವೊಮ್ಮೆ ಕಡೆದ ಮಜ್ಜಿಗೆಯಂತೆ ನಿಮ್ಮೊಳಗನ್ನು ಅಪ್ಪಿಡಿಯುವ ದೂಧ್ ಸಾಗರ, ಬಿಟ್ಟೂ ಬಿಡದೇ ಸುರಿವ ಅಲ್ಲಿನ ಮಳೆ, ಸ್ವರ್ಗಚುಂಬಕ ಹಸಿರು ನಿಮ್ಮೊಳಗೆ ಚಿರಂತನವಾಗಿ ಕೂತುಬಿಡುತ್ತವೆ. ಕರ್ನಾಟಕದಿಂದ ದೂಧ್ ಸಾಗರಕ್ಕೆ ಹೋಗಬೇಕಾದರೆ ಗೋವಾ ಮಾರ್ಗದ ರೈಲಿನಲ್ಲಿ ಹೋಗಬೇಕು. ಅಲ್ಲಿಂದ ಕ್ಯಾಸಲ್ ರಾಕ್‌ಗೆ ತಲುಪಿ ಅಲ್ಲಿನ ಕಾಡು ಹಾದಿಯ ಮೂಲಕ ದೂಧ್ ಸಾಗರಕ್ಕೆ ಹೋಗಬಹುದು.

ಕೊಡಗಿನ ಅಷ್ಟಾಗಿ ಬೆಳಕಿಗೆ ಬಾರದ ಹಾಲಧಾರೆಯ ಹೆಸರು ಮಲ್ಲಳ್ಳಿ. ಕೊಡಗಿನ ಸೋಮವಾರಪೇಟೆ ಪಟ್ಟಣದಿಂದ 26 ಕಿ.ಮೀ. ದೂರದಲ್ಲಿರುವ ಈ ಜಲಧಾರೆ ಪುಷ್ಪಗಿರಿ ಬೆಟ್ಟದ ಸೆರಗಿನಲ್ಲಿದೆ. ಹೆಸರು ಮಲ್ಲಳ್ಳಿ, ನೋಡಲು ಥೇಟ್ ಚಂದುಳ್ಳಿ. ಮಳೆಗಾಲದಲ್ಲಿ ಈ ಚಂದುಳ್ಳಿಯ ಆಲಾಪವೆಂದರೆ ಕರ್ಣಾನಂದವೇ ಸರಿ. ಹಾಗೆ ಹರಿವ ಅವಳ ಆಲಾಪಕ್ಕೆ ಪುಷ್ಪಗಿರಿ ಸಂತೃಪ್ತಗೊಳ್ಳುತ್ತದೆ. ನೀವು ಮಳೆಗಾಲದಲ್ಲಿ ಈ ಚೆಂದುಳ್ಳಿಯ ಕಂಡರೆ ಹಾಗೇ ಅವಳನ್ನು ಎಷ್ಟೊತ್ತು ನೋಡುತ್ತ ಕೂರುತ್ತೀರೋ ಗೊತ್ತಿಲ್ಲ, ನೋಡಿದಷ್ಟೂ ಕಾಡುವ, ಹಾಡುವ ಅವಳು ನಿಮ್ಮನ್ನು ಸುಲಭಕ್ಕೆ ಬಿಡುವವಳಲ್ಲ. ನಿಮ್ಮೊಳಗೆ ತಣ್ಣಗೆ ಆವರಿಸಿ ನಿಮ್ಮ ಜೀವಮಾನದ ಎಲ್ಲಾ ಮಳೆಗಾಲಗಳನ್ನೂ ಬಿಟ್ಟೂ ಬಿಡದೇ ಪೊರೆಯುತ್ತಾಳೆ.

ಇನ್ನು ಉತ್ತರ ಕನ್ನಡ ಜಿಲ್ಲೆಯ ವಿಭೂತಿ ಜಲಪಾತ, ಉಂಚಳ್ಳಿ ಜಲಪಾತ, ಮಾಗೋಡು ಜಲಪಾತ, ಶಿರ್ಲೆ ಜಲಪಾತ ಇಲ್ಲಿಗೂ ಭೇಟಿ ನೀಡಬಹುದು. ಜೋಗದ ಕುರಿತು ನಿಮಗೆ ಗೊತ್ತೇ ಇದೆ.

ರೈಲುಗಾಡಿಯ ಬೆನ್ನೇರಿ

ಸುತ್ತಲಿರುವ ಕಾಡುಗಳನ್ನು ಇನ್ನೇನು ತಬ್ಬಿಯೇ ಬಿಟ್ಟಿತು ಎನ್ನುವ ಹಾಗೆ ರೈಲು ಗಾಡಿ ಚುಕು ಚುಕು ಎಂದು ಮಳೆಗೆ ಚಂಡಿಯಾಗಿ ಸಾಗುತ್ತಿರುತ್ತದೆ. ರೈಲಿನ ಕಿಟಕಿಗೆ ಮುಖ ಕೊಟ್ಟು ನೀವು ಬೊಗಸೆಯಲ್ಲಿ ಮಳೆ ಹನಿ ಹಿಡಿಯುತ್ತೀರಿ, ಆಚೀಚೆ ಮಳೆ ಬಿದ್ದು ಹಸಿರು ಇನ್ನಷ್ಟು ಫಳ ಫಳ ಅನ್ನುತ್ತಿರುತ್ತದೆ. ಮತ್ತೆ ಬಾಗಿಲ ಬಳಿ ನಿಂತು ಹೊರಗಿನ ನೋಟದತ್ತ ಕಣ್ಣು ಹಾಯಿಸುತ್ತೀರಿ. ಆಹಾ ದಾರಿಯೆಲ್ಲ ಅಳುವ ಕಂದನ ತುಟಿ ಹೊಳೆದಂತೆ ಕಾಣುತ್ತದೆ. ಕೆಲವೇ ಕ್ಷಣದಲ್ಲಿ ರೈಲು ಸುರಂಗದೊಳಗೆ ಹೋಗಿಬಿಡುತ್ತದೆ. ಒಂದಷ್ಟು ಹೊತ್ತು ಕತ್ತಲಲ್ಲೂ ಸುರಂಗದೊಳಗೆ ಸಾಗುತ್ತದೆ. ಆದರೆ ರೈಲುಯಾನದಲ್ಲಿ ಸಿಗುವ ಇಂತಹ ಸುರಂಗದ ಕತ್ತಲಲ್ಲೇ ಖುಷಿ, ಪುಳಕದ ರಮ್ಯಾನಂದ ಮೂಡುತ್ತದೆ. ಇಂತಹ ಮಧುರಾನುಭೂತಿ ಸಿಗುವುದು ಬೆಂಗಳೂರು-ಮಂಗಳೂರು ರೈಲು ಹಾದಿಯಲ್ಲಿ. ನೀವು ಆ ದಾರಿಯನ್ನು ಬೆರಗಿನಿಂದ ಸಂಭ್ರಮಿಸಲೆಂದೇ ಪಯಣ ಮಾಡಬಹುದು. ಸಕಲೇಶಪುರ-ಸುಬ್ರಹ್ಮಣ್ಯ-ಹಾಸನ ಜಿಲ್ಲೆಯನ್ನು ವ್ಯಾಪಿಸಿರುವ ಪಶ್ಚಿಮಘಟ್ಟದ ಹಸಿರು ಚಾವಣಿಯಂತಿರುವ ಗಿರಿ ಕಾನನಗಳನ್ನು, ಕಣಿವೆಗಳನ್ನು ಹಾದುಹೋಗುವ ರೈಲು, ನಿಚ್ಚಳವಾಗಿ ನಿಮ್ಮನ್ನು ಹೊಸ ಲೋಕವೊಂದರಲ್ಲಿ ಕಳೆದುಹಾಕುತ್ತದೆ.

ಹಸಿರ ಕಾಡನ್ನು ಚುಂಬಿಸುವಂತಿರುವ ಈ ಪಯಣ ನಿಮ್ಮೆದೆಯಲ್ಲಿ ಹಸಿರಾಗಿ ಉಳಿಯುವುದರಲ್ಲಿ ಅನುಮಾನವೇ ಬೇಡ. ಬಹುನಿರೀಕ್ಷೆಯ ವಿಸ್ಟಡೋಮ್ ಕೋಚ್ ಈ ಮಾರ್ಗದಲ್ಲಿ ಓಡತೊಡಗಿದೆ. ಸಂಪೂರ್ಣ ಗಾಜಿನ ಚಾವಣಿ ಹೊಂದಿರುವ ಈ ಕೋಚ್‌ನಿಂದ ನೀವು ಪಶ್ಚಿಮಘಟ್ಟದ ಹಸಿರ ದಾರಿಯ ಸೌಂದರ್ಯವನ್ನು ಸವಿಯಬಹುದು. ದರ ಕೊಂಚ ದುಬಾರಿಯಾದರೂ ಆಸಕ್ತರು ಈ ಪಯಣದ ಆನಂದವನ್ನೊಮ್ಮೆ ಅನುಭವಿಸಿಬಿಡಿ. ಮುಂಬೈ-ಗೋವಾ ಕೊಂಕಣ್ ರೈಲ್ವೆ, ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೆ, ಬೆಂಗಳೂರು-ಗೋವಾ, ಪುಣೆ-ಎರ್ನಾಕುಲಂ, ಮೆಟ್ಟುಪಾಳ್ಯಂ–ಊಟಿ ಹಾಗೂ ಕೇರಳದ ದಾರಿಯಾಗಿ ಸಾಗುವ ರೈಲುಗಳು ಇನ್ನಷ್ಟು ಥ್ರಿಲ್ಲಿಂಗ್ ಅನುಭವ ಕೊಡುವ, ನಮ್ಮ ಸುತ್ತಲಿನ ಜಗತ್ತನ್ನು ಇನ್ನಷ್ಟು ಕಾಡಿಸುವ ದಾರಿಗಳು. ಸಾಧ್ಯವಾದರೆ ಈ ದಾರಿಯಲ್ಲೂ ಒಮ್ಮೆ ಪಯಣ ಮಾಡಿ.

ಬೆಂಗಳೂರು – ಮಂಗಳೂರು ಮಧ್ಯೆ ಓಡಾಡುವ ಕೆಲವು ರೈಲುಗಳಲ್ಲಿ ವಿಸ್ಟಡೋಮ್ ಕೋಚ್ ಅಳವಡಿಸಲಾಗಿದ್ದು, ಮಾರ್ಗದುದ್ದಕ್ಕೂ ಹಸಿರಿನ ಸೊಬಗು ಸವಿಯಲು ಸಾಧ್ಯ.



ಮಂಗಳೂರಿನ ದಾರಿಯಲ್ಲಿ ರೈಲಿನ ಜತೆಯಲ್ಲಿ.... ಚಿತ್ರ: ವಿಶ್ವನಾಥ ಸುವರ್ಣ

ಮಳೆ ಸುರಿಯುವಾಗ ಸುಟ್ಟ ಮೆಕ್ಕೆ ತೆನೆಗೆ ಉಪ್ಪು–ಖಾರ, ನಿಂಬೆ ಸವರಿ ಕೊಟ್ಟರೆ ಸ್ವರ್ಗಕ್ಕೆ ಕಿಚ್ಚು ಹಚ್ಚಬೇಕು!

ಚುಂಬಕ ದಾರಿಯ ಸೆರಗ ಹಿಡಿದು

ಮಲೆನಾಡು, ಕರಾವಳಿಯ ಚುಂಬಕ ದಾರಿಗಳು ಮಳೆಗಾಲದಲ್ಲಿ ನಿಮ್ಮೊಳಗೆ ಏರಿಸುವ ನಶೆಯೇ ಬೇರೆ. ಹಸಿರು ಮುಕ್ಕಳಿಸುವ ದಾರಿಗಳು, ಆ ದಾರಿಯಲ್ಲಿ ಸಿಗುವ ಬೆಟ್ಟ, ಕಾಡು, ನದಿ ಸೆರಗುಗಳು, ಅಲ್ಲಿ ಬೀಳುವ ಮಾಯದಂತಹ ಮಳೆ, ತಿರುವು ಮುರುವು ರಸ್ತೆಗಳ ಮಾದಕ ಭಂಗಿ, ಇವೆಲ್ಲಾ ಕೊಡುವ ಅದಮ್ಯ ಸುಖವನ್ನು ಅನುಭವಿಸಿಯೇ ನೋಡಬೇಕು.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ದಾರಿಯಾಗಿ ಸಾಗಿದರೆ ಜಿಟಿ ಜಿಟಿ ಮಳೆಗೆ ನೆನೆಯುವ ಪಶ್ಚಿಮಘಟ್ಟದ ಶೋಲಾ ಅರಣ್ಯಗಳನ್ನು ನೋಡುವ ಪುಳಕವೇ ಅನುಪಮ.

ಕುದುರೆಮುಖದಲ್ಲಿ ಹೆಜ್ಜೆ ಹೆಜ್ಜೆಗೂ ಕಾಡು, ಶಿಖರ ಚೆಲುವೆಲ್ಲಾ ನಂದೆಂದು ಮಳೆಗೆ ರಗ್ಗು ಹೊದ್ದು ತಣ್ಣಗೆ ಮಲಗುವುದನ್ನು ನೋಡಿದರೆ ಆಹಾ ಎನ್ನುತ್ತೀರಿ. ದಾರಿಯಲ್ಲಿ ಕೆಲವು ಅನಾಮಧೇಯ ನೀರ ಧಾರೆಗಳೂ ಸಿಗುತ್ತವೆ. ಅವುಗಳನ್ನು ನೋಡುತ್ತಾ ನಮ್ಮ ಮೈಮನದಲ್ಲೂ ಹರುಷ ಧಾರೆಯಾಗುತ್ತದೆ. ಆದರೆ, ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಅಲ್ಲಲ್ಲಿ ದಾರಿಮಧ್ಯೆ ನಿಲ್ಲಲು ಅರಣ್ಯ ಇಲಾಖೆ ಅನುಮತಿ ನೀಡುವುದಿಲ್ಲ. ಹಾಗಾಗಿ ಈ ಚಂದದ ದಾರಿಯನ್ನು ಕಣ್ಣಲ್ಲೇ ಸಾಧ್ಯವಾದಷ್ಟು ಸೆರೆ ಹಿಡಿಯುತ್ತ, ಆಸ್ವಾದಿಸುತ್ತ ಸಾಗಿದರೆ ಬದುಕಿಗೆ ನವಚೇತನವೇ ಸಿಕ್ಕಂತಾಗುತ್ತದೆ. ಯಾಕೆಂದರೆ ಈ ದಾರಿಯೇ ಮಾಯಕದ ನಾಕ.

ಮಳೆಗಾಲದ ಬಿರುಸು ಕಳೆದಮೇಲೆ ಅರಣ್ಯ ಇಲಾಖೆ ಕುದುರೆಮುಖ ಪರ್ವತ ತಾಣ ಸೇರಿದಂತೆ ವಿವಿಧ ಚಾರಣ ತಾಣಗಳಿಗೆ ಪ್ರವೇಶ ನೀಡುತ್ತದೆ. ಆವಾಗ ಬೇಕಿದ್ದರೆ ನಿಜಕ್ಕೂ ಪರಿಸರವನ್ನು ಗಾಢವಾಗಿ ಪ್ರೇಮಿಸುವವರು, ಸ್ವರ್ಗದಂತಿರುವ ತಾಣಗಳಿಗೆ ಚಾರಣ ಕೈಗೊಳ್ಳಬಹುದು. ಅದಕ್ಕೂ ಮೊದಲು ಮಳೆಯಲ್ಲಿ ನೆನೆದ ಇಲ್ಲಿನ ದಾರಿಯನ್ನೊಮ್ಮೆ ನೋಡಿಬಂದರೆ ಮಳೆಯ ಮರ್ಮರ ನಾದ, ತಂಪು ಎಂದೆಂದಿಗೂ ನಿಮ್ಮನ್ನು ಆವರಿಸುತ್ತವೆ. ಕುದುರೆಮುಖದ ಮಳೆಗಾಲದಲ್ಲಿ ಅಪರೂಪದ ಮಲಬಾರ್ ಟ್ರೋಗನ್ ಹಕ್ಕಿಗಳು, ಪಶ್ಚಿಮಘಟ್ಟದ ಕಾಟಿ (ಕಾಡುಕೋಣ), ಕಡವೆ ನೋಡಲು ಸಿಕ್ಕಿದರೂ ಸಿಕ್ಕಾವು, ಮಳೆಗಾಲದಲ್ಲಿ ಸಂತಾನೋತ್ಪತ್ತಿಗೆ ಅಣಿಯಾಗುವ ಅಪರೂಪದ ಬಣ್ಣ ಬಣ್ಣದ ಕಪ್ಪೆಗಳು, ಲಕ್ಷಾಂತರ ಹುಳುಹುಪ್ಪಟೆಗಳು ನಿಮ್ಮನ್ನು ಸೆಳೆಯುತ್ತವೆ. ಕಪ್ಪೆ, ಕೀಟ, ಹಕ್ಕಿಗಳ ಕುರಿತು ಅಧ್ಯಯನ ಮಾಡುವವರಿಗೂ ಕುದುರೆಮುಖ ಕೌತುಕದ ದಾರಿ.

ಹಳ್ಳಿಗಳಲ್ಲ, ಸ್ವರ್ಗದಿಂದ ಇಳಿಬಿಟ್ಟ ತುಣುಕುಗಳು!

ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನಲ್ಲಿರುವ ಪುಟ್ಟ ಪುಟ್ಟ ಊರುಗಳಿಗೂ ನಿಸರ್ಗದತ್ತ ಸಾಗಿಸುವ ಅಯಸ್ಕಾಂತೀಯ ಗುಣವಿದೆ. ಈ ಊರಿನ ಹೆಜ್ಜೆ ಹೆಜ್ಜೆಗೂ ಹಸಿರೇ.

ಇಲ್ಲೊಂದು ಮೈದಾಡಿ ಅನ್ನುವ ಮಂಜು ಮುಸುಕಿರುವ ಪರ್ವತ ತಾಣವಿದೆ. ಹಚ್ಚಹಸಿರಿನ ಹುಲ್ಲು ಮುತ್ತಿರುವ ಈ ತಾಣದಲ್ಲಿ ನಿಂತು ಪಶ್ಚಿಮಘಟ್ಟದ ಅಪೂರ್ವ ಗಿರಿಶ್ರೇಣಿಯನ್ನು ನೋಡಿದರೆ ಆಹಾ ಆ ಅನುಭವದ ಮುಂದೆ ಬೇರೆಲ್ಲವೂ ನಗಣ್ಯ ಅನ್ನಿಸತೊಡಗುತ್ತದೆ. ನಿಸರ್ಗ ಪ್ರೇಮಿಗಳಿಗಂತೂ ಕನಸಲ್ಲೂ ಕಾಡುವ ಸ್ಥಳವಿದು.

ಬದುಕು ಅದೆಷ್ಟು ಸಂತಸದಾಯಕ, ಅದೆಷ್ಟು ಚೈತನ್ಯಕರ ಎಂದು ಗೊತ್ತಾಗಬೇಕಿದ್ದರೆ ಇಂತಹ ವಿಹಂಗಮ ತಾಣದಲ್ಲಿ ನಿಂತು ಸ್ವಚ್ಛಂದವಾಗಿ ಮಳೆಗೆ ಒದ್ದೆಯಾಗುತ್ತ, ಒಮ್ಮೆ ಮುದುಡಿ, ಮತ್ತೊಮ್ಮೆ ಬಿರಿಯುವ ಪ್ರಕೃತಿಯನ್ನು ಧೇನಿಸುತ್ತಿರಬೇಕು, ಕಳಸದಲ್ಲೇ ಗಾಳಿಗುಡ್ಡ (ಕ್ಯಾತನಮಕ್ಕಿ), ಬಲ್ಲಾಳರಾಯನ ದುರ್ಗ ಎನ್ನುವ ಇನ್ನೂ ಕೆಲವು ಪ್ರಾಕೃತಿಕ ತಾಣಗಳಿವೆ. ಆ ತಾಣಗಳಲ್ಲೂ ಮಳೆಗಾಲದ ಕಾಡು, ಮಂಜು ಮಲೆಯ ಹಾಡು ಕಾಡತೊಡಗುತ್ತವೆ.

ಲೊನಾವಲಾದಲ್ಲೊಂದು ಮಳೆಗಾಲ

ಮಹಾರಾಷ್ಟ್ರದ ಮುಂಬೈ-ಪುಣೆ ನಗರದ ಮಧ್ಯದಲ್ಲಿರುವ ಲೊನಾವಲಾ ಎನ್ನುವ ಮಂಜು ಓಡುವ, ಹಸಿರು ಓಲಾಡುವ, ಗಾಳಿ ಜೋಕಾಲಿ ಜೀಕಿಸಿದಂತಾಗುವ ಸ್ಥಳವೊಂದಿದೆ. ಇದರ ಅಪೂರ್ವ ನೋಟವನ್ನು ಮಳೆಗಾಲದಲ್ಲೇ ಆನಂದಿಸಬೇಕು. ಇಲ್ಲಿನ ಖಂಡಾಲಾ ಗಿರಿಧಾಮವನ್ನು ನೋಡಿದರೆ ಅದು ಬದುಕಿನ ಕಟ್ಟಕಡೆವರೆಗೂ ಮತ್ತೆ ಮತ್ತೆ ಕಾಡುತ್ತಲೇ ಇರುತ್ತದೆ (ಬೇಂದ್ರೆ ಅವರು 'ಶ್ರಾವಣಾ ಬಂತು...' ಹಾಡು ಬರೆಯಲು ಪ್ರೇರಣೆಯಾದ ಜಾಗ ಇದು). ಕೃಷ್ಣಾ ನದಿಯ ಉಗಮಸ್ಥಾನ ಮಹಾರಾಷ್ಟ್ರದ ಮಹಾಬಲೇಶ್ವರ ಕೂಡ ಬದುಕಿಗೆ ಹಿಗ್ಗು ತರುತ್ತದೆ. ಇಲ್ಲಿ ಮಂಜು ಆವರಿಸುವುದು ಹೇಗಿರುತ್ತದೆಂದರೆ ಕಂಡ ಕನಸೇ ಬೊಗಸೆಗೆ ಸಿಕ್ಕಂತೆ. ಇಲ್ಲಿರುವ ಧೋಬಿ ಜಲಪಾತ, ಚೈನಾಮನ್ ಜಲಪಾತ ಇವೆಲ್ಲಾ ನಿಮ್ಮ ಕಳೆದುಹೋದ ಸಂತಸವನ್ನು ಮರಳಿಸುವುದು ಖಂಡಿತ.

ದೆಹೆನೆ ಅನ್ನುವ ಗ್ರಾಮ್ಯ ಸೊಗಡು

ಮಹಾರಾಷ್ಟ್ರದ ಪಶ್ಚಿಮಘಟ್ಟದ ತಡಿಯಲ್ಲಿರುವ ಅತ್ಯಂತ ಮನಮೋಹಕ ಊರಿದು. ಇಲ್ಲಿ ಅಪ್ಪಟ ಹಳ್ಳಿಯ ಸೊಗಡಿದೆ, ಗ್ರಾಮ್ಯ ಬದುಕಿನ ಸಹಜತೆ, ಹಚ್ಚ ಹಸುರಿನ ಅರಣ್ಯದ ಚೆಲುವಿದೆ, ಇಲ್ಲಿನ ಹುಲ್ಲುಗಾವಲು, ಧೋ.. ಧೋ.. ಎಂದು ಸುರಿವ ಮಳೆ, ಗ್ರಾಮೀಣ ಜನರ ಕೃಷಿ ಬದುಕು, ಕಾಡಿನ ತೊರೆಗಳ ಹಿತವಾದ ಜೋಗುಳದ ಹಾಡು, ಬೆಟ್ಟ ಬಯಲುಗಳ ಅಪೂರ್ವ ಸಂಗಮ ಇವೆಲ್ಲಾ ಸ್ವರ್ಗದಲ್ಲಿಯೇ ಇರುವಂತಹ ಅನುಭವ ಕೊಟ್ಟುಬಿಡುತ್ತವೆ. ಇಲ್ಲಿನ ಬುಡಕಟ್ಟು ಜನಾಂಗದವರ ಜೀವನಶೈಲಿಯೂ ಎಷ್ಟೊಂದು ಚೆಂದ ಅನ್ನಿಸುತ್ತದೆ. ಖುಷಿ, ಸಹಜತೆ, ಧ್ಯಾನಸ್ಥತೆಗೆ ಇದೊಂದು ಅದ್ಭುತ ಜಾಗ. ಮಳೆಗಾಲದ ವಿಶೇಷ ತಿಂಡಿ ತಿನಿಸುಗಳ ಆತಿಥ್ಯ ಬೇರೆ. ಪ್ರವಾಸ ಎಂದರೆ ಮೋಜು ಮಾತ್ರವಲ್ಲ ಅದು ಪ್ರವಾಸ ಜನಸಂಸ್ಕೃತಿ, ಭಾಷೆ, ಸ್ಥಳೀಯತೆ ಎಲ್ಲವನ್ನೂ ಅರ್ಥಮಾಡಿಸಬೇಕು. ದೆಹೆನೆ ಅವೆಲ್ಲವನ್ನೂ ನಿಮಗೆ ಧಾರೆಯೆರೆಯುತ್ತದೆ.

ಅಲ್ನೋಡಿ... ಆ ಹಸಿರು ಬೆಟ್ಟದ ಮೇಲೊಂದು ಪುಟ್ಟ ಮನೆ. ಇಂತಹ ಮನೆಯಲ್ಲಿ ಮಲೆನಾಡು ಕಷಾಯ ಕುಡಿಯಬೇಕೇ? ಕಳಸಕ್ಕೆ ಬನ್ನಿ

ದೇವರನಾಡಿನ ತೆಕ್ಕಾಡಿ

ಕೇರಳದ ಇಡುಕ್ಕಿ ಜಿಲ್ಲೆಯಲ್ಲಿರುವ ತೆಕ್ಕಾಡಿ, ವನ್ಯಜೀವಿ ಪ್ರಿಯರಿಗೂ ನಿಸರ್ಗಾರಾಧಕರಿಗೂ ಇನ್ನಷ್ಟು ಪರಿಸರದ ಹುಚ್ಚು ಹಿಡಿಸುವ ತಾಣ. ಇಲ್ಲಿನ ಪೆರಿಯಾರ್ ರಾಷ್ಟ್ರೀಯ ಉದ್ಯಾನವನದ ಗಜಗಳನ್ನು, ಅವುಗಳ ಹಿನ್ನೆಲೆಯಲ್ಲಿರುವ ಕಾಡು, ಸ್ವಲ್ಪ ದೂರ ಹೋದರೆ ಕಾಣಿಸುವ ಪುಟ್ಟ ಜಲಪಾತ, ತೊರೆಗಳನ್ನು ನೋಡುವುದೇ ಒಂದು ಆನಂದ. ಇಲ್ಲಿನ ಸಂಬಾರ್ ಜಿಂಕೆಗಳು, ಚಿರತೆ, ಕಾಡುಕೋಣ, ಅಳಿಲು ಮೊದಲಾದವುಗಳು ಕಾಡಿನ ಸೂಕ್ಷ್ಮತೆಗಳನ್ನು ಇನ್ನಷ್ಟು ಅರ್ಥ ಮಾಡಿಸುತ್ತವೆ.

ಮಳೆಯ ನಾಡು ತೀರ್ಥಹಳ್ಳಿಯ ಆಗುಂಬೆ, ಕೇರಳದ ವಯನಾಡು, ಚಾರ್ಮಾಡಿ ಘಾಟ್, ಶಿರಾಡಿ ಘಾಟ್, ಬಿಸಿಲೆಘಾಟ್, ಹುಲಿಕಲ್ ಘಾಟಿ, ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗ, ಕುಪ್ಪಳ್ಳಿ, ಶೃಂಗೇರಿಯ ಸಿರಿಮನೆ ಜಲಪಾತ, ಇವೆಲ್ಲ ಪಶ್ಚಿಮಘಟ್ಟದ ಅಪರಿಮಿತ ಸೊಬಗನ್ನು, ಮುಂಗಾರಿನ ವರ್ಣ ವೈಭವವನ್ನು ಇನ್ನಷ್ಟು ಕಾಡಿಸುವ ವರ್ಣನಾತೀತ ತಾಣಗಳು.



ಒಂದು ಅಪೂರ್ವ ಸಮಾಗಮ... ಸಿನಿಮಾ ರಂಗದ ದಿಗ್ಗಜರಾದ ಯಶ್ ಚೋಪ್ರಾ, ದಿಲೀಪ್ ಕುಮಾರ್, ವಿನೋದ್ ಖನ್ನಾ, ರಾಜ್‌ಕುಮಾರ್, ಸಾಯಿರಾ ಬಾನು, ಜಯಾ ಬಚ್ಚನ್ ಹಾಗೂ ಅಮಿತಾಭ್ ಬಚ್ಚನ್ (ಮೊದಲ ಚಿತ್ರ). ದಿಲೀಪ್ ಕುಮಾರ್ ಅವರಿಗೆ ಪಾಕಿಸ್ತಾನದ ಅತ್ಯುನ್ನತ ನಾಗರಿಕ ಗೌರವ 'ನಿಶಾನ್ ಏ ಇಮ್ತಿಯಾಜ್' ಪುರಸ್ಕಾರವನ್ನು ಪ್ರದಾನ ಮಾಡಿದ ಪಾಕಿಸ್ತಾನದ ಆಗಿನ ಅಧ್ಯಕ್ಷ ರಫಿಕ್ ತರಾರ್ (ಎರಡನೇ ಚಿತ್ರ). ಗೆಳೆಯನಿಗೆ ಕೊನೆಯ ವಿದಾಯ... ದಿಲೀಪ್ ಅವರ ಪಾರ್ಥಿವ ಶರೀರದ ಮುಂದೆ ಧರ್ಮೇಂದ್ರ ರೋದನ. ಸಾಯಿರಾ ಬಾನು ಸಹ ಚಿತ್ರದಲ್ಲಿದ್ದಾರೆ (ಮೂರನೇ ಚಿತ್ರ).

ರಿಯಲ್ ಬಾದ್‌ಷಾ!

ಕೊನೆಯ ಮೊಘಲ್, ಅಭಿನಯದ ಬಾದ್‌ಷಾ, ಟ್ರ್ಯಾಜೆಡಿ ಕಿಂಗ್ ದಿಲೀಪ್ ಕುಮಾರ್ ಈ ಜಗತ್ತಿಗೆ ವಿದಾಯ ಹೇಳಿದ್ದಾರೆ. ಇದರೊಂದಿಗೆ ಪೇಶಾವರ ಮತ್ತು ಮುಂಬೈ ನಡುವಿನ ಕೊನೆಯ ಕೊಂಡಿ ಮುರಿದಿದೆ. ಈಗ ನಮ್ಮ ಜೊತೆ ಶಾಶ್ವತವಾಗಿ ಇರುವುದು ಈ ದೈತ್ಯ ಪ್ರತಿಭೆಯ ಬಗ್ಗೆ ಹೇಳಿ ಮುಗಿಸಲಾರದಷ್ಟು ನೆನಪುಗಳು ಮಾತ್ರ.

ತುಂಬು ಯೌವನದ ದಿನಗಳಲ್ಲಿ... 1946ರಲ್ಲಿ ದಿಲೀಪ್ ಕುಮಾರ್ ಚಿತ್ರ: ವಿಕಿ ಕಾಮನ್ಸ್

ಪ್ರತಿಭಾ ನಂದಕುಮಾರ್

ಕನಸುಗಣ್ಣಿನ ದಿಲೀಪ್ ಕುಮಾರ್ ಬೆಳ್ಳಿಪರದೆಯ ತಮ್ಮ ಮೋಹಕತೆಯಿಂದ ಎಲ್ಲರನ್ನೂ ಮನರಂಜಿಸಿ, ಅಪಾರ ಪ್ರೀತಿ ಗಳಿಸಿದ್ದೇನೋ ನಿಜ. ಆದರೆ, ತೆರೆಯ ಆಚೆಗೆ ಅವರ ವ್ಯಕ್ತಿತ್ವ ಹಲವು ಆಯಾಮಗಳಿಂದ ಹೊಳೆದಿದ್ದು ಹೆಚ್ಚಿನ ಜನರ ಗಮನವನ್ನು ಸೆಳೆದಿಲ್ಲ. ನಟನೊಬ್ಬನು ಸಾಮಾಜಿಕ ಕಳಕಳಿಯನ್ನು ಹೊಂದಿರಬೇಕಾದ ಅಗತ್ಯದ ಕುರಿತು ದಿಲೀಪ್ ಹಲವಾರು ಸಂದರ್ಶನಗಳಲ್ಲಿ ಹೇಳಿಕೊಂಡಿದ್ದಾರೆ. ಜೊತೆಗೆ ಅತ್ಯಂತ ಸಂದಿಗ್ಧ ಸಂದರ್ಭಗಳಲ್ಲಿ ಮುಖಾಮುಖಿಯಾಗಿ ನಿಂತು ಹೋರಾಡಿದ್ದಾರೆ.

ತಮ್ಮ ಐವತ್ತು ವರ್ಷಗಳ ಚಿತ್ರ ಪ್ರಯಾಣದಲ್ಲಿ ನಟನೆಯಲ್ಲಿ ಮಾತ್ರವಲ್ಲ, ಸಮಾಜದ ಬಗ್ಗೆ ನಿಜವಾದ ಕಾಳಜಿ ಹೊಂದಿ, ಗಂಭೀರ ಚಿಂತನೆಯಲ್ಲಿ ತೊಡಗಿಕೊಂಡವರು ಅವರು. ಕೃಷಿಯಿಂದ ತೊಡಗಿ ಕೈಗಾರಿಕೀಕರಣ, ರಾಜಕೀಯ, ವೈದ್ಯಕೀಯ, ಶಿಕ್ಷಣ, ಸಮಾನತೆ, ಆರ್ಥಿಕ ಸಾಮಾಜಿಕ ಸಂದಿಗ್ಧ... ಇತ್ಯಾದಿಗಳ ಬಗ್ಗೆ ಸ್ಪಷ್ಟ ನಿಲುವುಗಳನ್ನು ತಾಳಿ ಅವುಗಳನ್ನು ಯಾವುದೇ ಹಿಂಜರಿಕೆ ಇಲ್ಲದೆ ಹೇಳುವ ಛಾತಿಯುಳ್ಳ ವ್ಯಕ್ತಿಯಾಗಿದ್ದವರು. ಕಲೆಯ ಬಗ್ಗೆ ಅವರಿಗಿದ್ದ ತೀವ್ರತೆ ಮತ್ತು ಅದನ್ನು ಬದುಕಿನುದ್ದಕ್ಕೂ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿಸಿಕೊಂಡ ರೀತಿ ದಿಗ್ಭ್ರಮೆ ಹುಟ್ಟಿಸುವಂತಹದು.

ಪುಣೆಯ ಕಂಟೋನ್ಮೆಂಟ್ ಪ್ರದೇಶದಲ್ಲಿ ಒಂದು ಕ್ಯಾಂಟೀನ್ ಮತ್ತು ಹಣ್ಣಿನ ಅಂಗಡಿ ನಡೆಸುತ್ತಿದ್ದ ಯೂಸುಫ್ ಖಾನ್, ಅಲ್ಲಿ ಶೂಟಿಂಗಿಗೆ ಬಂದಿದ್ದ ಪ್ರಸಿದ್ಧ ನಟಿ ದೇವಿಕಾರಾಣಿಯ ಕಣ್ಣಿಗೆ ಬಿದ್ದು ನಟನಾದದ್ದು ಎಲ್ಲರಿಗೂ ಗೊತ್ತಿರುವ ಕಥೆ. ಸಂದರ್ಶನವೊಂದರಲ್ಲಿ ಅವರೇ ಹೇಳಿಕೊಂಡಂತೆ ಬಾಂಬೆ ಟಾಕೀಸ್ ಸ್ಟುಡಿಯೊದವರು ಮೂರು ವರ್ಷದ ಕಾಂಟ್ರಾಕ್ಟ್‌ಗೆ ಸಹಿ ಹಾಕಿಸಿಕೊಂಡಾಗ ತಿಂಗಳಿಗೆ ಸಾವಿರದ ಇನ್ನೂರು ರೂಪಾಯಿ ಸಂಬಳ ಎನ್ನುವುದನ್ನು ವರ್ಷಕ್ಕೆ ಎಂದು ತಪ್ಪು ತಿಳಿದುಕೊಂಡು ಹೋಗಲೇ ಇಲ್ಲವಂತೆ! ಮತ್ತೆ ಅದು ತಿಂಗಳಿಗೆ ಎಂದು ತಿಳಿಸಿ ಹೇಳಿದಮೇಲೆ ಒಪ್ಪಿಕೊಂಡರಂತೆ.

ಮೊದಲ ಚಿತ್ರ 'ಜ್ವಾರ್ ಭಾಟಾ' ಯಶಸ್ವಿಯಾಗಲಿಲ್ಲ. ಅಷ್ಟೇ ಅಲ್ಲ, ಅಂದಿನ ಪ್ರಖ್ಯಾತ ಪತ್ರಕರ್ತ ಬಾಬುರಾವ್ ಪಟೇಲ್ 'ಫಿಲಂ ಇಂಡಿಯಾ' ಎನ್ನುವ ಅತ್ಯಂತ ಜನಪ್ರಿಯ ಪತ್ರಿಕೆಯಲ್ಲಿ 'ಇವನು ಸರಿಯಾಗಿ ಊಟ ಮಾಡಿ ಎಷ್ಟು ದಿನವಾಯಿತೋ? ಇವನಿಗೆ ವಿಟಮಿನ್ ಕೊಡಿಸಬೇಕು, ನಟನೆ ಇವನ ಕೈಯಲ್ಲಿ ಆಗದ ಕೆಲಸ' ಇತ್ಯಾದಿ ಹೀನಾಯವಾಗಿ ಬರೆದಿದ್ದರು. ಅಲ್ಲಿಯವರೆಗೆ ಒಂದು ಚಿತ್ರವನ್ನೂ ನೋಡಿರದ ದಿಲೀಪ್ ಈ ಟೀಕೆಯನ್ನು ನೋಡಿ, 'ನನಗ್ಯಾಕೆ ನಟನೆ ಬರುವುದಿಲ್ಲ' ಎಂದು ಚಿತ್ರಗಳನ್ನು ನೋಡಲು ಶುರು ಮಾಡಿದರು. ಅದರಲ್ಲೂ ಇಂಗ್ಲಿಷಿನ ನಟರನ್ನು ಅಧ್ಯಯನ ಮಾಡಿದರು. ಜೋರಾಗಿ ಓದಿ ಓದಿ ತಮಗೆ ತಾವೇ ಧ್ವನಿ ತರಬೇತಿಯನ್ನು ನೀಡಿಕೊಂಡರು. ಪರಿಣಾಮ ಮೂರನೇ ಚಿತ್ರ 'ಜುಗ್ನು' ಯಶಸ್ವಿಯಾಯಿತು. ಮತ್ತೆ ನಾಲ್ಕನೇ ಚಿತ್ರ 'ಮಿಲನ್'ನಲ್ಲಿ ಇದೇ ದಿಲೀಪ್ ಅಭಿನಯವನ್ನು ಅದೇ ಬಾಬುರಾವ್ ಪಟೇಲ್ ಹೊಗಳಿ ಬರೆದರು!

1970ರಲ್ಲಿ ಬಿಬಿಸಿಗೆ ಕೊಟ್ಟ ಒಂದು ಸಂದರ್ಶನದಲ್ಲಿ ದಿಲೀಪ್ ಹೀಗೆ ಹೇಳಿಕೊಂಡಿದ್ದಾರೆ: 'ಪ್ರತಿದಿನ ದುರಂತ ದೃಶ್ಯಗಳನ್ನು ಮಾಡುತ್ತಾ ಮಾಡುತ್ತಾ ಅದು ನನ್ನ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರಲಾರಂಭಿಸಿತು. ಪಾತ್ರದ ಶೇಷ ನನ್ನಲ್ಲಿ ಉಳಿದುಕೊಳ್ಳಲಾರಂಭಿಸಿತು. ಕೊನೆಗೆ ಸೈಕಿಯಾಟ್ರಿಸ್ಟ್ ಆಗಿದ್ದ ನನ್ನ ಗೆಳೆಯನ ಹತ್ತಿರ ಮಾತನಾಡಿದೆ. ಆತ ಕಾಮಿಡಿ ಪಾತ್ರ ಮಾಡು ಎಂದು ಹೇಳಿದ'. ಹೌದು, ದಿಲೀಪ್ ಮಾಡಿದ ಕಾಮಿಡಿ ಪಾತ್ರಗಳೂ ಅಷ್ಟೇ ಅದ್ಭುತ.

ದುರಂತ ನಾಯಕ ಎನ್ನುವ ಪಟ್ಟ ದಿಲೀಪ್ ಅವರು ಬಯಸಿದ್ದೇನೂ ಅಲ್ಲ. 'ಜನರಿಗೆ ಅದೇ ಇಷ್ಟ. ನಾನು ಸಾಯೋದನ್ನ ನೋಡಲು ಅವರು ಬಯಸುತ್ತಿದ್ದರು! ಹಾಗಾಗಿ ನೀನೇನು ಮಾಡಬೇಕೋ ಅದನ್ನು ಮಾಡು ಅಂತ ಹೊರಗಿನ ದಿಲೀಪ್ ಹೇಳಿಕೊಳ್ಳುತ್ತಿದ್ದ, ಒಳಗಿನ ಯೂಸುಫ್ ಖಾನ್ ಅದಕ್ಕೆ ಶಾಮೀಲಾಗುತ್ತಿರಲಿಲ್ಲ! ಕೊನೆಗೆ ಅದರೊಂದಿಗೆ ನಾನು ಸಂಧಾನ ಮಾಡಿಕೊಳ್ಳಲೇ ಬೇಕಾಗಿತ್ತು' ಎಂದು ಹೇಳಿದ್ದರು.

'ಪಠಾಣರಿಗೆ ಕಲೆ ಅಂದರೆ ದೂರ. ಅದರಲ್ಲೂ ಒಬ್ಬ ಕಲಾವಿದನಿಗೆ 'ಇವಳು ನಿನ್ನ ತಾಯಿ. ಸತ್ತುಹೋಗಿದ್ದಾಳೆ, ಈಗ ನೀನು ಅವಳಿಗಾಗಿ ಪ್ರಲಾಪಿಸಬೇಕು' ಎಂದು ಹೇಳುತ್ತಾರೆ. ಅಲ್ಲಿ ಮಲಗಿರುವ ವ್ಯಕ್ತಿ ಲಲಿತಾ ಪವಾರ್ ಅದೇತಾನೇ ಹೊಟ್ಟೆ ತುಂಬಾ ಊಟಮಾಡಿ ಎಲೆ ಅಡಿಕೆ ಹಾಕಿಕೊಂಡು ಮೇಕಪ್ ಮ್ಯಾನ್ ಜೊತೆ ಜಗಳವಾಡಿಕೊಂಡು ಬಂದು ಮಲಗಿದ್ದಾಳೆ. ಅವಳು ನನ್ನ ತಾಯಿ ಅಲ್ಲ, ಅವಳು ಸತ್ತಿಲ್ಲ, ಶಾಟ್ ಮುಗಿದ ಮೇಲೆ ಎದ್ದು ಹೋಗುತ್ತಾಳೆ ಅನ್ನುವುದು ನನಗೆ ಗೊತ್ತು. ಆದರೆ, ನಾನು ತಾಯಿ ಸತ್ತಂತೆ ದುಃಖಪಡಬೇಕು. ಅದಕ್ಕೆ ನನ್ನ ಒಳಗಿನಿಂದ ಅನುಭವವನ್ನು ಹೊರಗೆಳೆಯಬೇಕು. ಅದು ಖಾಲಿಯಾದರೆ ಭಯ ಉಂಟಾಗುತ್ತದೆ' - ನಟನೆಯ ಕುರಿತು ಈ ಕಲಾವಿದ ಹೊಂದಿದ್ದ ಇಂತಹ ಒಳನೋಟಗಳೆಷ್ಟೋ.

ಭಾರತೀಯ ಕಲೆ ಕುರಿತ ದಿಲೀಪ್ ಅವರ ಮಾತು ಯೋಚಿಸುವಂತಿದೆ: 'ನಮ್ಮ ಚಿತ್ರ ಸಾಹಿತ್ಯ, ನಮ್ಮ ನೆಲದ ಭದ್ರ ತಳಪಾಯದ ಮೇಲೆ ನಿಂತಿತ್ತು. ಬಂಕಿಮಚಂದ್ರ, ಟ್ಯಾಗೋರ್, ಪ್ರೇಮ್‌ಚಂದ್, ಇಕ್ಬಾಲ್, ಕನ್ಹಯ್ಯ ಲಾಲ್ ಕಪೂರ್, ಸಾದತ್ ಹಸನ್ ಮಾಂಟೊ ಮುಂತಾದವರ ಸೃಷ್ಟಿಗಳ ಮೂಲದ್ರವ್ಯಗಳನ್ನು ಆಧರಿಸಿ ತಯಾರಾಗುತ್ತಿತ್ತು. ನಮ್ಮ ಗಾಲಿಬ್, ಮೀರ್ ತಕಿ ಮೀರ್ ಮುಂತಾದವರ ಕಾವ್ಯದ ನೆರವಿತ್ತು. ಉದ್ಯಮೀಕರಣ ಹೆಚ್ಚಾದಂತೆ ನಮ್ಮ ಸಾಹಿತ್ಯದಲ್ಲಿ ಏನಿದೆ ಎಂದು ಪ್ರಶ್ನಿಸಲಾಗುತ್ತಿದೆ. ಪಾಶ್ಚಾತ್ಯರನ್ನು ಅನುಕರಿಸುತ್ತಾ ನಮ್ಮತನವನ್ನು ಮರೆತುಬಿಟ್ಟಿದ್ದೇವೆ. ನಾವು ತಾಂತ್ರಿಕತೆಯನ್ನು ಆಮದು ಮಾಡಿಕೊಳ್ಳಬಹುದು, ಆದರೆ ಸಾಹಿತ್ಯವನ್ನಲ್ಲ. ನಮ್ಮದನ್ನು ನಾವು ಮರೆತೆವು. ಮಳೆ ಬೀಳದೆ ಬರ ಬಂತೆಂದು, ನೆಲ ಧಾನ್ಯ ಕೊಡಲಿಲ್ಲವೆಂದು ನಾವು ಭೂಮಿಗೆ ಉಗಿಯಲಿಲ್ಲ. ರೈತನನ್ನು 'ಜಲೀಲ್' ಎಂದು ಕರೆಯಲಿಲ್ಲ. ಇದ್ಯಾಕೆ ಹೀಗಾಗುತ್ತಿದೆ ಎಂದು ವಿಶ್ಲೇಷಣೆ ಮಾಡಿದ್ದೇವೆಯೇ ಹೊರತು ಶಾಪ ಕೊಡಲಿಲ್ಲ'.

ದಿಲೀಪ್ ಅವರದು ಮೆಥಡ್ ಆ್ಯಕ್ಟಿಂಗ್. ಅದಕ್ಕೇ ಪಾತ್ರಗಳಿಂದ ಹೊರಗೆ ಬರುವುದು ಅವರಿಗೆ ಕಷ್ಟವಾಗುತ್ತದೆ ಎನ್ನಲಾಗುತ್ತದೆ. ನಟ ಒಬ್ಬನೇ ಆದರೂ ಅವನು ಹಲವಾರು ವ್ಯಕ್ತಿತ್ವಗಳನ್ನು ಆವಾಹಿಸಿಕೊಳ್ಳಬೇಕಾಗುತ್ತದೆ. 'ಗಂಗಾ ಜಮುನಾ' ಚಿತ್ರದ ಪಾತ್ರ ಮಾಡಲು ದಿಲೀಪ್ ಕುಮಾರ್ ತಮ್ಮ ತೋಟದ ಮಾಲಿಯನ್ನು ನೋಡಿ ಅಭ್ಯಾಸ ಮಾಡಿದರು. 'ದೀದಾರ್' ಚಿತ್ರದಲ್ಲಿ ಮೊದಲ ಬಾರಿಗೆ ಕುರುಡನ ಪಾತ್ರ ಮಾಡಬೇಕಿತ್ತು. ಅದುವರೆಗೆ ಕುರುಡನ ಪಾತ್ರ ಮಾಡಬೇಕಾದಾಗ ನಟರು ಕಣ್ಣುಮುಚ್ಚಿ ಅಭಿನಯಿಸುತ್ತಿದ್ದರು. ಅದು ದಿಲೀಪ್‌ಗೆ ಪಲಾಯನದ ದಾರಿ ಅನ್ನಿಸಿತು. ಕಣ್ಣು ತೆರೆದೇ ಅಭಿನಯಿಸಿದರೆ ಹೇಗೆ ಎಂದು ಅಶೋಕ್ ಕುಮಾರ್ ಬಳಿ ಸಲಹೆ ಕೇಳಿದರು. ಅದಕ್ಕೆ ಅವರು ಅಂಧೇರಿ ರೈಲ್ವೆ ಸ್ಟೇಷನ್ ಹತ್ತಿರ ಒಬ್ಬ ಫಕೀರ ಭಿಕ್ಷೆ ಬೇಡುತ್ತಿರುತ್ತಾನೆ. ಅವನು ಕುರುಡ. ಆದರೆ, ಕಣ್ಣು ತೆರೆದಿರುತ್ತಾನೆ. ಅವನನ್ನು ಹೋಗಿ ನೋಡು ಎಂದರು. ದಿಲೀಪ್ ಅವನ ಬಳಿಗೆ ಹೋಗಿ, ಅವನು ಹೇಗೆ ಮಾತಾಡುತ್ತಾನೆ, ನಡೆಯುತ್ತಾನೆ, ತಿರುಗುತ್ತಾನೆ ಎಲ್ಲವನ್ನೂ ಅಭ್ಯಾಸ ಮಾಡಿದರು. ಅವನೊಂದಿಗೆ ಸ್ನೇಹವನ್ನು ಮಾಡಿದರು. ಪರಿಣಾಮ 'ದೀದಾರ್'ನ ಕುರುಡನ ಪಾತ್ರ ಅದ್ಭುತವಾಗಿ ಮೂಡಿಬಂತು.

'ನನಗೆ ಕೊಟ್ಟ ಪಾತ್ರ ಮೂವತ್ತು ವರ್ಷದವನದಾಗಿದ್ದರೆ ಅಲ್ಲಿಯವರೆಗೆ ಅವನ ಬದುಕಿನ ಯಾವ ಅಂಶದ ಬಗ್ಗೆಯೂ ನನ್ನಲ್ಲಿ ಡೇಟಾ ಇರುವುದಿಲ್ಲ. ಆ ಕೊರತೆಯನ್ನು ನಾನೇ ತುಂಬಿಕೊಳ್ಳುತ್ತೇನೆ. ಅವನ ಹುಟ್ಟಿನಿಂದ ಪ್ರಾರಂಭಿಸುತ್ತೇನೆ. ಅವನ ಬದುಕಿನಲ್ಲಿ ಆಗಿರಬಹುದಾದ ಒಳ್ಳೆಯ ಮತ್ತು ಕೆಟ್ಟ ಸಂದರ್ಭಗಳನ್ನು ಕಲ್ಪಿಸಿಕೊಳ್ಳುತ್ತೇನೆ. ಅವನ ವ್ಯಕ್ತಿತ್ವಕ್ಕೆ ರಕ್ತ ಮಾಂಸ ತುಂಬಿಕೊಳ್ಳುವ ಪ್ರಯತ್ನ ಮಾಡುತ್ತೇನೆ' ಎಂದಿದ್ದರು ಈ ನಟ. 'ಮೊಘಲ್ ಏ ಆಜಂ'ನಲ್ಲಿ ರಾಜಕುಮಾರ ಸಲೀಮನ ಪಾತ್ರ ಮಾಡಲು ದಿಲೀಪ್ ಕುಮಾರ್‌ಗೆ ಯಾವ ರೆಫರೆನ್ಸ್‌ಗಳೂ ಇರಲಿಲ್ಲವಂತೆ. ಒಂದು ಕಾಲದಲ್ಲಿ ಕಾಲೇಜು ಹುಡುಗಿಯರು ದಿಲೀಪ್ ಹೆಸರಿನಲ್ಲಿ ಶಪಥ ಮಾಡುತ್ತಿದ್ದರು ಎಂದರೆ ಈ ಕಲಾವಿದನ ಕುರಿತು ಯಾವ ಮಟ್ಟದ ಕ್ರೇಜ್ ಇತ್ತು ಎನ್ನುವುದನ್ನು ಊಹಿಸಿಕೊಳ್ಳಿ.

1993ರಲ್ಲಿ ಬಾಬ್ರಿ ಮಸೀದಿ ಉರುಳಿಸಿದ ಸಂದರ್ಭದಲ್ಲಿ ಮುಂಬೈನಲ್ಲಿ ದಂಗೆ ಶುರುವಾದಾಗ ಸುನಿಲ್ ದತ್ ಜೊತೆ ಅವರು ರಿಲೀಫ್ ಕ್ಯಾಂಪ್ ನಡೆಸಿದರು. ಬಾಳಾ ಠಾಕ್ರೆ ಜೊತೆ ಗೆಳೆತನವಿದ್ದರೂ ಅದನ್ನು ಗಣಿಸದೇ ಶಿವಸೇನೆ ಅಂದಿನ ದಂಗೆಗೆ ಕೊಟ್ಟ ಕುಮ್ಮಕ್ಕನ್ನು ಬಹಿರಂಗವಾಗಿ ಖಂಡಿಸಿದರು.

ಮತ್ತೆ ಬಲಪಂಥದವರು ದೀಪಾ ಮೆಹ್ತಾ ಅವರ 'ಫೈರ್' ಚಿತ್ರವನ್ನು ಬ್ಯಾನ್ ಮಾಡಬೇಕೆಂದು ಗಲಾಟೆ ಮಾಡತೊಡಗಿದಾಗ ದೀಪಾ ಪೊಲೀಸ್ ರಕ್ಷಣೆ ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ ಅದಕ್ಕೆ ಸಹ ಪಿಟಿಷನರ್ ಅರ್ಜಿದಾರನಾಗಿ ಸಹಿ ಮಾಡಿದ್ದು ದಿಲೀಪ್. ಅದರಿಂದ ಕೋಪಗೊಂಡ ಠಾಕ್ರೆ ಸೂಚನೆಯ ಮೇರೆಗೆ ಗುಂಪುಗಳು ದಿಲೀಪ್ ಅವರ ಮನೆಯ ಮುಂದೆ ಅಶ್ಲೀಲ ಪೋಸ್ಟರುಗಳನ್ನು ಹಿಡಿದು ಪ್ರತಿಭಟನೆ ಮಾಡಿದಾಗ ಅದಕ್ಕೆ ಸೊಪ್ಪು ಹಾಕದೇ ನಿಂತವರು. 'ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಶು ಕದಾಚನ' ಎಂದು ಗೀತೆಯನ್ನು ಉದ್ಧರಿಸಿದ್ದರು.

1998ರಲ್ಲಿ ಪಾಕಿಸ್ತಾನವು ತನ್ನ ದೇಶದ ಅತ್ಯುನ್ನತ ಗೌರವ ನಿಶಾನ್ ಎ ಇಮ್ತಿಯಾಜ್ ನೀಡಿ ಗೌರವಿಸಿದಾಗ ದಿಲೀಪ್ ಅವರು ಅದನ್ನು ಸ್ವೀಕರಿಸಬಾರದೆಂದು ಕೆಲವರು ಪ್ರತಿಭಟಿಸಿದರು. ಅಂದಿನ ಪ್ರಧಾನ ಮಂತ್ರಿ ವಾಜಪೇಯಿ ಅವರೇ ಪ್ರಶಸ್ತಿ ಸ್ವೀಕರಿಸುವಂತೆ ಹೇಳಿ ವಿರೋಧದ ಧ್ವನಿಯನ್ನು ಅಡಗಿಸಿದರು. ಆಗ ದಿಲೀಪ್ ಪಾಕಿಸ್ತಾನಕ್ಕೆ ಹೋಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.

ಕಾರ್ಗಿಲ್ ಯುದ್ಧದ ಸಮಯದಲ್ಲಿ ಬಾಳಾ ಠಾಕ್ರೆ ಪಾಕಿಸ್ತಾನದ ಪ್ರಶಸ್ತಿ ಹಿಂದಿರುಗಿಸಿ ಅಥವಾ ಭಾರತ ಬಿಟ್ಟು ತೊಲಗಿ ಎಂದು ಹೇಳಿದಾಗ, 'ನನ್ನ ದೇಶ ಭಾರತ, ನಾನು ಇಲ್ಲಿಯೇ ಮಣ್ಣಾಗುತ್ತೇನೆ' ಎಂದು ಮನಮುಟ್ಟುವಂತೆ ಹೇಳಿದ್ದರು. 'ಠಾಕ್ರೆ ಆಡಿದ ಮಾತುಗಳು ನಮ್ಮ ವೈಯಕ್ತಿಕ ಘನತೆಯನ್ನು ಛಿದ್ರ ಮಾಡುತ್ತವೆ. ಮನಸ್ಸು ಕೆಡುತ್ತದೆ, ನೋವಾಗುತ್ತದೆ' ಎಂದೂ ಬೇಸರಿಸಿಕೊಂಡಿದ್ದರು. ಆದರೆ, ಠಾಕ್ರೆಗೆ ಹೆದರಿ ತಮ್ಮ ನಿಲುವನ್ನು ಮಾತ್ರ ಬದಲಿಸಿಕೊಳ್ಳಲಿಲ್ಲ. ಅಂದಿನ ಕಾಲದಲ್ಲಿ ಹಾಗೆ ನಿಲ್ಲುವುದು ಸಣ್ಣ ಮಾತೇನಾಗಿರಲಿಲ್ಲ. ಠಾಕ್ರೆ ಗೇಲಿ ಮಾಡುವುದಕ್ಕೆಂದು ದಿಲೀಪ್ ಅವರನ್ನು ಯೂಸುಫ್ ಖಾನ್ ಎಂದೇ ಸಂಬೋಧಿಸುತ್ತಾ ಎಷ್ಟು ಕಾಟ ಕೊಟ್ಟರು. ದಿಲೀಪ್ ಮನೆ ಇದ್ದ ನರ್ಗಿಸ್ ದತ್ ರಸ್ತೆಯಲ್ಲಿ ಸಂಚಾರ ಮಾಡುವುದಿಲ್ಲ ಎಂದು ಹೇಳಿ ಹೀಯಾಳಿಸಿದರು. ಕೊನೆಗೆ ಠಾಕ್ರೆಯವರ ಮಗ, ಇಂದಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಅದೇ ನರ್ಗಿಸ್ ದತ್ ರಸ್ತೆಯಲ್ಲಿ ನಡೆದು ಬಂದು ದಿಲೀಪ್‌ಗೆ ಅಂತಿಮ ಗೌರವ ಸಲ್ಲಿಸಿ ಸರ್ಕಾರಿ ಮರ್ಯಾದೆ ಸಹಿತ ಸಂಸ್ಕಾರ ಮಾಡಿಸಿದ್ದು ನಿಜಕ್ಕೂ ಹೃದಯ ಮುಟ್ಟುವ ಸಂಗತಿ.

ಪಾಕಿಸ್ತಾನದ ವಿದೇಶಾಂಗ ಸಚಿವರಾಗಿದ್ದ ಖುರ್ಷಿದ್ ಮಹಮದ್ ಕಸೂರಿ ಅವರು ತಮ್ಮ ಆತ್ಮಕಥೆ, 'Neither a Hawk nor a Dove'ನಲ್ಲಿ, ಕಾರ್ಗಿಲ್ ಯುದ್ಧದ ಸಮಯದಲ್ಲಿ ವಾಜಪೇಯಿ ಮತ್ತು ನವಾಜ್ ಷರೀಫ್ ನಡುವೆ ಸಂಧಾನ ಏರ್ಪಡಿಸಿ ಶಾಂತಿ ಮಾತುಕತೆ ಸಾಧ್ಯವಾಗಿಸಲು ಮುಖ್ಯಪಾತ್ರ ವಹಿಸಿದ ಆಯ್ದ ಕೆಲವೇ ವ್ಯಕ್ತಿಗಳಲ್ಲಿ ದಿಲೀಪ್ ಒಬ್ಬರು ಎಂದು ಬರೆದಿದ್ದರು. ದಿಲೀಪ್ ಆ ವಿಚಾರವನ್ನು ಎಂದಿಗೂ ಪ್ರಚಾರ ಮಾಡಲಿಲ್ಲ. ಪಂಡಿತ್ ಜವಾಹರಲಾಲ್ ನೆಹರೂ ಜೊತೆ ದಿಲೀಪ್ ಅವರಿಗೆ ನಿಕಟ ಗೆಳೆತನವಿತ್ತು. ಆದರೆ, ಅದನ್ನು ತಮ್ಮ ವೈಯಕ್ತಿಕ ಕಾರಣಕ್ಕೆ ಬಳಸಿಕೊಳ್ಳಲಿಲ್ಲ.

ಪಾಶ್ಮಾಂಡಾ ಮುಸಲ್ಮಾನ ವಿದ್ಯಾರ್ಥಿಗಳಿಗೆ ಮೀಸಲಾತಿಗಾಗಿ ಹೋರಾಡಲು ಹುಟ್ಟಿಕೊಂಡ ಸಂಸ್ಥೆ ಅಖಿಲ ಭಾರತ ಮುಸ್ಲಿಂ ಒಬಿಸಿ ಸಂಸ್ಥೆ (AIMOBCO). ಅದರ ಪ್ರಧಾನ ಸದಸ್ಯರಾಗಿ ದಿಲೀಪ್ ನೂರಾರು ಸಭೆಗಳಲ್ಲಿ ಭಾಗವಹಿಸಿ, ಮೀಸಲಾತಿಗೆ ಮತ ಅಡ್ಡಿಯಾಗಬಾರದು, ಬದಲಿಗೆ ಹಿಂದುಳಿದ ಸಮುದಾಯವನ್ನು ಸುಧಾರಿಸುವ ಕಡೆಗೆ ಗಮನಕೊಡಬೇಕು ಎಂದಿದ್ದರು. ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ಫೀಸು ಕಟ್ಟಿ ನೆರವಾಗಿದ್ದರು.

ಹಿಂದಿಯ 'ಪೈಗಾಮ್' (1959) ಚಿತ್ರದಲ್ಲಿ ಸಹ ನಟಿಯಾಗಿ ಅಭಿನಯಿಸಿದ ದಕ್ಷಿಣದ ತಾರೆ ಬಿ. ಸರೋಜಾದೇವಿ ಅವರ ಜೊತೆ ದಿಲೀಪ್ ಒಳ್ಳೆಯ ಸ್ನೇಹ ಇಟ್ಟುಕೊಂಡಿದ್ದರು. ಸರೋಜಾದೇವಿ ಅವರ ಮದುವೆ ಸಮಾರಂಭಕ್ಕೆ ಬಂದಿದ್ದ ದಿಲೀಪ್, 'ಸರೋಜಾದೇವಿ ಅವರಿಗೆ ಮುಂದೆಯೂ ಅಭಿನಯಿಸಲು ನೀವು ಬೆಂಬಲ ಕೊಡಬೇಕು' ಎಂದು ಪತಿ ಶ್ರೀಹರ್ಷ ಅವರಿಗೆ ಸಲಹೆ ನೀಡಿದ್ದರು. ಶ್ರೀಹರ್ಷ ಅವರು, 'ದಿಲೀಪ್ ಕುಮಾರ್ ಅವರೇ ಹೇಳಿದಮೇಲೆ ಇಲ್ಲ ಅನ್ನಲು ನಾನ್ಯಾರು' ಎಂದು ಸರೋಜಾದೇವಿ ಅವರು ಅಭಿನಯ ಮುಂದುವರಿಸಲು ಸಂಪೂರ್ಣ ಬೆಂಬಲ ಕೊಟ್ಟರು.

ದಿಲೀಪ್ ದೇಶದ ನಂಬರ್ ಒನ್ ನಟ ಎನ್ನಿಸಿಕೊಳ್ಳಲು ಕಾರಣ ವೈಯಕ್ತಿಕವಾಗಿ ಅವರು ನಂಬಿದ್ದ ಸಿದ್ಧಾಂತ. 'ಒಬ್ಬ ನಟ ತುಂಬಾ ಚೆನ್ನಾಗಿ ಕೆಲಸ ಮಾಡಿ ಜೊತೆಗೆ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದ್ದರೆ ಸರಿ. ಒಳ್ಳೆಯ ಅಭಿನಯ ಮಾಡಿದ ನಟ ನಿಜ ಜೀವನದಲ್ಲಿ ಕೆಟ್ಟವನಾಗಿದ್ದರೆ ಆಗ ನಿಮ್ಮ ಗೌರವ, ಮರ್ಯಾದೆ, ಪ್ರಶಂಸೆ ಎಲ್ಲದಕ್ಕೆ ಕವಡೆ ಕಿಮ್ಮತ್ತಿಲ್ಲ. ನೀವು ಎಷ್ಟೇ ಚೆನ್ನಾಗಿ ಕೆಲಸ ಮಾಡಿದರೂ ಜನ ನಿಮ್ಮ ಬಗ್ಗೆ ಒಳ್ಳೆಯ ಮಾತಾಡುವುದಿಲ್ಲ' ಎನ್ನುವುದು ದಿಲೀಪ್ ಅವರದೇ ಮಾತು. ಅಂತಹ ಒಳ್ಳೆಯ ವ್ಯಕ್ತಿತ್ವವನ್ನು ಬಾಳಿ ಬದುಕಿದವರು ಆ ಮೇರುನಟ.

ಪೇಶಾವರದಿಂದ ಮುಂಬೈವರೆಗೆ...

ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿರುವ ಪ್ರಮುಖ ನಗರ ಪೇಶಾವರ. ಅಲ್ಲಿಯ ಖಿಸ್ಸಾ ಖವಾನಿ ಬಜಾರ್‌ನಲ್ಲಿರುವ ತಮ್ಮ ಪೂರ್ವಜರ ಮನೆಯಲ್ಲಿ 1922ರ ಡಿಸೆಂಬರ್ 11ರಂದು ದಿಲೀಪ್ ಕುಮಾರ್ ಜನಿಸಿದರು. ಅವರ ಮೂಲ ಹೆಸರು ಯೂಸುಫ್ ಖಾನ್.

ಆಯಿಷಾ ಹಾಗೂ ಲಾಲಾ ಗುಲಾಂ ಸರ್ವಾರ್ ಖಾನ್ ಅವರ 12 ಮಕ್ಕಳಲ್ಲಿ ನಾಲ್ಕನೆಯವರು ಇವರು. ಬ್ರಿಟಿಷ್ ಆಡಳಿತದ ಆ ಅವಧಿಯಲ್ಲಿ ಪೇಶಾವರ ಭಾರತದ ಭಾಗವಾಗಿತ್ತು. ಹಣ್ಣಿನ ವ್ಯಾಪಾರಿಯಾಗಿದ್ದ ಅವರ ತಂದೆ 1930ರಲ್ಲಿ ತಮ್ಮ ಕುಟುಂಬದೊಂದಿಗೆ ಮುಂಬೈಗೆ ವಲಸೆ ಬಂದರು. ಸಿನಿಮಾ ಜಗತ್ತು ಪ್ರವೇಶಿಸುವ ಮುನ್ನ ದಿಲೀಪ್ ಅವರು ತಂದೆಯ ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು.

ಕಪೂರ್ ಹವೇಲಿ ಎಂದು ಖ್ಯಾತಿಯಾಗಿರುವ ಬಾಲಿವುಡ್‌ನ ಖ್ಯಾತ ನಟ ರಾಜ್‌ಕಪೂರ್ ಅವರ ಪೂರ್ವಜರ ಮನೆಯೂ ದಿಲೀಪ್ ಅವರ ಪೂರ್ವಜರ ಮನೆಯ ಸಮೀಪವೇ ಇದೆ. ದಿಲೀಪ್ ಅವರ ಪೂರ್ವಜರ ಮನೆ ನೂರು ವರ್ಷಕ್ಕೂ ಹಳೆಯದಾಗಿದೆ. ಈ ಕಟ್ಟಡವನ್ನು 2014ರಲ್ಲಿ ಪಾಕಿಸ್ತಾನ ಸರ್ಕಾರವು ರಾಷ್ಟ್ರೀಯ ಸ್ವತ್ತು ಎಂದು ಘೋಷಿಸಿದೆ. ಅದನ್ನು ಸರ್ಕಾರದಿಂದಲೇ ಮ್ಯೂಸಿಯಂ ಆಗಿ ಪರಿವರ್ತಿಸಲಾಗುತ್ತಿದೆ.

ಪೇಶಾವರದಲ್ಲಿರುವ ದಿಲೀಪ್ ಕುಮಾರ್ ಅವರ ಪೂರ್ವಜರ ಮನೆ

ತಾರಾಜೋಡಿಯ ಅಮರ ದಾಂಪತ್ಯ

ಸಾಯಿರಾ ಬಾನು ಅವರನ್ನು ದಿಲೀಪ್ ಅವರು ಮದುವೆಯಾದಾಗ, ದಿಲೀಪ್ ಅವರಿಗೆ 44 ವರ್ಷ ಹಾಗೂ ಸಾಯಿರಾ ಅವರಿಗೆ ಕೇವಲ 22 ವರ್ಷ. ಸಿನಿಮಾ ಜಗತ್ತಿನಲ್ಲಿ ಇವರಿಬ್ಬರದು ಅತ್ಯಂತ ಅದ್ಭುತ ಪ್ರೇಮಕಥೆ. ಅಷ್ಟೇ ಅಲ್ಲ, ಅಜರಾಮರವಾಗಿ ಉಳಿಯುವಂತಹ ದಾಂಪತ್ಯ ಗೀತೆ. 1966ರ ಅಕ್ಟೋಬರ್ 11ರಂದು ಈ ಜೋಡಿ ಮದುವೆಯಾಯಿತು. ಆದರೆ, ಅವರಿಗೆ ಮಕ್ಕಳಿಲ್ಲ.

ಈ ಕುರಿತು ತಮ್ಮ ಆತ್ಮಕಥೆ 'ದಿ ಸಬ್‌ಸ್ಟೆನ್ಸ್ ಆ್ಯಂಡ್ ದಿ ಶ್ಯಾಡೊ'ದಲ್ಲಿ ಬರೆದಿರುವ ದಿಲೀಪ್, '1972ರಲ್ಲಿ ಬಾನು ಗರ್ಭಿಣಿಯಾಗಿದ್ದಳು. ಎಂಟನೇ ತಿಂಗಳಲ್ಲಿ ಆಕೆಯ ರಕ್ತದೊತ್ತಡ ಹೆಚ್ಚಾಯಿತು. ಮಗುವಿನ ಕುತ್ತಿಗೆಗೆ ಬಿಗಿದಿದ್ದ ಹೊಕ್ಕುಳ ಬಳ್ಳಿ ಬಿಡಿಸಿ ಮಗುವನ್ನು ಉಳಿಸಿಕೊಳ್ಳಲು ವೈದ್ಯರ ಪ್ರಯತ್ನದಿಂದಲೂ ಅದು ಸಾಧ್ಯವಾಗಲಿಲ್ಲ' ಎಂದು ಉಲ್ಲೇಖಿಸಿದ್ದರು.

ಈ ಘಟನೆಯ ಬಳಿಕ ಮಗು ಬೇಡವೆಂದು ಇಬ್ಬರೂ ನಿರ್ಧರಿಸಿದ್ದರು.

98ನೇ ವಯಸ್ಸಿನಲ್ಲಿ ದಿಲೀಪ್ ಬದುಕಿಗೆ ಗುಡ್‌ಬೈ ಹೇಳಿದ್ದಾರೆ. ಸಾಯಿರಾ ಬಾನು ಅವರಿಗೆ ಈಗ 76 ವರ್ಷ. ದಿಲೀಪ್ ಅವರ ಸಂಗಾತಿಯಾಗಿ 54 ವರ್ಷ ಜೊತೆ ಜೊತೆಯಾಗಿ ಹೆಜ್ಜೆ ಇರಿಸಿದವರು ಅವರು. 1952ರಲ್ಲಿ ದಿಲೀಪ್ ನಟನೆಯ 'ಆನ್' ಚಿತ್ರವನ್ನು ವೀಕ್ಷಿಸಿದ ನಂತರದಲ್ಲಿ ಮುಂದೊಂದು ದಿನ ಅವರ ಪತ್ನಿಯಾಗಬೇಕು ಎಂದು ಕನಸು ಕಂಡವರು ಸಾಯಿರಾ. ಆ ಕನಸನ್ನು ನನಸು ಮಾಡಿಕೊಂಡವರು ಕೂಡ.

ಸಾಯಿರಾ ಅವರ ಜೊತೆಗಿನ ಮದುವೆಗೂ ಮುನ್ನ ಹಲವು ಖ್ಯಾತ ನಟಿಯರ ಜೊತೆಗೆ ದಿಲೀಪ್ ಅವರ ಮದುವೆಯ ಗಾಳಿಸುದ್ದಿ ಹರಡಿತ್ತು. ಸ್ಫುರದ್ರೂಪಿಯಾಗಿದ್ದ ದಿಲೀಪ್ ಅವರ ಸುತ್ತ ಹಬ್ಬಿದ ಪ್ರೇಮಕಥೆಗಳು ಹಲವು. ಕಾಮಿನಿ ಕೌಶಲ್, ಮಧುಬಾಲಾ ಅವರ ಜೊತೆಗಿನ ಅವರ ಸಂಬಂಧ ಸಾಕಷ್ಟು ಚರ್ಚೆಯಾಗಿತ್ತು. 1981ರಲ್ಲಿ ಹೈದರಾಬಾದ್‌ನ ಆಸ್ಮಾ ಸಾಹಿಬಾ ಅವರನ್ನು ದಿಲೀಪ್ ಮದುವೆಯಾದರು. ಆದರೆ, ಈ ಸಂಬಂಧ ಎರಡು ವರ್ಷದಲ್ಲಿ ಕೊನೆಯಾಗಿತ್ತು. ದಿಲೀಪ್, ಸಾಯಿರಾ ಜೋಡಿ ಮತ್ತೆ ಒಂದಾಯಿತು. 'ಆಸ್ಮಾ ಜತೆಗಿನ ಮದುವೆ ಸಂಬಂಧ ನಾನು ಬದುಕಿನಲ್ಲಿ ಮರೆಯಬಯಸುವ ಅತ್ಯಂತ ದೊಡ್ಡ ಕಹಿನೆನಪು' ಎಂದು ದಿಲೀಪ್ ಅವರು ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ. 'ನನ್ನ ದಿಲೀಪ್ ಕೊಹಿನೂರು ವಜ್ರ' ಎಂದು ಸಾಯಿರಾ ಬಾರಿ ಬಾರಿ ಹೇಳಿದ್ದಾರೆ.

ಮುನ್ನೋಟ 11-07-2021 ರಿಂದ 17-07-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚು ತೊಡಗಿಕೊಂಡು ಸ್ವಂತ ಕೆಲಸಗಳ ಬಗ್ಗೆ ಸರಿಯಾಗಿ ಗಮನಹರಿಸದೆ ಇರುವ ಸಾಧ್ಯತೆಗಳಿವೆ. ಇದರಿಂದ ಮನೆಯವರ ಅವಕೃಪೆಗೆ ಪಾತ್ರರಾಗುವಿರಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಇರುತ್ತದೆ. ಬಹಳ ದಿನಗಳಿಂದ ವಾಪಸ್ ಬರದೇ ಇದ್ದ ಹಣ ಈಗ ಬಂದು ಸಂತಸವಾಗುತ್ತದೆ. ಮಕ್ಕಳ ಮೇಲೆ ಪ್ರೀತಿ-ವಿಶ್ವಾಸ ಹೆಚ್ಚಾಗುತ್ತದೆ. ಪಾಲುದಾರಿಕೆ ವ್ಯವಹಾರದಲ್ಲಿ ನಿರೀಕ್ಷಿತ ಆದಾಯವಿರಲಿದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಆಸ್ತಿ ವಿಚಾರಗಳ ಬಗ್ಗೆ ಇದ್ದ ಗೊಂದಲಗಳನ್ನು ಬಂಧುಗಳನ್ನೆಲ್ಲಾ ಸೇರಿಸಿ ಬಗೆಹರಿಸುವಿರಿ. ರಾಸಾಯನಿಕ ಪದಾರ್ಥಗಳನ್ನು ಉತ್ಪಾದಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಕುಟುಂಬದ ವ್ಯವಹಾರದಲ್ಲಿ ವಿರೋಧಾಭಾಸಗಳು ಬರಬಹುದು, ಆದರೆ ನಿಮ್ಮ ನಿಲುವನ್ನು ಸರಿಯಾಗಿ ಪ್ರತಿಪಾದಿಸಿದಲ್ಲಿ ನಿಮಗೆ ಜಯವಿರುತ್ತದೆ. ಅನವಶ್ಯಕವಾದ ಕೆಲಸಕಾರ್ಯಗಳಲ್ಲಿ ತೊಡಗುವುದು ಬೇಡ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಸರ್ಕಾರಿ ನೌಕರರಿಗೆ ಬಿಡುವಿಲ್ಲದಷ್ಟು ಕೆಲಸವಿರುತ್ತದೆ, ಹೆಚ್ಚಿನ ವರಮಾನವನ್ನು ನಿರೀಕ್ಷಿಸಬಹುದು. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ. ಹಣದ ಹರಿವು ಸಾಮಾನ್ಯವಾಗಿರುತ್ತದೆ. ಕಚೇರಿ ಕೆಲಸದ ಮೇಲೆ ದೂರ ಪ್ರಯಾಣ ಮಾಡುವ ಸಾಧ್ಯತೆ ಇದೆ. ಜನಪ್ರತಿನಿಧಿಗಳ ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಮಾನಸಿಕ ಗೊಂದಲ ಮತ್ತು ದುಗುಡದಿಂದ ಕೆಲಸಕಾರ್ಯಗಳಲ್ಲಿ ಹಿನ್ನಡೆ ಇರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಮಕ್ಕಳ ವಿವಾಹ ಚಿಂತೆ ನಿಮ್ಮನ್ನು ಕಾಡಬಹುದು. ಈ ವಿಚಾರದಲ್ಲಿ ಬಂಧುಗಳ ಸಹಕಾರ ದೊರೆಯುತ್ತದೆ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಸ್ವಲ್ಪಮಟ್ಟಿನ ಕಿರಿಕಿರಿಯಾದರೂ ಸಹೋದ್ಯೋಗಿಗಳ ಸಕಾಲಿಕ ನೆರವಿನಿಂದ ಪರಿಸ್ಥಿತಿ ಸುಧಾರಿಸುತ್ತದೆ. ಯಾವುದೇ ವಿಚಾರದಲ್ಲಿ ಸಹನೆಯನ್ನು ಕಳೆದುಕೊಳ್ಳದಿರುವುದು ಬಹಳ ಉತ್ತಮ. ಪಾಲುದಾರಿಕೆಯ ವ್ಯವಹಾರದಲ್ಲಿ ಹೆಚ್ಚಿನ ಹಣ ಹೂಡದಿರುವುದು ಉತ್ತಮ.

ಸಿಂಹ — **ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಹಟ ಹಿಡಿದು ಮಾಡಿದ ಕೆಲಸಗಳಲ್ಲಿ ಉತ್ತಮ ಫಲಿತಾಂಶ ಇರುತ್ತದೆ. ಹಣ್ಣು, ತರಕಾರಿಯನ್ನು ಮಾರಾಟ ಮಾಡುವವರ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಉದ್ಯಮಗಳಿಗೆ ಇದ್ದ ಕಾರ್ಮಿಕರ ಸಮಸ್ಯೆ ದೂರವಾಗುತ್ತದೆ. ನಿಗದಿತ ಉತ್ಪಾದನೆಯನ್ನು ಮಾಡಿ ಗುರಿಯನ್ನು ಮುಟ್ಟಬಹುದು. ದಿನಸಿ ಸಗಟು ವ್ಯಾಪಾರಸ್ಥರಿಗೆ ಭರ್ಜರಿಯ ವ್ಯಾಪಾರವಿರಲಿದೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಬಹಳ ದಿನದಿಂದ ವಿಳಂಬವಾಗುತ್ತಿದ್ದ ಕೆಲಸವೊಂದು ಈಗ ನಿಧಾನವಾಗಿ ಚೇತರಿಸಿಕೊಳ್ಳಲು ಆರಂಭವಾಗುತ್ತದೆ. ನಿಮ್ಮ ಬಂಧುಗಳಿಂದಲೇ ನೀವು ವಂಚನೆಗೆ ಒಳಗಾಗುವ ಸಾಧ್ಯತೆಗಳಿವೆ. ಬಂಧುಗಳೊಡನೆ ಮಾಡುವ ವ್ಯವಹಾರಗಳಲ್ಲಿ ಎಚ್ಚರವಾಗಿರಿ. ಹಣಕಾಸಿನ ವಿಷಯದಲ್ಲಿ ಸ್ವಲ್ಪ ಚೇತರಿಕೆಯನ್ನು ಕಾಣಬಹುದು. ನೀವು ಆರಂಭಿಸಿದ ಸಣ್ಣ ವ್ಯವಹಾರಗಳು ಈಗ ಗಳಿಕೆಯತ್ತ ಸಾಗುತ್ತವೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ತೆರೆಯಲ್ಪಡುತ್ತವೆ. ಸಮೂಹದಲ್ಲಿ ಮಾತನಾಡುವಾಗ ಎಚ್ಚರವಿರಲಿ. ನಿಮ್ಮ ಮಾತುಗಳಿಂದಲೇ ನೀವು ಸಿಕ್ಕಿ ಬೀಳುವ ಸಾಧ್ಯತೆ ಇದೆ. ಗುಟ್ಟಾಗಿ ಖರೀದಿ ಮಾಡಿಕೊಂಡಿದ್ದ ಆಸ್ತಿಯ ವಿವರಗಳು ನಿಮ್ಮ ಸಂಗಾತಿಗೆ ತಿಳಿಯಬಹುದು. ನಿಮ್ಮ ಮಾತುಗಳಿಂದ ಜನರನ್ನು ಮರುಳು ಮಾಡಿ ನಿಮ್ಮ ಕೆಲಸವನ್ನು ಸಾಧಿಸುವಿರಿ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಕಲಾವಿದರಿಗೆ ಉತ್ತಮ ವೇದಿಕೆ ದೊರೆತು ಮುಂದಿನ ಹೆಜ್ಜೆಗೆ ಅನುಕೂಲವಾಗುತ್ತದೆ. ಕೆಲವು ಹಿರಿಯ ಕಲಾವಿದರ ಸಹಾಯವೂ ನಿಮಗೆ ದೊರೆಯುತ್ತದೆ. ಆರ್ಥಿಕ ಪರಿಸ್ಥಿತಿಯು ತಕ್ಕಮಟ್ಟಿಗೆ ಇರುತ್ತದೆ. ಮಕ್ಕಳಿಂದ ನಿಮಗೆ ಸಂತೋಷವಿರುತ್ತದೆ. ಆಸ್ತಿ ಖರೀದಿಯ ಬಗ್ಗೆ ಸಾಕಷ್ಟು ಚಿಂತನೆ ನಡೆಸಿ ತಕ್ಕ ಏರ್ಪಾಡನ್ನು ಮಾಡಿಕೊಳ್ಳುವಿರಿ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಹಿರಿಯರಿಂದ ಸಲಹೆ ಸೂಚನೆಗಳು ನಿಮಗೆ ದೊರೆತು ಮುಂಬರುವ ಅಡ್ಡಿಗಳನ್ನು ನಿವಾರಣೆ ಮಾಡಿಕೊಳ್ಳಬಹುದು. ಆಸ್ತಿಗೆ ಸಂಬಂಧಿಸಿದ ದಾಖಲೆಗಳ ಬಗ್ಗೆ ಎಚ್ಚರವಹಿಸಿರಿ. ನೀವು ಇಷ್ಟಪಡುವ ಒಡವೆಗಳನ್ನು ಈಗ ಕೊಳ್ಳಬಹುದು. ಉದ್ಯೋಗದಲ್ಲಿ ನಿಮ್ಮ ಶ್ರದ್ಧೆ ಹಾಗೂ ಉತ್ಸಾಹಕ್ಕೆ ಮೇಲಧಿಕಾರಿಯ ಪ್ರೋತ್ಸಾಹ ದೊರೆತು ಉತ್ತಮ ಹೆಸರು ಗಳಿಸುವಿರಿ. ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಸಹೋದರರಿಂದ ನಿಮಗೆ ಸಹಾಯಹಸ್ತ ದೊರೆಯುತ್ತದೆ. ನಿಂತಿದ್ದ ಗೃಹನಿರ್ಮಾಣ ಕಾರ್ಯಗಳನ್ನು ಮುಂದುವರೆಸಬಹುದು. ಕೆಲವು ಮಹಿಳೆಯರ ಆಕಾಂಕ್ಷೆಗಳು ಈಡೇರುವ ಸಾಧ್ಯತೆ ಇದೆ. ಬಂಧುಬಾಂಧವರೊಡನೆ ಸಂಬಂಧ ಗಟ್ಟಿಗೊಳ್ಳುತ್ತದೆ. ವ್ಯಾಪಾರ ಮತ್ತು ವ್ಯವಹಾರಗಳು ಮಂದಗತಿಯಲ್ಲಿ ಇರುತ್ತವೆ. ನಿಮ್ಮ ಸಾಮಾಜಿಕ ಕಾರ್ಯಗಳಿಗೆ ಮೆಚ್ಚುಗೆ ಜೊತೆಗೆ ಸಹಾಯಕರು ದೊರೆಯುವರು. ಹಣದ ಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಕೆಲವು ಅಧಿಕಾರಿಗಳಿಗೆ ಸ್ಥಳ ಬದಲಾವಣೆಯ ಸಾಧ್ಯತೆಗಳಿವೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಬಹುದಿನಗಳಿಂದ ಇದ್ದ ಕೆಲಸದ ಒತ್ತಡ ಈಗ ಕಡಿಮೆಯಾಗಿ ಮನಸ್ಸಿಗೆ ನಿರಾಳವೆನಿಸುತ್ತದೆ. ರೈತಾಪಿ ವರ್ಗದವರಿಗೆ ಬರಬೇಕಾಗಿದ್ದ ಸಹಾಯಧನ ಈಗ ಬಂದು ಅವರ ಅವಶ್ಯಕತೆಯನ್ನು ತೀರಿಸುತ್ತದೆ. ಧಾರ್ಮಿಕ ವಿಚಾರಗಳತ್ತ ಹೆಚ್ಚು ಆಸಕ್ತಿ ಮೂಡುತ್ತದೆ. ಉದ್ಯೋಗದಲ್ಲಿರುವವರು ತಮ್ಮ ಕೋಪವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಬಹಳ ಉತ್ತಮ, ಇಲ್ಲವಾದಲ್ಲಿ ಶಿಸ್ತುಕ್ರಮಕ್ಕೆ ಗುರಿಯಾಗಬೇಕಾದೀತು. ದೂರ ಪ್ರಯಾಣಗಳಿದ್ದಲ್ಲಿ ಸ್ವಲ್ಪ ದಿನಗಳ ಕಾಲ ಮುಂದೂಡುವುದು ಒಳ್ಳೆಯದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಹಿರಿಯರು ತಾವಾಡುವ ಮಾತಿನಿಂದ ಮುಜುಗರದ ಸನ್ನಿವೇಶಗಳನ್ನು ತಂದುಕೊಳ್ಳುವರು. ವಾಹನಗಳನ್ನು ದುರಸ್ತಿ ಮಾಡುವವರಿಗೆ ಸ್ವಲ್ಪ ಆದಾಯ ವೃದ್ಧಿಸುತ್ತದೆ. ವಿದೇಶಿ ವ್ಯವಹಾರಗಳಲ್ಲಿ ತೊಡಗಿರುವವರಿಗೆ ಮೋಸದ ಅನುಭವ ಆಗಬಹುದು. ಎಚ್ಚರಿಕೆಯ ನಡೆಯಿಂದ ಈ ಮೋಸವನ್ನು ಪತ್ತೆ ಹಚ್ಚಿ ಸರಿಪಡಿಸಿಕೊಳ್ಳಬಹುದು. ಬೇರೆಯವರ ಹಣಕಾಸಿನ ವ್ಯಾಜ್ಯದಲ್ಲಿ ತಲೆ ಹಾಕುವುದು ಬೇಡ. ಉದ್ಯೋಗಸ್ಥ ಮಹಿಳೆಯರಿಗೆ ಕಾರ್ಯಚಿಂತೆಗಳು ಹೆಚ್ಚಾಗಬಹುದು. ಮಕ್ಕಳು ಹೆಚ್ಚಿನ ಹಣಕ್ಕಾಗಿ ಒತ್ತಾಯ ಮಾಡಬಹುದು.

ಪದಬಂಧ 2695



ಮೇಲಿನಿಂದ ಕೆಳಕ್ಕೆ
1. ನಮ್ಮ ಹೊಣೆಗಾರಿಕೆ, ಜವಾಬ್ದಾರಿ 3
2. ಲಲಿತಕಲೆಗಳನ್ನು ಆಸ್ವಾದಿಸುವ ರಸಗ್ರಾಹಿ 5
3. ನದಿಗಳು ಸೇರುವಂತೆ ಮನಸ್ಸುಗಳು ವಿಲೀನ 5
5. ಭಾರತಮಾತೆಯ ಕುವರ 5
6. ನವಿರಾಗಿ ಮೋಸ ಮಾಡುವವ 5
8. ಹೊಳೆಯುವ ಹರಳಿನ ಅಸ್ತ್ರ 4
11. ಒಳ್ಳೆಯ ಪ್ರಜೆ ಎನಿಸಿಕೊಂಡವಳು 3
12. ಭ್ರಮಾವಿಲಾಸಗಳ ಸಮುದ್ರ 5
13. ಮದುಮಗನಿಗೆ ನೀಡುವ ಕಾಣಿಕೆ 5
15. ಮರ್ಯಾದೆ ಉಳಿಸುವ ಆದಾಯ 4
17. ರಸ್ತೆಗಿಳಿದ ಕಲಹ ಕಾದಾಟ 5
18. ಅಂಗಾಗಗಳನ್ನು ಕಾಪಾಡಿಕೊಳ್ಳಲು ಧರಿಸುವ ಒಳತೊಡುಗೆ 5
21. ಕೆಸರಿಗೆ ಅಂಟದ ತಾವರೆ 3

ಎಡದಿಂದ ಬಲಕ್ಕೆ
1. ಕರುನಾಡಿನಲ್ಲಿ ಆಡುವ ನಾಟಕ 4
4. ನೃತ್ಯದಲ್ಲಿ ವ್ಯಕ್ತವಾಗುವ ಅಂತರಂಗದ ಸೌಂದರ್ಯ, ಲಾವಣ್ಯ 4
5. ಭಾಗಕ್ಕೆ ಪಾತ್ರರೆನಿಸುವ ಜನ 3
7. ಕೊಟ್ಟು ತೆಗೆದುಕೊಳ್ಳುವ ಲೆಕ್ಕಾಚಾರ 4
9. ಒಂದು ಕಡೆಯಿಂದ ಮತ್ತೊಂದೆಡೆಗೆ ಓಡಾಟ 3
10. ಅಂದುಕೊಳ್ಳುವುದು ಆಗುವುದು ಸ್ವಪ್ನದಲ್ಲಿ ಅಥವಾ ಅಂತರಂಗದಲ್ಲಿ 6
12. ರಾಧಾ ಪ್ರಿಯಕರ 3
14. ತಕತಕನೆ ಕುಣಿಸುವ ಆತುರ 3
16. ನೆತ್ತರಿನ ಕಣದಿಂದ ಹುಟ್ಟಿಕೊಳ್ಳುವ ರಾಕ್ಷಸ 6
19. ಆಕಾಶ ಭೂಮಿಯ ಸಮಾಗಮ 3
20. ಚಿಕ್ಕ ಕತೆ 4
22. ಕಾಪಾಡುವ ವ್ಯವಸ್ಥೆ 3
23. ಕಳೆದು ಹೋದ ಪ್ರಾಣ 4
24. ಮೈ ಕೊರೆಯುವ ಋತುವಿನ ಅವಧಿ 4

ಪದಬಂಧ ಉತ್ತರ -2694

ಮೇಲಿಂದ ಕೆಳಕ್ಕೆ

1.ಅಂಜನ 2.ಗಮಾರ 3.ಅಂಗಾರ 4.ದರಿದ್ರ 6.ಭಾಮಿನಿ 7.ತಬರ 8.ದ್ವಾಪರ 9.ಸರಕು 11.ಕಳಂಕ 12.ಕನ್ನಡ 14.ವಿದಾಯ 15.ಲಕಡಿ 17.ಮುಂಗಾರು 18. ಲಕುಮಿ 19.ನವಮ 20.ನುಸುಳು 22.ಬಂಗಾರ 23.ಭೂರಮೆ 25.ರತುಚ 26.ಡುಮುಕಿ

ಎಡದಿಂದ ಬಲಕ್ಕೆ

1. ಅಂತರಂಗ 3.ಅಂದಚಂದ 5.ನವಭಾರತ 8.ದ್ವಾರಸಮುದ್ರ 10.ಬಳಪ 11.ಕನಿಕರ 13.ರವಿಕುಲ 16.ಕಮಂಡಲ 19.ನಯನುಡಿ 21.ಕುಡುವ 22.ಬಂಜರುಭೂಮಿ 24.ಮರಳುಗಾಡು 27.ರಘುರಾಮ 28.ಚಕಮಕಿ

ಸ್ಟೈಲೋ ಟೈಲರ್‌ನ ಸಾಂಸ್ಕೃತಿಕ ಜಗತ್ತು!

ವೈ.ನರೇಶ ಬಾಬು

ಮುಖ್ಯ ರಸ್ತೆಯಿಂದ ಕೂಗಳತೆಯಲ್ಲಿ ನಮ್ಮ ಮನೆ. ಮನೆ ಮತ್ತು ಮುಖ್ಯ ರಸ್ತೆ ಮಧ್ಯದಲ್ಲಿ ಒಂದು ಟೈಲರಿಂಗ್ ಅಂಗಡಿ. ಅದರ ಪಕ್ಕದಲ್ಲಿ ಕಾಲೇಜು ಹಾಸ್ಟೆಲ್. ಅದರ ಪಕ್ಕದಲ್ಲಿ ಮೈಲಾರಪ್ಪನ ಕಾಫಿ ಪೆಟ್ಟಿಗೆ ಅಂಗಡಿ. ಒಳ ಬಂದಂತೆ ಥಾಳಾದ ಗ್ರಾಮೀಣ ಸೊಗಡು. ನಾನು ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿರುವಾಗ ಕೇವಲ 10X12 ಚದರ ಅಡಿ ವಿಸ್ತೀರ್ಣದ ಪುಟ್ಟ ರೂಮಿನಲ್ಲಿ ನೆಲೆಗೊಂಡ 'ಸ್ಟೈಲೋ ಟೈಲರ್' ಕೇವಲ ಬಟ್ಟೆ ಹೊಲೆದು ಕೊಡುವ ಕೇಂದ್ರವಾಗದೆ ಸ್ಥಳೀಯ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡು ತಾಲ್ಲೂಕಿನ ಎಲ್ಲ ವರ್ಗದ ಗ್ರಾಹಕರ ಆಕರ್ಷಿಸಿ ಅಭಿರುಚಿಗೆ ತಕ್ಕಂತೆ ಬಟ್ಟೆ ಹೊಲೆದುಕೊಡುವ ಅತ್ಯುತ್ತಮ ಟೈಲರಿಂಗ್ ಕೇಂದ್ರವೆನಿಸಿತ್ತು. ಕಾಲೇಜು ನಂತರ ನಿರುದ್ಯೋಗಿಯಾಗಿದ್ದ ದಿನಗಳಲ್ಲಿ ನಿತ್ಯವೂ ಇಲ್ಲಿದ್ದುಕೊಂಡೆ ದರ್ಜಿಭಾಷೆ ಮಾತನಾಡುವುದ ಕಲಿತು, ಅರೆಬರೆ ಟೈಲರಿಂಗ್ ಸಹ ಕಲಿತುಕೊಂಡೆ. ಅಲ್ಲಿ ಟೈಲರಿಂಗ್ ಮೆಷಿನ್ ಹೊರಡಿಸುತ್ತಿದ್ದ ಕಟಕಟ ಸದ್ದು ಸಂಗೀತದ ಆಲಾಪದಂತೆ ನನಗೆ ಕೇಳುತ್ತಿತ್ತು.

ಒಂದಕ್ಷರ ಬಿಡದಂತೆ ದಿನಪತ್ರಿಕೆ ಓದಿದ್ದು, ಶುಕ್ರವಾರದ ಸಿನಿಮಾ ವಿಶೇಷ ಪುಟಗಳಿಗೆ ಕಚ್ಚಾಡಿದ್ದು, ಟೇಪ್ ರೆಕಾರ್ಡ್‌ರಿನಲ್ಲಿ ನನಗಿಷ್ಟವಾದ ರಾಜ್‌ಕುಮಾರ್ ಗೀತೆಗಳನ್ನು ಮತ್ತೆ ಮತ್ತೆ ಕೇಳುತ್ತಿದ್ದುದು ಇಂದು ಕೇವಲ ನೆನಪು. ಎಲ್ಲಕ್ಕಿಂತ ಮಿಗಿಲಾಗಿ ಹತ್ತಾರು ಸ್ನೇಹಿತರು ಕೂಡಿ ಸಿನಿಮಾ, ಜಾತ್ರೆ, ಮದುವೆ, ಟೂರು, ಬಾಡೂಟಗಳಿಗೆ ಹೋಗಲು ತಯಾರಿ ಮಾಡಿಕೊಳ್ಳುತ್ತಿದ್ದ ಜಂಕ್ಷನ್ ಇದಾಗಿತ್ತು. ಸೆಕೆಂಡ್ ಷೋ ಸಿನಿಮಾಕ್ಕೆ ಹೋದವ, ಸೆಕೆ ತಡೆಯಲಾರದೆ ಮನೆಯಿಂದ ಎದ್ದು ಬಂದವ, ಇಸ್ಪೀಟಿನಲ್ಲಿ ದುಡ್ಡು ಸೋತು ಮನೆಗೆ ಹೋಗಲಾರದವ, ಎಣ್ಣೆ ಕುಡಿದು ಟೈಟ್ ಆದವ, ಜಗಳವಾಡಿಕೊಂಡು ಮನೆಯಿಂದ ನೂಕಲ್ಪಟ್ಟವ ಒಟ್ಟಾರೆ ಅವೇಳೆಯಲ್ಲಿ ತಮ್ಮ ಮನೆಗೋಗಲಾಗದವರು ಈ ಟೈಲರ್ ಅಂಗಡಿ ಬಾಗಿಲು ಬಡಿದು ಅದೆಷ್ಟೇ ತಿಗಣೆಗಳು ಕಡಿದರೂ ಅಲ್ಲಿದ್ದ ಶರ್ಟ್ ಅಥವಾ ಪ್ಯಾಂಟ್ ಪೀಸ್ ಹಾಸಿ ಹೊದ್ದು ಒಬ್ಬರ ಮೇಲೊಬ್ಬರು ಮಲಗಿ (ಜನ ಹೆಚ್ಚಾದಂತೆ ಕೆಲವರು ಮುಂಭಾಗದ ಮೆಟ್ಟಿಲ ಮೇಲೆ ಮುದುರಿಕೊಳ್ಳುತ್ತಿದ್ದರು) ಮುಂಜಾನೆ ಮುಸಾಫಿರ್ ಖಾನೆಯಿಂದ ಎದ್ದು ಬರುವ ಗಿರಾಕಿಗಳಂತೆ ಕಾಣುತ್ತಿದ್ದರು. ಇದಕ್ಕೆ ಅಂಗಡಿಯಲ್ಲೆ ಮಲಗುತ್ತಿದ್ದ ಮಾಲೀಕರ ತಮ್ಮ ಬಾಬು ಕೂಡ ಸಹಕರಿಸುತ್ತಿದ್ದ.

ಒಮ್ಮೊಮ್ಮೆ ಕೆಲವು ಪೋಷಕರು ಬಂದು 'ನಮ್ಮ ಹುಡುಗನನ್ನು ಇಲ್ಲಿ ಸೇರಿಸಿಕೊಳ್ಳಬೇಡವೆಂದು ನಿನಗೆ ಎಷ್ಟು ಬಾರಿ ಹೇಳಬೇಕು? ನಿನ್ನಿಂದ ಅವ ಸೋಮಾರಿಯಾದ. ಹೀಗೇ ಮುಂದುವರೆದರೆ ನಿನ್ನ ಅಂಗಡಿ ಎತ್ತಂಗಡಿ ಮಾಡಿಸಬೇಕಾಗುತ್ತದೆ' ಎಂಬ ಧಮ್ಕಿಯ ಪ್ರಾರಂಭದ ಒಂದೆರಡು ದಿನಗಳು ನಾವುಗಳು ಅತ್ತ ಸುಳಿಯುತ್ತಿರಲಿಲ್ಲ. ನಂತರ ಯಥಾಸ್ಥಿತಿ ಅಬಾಧಿತವಾಗಿತ್ತು. ವಿಪರ್ಯಾಸವೆಂದರೆ ಮನೆಯಲ್ಲಿ ಕಿತ್ತಾಡಿಕೊಂಡು ಬಂದಂಥ ಅನೇಕರು ಇಲ್ಲಿ ದಿನಗಟ್ಟಲೆ ಕಾಲ ಕಳೆಯುತ್ತಿದ್ದರು. ಆಗ ಸಂಬಂಧಪಟ್ಟ ಪೋಷಕರು ಬಂದು, 'ಏನಪ್ಪ ದೇವಣ್ಣ, ಈ ನನ್ ಮಗ ಇಂತಹ ಕೆಲಸ ಮಾಡಬಹುದೇ? ನೀನಾದರೂ ವಸಿ ಉಗಿಯಬಾರದೆ' ಎಂದು ಮಂಗಳಾರತಿ ಮಾಡಿ ಮನೆದುಂಬಿಸಿಕೊಳ್ಳುತ್ತಿದ್ದರು (ಇಂತಹ ಕೂಡಿಕೆಯಲ್ಲಿ ದೇವು ಪಾತ್ರವು ಹಿರಿದಾಗಿತ್ತು).

ಆಟೊರಾಜ, ಸೀತಾರಾಮು, ಶಂಕರ್ ಗುರು, ನಾನೊಬ್ಬ ಕಳ್ಳ ಮುಂತಾದ ಚಿತ್ರಗಳು ಬಿಡುಗಡೆಯಾದ ಸಮಯ. ಶಂಕರನಾಗ್, ರಾಜ್‌ಕುಮಾರ್ ಧರಿಸುತ್ತಿದ್ದ ಚರ್ಮಕ್ಕೆ ಅಂಟಿದ ಬಣ್ಣಬಣ್ಣದ ಅಂಗಿಗಳಿಗೆ ಡಬಲ್ ಸ್ಟಿಚ್ಚಿನೊಂದಿಗೆ ಡಬಲ್ ಪಾಕೆಟ್ಟು, ಡಬಲ್ ಫ್ಲಾಪು, ಉದ್ದನೆಯ ಬಾಬ್ಬಿ ಕಾಲರ್, ಶೋಲ್ಡರ್ ಫ್ಲಾಪ್, ಎದೆಮಟ್ಟಕ್ಕೆ ಕಟ್ಟಿದ ಮೂವತ್ತು ಇಂಚು ಅಗಲದ ಬೆಲ್ ಬಾಟಮ್ ಪ್ಯಾಂಟುಗಳು ಯುವಕರಲ್ಲಿ ಹೊಸ ಟ್ರೆಂಡ್ ನಿರ್ಮಿಸಿದ್ದವು. ಅದರಲ್ಲೂ ಕಾಲೇಜು ವಿದ್ಯಾರ್ಥಿಗಳು ಈ ಹೊಸ ವಿನ್ಯಾಸದಲ್ಲಿ ಸಿದ್ಧಪಡಿಸಿದ ಉಡುಪುಗಳಿಂದ ರೊಮ್ಯಾಂಟಿಕ್ ಗೆಟಪ್ಪಿನಲ್ಲಿ ಹುಡುಗಿಯರ ಪಟಾಯಿಸಲು ಯತ್ನಿಸುತ್ತಿದ್ದ ಉಚ್ಛ್ರಾಯ ದಿನಗಳು.

ಇದೇ ಸ್ಟೈಲಿನಲ್ಲಿ ಬಟ್ಟೆ ಹೊಲಿಸಿಕೊಳ್ಳಲು ಸುತ್ತಮುತ್ತ ಹತ್ತಾರು ಹಳ್ಳಿಗಳಿಂದ ಬರುತ್ತಿದ್ದ ವಿದ್ಯಾರ್ಥಿಗಳ ಕೈಹಿಡಿದು ನಿನ್ನ ಹೆಸರೇನು? ಯಾವ ಊರು? ಎಷ್ಟನೇ ತರಗತಿ ಓದುತ್ತಿರುವೆಯೆಂದು ವಿಚಾರಿಸಿ, ಸಂತೃಪ್ತ ದ್ರಾವಣ ಎಂದರೇನು? ದ.ರಾ.ಬೇಂದ್ರೆಯವರ ಕಾವ್ಯನಾಮ ಯಾವುದು? ಬ್ರಿಟಿಷರಿಗಿಂತ ಮುನ್ನ ನಮ್ಮ ದೇಶ ಯಾರ ಕೈವಶದಲ್ಲಿತ್ತು? ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ನಾಟಕ ಯಾವುದು? ಹೀಗೆ ಮುಂತಾದ ಪ್ರಶ್ನೆಗಳ ಬಾಣ ಬಿಡುತ್ತಿದ್ದೆ. ಹುಡುಗರು ಸಂಕೋಚದಿಂದ ನಮಗಿನ್ನೂ ಆ ಪಾಠ ಮಾಡಿಲ್ಲ, ನಾನಿನ್ನೂ ಓದಿಕೊಂಡಿಲ್ಲ, ನನಗೆ ಗೊತ್ತಿಲ್ಲವೆಂದು ನನ್ನ ಕೈಕೊಸರಿ ಓಡಿ ಹೋಗುತ್ತಿದ್ದರು.

ಈ ನಮೂನೆ ಬಟ್ಟೆ ಸಿದ್ಧಪಡಿಸಲು ದೇವು ದುಪ್ಪಟ್ಟು ಮಜೂರಿ ಪೀಕುತ್ತಿದ್ದ. ಗ್ರಾಹಕರು ಯಾಕಿಷ್ಟು ಎಂದು ಪ್ರಶ್ನಿಸಿದರೆ ನಾನು ಅಮೆಟೊ ದಾರ, ಪ್ರೆಸ್ಸಿಂಗ್ ಬಾಬ್ಬಿ, ಕ್ಯಾನ್ವಾಸ್, ಪ್ರೆಸ್ಸಿಂಗ್ ಬಟನ್, ಸ್ಯಾಟಿನ್ ಬಟ್ಟೆ, ಬಾಟಮ್ ಜಿಪ್ಪು ಬಳಸುತ್ತೇನೆ, ಈ ಗುಣಮಟ್ಟದ ಕಚ್ಚಾ ವಸ್ತುಗಳು ದುಬಾರಿಯೆಂದು ಸಮಜಾಯಿಷಿ ನೀಡುತ್ತಿದ್ದ. ಅವರೆಲ್ಲ ಹೋದ ನಂತರ 'ನೋಡು ಸಿರಿವಂತರ ಬಳಿ ದುಪ್ಪಟ್ಟು ಹಣ ತೆಗೆದುಕೊಂಡರೆ ಏನೂ ತಕರಾರಿಲ್ಲ. ಆದರೆ, ಬಡ ವಿದ್ಯಾರ್ಥಿಗಳಿಂದ ಹತ್ತಿಪ್ಪತ್ತು ರೂಪಾಯಿ ಮಾತ್ರ ಹೆಚ್ಚಿಗೆ ತೆಗೆದುಕೊ. ಇಷ್ಟೊಂದು ಚಾರ್ಜ್ ಮಾಡುವುದು ಭಾರಿ ಅನ್ಯಾಯ' ಎಂದು ನಾನು ವಾದಿಸುತ್ತಿದ್ದೆ. ಆಗ ದೇವು, 'ನೋಡು, ಇದು ನಮ್ಮ ವೃತ್ತಿಗೆ ಸಂಬಂಧಿಸಿದ ಗೋಪ್ಯತೆ. ಇದರ ಕಷ್ಟ ಸುಖಗಳು ನಮಗೇ ಗೊತ್ತು. ಇದು ನಿನಗೆ ಸಂಬಂಧಿಸಿದ್ದಲ್ಲ. ನಿನಗಿಲ್ಲಿ ಜಾಗ ಕೊಟ್ಟಿದ್ದೇ ನನ್ನ ತಪ್ಪು. ಈ ರೀತಿ ತಲೆಹರಟೆ ಮಾಡುವುದಾದರೆ ನಾಳೆಯಿಂದ ನನ್ನ ಅಂಗಡಿಗೆ ಬರಕೂಡದೆಂದು ಸಿಟ್ಟಿನಿಂದ ಕಟ್ಟಪ್ಪಣೆ ಮಾಡಿದ್ದು ಈಗ ಇತಿಹಾಸ (ಇದೇನು ಮೊದಲ ಕಟ್ಟಪ್ಪಣೆಯಾಗಿರಲಿಲ್ಲ. ಅಂತಹ ಹಲವು ಅಪ್ಪಣೆಗಳನ್ನು ನಾನು ಪಡೆದಿದ್ದೆ!).

ಬದಲಾದ ಕಾಲಘಟ್ಟದಲ್ಲಿ ದೇವು ಟೈಲರಿಂಗ್ ಅಂಗಡಿಯನ್ನು ಮನೆ ಬಳಿಯಿರುವ ತನ್ನ ಸ್ವಂತ ಮಳಿಗೆಗೆ ಶಿಫ್ಟ್ ಮಾಡಿದರೂ ರೆಡಿಮೇಡ್ ಬಟ್ಟೆಗಳ ತೀವ್ರ ಪೈಪೋಟಿಯಲ್ಲಿ ಮಾಮೂಲಿ ಗಿರಾಕಿಗಳಿಂದ ಕೈತುಂಬ ಕೆಲಸಗಳಿರುವುದು ಕೇವಲ ವ್ಯಾವಹಾರಿಕವಲ್ಲ. ಅಲ್ಲೊಂದು ಸಾಮಾಜಿಕ ಬಂಧನದ ನಂಟು. ಶರ್ಟ್ ಮೇಕರ್ ರಮೇಶ್ ಪೈ, ಪ್ಯಾಂಟ್ ಪರಿಣತ ಕೃಷ್ಣಮೂರ್ತಿ (ಆಚಾರಿ), ತಮ್ಮ ಬಾಬು ಮತ್ತು ಇಲ್ಲಿಗೆ ನಿತ್ಯ ಬರುತ್ತಿದ್ದ ಅನೇಕರು ಇಂದಿಲ್ಲವಾದರೂ ಅವರ ಕುಡಿಗಳು ಕಾಲಕ್ಕೆ ತಕ್ಕಂತೆ ಅಪ್‌ಡೇಟಾಗಿ ಐವತ್ತು ವರ್ಷಗಳ ಸುದೀರ್ಘ ವೃತ್ತಿಬದುಕು ನಡೆಸಿರುವುದು ಸುಮ್ಮನೆ ತಳ್ಳಿಹಾಕುವಂತಹ ಮಾತೇನಲ್ಲ.

ಹತ್ತಾರು ವರ್ಷಗಳ ಒಡನಾಟ ಕೇವಲ ಅಂಗಡಿಗೆ ಸೀಮಿತವಾಗದೆ ಇವರ ಮನೆಯಲ್ಲಿ ನಡೆಯುತ್ತಿದ್ದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಕುಟುಂಬದ ಸದಸ್ಯನಾಗಿದ್ದೆ. ಏಕೆಂದರೆ ಅಲ್ಲಿದ್ದ ಇವ ನಮ್ಮವನೆಂಬ ಅಭಿಮಾನ ಇಂದಿಗೂ ಕೊಂಚ ಕೂಡ ಮುಕ್ಕಾಗಿಲ್ಲ. ದೇವು ಒಮ್ಮೊಮ್ಮೆ 'ನಿನಗೆ ಕೂತು ತಿನ್ನುವಷ್ಟು ಆಸ್ತಿಯಿಲ್ಲ. ಗಾಂಚಲಿ ಬಿಟ್ಟು ಕಷ್ಟಪಟ್ಟು ಓದಿ ಸ್ಪರ್ಧಾತ್ಮಕ ಪರೀಕ್ಷೆ ಬರೆದಲ್ಲಿ ಸರ್ಕಾರಿ ನೌಕರಿ ಗ್ಯಾರಂಟಿ ಗಿಟ್ಟಿಸಬಹುದು. ಇಲ್ಲವಾದರೆ ನೀನು ನನ್ನ ಹಾಗೆ ಸೂಜಿ ತಿಕದಾಗೆ ದಾರ ಪೋಣಿಸಬೇಕಾಗುತ್ತದೆ' ಎಂಬ ಮಾತು ಇಂದಿಗೂ ಅನುರಣಿಸುತ್ತಿದೆ. ಶಿಥಿಲಾವಸ್ಥೆಯಲ್ಲಿರುವ ಈ ಪುಟ್ಟ ಅಂಗಡಿಯ ಮುಂದೆ ಇಂದು ಓಡಾಡಿದಾಗಲೆಲ್ಲ ಅಂದಿನ ದುರ್ಭರ ದಿನಗಳು ನೆನಪಾಗಿ ಅವಮಾನ, ಹತಾಶೆ, ನಿರಾಸೆ, ಮೂದಲಿಕೆಗಳು ಜೀವನ ಪಾಠ ಕಲಿಸಿ ಮನುಷ್ಯನಾಗಲು ಉಪಕರಿಸಿವೆ. ಜೇಬಿನಲ್ಲಿ ನಯಾ ಪೈಸೆ ಇಲ್ಲದಿದ್ದರೂ ದಿನವಿಡೀ ನಕ್ಕು ನಲಿಯುತ್ತಿದ್ದ ಇಂತಹ ಕೌಟುಂಬಿಕ ಮತ್ತು ಮಾನವೀಯ ಸೆಲೆಯುಳ್ಳ ಲೌಕಿಕ ಕೇಂದ್ರಗಳು ಇಂದಿಲ್ಲ. ಇತ್ತ ಬದುಕು ಕಟ್ಟಿಕೊಳ್ಳುವ ಛಲವೂ ಉಳಿದಿಲ್ಲ.

> ಒಂದಕ್ಷರ ಬಿಡದಂತೆ ದಿನಪತ್ರಿಕೆ ಓದಲು, ಶುಕ್ರವಾರದ ಸಿನಿಮಾ ವಿಶೇಷ ಪುಟಗಳಿಗೆ ಕಚ್ಚಾಡಲು, ಟೇಪ್ ರೆಕಾರ್ಡಿನಲ್ಲಿ ರಾಜ್‌ಕುಮಾರ್ ಗೀತೆಗಳನ್ನು ಮತ್ತೆ ಮತ್ತೆ ಕೇಳಲು, ಎಲ್ಲಕ್ಕಿಂತ ಮಿಗಿಲಾಗಿ ಹತ್ತಾರು ಸ್ನೇಹಿತರು ಕೂಡಿ ಸಿನಿಮಾ, ಜಾತ್ರೆ, ಮದುವೆ, ಟೂರು, ಬಾಡೂಟಗಳಿಗೆ ಹೋಗಲು ತಯಾರಿ ಮಾಡಿಕೊಳ್ಳುವ ಊರಿನ ಏಕೈಕ ಜಂಕ್ಷನ್ ಇದಾಗಿತ್ತು...

ಕಲೆ: ಪ್ರವೀಣ್ ಆಚಾರ್ಯ

ಹರಟೆ

ಸೃಷ್ಟಿಶೀಲ ಮೀಮಾಂಸೆಯ ಹುಡುಕಾಟ

ಎಸ್.ಆರ್.ವಿಜಯಶಂಕರ

ಆದಿಕವಿ ಪಂಪನಿಂದ ಇಂದಿನ ಬರಹಗಾರರ ವರೆಗೆ ಮಹಾಭಾರತವು ಕನ್ನಡದಲ್ಲಿ ಮರುಸೃಷ್ಟಿಯಾಗುತ್ತಲೇ ಬಂದಿದೆ. 'ಇತಿಹಾಸ ಪ್ರದೀಪ'ವಾದ ಮಹಾಭಾರತದಲ್ಲಿ ಮಹರ್ಷಿ ವ್ಯಾಸರು ತಮ್ಮ ಧ್ಯಾನದ ಮೂಲಕ ಲೋಕಗರ್ಭವನ್ನು ಪ್ರವೇಶಿಸಿ, ಸಕಲ ಜಗತ್ ಸ್ವರೂಪವನ್ನು ಅರಿತರು. ಬಾಳಿನಾಳದಲ್ಲಿ ಪ್ರಳಯಾಂಶವಿದೆ ಎಂಬುದು ವ್ಯಾಸದರ್ಶನ. ಭಾರತೀಯ ತತ್ವಚಿಂತನೆಯನ್ನು ಬೆಳೆಸುವ ಅಂತಹ ಅರಿವನ್ನು ವ್ಯಾಸರು ಭವಸಾಗರದ ಮಂಥನದಿಂದ ಪಡೆದರು ಎಂದು ಸೂತಪುರಾಣಿಕರು ಹೇಳುತ್ತಾರೆ. ಇಂತಹ ಮೂಲ ಕೃತಿಯೊಂದು ಇಂದಿಗೂ ಕನ್ನಡ ಲೇಖಕರನ್ನು ಕಾಡುತ್ತಲೇ ಬಂದಿದೆ. ಇದರ ಮರುಸೃಷ್ಟಿಗೆ ಇತ್ತೀಚಿನ ಸೇರ್ಪಡೆಯೆಂದರೆ ಗೋಪಾಲಕೃಷ್ಣ ಪೈಗಳ ಕಾದಂಬರಿ 'ಬ್ರಹ್ಮ'.

ಇದು ವ್ಯಾಸರ ಸೃಷ್ಟಿ ಕಲ್ಪನೆಯನ್ನು ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾದ ಆಧುನಿಕ ಕನ್ನಡ ಸಾಹಿತ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ಪುನರ್ ನಿರೂಪಿಸುವ ಸೃಜನಶೀಲ ಕೃತಿ. ಜಯ, ಭಾರತ, ಮಹಾಭಾರತ ಎಂದು ಈ ಪುರಾಣ ಬೆಳೆಯಿತು ಎಂಬ ವಿದ್ವಾಂಸರ ಒಂದು ಅಭಿಪ್ರಾಯವನ್ನು ಬದಿಗಿಟ್ಟು, ಮಹಾಭಾರತವು ಮಹರ್ಷಿ ವ್ಯಾಸರೆಂಬ ವ್ಯಕ್ತಿಯ ಪ್ರತಿಭಾ ಕೌಶಲವೆಂಬ ನಂಬಿಕೆಯನ್ನು ಈ ಕೃತಿ ಪುರಸ್ಕರಿಸುತ್ತದೆ.

ಕನ್ನಡ ಕಾದಂಬರಿ ಮೊದಲಿಗೆ ಪಾಶ್ಚಾತ್ಯ ವಾಸ್ತವವಾದಿ ಪರಂಪರೆಯಲ್ಲಿ ಬೆಳೆದುಬಂದ ಪ್ರಕಾರ. ಅದರ ಪ್ರಭಾವದಲ್ಲಿ ಮರುಸೃಷ್ಟಿಗೊಂಡ ಮಹಾಭಾರತವೇ ಭೈರಪ್ಪನವರ 'ಪರ್ವ'. ಸಮುದಾಯದ ನೆನಪಿನ ಸಂಗ್ರಹವಾಗಿದ್ದ ನಮ್ಮ ಇತಿಹಾಸ, ಇಂಗ್ಲಿಷ್ ವಿದ್ಯಾಭ್ಯಾಸದ ಬಳಿಕ ದಾಖಲೆಯಿಂದ ಬೆಳೆಯುವ ಚರಿತ್ರೆಯಾಗಿ ಪರಿವರ್ತನೆಯಾಯಿತು. 'ಪರ್ವ' ಮಹಾಭಾರತವನ್ನು ವಾಸ್ತವ ಚರಿತ್ರೆಯಾಗಿ ಕಾಣಿಸಲು ಪ್ರಯತ್ನಿಸುತ್ತದೆ. ಅದು ಮಹಾಭಾರತ ಕೃತಿಕೇಂದ್ರಿತ ಮರುಸೃಷ್ಟಿ. ಅದರಿಂದ ಭಿನ್ನವಾಗಿ, ಲೇಖಕ ವ್ಯಾಸರಲ್ಲಿ ಮಹಾಭಾರತದ ಸೃಷ್ಟಿಯನ್ನು ಪ್ರೇರೇಪಿಸಿದ ಕಲ್ಪನೆ ಮತ್ತು ಕಲ್ಪನಾವಿಲಾಸದ ಮೂಲ ಆಕರಗಳು ಏನಾಗಿದ್ದಿರಬಹುದು ಎಂಬ ಚಾರಿತ್ರಿಕ ವಾಸ್ತವದ ಸೃಜನಶೀಲ ಶೋಧನೆಯೇ 'ಬ್ರಹ್ಮ' ಕಾದಂಬರಿ.

'ಬ್ರಹ್ಮ'ದಲ್ಲಿ ವಿಶ್ವಾಮಿತ್ರ – ಲೋಕದ ಕಷ್ಟಕಾರ್ಪಣ್ಯಗಳನ್ನು ದೂರಮಾಡಿ ಮಾನವ ಬದುಕನ್ನು ಜ್ಞಾನ ಮತ್ತು ಸಂಪತ್ ಸಮೃದ್ಧಿಯಿಂದ ತುಂಬಬೇಕೆಂಬ ಆದರ್ಶ ಹೊಂದಿದ ಯುವರಾಜ. ವಸಿಷ್ಠರು ನದಿದಂಡೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ಗುರುಕುಲವನ್ನು ನಡೆಸುವ ಕುಲಪತಿ. ಅಲ್ಲಿ ಆಯುರ್ವೇದ ಸೇರಿ ಎಲ್ಲಾ ರೀತಿಯ ವಿದ್ಯೆಗಳಿಗೂ ಅವಕಾಶವಿದೆ. ಅದು ರಾಜಕೃಪೆ ಹೊಂದಿದ ಸ್ವತಂತ್ರ ವ್ಯವಸ್ಥೆ. ತನ್ನ ಸ್ನೇಹಿತ ತ್ರಿಶಂಕುವಿಗೆ ವಿಶ್ವಾಮಿತ್ರ ನೂತನ ನಗರ ನಿರ್ಮಾಣಕ್ಕೆ ಸಹಾಯ ಮಾಡುತ್ತಾನೆ. ಅದು ಶತ್ರು ದಾಳಿಯಲ್ಲಿ ನಾಶವಾಗುತ್ತದೆ. ಮೇನಕೆ ದೂರದ ಇನ್ನೊಂದು ಆಶ್ರಮದಾಕೆ.

ಇಂದಿನ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಮಾನವವಿಜ್ಞಾನ ಮುಂತಾದ ಹಲವು ಜ್ಞಾನ ಶಾಖೆಗಳಿಂದ ಪುಷ್ಟೀಕರಣಗೊಂಡ ಗುರುಕುಲದ ಕುಲಪತಿ ವಸಿಷ್ಠರ ಪ್ರಿಯಶಿಷ್ಯ, ಮಾನಸಪುತ್ರ ಹಾಗೂ ಪ್ರಾಜ್ಞ ಗೌರವಕ್ಕೆ ಪಾತ್ರನಾದವ ವ್ಯಾಸ. ಅಲ್ಲಿಯೇ ಪರಾಶರ, ಮನು ಹೀಗೆ ಹಲವರಿದ್ದಾರೆ. ಅವರೆಲ್ಲರ ಕೃತಿಗಳಾದ ಶಾಸ್ತ್ರ ಗ್ರಂಥಗಳ ರಚನಾ ಹಿನ್ನೆಲೆಯೊಂದಿಗೆ ವ್ಯಾಸರ ಸೃಷ್ಟಿಶೀಲ ಮನಸ್ಸು, ವೇದಗಳನ್ನು ವರ್ಗೀಕರಣಗೊಳಿಸಿದ ಕ್ರಮ ಸೇರಿದಂತೆ ಅಂದಿನ ಹಲವು ಜ್ಞಾನ ಶೋಧನಾ ಕ್ರಮಗಳೂ ಇಂದಿನ ತಿಳಿವಿನಿಂದ ವಿವರಿಸಲ್ಪಟ್ಟಿವೆ.

ವ್ಯಾಸ ದ್ವೈಪಾಯನರಿಗೆ, ಪರಾಶರ ಕೇಳುವ ಒಂದು ಪ್ರಶ್ನೆ: 'ಕತೆ ಬರೆಯುವುದೆಂದರೆ ಸೃಷ್ಟಿಕಾರ್ಯ. ಸೃಷ್ಟಿಕಾರ್ಯ ದೇವರಿಂದ ಮಾತ್ರ ಸಾಧ್ಯ. ನಾನೂ ಸೃಷ್ಟಿಸುತ್ತೇನೆಂದು ಹೊರಟರೆ ಅವನಿಗೆ ಸವಾಲು ಎಸೆದಂತಾಗುತ್ತದೆ, ಅಲ್ಲವೇ?' ಅದಕ್ಕೆ ದ್ವೈಪಾಯನರ ಉತ್ತರ : 'ದೇವರು ನೀರು, ಗಾಳಿ, ರಕ್ತ, ಮಾಂಸಗಳಿಂದ ತುಂಬಿದ ಜೀವಿಗಳನ್ನು ಸೃಷ್ಟಿಸುತ್ತಾನೆ. ಇಲ್ಲವೇ ಮರಗಿಡ ಕಲ್ಲುಗಳನ್ನು ಸೃಷ್ಟಿಸುತ್ತಾನೆ. ನನ್ನ ಸೃಷ್ಟಿ ಅಕ್ಷರಗಳ ಮೂಲಕ ಕೊಡುವ ಅನುಭವ'.

ಪ್ಲೇಟೊನಿಂದ ಇಂದಿನವರೆಗೆ ಬೆಳೆದುಬಂದ ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನು ಬಲ್ಲವರಿಗೆ ಇಂತಹ ಚಿಂತನೆಗಳ ಹಿಂದಿನ ಕಲ್ಪನೆಯು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯಿಂದ ಪಡೆದಿರಬಹುದಾದ ಪ್ರೇರಣೆಯನ್ನು ವಿವರಿಸಬೇಕಾಗಿಲ್ಲ. ನಮ್ಮ ಶ್ರೇಷ್ಠ ಕೃತಿಗೆ ಅನ್ವಯಿಸಿಕೊಂಡು ಅರಿತಾಗಲೇ ಅಂತಹ ಮೀಮಾಂಸೆಯೊಂದು ನಮ್ಮದಾಗಿ ಪರಿವರ್ತನೆಯಾಗುತ್ತದೆ ಎಂಬ ವಿಶ್ವಾಸ ಬ್ರಹ್ಮದಂತಹ ಸೃಜನಶೀಲ ಶೋಧನೆಗೆ ಇರುತ್ತದೆ. ಅದರ ಇನ್ನೊಂದು ನೆಲೆಯಲ್ಲಿ ಕಶ್ಯಪ ಮುನಿ ಧ್ಯಾನವನ್ನು ವಿವರಿಸುವುದು ಹೀಗೆ: 'ಯಾವುದೇ ಗ್ರಂಥವನ್ನು ಒಂದು ಸಾರಿ ಮಾತ್ರ ಓದುವುದಲ್ಲ. ಆಗಾಗ ಓದುತ್ತಲೇ ಇರಬೇಕು. ಎದುರಿಗೆ ಗ್ರಂಥವಿಲ್ಲದಿದ್ದರೂ ಅಲ್ಲಿಯ ವಾಕ್ಯಗಳು ಮನಸ್ಸಿನಲ್ಲಿ ಮರುಕಳಿಸುತ್ತಿರಬೇಕು. ಸಾಧ್ಯವಾದರೆ ಉಚ್ಚರಿಸಬೇಕು. ಅದರಿಂದ ಆ ವಾಕ್ಯಗಳ ಒಡೆತನ ನಮ್ಮದಾಗುತ್ತದೆ. ಅದೇ ಧ್ಯಾನ'.

ತೀನಂಶ್ರೀಯವರು ತಮ್ಮ ಭಾರತೀಯ ಕಾವ್ಯಮೀಮಾಂಸೆ ಕೃತಿಯಲ್ಲಿ ಕಾವ್ಯಲಕ್ಷಣಗಳನ್ನು ವಿವರಿಸಿ ಕೊನೆಗೆ, ಕಾವ್ಯದ ಲಕ್ಷಣಗಳನ್ನು ಹೇಳುವುದೆಂದರೆ 'ಬ್ರಹ್ಮ'ದ ಲಕ್ಷಣವನ್ನು ಹೇಳುವಂತೆಯೇ, ಎರಡೂ ಅನುಭವೈಕಗಮ್ಯವಾದವು. ಬ್ರಹ್ಮ ವಾಕ್ಯಾರ್ಥವಾಗಲಾರದು. ಅದು ಕೇವಲ 'ಪ್ರಾತಿಪದಿಕಾರ್ಥ' ಎನ್ನುತ್ತಾರೆ. – ಅಂದರೆ ಕೆಲವನ್ನು ಒಂದೇ ಶಬ್ದದಲ್ಲಿ ಹೇಳಬಹುದಷ್ಟೆ. ಬ್ರಹ್ಮ ಸ್ವರೂಪವನ್ನು ಎಷ್ಟೇ ವಿವರಿಸಿದರೂ 'ಬ್ರಹ್ಮ' ಎಂದರೆ 'ಬ್ರಹ್ಮ' ಎಂದೇ ಅರ್ಥ. ಅದರ ಸೃಷ್ಟಿ ಸ್ವರೂಪವನ್ನು ಸಾಹಿತ್ಯ ಮೀಮಾಂಸೆಗೆ ಅನ್ವಯಿಸಿ 'ವ್ಯಾಸ' ಹಾಗೂ 'ಮಹಾಭಾರತ'ಗಳ ಮೂಲಕ ಗೋಪಾಲಕೃಷ್ಣ ಪೈಗಳು ಸೃಜನಶೀಲ ಅನುಭವ ಶೋಧನೆಯ ಕೃತಿಯೊಂದನ್ನು ರಚಿಸಿದ್ದಾರೆ. ಅವರ ಕಲ್ಪನೆಗೆ ಮಹಾಭಾರತ-ರಾಮಾಯಣಗಳನ್ನು ವಿಶ್ಲೇಷಿಸುತ್ತಾ, ಕಲಾನುಭವವನ್ನು, ರಸಾನುಭವಗಳನ್ನು ನೀಡುವ ಯಕ್ಷಗಾನ ಕಲಾವಿದರೂ ಪ್ರೇರಣೆ ನೀಡಿದ್ದಾರೆ.

ತಾಳೆ ಓಲೆಗಳಲ್ಲಿ ಮೊದಲ ಕರಡನ್ನು ಬರೆಯುವುದು, ಸೈನಿಕರಿಗೆ ಇಂದಿನಂತೆ ಶಾಶ್ವತ ಸಂಬಳ ಇಲ್ಲದಿದ್ದ ಅಂದಿನ ಕಾಲದಲ್ಲೂ ಪಿಂಚಣಿ ನೀಡುವ ಖರ್ಚು ಹೀಗೆ ಅಲ್ಲಲ್ಲಿ ಸಣ್ಣ ಪುಟ್ಟ ವಿವರಗಳ ಅನಧಿಕೃತ ಮಾಹಿತಿಗಳು ಕೃತಿಯೊಳಗೆ ನುಸುಳಿವೆ. ಅವೆಲ್ಲಾ ಮುಂದಿನ ಆವೃತ್ತಿಯಲ್ಲಿ ಸರಿಪಡಿಸಬಹುದಾದ ಪುಟ್ಟ ವಿವರಗಳು. ಮುಖ್ಯವಾಗಿ ಸೃಜನಶೀಲ ಪ್ರಕ್ರಿಯೆಯನ್ನು ಆಧುನಿಕ ಸಾಹಿತ್ಯ ಮೀಮಾಂಸೆಯಾದ 'ಕಲ್ಪನಾ ವಿಲಾಸ'ದ ಮೂಲಕ ಶೋಧಿಸುವುದು ಈ ಕೃತಿಯ ಮುಖ್ಯ ಕೊಡುಗೆಯಾಗಿದೆ.



ಬ್ರಹ್ಮ
ಲೇ: ಗೋಪಾಲಕೃಷ್ಣ ಪೈ
ಪ್ರ: ವಸಂತ ಪ್ರಕಾಶನ, ಬೆಂಗಳೂರು
ಸಂ: 080-22443996

ಪು: 294 ₹250

ವಿಮರ್ಶೆ

ಕಥೆ

ಶ್ರೀಧರ್ ಎಸ್. ಸಿದ್ದಾಪುರ
ಬರೆದ ಕಥೆ

ಪ್ರತಿಫಲನ

ನಮ್ಮೆಲ್ಲ ಕುಕೃತ್ಯಗಳು ಶಿಖಾರಿಗುಡ್ಡದ ಚಿರತೆಯ ಕಣ್ಣುಗಳಲ್ಲಿ ಪ್ರತಿಫಲನಗೊಂಡು ನನ್ನನ್ನು ವಿಚಲಿತಗೊಳಿಸಿದವು. ತೆವಳುತ್ತಾ ಮೇಲೆ ಬರುತ್ತಾ ಚಿರತೆಯ ಸಂಪೂರ್ಣ ದರ್ಶನ ಸಿಗುತ್ತಲೇ ನಾಗರಾಜ ನಡುಗುವ ಕೈಗಳಲ್ಲೇ ಕೋವಿಯ ಕುದುರೆಯನ್ನು ಅಮುಕಲು ತಯಾರಾಗಿದ್ದ. ಒಮ್ಮೆಲೇ ನಾನು ಕೋವಿ ಮೇಲೆರಗುವುದಕ್ಕೂ ಆತ ಕೋವಿಯ ಕುದುರೆಯನ್ನು ಸಂಪೂರ್ಣ ಅದುಮುವುದಕ್ಕೂ ಸರಿಹೋಯ್ತು. ಗುಂಡು ಹಾರದೆ ಕೋವಿ ಕೆಳಗೆ ಬಿದ್ದು ನಿಶ್ಶಬ್ದವಾಯ್ತು...



https://www.prajavani.net/short-story

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಕವಿತೆ

ಸುಬ್ಬು ಹೊಲೆಯಾರ್
ಬರೆದ ಕವಿತೆ

ಸಾವಿರಾರು ಸಲಾಂ ಸಾವಿಲ್ಲದ ಕವಿಗೆ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

'ಮೌನ ವಸಂತ'ದಲ್ಲಿ ಮೊಳಗಿದ ಸ್ತ್ರೀ ಧ್ವನಿ

ಎಚ್.ದಂಡಪ್ಪ

ಜೆ. ಬಾಲಕೃಷ್ಣ ಅವರ 'ಮೌನ ವಸಂತ' ಕೃತಿಯು ಅದೃಶ್ಯವಾಗಿ ಅರಳಿದ ಹತ್ತು ಮಹಿಳೆಯರ ಜೀವನ ಸಾಧನೆಗಳ ಕಥನವನ್ನು ಒಳಗೊಂಡಿದೆ. ಸಾಮಾನ್ಯವಾಗಿ ಮಹಿಳೆಯರನ್ನು ಮನರಂಜನೆಗೆಂದು, ಗಂಡಸಿನ ದೈಹಿಕ ಹಾಗೂ ಮಾನಸಿಕ ಸುಖಕ್ಕೆಂದು ದೇವರು ಸೃಷ್ಟಿ ಮಾಡಿದ್ದಾನೆ, ಆದ್ದರಿಂದ ಗಂಡಿನ ಅಡಿಯಾಳಾಗಿದ್ದುಕೊಂಡು ತನ್ನ ಸಾಧನೆಗಳನ್ನು ಗಂಡಿನ ಸಾಧನೆಗಳೆಂದು ಬಿಂಬಿಸುತ್ತಿರಬೇಕು ಎಂಬ ನಂಬಿಕೆ ಹುಟ್ಟುಹಾಕಲಾಗಿದೆ.

ಹೆಣ್ಣಿಗೂ ಒಂದು ವ್ಯಕ್ತಿತ್ವವಿದೆ, ಗೊತ್ತು ಗುರಿಗಳಿವೆ, ಅವಕಾಶ ಸಿಕ್ಕಿದರೆ ಅವರು ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಷ್ಟೇ ಅವರಿಗಿಂತ ಶ್ರೇಷ್ಠಮಟ್ಟದಲ್ಲಿ ಸಾಧನೆ ಮಾಡಬಲ್ಲರು. ಡಾಕ್ಟರ್‌ಗಳು, ಎಂಜಿನಿಯರ್‌ಗಳು, ವಕೀಲರು, ವಿಜ್ಞಾನಿಗಳು ಹೀಗೆ ತಮಗೊದಗಿದ ಅವಕಾಶಗಳನ್ನು ಬಳಸಿಕೊಂಡು ಯಶಸ್ವಿಯಾಗಿ ಪ್ರಸಿದ್ಧರಾಗಿದ್ದಾರೆ. ಮತ್ತೆ ಕೆಲವರು ಎಲೆಮರೆಕಾಯಿಯಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿರುವವರೂ ಇದ್ದಾರೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಇಂತಹ ಸಾಧನೆ ಮಾಡಿರುವವರ ಹೆಸರು ಬೆಳಕಿಗೆ ಬರದೆ ಇರುವ ಉದಾಹರಣೆಗಳು ಇವೆ. ಈ ಕೃತಿಯಲ್ಲಿ ಕ್ರಿಸ್ತಪೂರ್ವದಲ್ಲಿದ್ದ ಪೈಪೋಶಿಯಾ ಎಂಬ ಸಾಧಕಳಿಂದ ಹಿಡಿದು ಇಪ್ಪತ್ತನೇ ಶತಮಾದಲ್ಲಿದ್ದ ಲೇಖಕಿ ಇಸ್ಮತ್ ಚುಗ್ತಾಯ್‌ವರೆಗಿನ ಹೆಣ್ಣು ಮಕ್ಕಳ ಸಾಧನೆ ಸಿದ್ಧಿಗಳು, ಪುರುಷರ ಮೇಲರಿಮೆಯ ನಡುವೆಯೂ ಅವರು ಸಾಧಿಸಿದ ಸಾಧನೆಗಳು, ಬದುಕಿನ ವಿವರಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಡಿಎನ್‌ಎ ರಚನೆಯ ಸ್ವರೂಪದ ಕುರಿತು ಸಂಶೋಧನೆ ಮಾಡಿದ ರೊಸಾಲಿಂಡ್ ಫ್ರ್ಯಾಂಕ್ಲಿನ್ ತನ್ನ 37ನೇ ವಯಸ್ಸಿನಲ್ಲಿ ತೀರಿಕೊಳ್ಳುತ್ತಾಳೆ. ಡಿಎನ್‌ಎ ಕುರಿತ ಅವಳ ಸಂಶೋಧನೆಯನ್ನು ವಾಟ್ಸನ್ ಮತ್ತು ಕ್ರಿಕ್ ತಮ್ಮ ಸಂಶೋಧನೆಯೆಂದು ಬಿಂಬಿಸಿ ನೊಬೆಲ್ ಪ್ರಶಸ್ತಿಯನ್ನು ಪಡೆದುಕೊಳ್ಳುತ್ತಾರೆ. ಇದು ಪುರುಷ ವಿಜ್ಞಾನಿಗಳು ರೊಸಾಲಿಂಡ್ ಅವರ ಬೌದ್ಧಿಕತೆಗೆ, ಜ್ಞಾನಕ್ಕೆ ಮಾಡಿದ ವಂಚನೆಯಾಗಿದೆ.

ರೇಚಲ್ ಕಾರ್ಸನ್, ನಾವು ಬಳಸುವ ಡಿಡಿಟಿ ಎಂಬ ರಾಸಾಯನಿಕವು ಮುಂದೆ ಇಡೀ ಜೈವಿಕ ಜಾಲವನ್ನೇ ಹಾಳುಮಾಡಿ ಮಾನವ ಕುಲವೇ ನಾಶವಾಗುವ ಪರಿಸ್ಥಿತಿ ಬರುತ್ತದೆ ಎಂದು ಎಚ್ಚರಿಸಿದವರು. 'ಪ್ರಕೃತಿಯ ವಿರುದ್ಧ ಹೂಡುವ ಯುದ್ಧ, ಮನುಷ್ಯ ತನ್ನ ವಿರುದ್ಧ ತಾನೇ ಕೂಡಿಕೊಳ್ಳುವ ಯುದ್ಧ' ಎಂದು ಹೇಳಿದಾಕೆ. ಅವರನ್ನು ಹುಚ್ಚಿ ಎಂದು ಕರೆಯಲಾಗುತ್ತದೆ. ಆಕೆ ಬರೆದ 'ಮೌನ ವಸಂತ' ಕೃತಿಯನ್ನು ಓದದಂತೆ ಜಾಗತಿಕ ಮಟ್ಟದ ಕಂಪನಿಗಳು ಪಿತೂರಿ ಮಾಡುತ್ತವೆ.

'ಸಾವಿನ ನೆರಳಲ್ಲಿ ಪುಟ್ಟ ಹಕ್ಕಿಯ ಹಾಡು' ಹಿಟ್ಲರ್‌ನ ಜನಾಂಗೀಯ ದ್ವೇಷಕ್ಕೆ ಬಲಿಯಾದ ಆನ್ ಫ್ರಾಂಕ್ ಎಂಬ 15 ವರ್ಷದ ಬಾಲಕಿಯನ್ನು ಕುರಿತ ಬರಹ. ಈ ಬಾಲೆ ಲೇಖಕಿ, ಪತ್ರಕರ್ತೆಯಾಗಬೇಕೆಂಬ ಕನಸು ಕಂಡವಳು. ಆದರೆ ಆಕೆಯನ್ನು ಹಿಟ್ಲರ್‌ನ ಕ್ಯಾಂಪಿಗೆ ಎಳೆದೊಯ್ದು ಹಿಂಸೆ ನೀಡಿ ಸಾಯಿಸುತ್ತಾರೆ. 'ಸಾವಿನ ನಂತರವೂ ಬದುಕುವ ಹಂಬಲ ನನ್ನದು' ಎಂದು ತನ್ನ 'ಡೈರಿ'ಯಲ್ಲಿ ಬರೆದಿಟ್ಟಿದ್ದಾಳೆ. ಈ ಬಾಲೆಯ ಕಥನವೂ ಇಲ್ಲಿದೆ.

20ನೇ ಶತಮಾನದ ಉರ್ದು ಲೇಖಕಿ ಇಸ್ಮತ್ ಚುಗ್ತಾಯ್ ಅವರು 'ಲಿಹಾಫ್' ಎಂಬ ಕತೆ ಬರೆದಾಗ ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿ ಹಲವಾರು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದರೂ ತನ್ನ ಬರವಣಿಗೆಯನ್ನು ಮುಂದುವರಿಸಿ ಸಾಧನೆ ಮಾಡುತ್ತಾಳೆ.

14ನೇ ಶತಮಾನದಲ್ಲಿ ಕಾಶ್ಮೀರದಲ್ಲಿದ್ದ ಅನುಭಾವಿ ಕವಿ ಲಲ್ಲೇಶ್ವರಿ, ಕಪ್ಪು ಮಹಿಳೆ ಹನ್ರಿಟಾ ಲ್ಯಾಕ್ಸ್, ಅಲೆಕ್ಸಾಂಡ್ರಿಯಾದ ಹೇಪೇಶಿಯಾ ಸೂಸಾನ್ ಸೊಂತಾಗ್, ಮಾತಾಹರಿ ಇವರ ಸಾಧನೆಗಳನ್ನು ಬದುಕಿನ ಸ್ವರೂಪವನ್ನು ಕಥನದ ಸ್ವರೂಪದಲ್ಲಿ ಕನ್ನಡದ ಓದುಗರಿಗೆ ಸಂಗ್ರಹಿಸಿ ಕೊಟ್ಟಿದ್ದಾರೆ. ಈ ಸಾಧಕಿಯರ ಬರವಣಿಗೆಯ ಕೆಲವು ಪುಟಗಳ ಲೇಖನಗಳನ್ನು ಅನುವಾದಿಸಿ ಓದುಗರಿಗೆ ಕೊಟ್ಟಿದ್ದಾರೆ. ಇಲ್ಲಿನ ನಿರೂಪಣೆ ಬರವಣಿಗೆಯ ಶೈಲಿ ಸರಾಗವಾಗಿ ಓದಿಸಿಕೊಳ್ಳುತ್ತದೆ.



ಮೌನ ವಸಂತ– ಅದೃಶ್ಯವಾಗಿ ಅರಳಿದ ಮಹಿಳಾ ಕಥನಗಳು
ಲೇ: ಜೆ. ಬಾಲಕೃಷ್ಣ
ಪ್ರ: ಅವಿರತ ಪುಸ್ತಕ, ಬೆಂಗಳೂರು
ಸಂ:9449935103

ಪು: 196 ₹130

ಒಳನೋಟ

ವಿಶಿಷ್ಟ ಪಾತ್ರಗಳ ಪ್ರಪಂಚ

ಲೇಖಕ ಜಿ.ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯದ ಎಂತಹ ವ್ಯಾಮೋಹಿ ಎಂದರೆ ಅವರ ಹೆಸರಿನ ಜತೆಗೆ ಬೇಂದ್ರೆ ಪದವೂ ಸೇರಿಕೊಂಡುಬಿಟ್ಟಿದೆ. ಬೇಂದ್ರೆ ಅವರ ಒಂದೊಂದು ಕಾವ್ಯವನ್ನೂ 'ಇದರರ್ಥ ಹೀಗೆ' ಎಂದು ದರ್ಶನ ಮಾಡಿಸಿದವರು ಅವರು. ಬೇಂದ್ರೆ ಅವರಂತೆಯೇ ಕನ್ನಡದ ಮತ್ತೊಂದು ಮೇರುಶಿಖರವಾಗಿರುವ ಕುವೆಂಪು ಅವರನ್ನೂ ಧೇನಿಸುತ್ತಿರುವ ಕೃಷ್ಣಪ್ಪ, ಅವರ ಕಾವ್ಯದ ಮೇಲೆ ಒಂದರ ಬೆನ್ನಹಿಂದೆ ಒಂದರಂತೆ ಈಗ ಕೃತಿಗಳನ್ನು ಹೊರತರುತ್ತಿದ್ದಾರೆ. ಕಳೆದ ವರ್ಷ 'ಕುವೆಂಪು ಹನುಮದ್ದರ್ಶನ'ವನ್ನು ಓದುಗರ ಕೈಗಿಟ್ಟಿದ್ದ ಅವರು, ಈಗ 'ಶ್ರೀರಾಮಾಯಣ ದರ್ಶನಂ ಪಾತ್ರಗಳ ಕಥಾವಳಿ' ಮೂಲಕ ಬಂದಿದ್ದಾರೆ.

ರಾಮಾಯಣ ಹಾಗೂ ಮಹಾಭಾರತ – ಕಾಲದೇಶಗಳನ್ನು ಮೀರಿದ ಭಾರತದ ಎರಡು ಮಹಾಕಾವ್ಯಗಳು. ಪೂರ್ಣದೃಷ್ಟಿಯ ಕವಿ ಕುವೆಂಪು ಅವರು ಮಹಾಭಾರತಕ್ಕಿಂತಲೂ ರಾಮಾಯಣಕ್ಕೆ ಒಲಿದಿರುವುದು ಸಹಜವಾದುದೇ ಆಗಿದೆ. ಏಕೆಂದರೆ, ಅವರು ಆದರ್ಶಗಳಿಗೆ ಹಂಬಲಿಸಿದ ಕವಿ. ಆದರ್ಶವಾಗಿ ಬಾಳಿದ ಕವಿ. ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ'ನಲ್ಲಿ ಕಂಡರಿಸಿದ ಪಾತ್ರಗಳ ಗುಣವಿಶೇಷಣಗಳನ್ನು ಕೃಷ್ಣಪ್ಪನವರು ಹೆಕ್ಕಿ ತೆಗೆದಿದ್ದಾರೆ.

ಕಥಾವಳಿಗೆ ಲೇಖಕರು ಆಯ್ದುಕೊಂಡ ಪಾತ್ರಗಳು ಕೂಡ ತುಂಬಾ ವಿಶಿಷ್ಟವಾಗಿವೆ. ಮಂಥರೆ, ಶಬರಿ, ವಾಲಿ, ಮಾರೀಚ, ಮಂಡೋದರಿ, ಮಹಾಪಾರ್ಶ್ವ, ಅತಿಕಾಯ, ಊರ್ಮಿಳೆ, ಅನಲೆ... ಹೀಗೆ ಪ್ರಧಾನ ಭೂಮಿಕೆಯಲ್ಲಿ ಇಲ್ಲದಿದ್ದರೂ ರಾಮಾಯಣದ ಕಥೆ ಬೆಳೆಯಲು ತಮ್ಮದೇ ಆದ ರೀತಿಯಲ್ಲಿ ಗಹನವಾದ ಕೊಡುಗೆ ನೀಡಿದ ಪಾತ್ರಗಳು ಇವಾಗಿವೆ. ಈ ಪಾತ್ರಗಳ ವ್ಯಕ್ತಿತ್ವದ ತುಮುಲಗಳು, ಅವುಗಳ ವರ್ತನೆಯಿಂದ ರಾಮನ ಕಥೆಯ ಮೇಲೆ ಆಗುವ ಪರಿಣಾಮಗಳು ವಿಶಿಷ್ಟವಾಗಿ ಚಿತ್ರಿತವಾಗಿವೆ.

ಮೂಲ ರಾಮಾಯಣಕ್ಕಿಂತ 'ಶ್ರೀರಾಮಾಯಣ ದರ್ಶನಂ'ನಲ್ಲಿ ಸೃಷ್ಟಿಯಾದ ಈ ಪಾತ್ರಗಳು ಹೇಗೆ ಭಿನ್ನ ಎನ್ನುವುದರ ಒಳನೋಟವೂ ಈ ಕೃತಿಯಲ್ಲಿ ಸಿಗುತ್ತದೆ. ಉದಾಹರಣೆಗೆ ವಾಲಿಯ ಪಾತ್ರ. ಮೂಲ ರಾಮಾಯಣದಲ್ಲಿ ಆತನನ್ನು ವಿಷಯ ಲಂಪಟ ಎನ್ನುವಂತೆ ಬಿಂಬಿಸಲಾಗಿದೆ. ಸೋದರ ದ್ವೇಷಿಯಂತೆ ಕಾಣಿಸಲಾಗಿದೆ. ಆದರೆ, ಕುವೆಂಪು ಅವರ 'ವಾಲಿ' ಅಂತಹ ವ್ಯಕ್ತಿಯಲ್ಲ. ಘನತೆಯಿಂದಲೇ ಬಾಳಿ ಬದುಕಿದವನು. ಸೋದರನ ಮೇಲಿನ ಸಿಟ್ಟು ಪ್ರಾಸಂಗಿಕವಾಗಿ ಮೂಡಿದಂಥದು. ಹಾಗೆಯೇ ರಾಮ, ತಾನು ವಾಲಿಯನ್ನು ಹತಗೈದುದಕ್ಕೆ ಮೂಲ ರಾಮಾಯಣದಲ್ಲಿ ಸಮರ್ಥನೆ ಮಾಡಿಕೊಂಡರೆ, ಕುವೆಂಪು ಅವರ ರಾಮ ತಪ್ಪಾಯಿತು ಎಂದು ಪರಿತಪಿಸುತ್ತಾನೆ. ರಾಮಾಯಣದ ಮರುಓದಿಗೆ, ಅದರ ಪಾತ್ರಗಳ ಆಳ ತಿಳಿವಿಗೆ, ಕುವೆಂಪು ದರ್ಶನಕ್ಕೆ ಬೇಕಾದ ಇಂತಹ ಹಲವು ಪರಿಕರಗಳ ಗುಚ್ಛವಾಗಿ ಕೃತಿ ಗೋಚರಿಸುತ್ತದೆ.



ಶ್ರೀರಾಮಾಯಣ ದರ್ಶನಂ ಪಾತ್ರಗಳ ಕಥಾವಳಿ
ಲೇ: ಡಾ.ಜಿ.ಕೃಷ್ಣಪ್ಪ
ಪ್ರ: ವಂಶಿ ಪಬ್ಲಿಕೇಷನ್ಸ್
ಸಂ: 99165 95916

ಪು: 120 ₹120

ಮೊದಲ ಓದು

ಭಿನ್ನವಾದ ಕಾವ್ಯ ಅಭಿವ್ಯಕ್ತಿ

ಟಿ.ಕೆ. ಗಂಗಾಧರ ಪತ್ತಾರ ಅವರ ವ್ಯಕ್ತಿ ಚಿತ್ರಣ ಕವನಗಳ ಸಂಕಲನ 'ಅಭಿವ್ಯಕ್ತಿ'. ಪದ್ಯದ ಮೂಲಕ ವ್ಯಕ್ತಿಚಿತ್ರಣವನ್ನು ಕಟ್ಟಿಕೊಡುವ ಪರಿಪಾಟವಿದ್ದರೂ ಇಡೀ ಕವನ ಸಂಕಲನವೇ ವ್ಯಕ್ತಿಚಿತ್ರ ಕವನಗಳಿಂದ ಕೂಡಿದ ನಿದರ್ಶನವಿಲ್ಲ. ಈ ದೃಷ್ಟಿಯಿಂದ ಇದೊಂದು ಹೊಸ ಪ್ರಯೋಗ. ವ್ಯಕ್ತಿಗಳ ಬದುಕಿಗೆ ಸಂಬಂಧಿಸಿದ ಹಲವು ವಿವರಗಳು ಇಲ್ಲಿನ ಕವನಗಳಲ್ಲಿ ಸಿಗುತ್ತವೆ.

ವ್ಯಕ್ತಿಚಿತ್ರ ಕವನಗಳು ಇವಾದರೂ ಕೆಲವು ಸಾಧಕ ವ್ಯಕ್ತಿತ್ವಗಳನ್ನು ಹೊಸ ದೃಷ್ಟಿಕೋನದಿಂದ ನೋಡಿರುವುದರಿಂದ ಸಾಮಾಜಿಕ ಆಯಾಮಗಳೂ ಇಲ್ಲಿನ ಕವನಗಳ ಸಾಲುಗಳಲ್ಲಿ ಹರಡಿಕೊಂಡಿವೆ. ಇದಕ್ಕೆ ಉದಾಹರಣೆಯಾಗಿ ಸಂಕಲನದ ಮೊದಲ ಕವನವನ್ನೇ ನೋಡಬಹುದು. ವಿವೇಕಾನಂದರು ದೀನ ದಲಿತರ ಬಗ್ಗೆ ಹೊಂದಿದ್ದ ಕಾಳಜಿಯನ್ನು ಈ ಕವನ ಎತ್ತಿ ತೋರುತ್ತದೆ. 'ರಾಷ್ಟ್ರವನು ಮುಸುಕಿದ್ದ ಮಾಯೆ–ಮಿಥ್ಯಾ ನಿಶೆಯ ಸತ್ಯ ಕಿರಣಗಳಿಂದ ಭುಂಜಿಸಿದ ಸೂರ್ಯ'ನಾಗಿಯೂ ವಿವೇಕಾನಂದರು ಗೋಚರಿಸಿದ್ದಾರೆ.

ಗಾಂಧಿ, ಅಂಬೇಡ್ಕರ್, ಬೇಂದ್ರೆ, ಕುವೆಂಪು, ಗೋವಿಂದ ಪೈ... ಹೀಗೆ ಇಲ್ಲಿ ಮೇಳೈಸಿರುವ ಸಾಧಕರ ಪಟ್ಟಿ ದೊಡ್ಡದಿದೆ. ಹಾಗೆಯೇ ಪತ್ತಾರರು ಯಾರ ಕುರಿತು ಬೇಕಾದರೂ ಪದ್ಯ ಬರೆಯಬಲ್ಲರು ಎನ್ನುವುದಕ್ಕೂ ಉದಾಹರಣೆಗಳು ಇಲ್ಲಿವೆ. ಇವರೆಲ್ಲ ಹೇಗೆ ಈ ಕಾವ್ಯ ಮಾಲೆಯಲ್ಲಿ ಒಂದಾದರು ಎಂಬ ಪ್ರಶ್ನೆ ಕಾಡುತ್ತದೆ. ವ್ಯಕ್ತಿಯ ಆಯ್ಕೆಯ ಮಾನದಂಡ ಕೂಡ ಮುಖ್ಯ ಎಂದು ಬರಗೂರು ರಾಮಚಂದ್ರಪ್ಪ ಅವರು ಮುನ್ನುಡಿಯಲ್ಲಿ ಹೇಳಿರುವುದು ಸರಿಯಾಗಿಯೇ ಇದೆ.

ಅಭಿವ್ಯಕ್ತಿ
ಲೇ: ಟಿ.ಕೆ. ಗಂಗಾಧರ ಪತ್ತಾರ
ಪ್ರ: ಶ್ರೀ ರಾಮಾಂಜನೇಯ ತೊಗಲುಗೊಂಬೆ ಮೇಳ ಟ್ರಸ್ಟ್
ಸಂ: 9481676218

ಪು: 132 ₹120

ಇದು ರಮ್ಯಾ 'ರ್‍ಯಾಪ್' ಕಾಲ...

ಕನ್ನಡದಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ರ್‍ಯಾಪ್ ಸಂಗೀತ ಮಾಡುತ್ತಿಲ್ಲ. ಅದೇ ಹಿಂದಿ, ಪಂಜಾಬಿ ಭಾಷೆಯಲ್ಲಿ ಬಹಳಷ್ಟು ಮಂದಿ ಸಿಗುತ್ತಾರೆ. ಕನ್ನಡದಲ್ಲಿ ಅಪರೂಪವಾದ ಅಂತಹ ರ್‍ಯಾಪ್ ಕ್ಷೇತ್ರದಲ್ಲಿ ಹೆಜ್ಜೆ ಗುರುತು ಮೂಡಿಸಲು ಯತ್ನಿಸುತ್ತಿರುವ ರಮ್ಯಾ ಶ್ರೀಧರ್ ಅವರದು ಬಹುಮುಖ ಪ್ರತಿಭೆ

ಮಂಜುಶ್ರೀ ಎಂ. ಕಡಕೋಳ

ಅದು ಜನವರಿ ತಿಂಗಳ ಕಾಲ. ಅತ್ತ ದೆಹಲಿಯಲ್ಲಿ ರೈತರ ಪ್ರತಿಭಟನೆ ಕಾವೇರುತ್ತಿದ್ದಂತೆ, ಇತ್ತ ಕನ್ನಡದ ಮನವೊಂದು ರೈತರತ್ತ ತುಡಿಯುತ್ತಿತ್ತು. ಅಲ್ಲಿಗೆ ಹೋಗಲಾರದೇ ರೈತರನ್ನು ಹೇಗೆ ಬೆಂಬಲಿಸಬಹುದೆಂದು ಯೋಚಿಸುತ್ತಿರುವಾಗ ಒಡಮೂಡಿದ್ದು 'ವಕ್ತ್ ಆಯಾ ಹೈ' ಅನ್ನುವ ರ್‍ಯಾಪ್ ಗೀತೆ. ರಾತ್ರೋರಾತ್ರಿ ಹೋರಾಟಗಾರರ ಮನ ಗೆದ್ದಿದ್ದ ಈ ಹಾಡನ್ನು ಹಾಡಿದ್ದು ಬೆಂಗಳೂರಿನ ರಮ್ಯಾ ಶ್ರೀಧರ್.

ಕನ್ನಡದಲ್ಲೇ ಮೊದಲ ಹಾಡು ಹಾಡಬೇಕೆಂಬ ಸಂಕಲ್ಪ ತೊಟ್ಟಿದ್ದ ರಮ್ಯಾ ಅವರ ಹಿಂದಿ ರ್‍ಯಾಪ್ ಗೀತೆಗೆ ಬೆನ್ನುತಟ್ಟಿದ್ದು ದೆಹಲಿ ಕನ್ನಡಿಗರಾದ ಪುರುಷೋತ್ತಮ ಬಿಳಿಮಲೆ ಅವರು. ಅಲ್ಲಿಂದಾಚೆಗೆ ರಮ್ಯಾ ಸಾಮಾಜಿಕ ಮಾಧ್ಯಮಗಳಲ್ಲಿ ರ್‍ಯಾಪ್ ಸಂಗೀತ ಪ್ರಿಯರ ಮನಸೂರೆಗೊಂಡರು. ತುಸು ಬ್ರೇಕ್ ಪಡೆದು ಈಚೆಗಷ್ಟೇ 'ವೇಕ್ ಅಪ್' ಹೆಸರಿನಲ್ಲಿ ಕನ್ನಡದಲ್ಲಿ ತಮ್ಮ ಮೊದಲ ರ್‍ಯಾಪ್ ಗೀತೆಯನ್ನು ರಮ್ಯಾ ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದ್ದಾರೆ. ಬಿಡುಗಡೆಯಾದ ಮೊದಲ ವಾರದಲ್ಲೇ ಈ ಗೀತೆಯು ಏಳು ಸಾವಿರಕ್ಕೂ ಹೆಚ್ಚಿನ ವೀಕ್ಷಣೆ ಕಂಡಿದ್ದು, 'ಪವರ್ ಸ್ಟಾರ್' ಪುನೀತ್ ಮೆಚ್ಚುಗೆ ನುಡಿಗಳನ್ನಾಡಿರುವುದು ರಮ್ಯಾ ಅವರ ಉತ್ಸಾಹ ಇಮ್ಮಡಿಗೊಳಿಸಿದೆ.

'ನಿತ್ಯದ ಬದುಕನ್ನು ನನ್ನ ಕಣ್ಣಲ್ಲಿ ಕಂಡಂತೆ ಗೀತ ಸಾಹಿತ್ಯವನ್ನಾಗಿಸಿ, ಸಂಗೀತ ನಿರ್ದೇಶಿಸಿ, ಹಾಡಿದರೆ ಹೇಗಿರುತ್ತೆ ಅಂತ ಆಲೋಚನೆ ಬಂದದ್ದೇ ತಡ, 'ವೇಕ್ ಅಪ್' ಗೀತೆ ಸಿದ್ಧವಾಯಿತು' ಎನ್ನುತ್ತಾರೆ ರಮ್ಯಾ.

ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿರುವ ಅವರು, ಬಯೋಟೆಕ್ ಮತ್ತು ಫ್ಯಾಷನ್ ಡಿಸೈನಿಂಗ್ ಕೋರ್ಸ್ ಕೂಡಾ ಮಾಡಿದ್ದಾರೆ. ಭರತನಾಟ್ಯ, ಜುಂಬಾ ನೃತ್ಯವನ್ನೂ ಅಭ್ಯಾಸ ಮಾಡಿರುವ ರಮ್ಯಾ ಅವರ ಆಸಕ್ತಿಯ ಕ್ಷೇತ್ರಗಳು ಹತ್ತು-ಹಲವು, ಅಧ್ಯಾತ್ಮ, ವ್ಯಕ್ತಿತ್ವವಿಕಸನ ತರಬೇತಿ, ಶಾಯರಿ, ಹಿಂದಿ ಪದ್ಯಗಳನ್ನು ಯುಟ್ಯೂಬ್‌ಗೆ ಅಪ್‌ಲೋಡ್ ಮಾಡುವುದು, ಕೇಕ್ ಮಾಡುವುದು ಹೀಗೆ ಹಲವೆಡೆ ಸೃಜನಾತ್ಮಕವಾಗಿ ತೊಡಗಿಸಿಕೊಳ್ಳುವುದು ಅವರಿಗಿಷ್ಟ.

ಸಂಗೀತದ ಮೇಲಿನ ಮೋಹದಿಂದ ಶಾಸ್ತ್ರೀಯ ಸಂಗೀತಾಭ್ಯಾಸ ಮಾಡಿದ್ದ ರಮ್ಯಾ ಅವರಿಗೆ ಮೊದಲಿಗೆ ಯೂಟ್ಯೂಬ್ ಚಾನೆಲ್ ಆರಂಭಿಸುವ ಯೋಚನೆ ಇರಲಿಲ್ಲ. ಸ್ನೇಹಿತರೊಬ್ಬರ ಸ್ಟುಡಿಯೊಕ್ಕೆ ಹೋದಾಗ ಅಲ್ಲಿ ರಮ್ಯಾ ಒಂದೆರಡು ಸಾಲುಗಳನ್ನು ಗುನುಗುನಿಸಿದ್ದನ್ನು ಕೇಳಿದ ಸಂಗೀತ ನಿರ್ದೇಶಕರೊಬ್ಬರು ನೀವ್ಯಾಕೆ ಹಾಡಬಾರದು ಎಂದು ಪ್ರೇರೇಪಿಸಿದ್ದೇ ರ್‍ಯಾಪ್ ಸಂಗೀತದತ್ತ ಒಲವು ಮೂಡಲು ಕಾರಣವಾಯಿತು. ಇದಕ್ಕೂ ಮುನ್ನ, ಅಭಿಷೇಕ್ ಅವರ ಆಲ್ಬಂ ಸಂಗೀತಕ್ಕೆ ಹಾಗೂ 'ತಮಸ್ಸು' ಸಿನಿಮಾದ ಹಾಡುಗಳಿಗೆ ಸಾಹಿತ್ಯ ಬರೆದ, ಸಹಾಯಕ ನಿರ್ದೇಶಕಿಯಾಗಿ ದುಡಿದ ಅನುಭವವೂ ಅವರಿಗಿತ್ತು.

ಸಿನಿಮಾ, ಸಂಗೀತದತ್ತ ಅಪಾರ ಒಲವಿರುವ ರಮ್ಯಾ ಜಗತ್ತನ್ನು ಪಾಸಿಟಿವ್ ಆಗಿ ನೋಡುವ ದೃಷ್ಟಿಕೋನ ರೂಢಿಸಿಕೊಳ್ಳಬೇಕು ಅನ್ನುತ್ತಾರೆ. ಇದನ್ನೇ ವಿಷಯವನ್ನಾಗಿಟ್ಟುಕೊಂಡು 'ವೇಕ್ ಅಪ್' ರೂಪಿಸಿದೆ. ವೇಗದ ಜಗತ್ತಿನಲ್ಲಿ ಒಬ್ಬರನ್ನು ತುಳಿದು ಮತ್ತೊಬ್ಬರು ಬೆಳೆಯುವ ಪರಿಪಾಟವಿದೆ. ಮತ್ತೊಬ್ಬರ ಏಳ್ಗೆಗೆ ಹೊಟ್ಟೆಕಿಚ್ಚು ಪಡುವ ಬದಲು ಪ್ರೋತ್ಸಾಹಿಸಿ, ತಾವೂ ಬೆಳೆಯಬೇಕು ಅನ್ನುವ ಆಲೋಚನೆ ಬಂದರೆ ಎಷ್ಟು ಚೆನ್ನ? ಪುಟ್ಟ ಮಕ್ಕಳಿಂದ ಹಿಡಿದು ಪ್ರಕೃತಿಯತನಕ ಕಲಿಯುವಂಥದ್ದು ಬಹಳಷ್ಟಿದೆ. ಇರುವಷ್ಟು ದಿನ ಎಲ್ಲರೂ ಶಾಂತಿ, ಸೌಹಾರ್ದದಿಂದ ನೆಮ್ಮದಿಯಿಂದ ಬದುಕಬಹುದಲ್ಲ ಅನ್ನುವ ಆಶಯ ಅವರದ್ದು. 'ಈ ನಿಟ್ಟಿನಲ್ಲಿ ನಮ್ಮ ಮತ್ತು ಸುತ್ತಮುತ್ತಲಿನವರ ಮನಸ್ಸು ಎಚ್ಚರವಾಗಬೇಕಿದೆ. ಸರಳವಾಗಿ ಬದುಕುವ ಕಲೆ ರೂಢಿಸಿಕೊಳ್ಳಬೇಕು. ಅದನ್ನೇ ಈ ರ್‍ಯಾಪ್ ಗೀತೆಯಲ್ಲಿ ಹೇಳಲು ಪ್ರಯತ್ನಿಸಿದ್ದೇನೆ' ಎನ್ನುತ್ತಾರೆ ಅವರು.

'ಈ ಹಾಡಿನ ಶೂಟಿಂಗ್ ಇನ್ನೇನು ಶುರುವಾಗಬೇಕು ಅನ್ನುವಷ್ಟರಲ್ಲಿ ವಸ್ತ್ರವಿನ್ಯಾಸ ಮಾಡುವವರು ಬರಲಿಲ್ಲ. ಆಗ ಫ್ಯಾಷನ್ ಡಿಸೈನಿಂಗ್ ಕೋರ್ಸ್ ಸಹಾಯಕ್ಕೆ ಬಂತು. ಸಾಹಿತ್ಯ, ಸಂಗೀತ, ಗಾಯನ ಮತ್ತು ವಸ್ತ್ರವಿನ್ಯಾಸ ಎಲ್ಲವನ್ನೂ ಸಿದ್ಧಪಡಿಸಿಕೊಂಡು 'ಆಲ್ ಓಕೆ' ಅನ್ನುವ ಟೀಂ ನೆರವಿನೊಂದಿಗೆ ರ್‍ಯಾಪ್ ಗೀತೆ ಸಿದ್ಧವಾಯಿತು. 'ವೇಕ್ ಅಪ್' ಯಶಸ್ಸಿನ ಹಿಂದೆ ಕ್ಯಾಮೆರಾಮನ್ ಆಕಾಶ್, ನವೀನ್, ವಿಜಯಕೃಷ್ಣ, ಶಿಲ್ಪಾ ಸೇರಿದಂತೆ ದೊಡ್ಡ ತಂಡದ ಬೆಂಬಲವಿದೆ' ಎಂದು ಕೃತಜ್ಞತೆ ಸಲ್ಲಿಸುತ್ತಾರೆ ರಮ್ಯಾ.

ಹಾಡು, ನೃತ್ಯದ ಜೊತೆಗೆ ದೇಹದ ಫಿಟ್‌ನೆಸ್ ಕಡೆಗೂ ಕಾಳಜಿ ವಹಿಸುವ ರಮ್ಯಾ ಅವರಿಗೆ ಸಿನಿಮಾದಲ್ಲಿ ನಟಿಸುವ ಅವಕಾಶಗಳು ಹೇರಳವಾಗಿ ಬಂದಿವೆ. ಆದರೆ, ಸ್ಕ್ರಿಪ್ಟ್ ವಿಷಯದಲ್ಲಿ ಚೂಸಿಯಾಗಿರುವ ಅವರು, ಒಳ್ಳೆಯ ಚಿತ್ರಕಥೆ ಸಿಕ್ಕರೆ ಅಭಿನಯಿಸಲು ಸಿದ್ಧ ಎನ್ನುತ್ತಾರೆ. ಕನ್ನಡದಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ರ್‍ಯಾಪ್ ಸಂಗೀತ ಮಾಡುತ್ತಿಲ್ಲ. ಹಿಂದಿ, ಪಂಜಾಬಿ ಭಾಷೆಯಲ್ಲಿ ಬಹಳಷ್ಟು ಮಂದಿ ಸಿಗುತ್ತಾರೆ. ಹಾಗಾಗಿ, ಕನ್ನಡದಲ್ಲೇ ಮುಂದೆಯೂ ರ್‍ಯಾಪ್ ಗೀತೆಗಳನ್ನು ಮಾಡುವ ಆಶಯ ವ್ಯಕ್ತಪಡಿಸುವ ರಮ್ಯಾ ಅವರಿಗೆ ಬರವಣಿಗೆ, ಸಾಹಿತ್ಯ, ಓದು ಅಪ್ಪ-ಅಮ್ಮನಿಂದ ಬಂದ ಬಳುವಳಿ. 'ಆದರೆ, ಎಲ್ಲೂ ಅಪ್ಪ-ಅಮ್ಮನ ಪ್ರಭಾವ ಬಳಸಿಕೊಂಡಿಲ್ಲ. ಸ್ವತಂತ್ರವಾಗಿ ಬೆಳೆಯಬೇಕೆಂಬ ಆಸೆ ನನ್ನದು' ಎಂದು ವಿನೀತರಾಗಿ ನುಡಿಯುತ್ತಾರೆ ಅವರು. ಅಂದಹಾಗೆ ರಮ್ಯಾ ಶ್ರೀಧರ್ ಅವರು, ಅಗ್ನಿ ಶ್ರೀಧರ್-ಲತಾ ಶ್ರೀಧರ್ ದಂಪತಿಯ ಪುತ್ರಿ.

ಹಾಡು ವೀಕ್ಷಿಸಲು:
https://youtu.be/yFNiOma-pD8

ಸ್ಟೇಜ್ ಫಿಯರ್... ಮನೆಯಲ್ಲಿ ಸಿಂಗರ್!

'ಬಾಲ್ಯದಲ್ಲಿ ಶಾಲೆಯಲ್ಲಿ ಮೈಕ್ ಮುಂದೆ ಹಾಡಲು ನಿಲ್ಲುತ್ತಿದ್ದಂತೆಯೇ ನನಗೆ ಸ್ಟೇಜ್ ಫಿಯರ್ ಶುರುವಾಗಿಬಿಡುತ್ತಿತ್ತು. ಅಲ್ಲಿ ಹಾಡಲು ಆಗುತ್ತಿರಲಿಲ್ಲ. ಆದರೆ, ಮನೆಗೆ ಬಂದ ಮೇಲೆ ಅದೇ ಹಾಡನ್ನು ಧೈರ್ಯವಾಗಿ ಹಾಡುತ್ತಿದ್ದೆ! ತಮಾಷೆಯೆಂದರೆ ಹಾಡಲು ಎದುರಾಗುತ್ತಿದ್ದ ಸ್ಟೇಜ್ ಫಿಯರು, ಅದೇ ವೇದಿಕೆಯ ಮೇಲೆ ಡಾನ್ಸ್ ಮಾಡುವಾಗ ಇರುತ್ತಿರಲಿಲ್ಲ. ಹಾಗಾಗಿ, ನನಗೆ ನೃತ್ಯದಲ್ಲಿ ಅನೇಕ ಬಹುಮಾನಗಳು ಬಂದಿವೆ. ಮುಂದೆ ನಿಧಾನವಾಗಿ ಸ್ಟೇಜ್ ಫಿಯರ್ ಕಳೆದುಕೊಂಡೆ' ಎಂದು ಶಾಲಾ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ರಮ್ಯಾ.

ಇದು ರಮ್ಯಾ ಫಿಲಾಸಫಿ!

ಅಧ್ಯಾತ್ಮಪ್ರಿಯೆಯಾಗಿರುವ ರಮ್ಯಾ, ಮೋಟಿವೇಷನಲ್ ಸ್ಪೀಕರ್ ಆಗಿಯೂ ಅನೇಕರಿಗೆ ಸ್ಫೂರ್ತಿ ತುಂಬಿದ್ದಾರೆ. 'ಒಂದು ಚಿಟಿಕೆ ಹೊಡೆದ ಕ್ಷಣವನ್ನೂ ಮರಳಿ ಪಡೆಯಲಾಗದು. ಅಂದರೆ ಸಮಯ ಅನ್ನೋದು ಅತ್ಯಮೂಲ್ಯ. ಹಾಗಾಗಿ, ನಾಳೆಗೆ ಏನನ್ನೂ ಮುಂದೂಡಬೇಡಿ. ಈ ಕ್ಷಣಮಾತ್ರ ಸತ್ಯ ಅನ್ನೋದನ್ನು ನೆನಪಿಡಿ' ಅಂತಾರೆ ಅವರು.

ದೀಪಾವಳಿ ಕಥಾ-ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ

ಕನ್ನಡ ಕಥಾ ಜಗತ್ತಿನ ಸಾಹಿತ್ಯ ಸಂಭ್ರಮ

ಸ್ಪರ್ಧೆಯ ನಿಯಮಗಳು

- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ... ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ – ಎರಡು ಸಾವಿರ ಪದಗಳು
- ಕಥೆ- ಕವನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಇಲ್ಲವೆ ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್' ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ
- ಇ- ಮೇಲ್: deepavali@prajavani.co.in

ಕಥಾ ಸ್ಪರ್ಧೆ		ಕವನ ಸ್ಪರ್ಧೆ
₹20,000	ಮೊದಲ ಬಹುಮಾನ	₹5,000
₹15,000	ಎರಡನೇ ಬಹುಮಾನ	₹3,000
₹10,000	ಮೂರನೇ ಬಹುಮಾನ	₹2,500

ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 14, 2021

ವಿಳಾಸ: ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ, 'ಪ್ರಜಾವಾಣಿ', ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕು ಕೇಳ್ರಪ್ಪ ಕಥೆಯ — ಸಂತ ಇಬ್ರಾಹಿಂ ಮತ್ತು ಶ್ರೀಮಂತ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇಬ್ರಾಹಿಂ ದೇಶದ ಬಹುದೊಡ್ಡ ಸಂತ. ಅವರೊಮ್ಮೆ ಸಂಚಾರ ಮಾಡುತ್ತಾ ಧನಿಕನೊಬ್ಬನ ಮಾವಿನ ತೋಟಕ್ಕೆ ಬಂದರು. ಆ ತೋಟದ ಶ್ರೀಮಂತ ಮಾಲೀಕನನ್ನು ಭೇಟಿಯಾಗಿ ಮಾತನಾಡಿದರು



ಸಾಧಾರಣ ಉಡುಪಿನಲ್ಲಿದ್ದ ಇಬ್ರಾಹಿಮರನ್ನು ಯಾರೋ ಸಾಮಾನ್ಯ ಮನುಷ್ಯ ಎಂದು ತಿಳಿದ ಶ್ರೀಮಂತನು ಅವರಿಗೆ ತೋಟ ಕಾಯುವ ಕೆಲಸ ಮಾಡಬಹುದೇ ಎಂದು ಕೇಳಿದ

ದೇಶ ಸಂಚಾರದ ವೇಳೆ ತಮ್ಮ ಜ್ಞಾನ ಸಂಪಾದನೆಗೂ ಅದು ಪ್ರಶಸ್ತ ಸ್ಥಳ ಎಂದು ಭಾವಿಸಿದ ಸಂತ ಇಬ್ರಾಹಿಮರು ಆ ತೋಟ ಕಾಯುವ ಕೆಲಸಕ್ಕೆ ಒಪ್ಪಿದರು



ತುಂಬಾ ನಿಷ್ಠೆಯಿಂದ ಮಾವಿನ ತೋಟ ಕಾಯುವ ಕೆಲಸ ಮಾಡುತ್ತಾ ಬಂದರು. ಕಾಲ ಕಳೆದಂತೆ ಮರಗಳು ಹಣ್ಣು ಬಿಟ್ಟವು. ಒಂದು ದಿನ ಧನಿಕ ತನ್ನ ಗೆಳೆಯರೊಂದಿಗೆ ತೋಟಕ್ಕೆ ಬಂದ



ಇಬ್ರಾಹಿಮರಿಗೆ ಮಾವಿನ ಹಣ್ಣು ತರಲು ಹೇಳಿದ. ಅವರು ತಂದ ಹಣ್ಣುಗಳು ಹುಳಿಯಾಗಿದ್ದವು. ಯಾವ ಮರದ ಹಣ್ಣು ಸಿಹಿ ಅಥವಾ ಹುಳಿ ಎಂದು ಗೊತ್ತಿಲ್ಲವೇ ಎಂದು ಧನಿಕ ಕೋಪದಿಂದ ಕೇಳಿದ



ನಕ್ಕ ಇಬ್ರಾಹಿಂ, 'ಸ್ವಾಮಿ, ನೀವು ನನಗೆ ತೋಟ ಕಾಯಲು ಹೇಳಿರುವಿರಿ. ಹಣ್ಣು ತಿನ್ನಲು ಅನುಮತಿ ಕೊಟ್ಟಿಲ್ಲ. ಹಣ್ಣು ತಿನ್ನದೇ ಹೇಗೆ ಹೇಳಲಿ' ಎಂದು ಹೇಳಿದರು. ಇಬ್ರಾಹಿಂ ಅವರ ಪ್ರಾಮಾಣಿಕತೆಗೆ ಧನಿಕ ತಲೆದೂಗಿ ಕ್ಷಮೆ ಯಾಚಿಸಿದ

ಗಣಿತದಲ್ಲಿ ಗರ್ದಿ ಗಮ್ಮತ್ತು

ನೀ ನನ್ನ ಗೆಲ್ಲಲಾರೆ!

ಈಗೊಂದು ಆಟ ಆಡೋಣ.

1 ರಿಂದ 10ರೊಳಗಿನ ಒಂದು ಸಂಖ್ಯೆಯನ್ನು ಮೊದಲು ನೀನಾದರೂ ಹೇಳು, ಇಲ್ಲವೇ ನಾನಾದರೂ ಹೇಳುತ್ತೇನೆ. ಹೇಳಿದ ಸಂಖ್ಯೆಗೆ ಮತ್ತೆ ಎದುರಾಳಿ ಆ ಸಂಖ್ಯೆಗೆ 10 ಕೂಡಿಸಿದಾಗ ಆಗುವ ಸಂಖ್ಯೆಯ ಒಳಗೆ ಮತ್ತೊಂದು ಸಂಖ್ಯೆ ಹೇಳುತ್ತೇನೆ. ಹೀಗೆ ನಾನೊಮ್ಮೆ ನೀನೊಮ್ಮೆ ಹೇಳುತ್ತ ಹೇಳುತ್ತ ಕೊನೆಗೆ 100 ಯಾರು ಹೇಳುತ್ತಾರೋ ಅವರೇ ಗೆದ್ದಂತೆ. ಆದರೆ ಈ ಆಟದಲ್ಲಿ ಎಷ್ಟೇ ಸಲ ಆಡಿದರೂ ಪ್ರತೀ ಬಾರಿ ಗೆಲುವು ನನ್ನದೇ! ನೀ ನನ್ನ ಗೆಲ್ಲಲಾರೆ ಅದ್ಹೇಗೆ?

ಹೀಗೆ:- ಈ ಆಟದ ಗುಟ್ಟು ನನಗೆ ಗೊತ್ತಿದೆ. ನಿನಗೆ ಗೊತ್ತಿಲ್ಲದ ಕಾರಣ ನೀನು ಯಾವುದೋ ಸಂಖ್ಯೆ ಹೇಳುತ್ತಾ ಹೋಗುತ್ತಿ. ನಾನು ಯಾವಾಗಲೂ 12, 23, 34, 45, 56, 67, 78, 89 ಗಳನ್ನೇ ಹೇಳುತ್ತೇನೆ ಏಕೆ ಗೊತ್ತೆ? ನೀನು 7 ಎಂದು ಹೇಳಿದರೆ ನಾನು 12 ಹೇಳುತ್ತೇನೆ. 12ಕ್ಕೆ 10 ಕೂಡಿಸಿದಾಗ 22 ಆಗುತ್ತದೆ. ನೀನು 22ರೊಳಗೆ ಹೇಳಬೇಕಾಗುತ್ತದೆ. ಅಂದರೆ ಮುಂದಿನ 23 ನನಗೆ ದೊರೆಯುತ್ತದೆ. ಹೀಗೆ 89 ಮುಟ್ಟಿದಾಗ 89ಕ್ಕೆ 10 ಕೂಡಿಸಿದಾಗ 99ರೊಳಗೆ ನೀನು ಹೇಳಿದರೆ ಕೊನೆಗೆ ನನಗೆ 100 ಸಿಕ್ಕೇ ಸಿಗುತ್ತದೆ.

ಶಬ್ದಗಳಲ್ಲಿ ಸರಸ...

ಸರಿಗಮಪದ ಆಟ

ಇಲ್ಲಿ ಚೌಕಗಳಲ್ಲಿ ಸ, ರಿ, ಗ, ಮ, ಪ, ದ, ಆ, ಟ ಎಂಬ ಅಕ್ಷರಗಳನ್ನು ಕೊಡಲಾಗಿದೆ. ಮಜಾ ಏನೆಂದರೆ ಆ ಎಲ್ಲಾ ಅಕ್ಷರಗಳೂ ಡಾ.ರಾಜಕುಮಾರ್ ಅವರು ನಟಿಸಿದ ಚಲನಚಿತ್ರಗಳ ಹೆಸರಿನಲ್ಲೊಂದು ಅಕ್ಷರಗಳೇ! ಆ ಅಕ್ಷರ ಒಳಗೊಂಡಂತೆ ನೀವು ಡಾ.ರಾಜ್ ನಟಿಸಿದ ಸಿನಿಮಾದ ಹೆಸರು ಪತ್ತೆ ಹಚ್ಚಬಲ್ಲಿರಾ?

ಸ				ಪ		ಆ	
	ರಿ						
	X						
	X		ಮ		ದ		
	X	ಗ				X	
	X			X		X	
X	X	X	X	X		X	ಟ

ತಿರುಚುಳಿ ಮುರುಚುಳಿ ಪದವಾಕ್ಯ

ಇಲ್ಲಿರುವ ವಾಕ್ಯದ ಪದಗಳು ಹೇಗಾದರೂ ಓದಬಹುದಾದ ತಿರುಚುಳಿ-ಮುರುಚುಳಿ ಪದಗಳು

ವಿಕಟಕವಿ, ಮದ್ರಾಸಿನಲ್ಲಿನ ಸಿದ್ರಾಮ, ಕಾಕಾ, ಗದಗ, ತಂಗಿಗಿಂತ, ಗಟ್ಟಿಗ.

ಪದ ಬದಲಾಟ

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಅಷ್ಟೇ ಅಕ್ಷರಗಳ **ಪದ ರಚಿಸಬಲ್ಲಿರಾ?**

1. ರಬ್ಬಿನ ಕವದಿ = ________
2. ಪ್ರತಿಗರಿ ತೋಸು = ________
3. ಮೊಲದ ಹುರುಕು = ________
4. ಕರಿಮರ ಸುತ್ತ = ________

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟ ಗಾದೆ ಮಾತಿಗೆ ಕೊರತೆಯಾದ ಪದ ಹೊಂದಿಸಿ

1.	ಅಡಕೆಗೆ ಹೋದ ಮಾನ _______ ಕೊಟ್ಟರೂ ಸಿಗದು.	A.	ತುಪ್ಪ
2.	ಎಳಿ ಸಿಕ್ರ _______ ನುಂಗಾವ.	B.	ಮೌನ
3.	ಜಾಣರಿಗೆ ಮಾತಿನ ಪೆಟ್ಟು _______ ನಿಗೆ ಲತ್ತೆ ಪೆಟ್ಟು.	C.	ಮಗಳ
4.	ಸಾಲ ಮಾಡಿಯಾದ್ರು _______ ತಿನ್ನು.	D.	ಊಟ
5.	ಅಳಿಯ ಅಲ್ಲ _______ ಗಂಡ	E.	ಕೋಣ
6.	ಎತ್ತು ಏರಿಗೆ ಎಳದ್ರ _______ ಕೆರೀಗೆ ಎಳೀತಂತ	F.	ಕನ್ನಡಿ
7.	ಆಟಕ್ಕುಂಟು _______ ಕ್ಕಿಲ್ಲ	G.	ಕ್ವಾಣ
8.	ಉಂಡ ಮನಿ _______ ಎಣಿಸಾಂವ	H.	ಈರಭದ್ರ
9.	ಕತ್ತೆ ಏನು ಬಲ್ಲದು _______ ರುಚಿ	I.	ಹಚಡಾ
10.	ಹುಬ್ಬಿ ಮಳಿಗೆ _______ ಪುಚ್ಚ ತೊಯ್ಲಿಲ್ಲ	J.	ಜಂತಿ
11.	ಮಾತು ಆಡಿದ್ರಾಯ್ತು _______ ಒಡೆದರಾಯ್ತು.	K.	ಲೆಕ್ಕ
12.	ಹೊಟ್ಟಿ ತುಂಬಿದಮ್ಯಾಗ _______ ಮುಳ್ಳು ಮುಳ್ಳು	L.	ಹತ್ತಿಕಾಳ
13.	ಮಳಿ ಆಗಿ ಕೇಡಲ್ಲ _______ ಉಂಡ್ರ ಕೇಡಲ್ಲ	M.	ಮಗ
14..	ಅಂಗೈ ಹುಣ್ಣಿಗೆ _______ ಬೇಕೆ	N.	ಆನೆ
15.	ಶ್ರೀಮಂತರ ಮನಿ ನೋಟ ಚಂದ ಬಡವರ ಮನಿ _____ ಚಂದ	O.	ಗುಬ್ಬಿ
16.	ಮಾತು ಬೆಳ್ಳಿ _______ ಬಂಗಾರ	P.	ಮುತ್ತು
17.	ಕೊಟ್ಟಾಂವ ಕೋಡಂಗಿ ಇಸ್ಕೊಂಡಾಂವ _______	Q.	ಹೆಣ
18.	ಹಣ ಅಂದ್ರ _______ ಬಾಯಿ ತೆಗಿತೈತಿ.	R.	ಕುಂಚಿಗಿ
19.	ನದಿ ಮೂಲ _______ ಮೂಲ ಕೇಳಬಾರ್ದು	S.	ಋಷಿ
20.	ಕೂಸು ಹುಟ್ಟಕ್ಕಿಂತ ಮೊದ್ಲು _______ ಹೊಲಿಸಿದ್ರಂತ	T.	ಹುಗ್ಗಿ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಮು	ತ	ತ್ರಿ	ತಿ	ಪ
ಪ	ದ	ತ	ದು	ತ

○	ಂ	○	ತಂತ್ರವನ್ನು ಬಲ್ಲಾತ
○	ಂ	○	ಹಲ್ಲು
○	ಂ	○	ಸಾಲು
○	ಂ	○	ಪ್ರತಿಜ್ಞೆ
○	ಂ	○	ಮುಂಭಾಗ

ಮಜ ಮಜ ಮಜಕೂರದ ಜುಲೈ 4ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1- ಸಂತೆ 2- ನಿಂಬೆ 3- ಲುಂಗಿ 4- ತುಂಬೆ 5- ಟೊಂಗೆ

ಪದ-ಬದಲಾಟ

1) ಬತ್ತಿದ ಕೆರೆ 2) ಹಾಸಿಗೆ ಹಿಡಿ 3) ಪಾಟಿ ಕವಚ 4) ರಾಮನ ಜನ

ಶಬ್ದಗಳಲ್ಲಿ ಸರಸ

1. ಕಾಕಿ 2. ಖೊಖೋ 3. ಗೂಗೆ 4. ಜಾಜಿ 5. ಲಾಲಿ

ಗಣಿತದಲ್ಲಿ ಗರ್ದಿ ಗಮ್ಮತ್ತು

E ಚೌಕದಲ್ಲಿನ ಎರಡು ಹರಳು ತೆಗೆದುಕೊಂಡು B ಚೌಕಕ್ಕೆ ಒಂದು ಹರಳು ಹಾಗೂ C ಚೌಕಕ್ಕೆ ಒಂದು ಹರಳು ಹಾಕಿಬಿಡಿ. ಇಲ್ಲವೆ A ಹಾಗೂ D ಚೌಕಕ್ಕೆ ಹಾಕಿ.

ಟ್ವೆಂಟಿ – 20 ಮ್ಯಾಚ್

1- P, 2-Q, 3-T, 4-O, 5-E, 6-A, 7-N, 8-B, 9-M,10-C, 11-D, 12-G, 13-F, 14-R, 15-S, 16-J, 17-K, 18-H, 19-L, 20-I.

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸ್ನೇಹಾ ಎಸ್., ಶಿವಮೊಗ್ಗ

ಅಪೂರ್ವ ಹಿರೇಮಠ, ನರಗುಂದ

ಪಂಕಜ್‌ಕುಮಾರ್ ಪವಾರ, ಲಿಂಗಸುಗೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಪದಕಗಳತ್ತ ಯುವ ಶೂಟರ್‌ಗಳ 'ಗುರಿ'

ಒಲಿಂಪಿಕ್ಸ್‌ನಲ್ಲಿ ಭಾರತ ಜಯಿಸಿರುವ ಒಟ್ಟು 28 ಪದಕಗಳಲ್ಲಿ ವೈಯಕ್ತಿಕ ಸ್ಪರ್ಧೆಗೆ ಚಿನ್ನದ ಗರಿ ಮೂಡಿದ್ದು ಶೂಟಿಂಗ್ ಕ್ರೀಡೆಯಲ್ಲಿ ಮಾತ್ರ. 2008ರಲ್ಲಿ ಅಭಿನವ್ ಬಿಂದ್ರಾ ಈ ಸಾಧನೆ ಮಾಡಿದ್ದರು. 2004ರ ಒಲಿಂಪಿಕ್ಸ್‌ನಿಂದ 2012ರ ವರೆಗೆ ಭಾರತದ ಶೂಟರ್‌ಗಳು ಒಂದಲ್ಲ ಒಂದು ಪದಕ ಜಯಿಸಿದ್ದಾರೆ.

ಹೀಗಾಗಿ ಪ್ರತಿ ಒಲಿಂಪಿಕ್ಸ್ ಆರಂಭವಾದಾಗ ಶೂಟಿಂಗ್‌ನಲ್ಲಿ ಭಾರತ ಪದಕ ಗೆಲ್ಲುವುದು ನಿಶ್ಚಿತ ಎನ್ನುವ ವಿಶ್ವಾಸ ಮೂಡುತ್ತದೆ. 2016ರಲ್ಲಿ ಬಿಂದ್ರಾ, ಪ್ರಕಾಶ್ ನಂಜಪ್ಪ, ಗಗನ್ ನಾರಂಗ್, ಜಿತು ರಾಯ್ ಹೀಗೆ ಅನುಭವಿ ಶೂಟರ್‌ಗಳು ಪಾಲ್ಗೊಂಡಿದ್ದರು. ಬಿಂದ್ರಾ ಅವರಿಗೆ ಕೂದಲೆಳೆ ಅಂತರದಲ್ಲಿ ಪದಕ ಕೈತಪ್ಪಿತ್ತು. ಆದರೆ, ಟೋಕಿಯೊ ಟಿಕೆಟ್ ಪಡೆದವರಲ್ಲಿ ಬಹುತೇಕರಿಗೆ ಒಲಿಂಪಿಕ್ಸ್ ವೇದಿಕೆಯಲ್ಲಿ ಮೊದಲ ಅನುಭವ. 19 ವರ್ಷದ ಆಸುಪಾಸಿನಲ್ಲಿರುವ ಯುವಪಡೆಯೇ ಭಾರತದ ಶಕ್ತಿಯಾಗಿದೆ.

TOKYO 2020
ಇನ್ನು 12 ದಿನ

ಯೂತ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿರುವ ಉತ್ತರ ಪ್ರದೇಶದ ಸೌರಭ್ ಚೌಧರಿ ಎರಡು ವರ್ಷಗಳಿಂದ ಸ್ಥಿರ ಪ್ರದರ್ಶನ ತೋರುತ್ತಿದ್ದಾರೆ. 2019ರಿಂದ ನಾಲ್ಕು ಶೂಟಿಂಗ್ ವಿಶ್ವಕಪ್‌ಗಳಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ, ಒಂದು ಬೆಳ್ಳಿ ಮತ್ತು ಒಂದು ಕಂಚು ಜಯಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಮನು ಭಾಕರ್ ಕೂಡ ಯೂತ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. 2018ರ ಕಾಮನ್‌ವೆಲ್ತ್ ಕ್ರೀಡಾಕೂಟದ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ 400ಕ್ಕೆ 388 ಅಂಕಗಳನ್ನು ಗಳಿಸಿದ್ದರು. ಇವರಿಬ್ಬರೂ ಮಿಶ್ರ ತಂಡ ವಿಭಾಗದಲ್ಲಿ ಒಟ್ಟಾಗಿ ಸ್ಪರ್ಧಿಸಲಿರುವ ಕಾರಣ ಅಲ್ಲಿ ಪದಕ ನಿರೀಕ್ಷೆ ಗರಿಗೆದರಿದೆ. ಹೋದ ತಿಂಗಳು ನವದೆಹಲಿಯಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಚಿನ್ನ ಜಯಿಸಿದ್ದ ದಿವ್ಯಾಂಶ್ ಸಿಂಗ್ ಪನ್ವರ್ ಮತ್ತು ಇಳವೆನ್ನಿಲ ವಾಳರಿವನ್ ಮೇಲೆ ಸಾಕಷ್ಟು ನಿರೀಕ್ಷೆಯಿದೆ. ಐಎಸ್‌ಎಸ್‌ಎಫ್ 10 ಮೀ. ಏರ್ ರೈಫಲ್ ವಿಭಾಗದ ರ‍್ಯಾಂಕ್ ಪಟ್ಟಿಯಲ್ಲಿ ಇಳವೆನ್ನಿಲ ಅಗ್ರಸ್ಥಾನ ಹೊಂದಿದ್ದಾರೆ.

ಮನು ಭಾಕರ್, ಸೌರಭ್ ಚೌಧರಿ

ಒಲಿಂಪಿಕ್ಸ್ ಪದಕ ಗೆದ್ದ ಭಾರತದ ಶೂಟರ್‌ಗಳು

ಶೂಟರ್	ವಿಭಾಗ	ವರ್ಷ	ಸ್ಥಳ	ಪದಕ
ರಾಜ್ಯವರ್ಧನ್ ಸಿಂಗ್ ರಾಥೋಡ್	ಡಬಲ್ ಟ್ರ್ಯಾಪ್	2004	ಅಥೆನ್ಸ್	ಬೆಳ್ಳಿ
ಅಭಿನವ್ ಬಿಂದ್ರಾ	10ಮೀ.ಏರ್ ರೈಫಲ್	2008	ಬೀಜಿಂಗ್	ಚಿನ್ನ
ಗಗನ್ ನಾರಂಗ್	10ಮೀ.ಏರ್ ರೈಫಲ್	2012	ಲಂಡನ್	ಕಂಚು
ವಿಜಯಕುಮಾರ್	25ಮೀ.ರ‍್ಯಾಪಿಡ್ ಫೈರ್ ಪಿಸ್ತೂಲ್	2012	ಲಂಡನ್	ಬೆಳ್ಳಿ

ರಾಹಿ ಸರ್ನೋಬತ್

ಇಳವೆನ್ನಿಲ ವಾಳರಿವನ್

ಭಾರತ ತಂಡ

ಪುರುಷರು: ಅಂಗದ್ ಬಿಜ್ವಾ, ಮೈರಾಜ್ ಅಹ್ಮದ್ ಖಾನ್ (ಸ್ಕೀಟ್), ಸೌರಭ್ ಚೌಧರಿ, ಅಭಿಷೇಕ್ ವರ್ಮಾ (10ಮೀ. ಏರ್ ಪಿಸ್ತೂಲ್), ದೀಪಕ್ ಕುಮಾರ್, ದಿವ್ಯಾಂಶ್ ಸಿಂಗ್ ಪನ್ವರ್ (10 ಮೀ. ಏರ್ ರೈಫಲ್), ಸಂಜೀವ ರಜಪೂತ್, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ (50ಮೀ. ರೈಫಲ್ 3 ಪೊಸಿಷನ್).

ಮಹಿಳೆಯರು: ಮನು ಭಾಕರ್ (10ಮೀ. ಏರ್ ಪಿಸ್ತೂಲ್ ಹಾಗೂ 25ಮೀ. ಪಿಸ್ತೂಲ್), ಯಶಸ್ವಿನಿ ದೇಸ್ವಾಲ್ (10ಮೀ. ಏರ್ ಪಿಸ್ತೂಲ್), ರಾಹಿ ಸರ್ನೋಬತ್ (25ಮೀ. ಪಿಸ್ತೂಲ್), ಅಪೂರ್ವಿ ಚಾಂಡೇಲಾ, ಇಳವೆನ್ನಿಲ ವಾಳರಿವನ್ (10ಮೀ. ಏರ್ ರೈಫಲ್), ಅಂಜುಮ್ ಮೌದ್ಗಿಲ್, ತೇಜಸ್ವಿನಿ ಸಾವಂತ್ (50ಮೀ. ರೈಫಲ್ 3 ಪೊಸಿಷನ್).

ಮಿಶ್ರ ತಂಡ: ದೀಪಕ್ ಕುಮಾರ್–ಅಂಜುಮ್ ಮೌದ್ಗಿಲ್ ಹಾಗೂ ದಿವ್ಯಾಂಶ್–ಇಳವೆನ್ನಿಲ (10ಮೀ. ಏರ್ ರೈಫಲ್), ಸೌರಭ್ ಚೌಧರಿ–ಮನು ಭಾಕರ್ ಹಾಗೂ ಅಭಿಷೇಕ್ ವರ್ಮಾ–ಯಶಸ್ವಿನಿ (10ಮೀ. ಏರ್ ಪಿಸ್ತೂಲ್).

ಕ್ರಿಕೆಟ್: ಅಮೆರಿಕ ಯುವ ತಂಡಕ್ಕೆ ಸ್ಕಂದ, ಸಂಜಯ್

ಬೆಂಗಳೂರು: ನಗರದ ಸ್ಕಂದ ರೋಹಿತ್ ಶರ್ಮಾ ಮತ್ತು ಸಂಜಯ್ ಕೃಷ್ಣಮೂರ್ತಿ ಅವರು ಅಮೆರಿಕದ 19 ವರ್ಷದೊಳಗಿನವರ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

19 ವರ್ಷದೊಳಗಿನವರ ವಿಶ್ವಕಪ್ ಅರ್ಹತಾ ಟೂರ್ನಿಗೆ 14 ಆಟಗಾರರ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಈ ವಿಶ್ವಕಪ್ ಟೂರ್ನಿಯು 2022ರ ಜನವರಿಯಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ನಿಗದಿಯಾಗಿದೆ.

ಸ್ಕಂದ ಶರ್ಮಾ

ಬೆಂಗಳೂರಿನ ಹೆರಾನ್ಸ್ ಕ್ಲಬ್‌ನ ಪ್ರತಿಭೆ ಸ್ಕಂದ, ತಮ್ಮ ಪೋಷಕರೊಂದಿಗೆ 2017ರಿಂದ ಅಮೆರಿಕದಲ್ಲಿ ನೆಲೆಸಿದ್ದಾರೆ.

ಆಲ್‌ರೌಂಡರ್ ಸಂಜಯ್ ಅವರು 16 ವರ್ಷದೊಳಗಿನವರ ಕರ್ನಾಟಕ ತಂಡದಲ್ಲಿ ಆಡಿದ್ದರು.

ವಿಂಬಲ್ಡನ್ ಟೆನಿಸ್ ಟೂರ್ನಿ: ಕರೋಲಿನಾ ಪ್ಲಿಸ್ಕೋವ ರನ್ನರ್ ಅಪ್

ಬಾರ್ಟಿಗೆ 'ಮೊದಲ' ಪ್ರಶಸ್ತಿ ಸಂಭ್ರಮ

ಲಂಡನ್ (ರಾಯಿಟರ್ಸ್): ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ವಿಂಬಲ್ಡನ್ ಟೂರ್ನಿಯ ಮೊದಲ ಪ್ರಶಸ್ತಿ ಗೆದ್ದ ಸಂಭ್ರಮದಲ್ಲಿ ಮಿಂದರು. ಶನಿವಾರ ರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ ಅವರು ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವ ಎದುರು 6-3, 6-7(4/7), 6-3ರಲ್ಲಿ ಗೆಲುವು ಸಾಧಿಸಿದರು.

2012ರಲ್ಲಿ ಪೋಲೆಂಡ್‌ನ ಅನೀಸ್ಕ ರಾಡ್ವಂಸ್ಕ ವಿರುದ್ಧ ಅಮೆರಿಕದ ಸೆರೆನಾ ವಿಲಿಯಮ್ಸ್ ಗೆದ್ದ ನಂತರ ವಿಂಬಲ್ಡನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಇದೇ ಮೊದಲ ಬಾರಿ ಮೂರು ಸೆಟ್‌ಗಳ ಹೋರಾಟ ಕಂಡಿತು. ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ 25 ವರ್ಷ ವಯಸ್ಸಿನ ಬಾರ್ಟಿ 41 ವರ್ಷಗಳ ನಂತರ ವಿಂಬಲ್ಡನ್ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾದ ಮೊದಲ ಮಹಿಳೆ ಎಂಬ ಖ್ಯಾತಿಯನ್ನೂ ಗಳಿಸಿದರು.

ಇದು, ಪ್ಲಿಸ್ಕೋವ ಎದುರು ಬಾರ್ಟಿಗೆ ಒಲಿದ ಐದನೇ ಜಯವಾಗಿದೆ. ಒಟ್ಟು ಏಳು ಬಾರಿ ಇಬ್ಬರೂ ಮುಖಾಮುಖಿಯಾಗಿದ್ದಾರೆ.

ಪ್ರಶಸ್ತಿಯೊಂದಿಗೆ ಚಾಂಪಿಯನ್ ಆ್ಯಶ್ಲಿ ಬಾರ್ಟಿ –ಎಎಫ್‌ಪಿ ಚಿತ್ರ

ಮೊದಲ ಸೆಟ್‌ನಲ್ಲಿ 4–0ರಲ್ಲಿ ಮುನ್ನಡೆದ ಬಾರ್ಟಿ ಚೆಂಡನ್ನು ಮೋಹಕವಾಗಿ ಡ್ರಾಪ್ ಮಾಡುತ್ತ, ಬಲಶಾಲಿ ಹೊಡೆತಗಳ ಮೂಲಕ ಮಿಂಚಿದರು. ಎರಡನೇ ಸೆಟ್‌ನಲ್ಲಿ ಬಾರ್ಟಿ 3–1ರ ಮುನ್ನಡೆ ಸಾಧಿಸಿದ್ದಾಗ ತಿರುಗೇಟು ನೀಡಿದ ಪ್ಲಿಸ್ಕೋವ 3–3ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ನಂತರ ಸೆಟ್ ಅನ್ನು ಟೈ ಬ್ರೇಕರ್‌ವರೆಗೆ ಕೊಂಡೊಯ್ದು ಜಯ ಸಾಧಿಸಿದರು. ನಿರ್ಣಾಯಕ ಮೂರನೇ ಸೆಟ್‌ನ ಆರಂಭದಲ್ಲೇ 3–0 ಮುನ್ನಡೆ ಸಾಧಿಸಿದ ಬಾರ್ಟಿ ನಂತರ ನಿರಾಯಾಸವಾಗಿ ಮುನ್ನಡೆದು ಸೆಟ್ ಹಾಗೂ ಪಂದ್ಯ ಗೆದ್ದುಕೊಂಡರು.

ನೊವಾಕ್‌ಗೆ 20ನೇ ಗ್ರ್ಯಾನ್‌ಸ್ಲಾಮ್ ಗುರಿ

ಲಂಡನ್ (ಎಎಫ್‌ಪಿ/ಎಪಿ)): ದಾಖಲೆ ಸಮಗಟ್ಟುವ ಕನಸು ಹೊತ್ತಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಇಟಲಿಯ ಮಟಿಯೊ ಬೆರೆಟಿನಿ ಅವರನ್ನು ಭಾನುವಾರ ಎದುರಿಸುವರು.

ಬಲಿಷ್ಠ ಎದುರಾಳಿ ಬೆರೆಟಿನಿ ಅವರನ್ನು ಮಣಿಸುವಲ್ಲಿ ಯಶಸ್ವಿಯಾದರೆ 20ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಜೊಕೊವಿಚ್ ಮುಡಿಯನ್ನು ಅಲಂಕರಿಸಲಿದೆ. ಈ ಮೂಲಕ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ದಾಖಲೆಯನ್ನು ಸಮಗಟ್ಟಲಿದ್ದಾರೆ. ವಿಂಬಲ್ಡನ್‌ನಲ್ಲಿ ಆರು ಬಾರಿ ಚಾಂಪಿಯನ್ ಆದ ಶ್ರೇಯಸ್ಸು ಕೂಡ ಅವರದಾಗಲಿದೆ. ಇದು ವಿಂಬಲ್ಡನ್‌ನಲ್ಲಿ ಜೊಕೊವಿಚ್‌ಗೆ ಏಳನೇ ಮತ್ತು ಒಟ್ಟಾರೆ ಗ್ರ್ಯಾನ್‌ಸ್ಲಾಮ್‌ನಲ್ಲಿ 30ನೇ ಫೈನಲ್ ಆಗಿದೆ.

ವಿಂಬಲ್ಡನ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದ ಇಟಲಿಯ ಮೊದಲ ಆಟಗಾರ ಎಂಬ ದಾಖಲೆ ಸೃಷ್ಟಿಸಿರುವ ಬೆರೆಟಿನಿ ಪ್ರಶಸ್ತಿ ಗೆದ್ದು ಈ ಅವಕಾಶವನ್ನು ಅವಿಸ್ಮರಣೀಯವಾಗಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ. ಫೈನಲ್‌ನಲ್ಲಿ ಗೆದ್ದರೆ 1976ರ ನಂತರ ಪುರುಷರ ವಿಭಾಗದಲ್ಲಿ ಗ್ರ್ಯಾನ್‌ಸ್ಲಾಂ ಗೆದ್ದ ಇಟಲಿಯ ಮೊದಲ ಆಟಗಾರ ಎನಿಸಲಿದ್ದಾರೆ. ಆಡ್ರಿಯಾನೊ ಪಾನಟ್ಟ 1976ರಲ್ಲಿ ಫ್ರೆಂಚ್ ಓಪನ್ ಟೂರ್ನಿಯ ಚಾಂಪಿಯನ್ ಆಗಿದ್ದರು.

ಕ್ರಿಕೆಟ್: ಸಂತೋಷ್ ಮೆನನ್ ನೇಮಕ

ಬೆಂಗಳೂರು: ದೇಶಿ ಕ್ರಿಕೆಟ್ ಟೂರ್ನಿಗಳ ಆಯೋಜನೆಗೆ ಸಂಬಂಧಿಸಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯನಿರ್ವಹಣಾ ಗುಂಪುಗಳನ್ನು ರಚಿಸಿದೆ. ಗುಂಪಿಗೆ ದಕ್ಷಿಣ ವಲಯದಿಂದ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಗೌರವ ಕಾರ್ಯದರ್ಶಿ ಸಂತೋಷ್ ಮೆನನ್ ನೇಮಕಗೊಂಡಿದ್ದಾರೆ ಎಂದು ಸಂಸ್ಥೆಯ ವಕ್ತಾರ ವಿನಯ ಮೃತ್ಯುಂಜಯ ತಿಳಿಸಿದ್ದಾರೆ.

ಆರು ವಲಯಗಳಿಂದ ಪ್ರತಿನಿಧಿಗಳನ್ನು ಆರಿಸಿ ಗುಂಪನ್ನು ರಚಿಸಲಾಗಿದೆ. ಐದು ವಲಯಗಳಿಂದ ತಲಾ ಒಬ್ಬರನ್ನು ನೇಮಕ ಮಾಡಲಾಗಿದ್ದು ದಕ್ಷಿಣ ವಲಯದಿಂದ ಸಂತೋಷ್ ಮೆನನ್ ಮತ್ತು ಮೊಹಮ್ಮದ್ ಅಜರುದ್ದೀನ್ ನೇಮಕಗೊಂಡಿದ್ದಾರೆ ಎಂದು ಬಿಸಿಸಿಐ ಗೌರವ ಕಾರ್ಯದರ್ಶಿ ಜಯ ಶಾ ತಿಳಿಸಿರುವುದಾಗಿ ವಿನಯ್ ಹೇಳಿದ್ದಾರೆ.

ಸಂತೋಷ್ ಮೆನನ್

ಈಜುಪಟುಗಳಿಗೆ ಚೆಕ್ ವಿತರಣೆ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತದ ಈಜುಪಟುಗಳಿಗೆ ರಾಜ್ಯ ಈಜು ಸಂಸ್ಥೆ ಶನಿವಾರ ಪ್ರೋತ್ಸಾಹ ಧನದ ಚೆಕ್ ನೀಡಿತು. ಶ್ರೀಹರಿ ನಟರಾಜ್ ಮತ್ತು ಸಜನ್ ಪ್ರಕಾಶ್ ಅವರಿಗೆ ತಲಾ ₹ 2 ಲಕ್ಷ, ಮಾನಾ ಪಟೇಲ್‌ಗೆ ₹ ಒಂದು ಲಕ್ಷದ ಚೆಕ್ ಹಸ್ತಾಂತರಿಸಲಾಯಿತು. ಕೋಚ್‌ಗಳಾದ ಪ್ರದೀಪ್ ಕುಮಾರ್ ಮತ್ತು ನಿಹಾರ್ ಅಮೀನ್ ಅವರಿಗೆ ತಲಾ ₹ 50 ಸಾವಿರ ನೀಡಲಾಯಿತು.

ರಾಜ್ಯದಲ್ಲಿ ಬ್ಯಾಸ್ಕೆಟ್‌ಬಾಲ್ ಚಟುವಟಿಕೆಗಳಿಗಾಗಿ ಐದು ಎಕರೆ ಜಮೀನು ಪಡೆಯುವ ಪ್ರಯತ್ನ ಅಂತಿಮ ಹಂತದಲ್ಲಿದ್ದು ಇದರಲ್ಲಿ ಎರಡು ಎಕರೆ ಜಾಗವನ್ನು ಈಜು ಕ್ರೀಡೆಗೆ ನೀಡಲಾಗುವುದು ಎಂದು ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ತಿಳಿಸಿದರು.

18ರಿಂದ ಭಾರತ–ಶ್ರೀಲಂಕಾ ಕ್ರಿಕೆಟ್

ಕೊಲಂಬೊ (ಪಿಟಿಐ): ಭಾರತ–ಶ್ರೀಲಂಕಾ ತಂಡಗಳ ನಡುವಿನ ನಿಗದಿತ ಓವರ್‌ಗಳ ಕ್ರಿಕೆಟ್ ಸರಣಿ ಜುಲೈ 18ರಿಂದ ಆರಂಭವಾಗಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಇದೇ 13ರಂದು 3 ಪಂದ್ಯಗಳ ಏಕದಿನ ಸರಣಿ ಆರಂಭಿಸಲು ವೇಳಾಪಟ್ಟಿ ನಿಗದಿಪಡಿಸಲಾಗಿತ್ತು. ಆದರೆ ಲಂಕಾದ ಬ್ಯಾಟಿಂಗ್ ಕೋಚ್ ಗ್ರ್ಯಾಂಟ್ ಫ್ಲವರ್ ಮತ್ತು ಡೇಟಾ ಅನಾಲಿಸ್ಟ್ ಜಿ.ಟಿ. ನಿರೋಶನ್ ಅವರಿಗೆ ಇಂಗ್ಲೆಂಡ್ ಪ್ರವಾಸದಿಂದ ಹಿಂದಿರುಗಿದ ಬಳಿಕ ಕೋವಿಡ್ ದೃಢಪಟ್ಟಿತ್ತು. ಹೀಗಾಗಿ ಸರಣಿಯನ್ನು ಮುಂದೂಡಿ, ಶ್ರೀಲಂಕಾ ತಂಡದ ಸದಸ್ಯರನ್ನು ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ.

ಚೆಸ್: ಭರತ್ ವಿರುದ್ಧ ಪ್ರಧಾನಿಗೆ ದೂರು

ಕೋಲ್ಕತ್ತ: ಅಖಿಲ ಭಾರತ ಚೆಸ್ ಫೆಡರೇಷನ್‌ನಲ್ಲಿ ಆಂತರಿಕ ಜಗಳ ತಾರಕಕ್ಕೇರಿದ್ದು ಕಾರ್ಯದರ್ಶಿ ಭರತ್ ಸಿಂಗ್ ಚೌಹಾಣ್ ವಿರುದ್ಧ ಜಂಟಿ ಕಾರ್ಯದರ್ಶಿ ಅತನು ಲಾಹಿರಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿದ್ದಾರೆ.

ಡೇಟಾ ಕಳವು, ಭ್ರಷ್ಟಾಚಾರ ಮತ್ತು ಹಣಕಾಸಿನ ಅವ್ಯವಹಾರದಲ್ಲಿ ಭರತ್ ಸಿಂಗ್ ತೊಡಗಿರುವುದಾಗಿ ದೂರಿನಲ್ಲಿ ಆರೋಪಿಸಿದ್ದಾರೆ.